ಬುಧವಾರ, ಮಾರ್ಚ್ 2, 2022 | ಬೆಂಗಳೂರು | ₹ 6.00 | ಸಂಪುಟ 75 | ಸಂಚಿಕೆ 61 | ಪುಟ 14

www.prajavani.net

/prajavani.net @prajavani /prajavani http://bit.ly/Prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಆಳ-ಅಗಲ
ರಷ್ಯಾ ಮೇಲೆ ನಿರ್ಬಂಧ ಪರೋಕ್ಷ ಸಮರ

ಆಧ್ಯಾತ್ಮಿಕ ಅನುಭವಗಳ ಅನಾವರಣ 5
ಗೋರಖಪುರ: ಯೋಗಿಗಿಲ್ಲ ಸವಾಲು 10

ಕಾಂಗ್ರೆಸ್ ಪಾದಯಾತ್ರೆಗೆ ಹರಿದುಬಂದ ಜನಸಾಗರ
ರಾಜಧಾನಿಯಲ್ಲಿ 'ನೀರಿಗಾಗಿ ನಡಿಗೆ'ಯ ಅಬ್ಬರ 4

ಉಕ್ರೇನ್‌ನ ಹಾರ್ಕಿವ್ ನಗರದಲ್ಲಿದ್ದ ವೈದ್ಯ ವಿದ್ಯಾರ್ಥಿ: ರಷ್ಯಾದ ಶೆಲ್ ದಾಳಿಯಲ್ಲಿ ಸಾವು

ಹಾವೇರಿಯ ನವೀನ್ ಬಲಿ

ನವದೆಹಲಿ (ಪಿಟಿಐ): ರಷ್ಯಾ–ಉಕ್ರೇನ್ ಸಂಘರ್ಷಕ್ಕೆ ಕರ್ನಾಟಕದ ವೈದ್ಯಕೀಯ ವಿದ್ಯಾರ್ಥಿಯೊಬ್ಬರು ಬಲಿಯಾಗಿದ್ದಾರೆ. ಹಾವೇರಿ ಜಿಲ್ಲೆ ಚಳಗೇರಿಯ ನವೀನ್ ಶೇಖರಪ್ಪ ಗ್ಯಾನಗೌಡರ್ ಉಕ್ರೇನ್‌ನ ಹಾರ್ಕಿವ್‌ನಲ್ಲಿ ನಾಲ್ಕನೇ ವರ್ಷದ ವೈದ್ಯ ಪದವಿ ಕಲಿಯುತ್ತಿದ್ದರು. ಹಾರ್ಕಿವ್‌ನಲ್ಲಿ ಬಂಕರ್‌ನಲ್ಲಿದ್ದ ನವೀನ್, ಹಣ ವಿನಿಮಯ ಮಾಡಲು ಮತ್ತು ಆಹಾರ ತರುವುದಕ್ಕಾಗಿ ಮಂಗಳವಾರ ಬೆಳಿಗ್ಗೆ ಹೊರ ಹೋಗಿದ್ದರು. ಈ ವೇಳೆ ರಷ್ಯಾ ನಡೆಸಿದ ಶೆಲ್ ದಾಳಿಗೆ ಅವರು ಸಿಲುಕಿದರು ಎಂದು ನವೀನ್ ಅವರ ಮಾವ ತಿಳಿಸಿದ್ದಾರೆ. ನವೀನ್ ಸಾವನ್ನು ವಿದೇಶಾಂಗ ಸಚಿವಾಲಯವೂ ದೃಢಪಡಿಸಿದೆ.

ಕೀವ್‌ನಲ್ಲಿರುವ ಎಲ್ಲ ಭಾರತೀಯರು ತಕ್ಷಣವೇ ಸಿಕ್ಕ ಸಿಕ್ಕ ಸಂಚಾರ ಸೌಲಭ್ಯ ಬಳಸಿ ನಗರ ತೊರೆದು ಹೋಗಬೇಕು ಎಂದು ಭಾರತ ಸರ್ಕಾರ ಹೇಳಿದ ಕೆಲವೇ ತಾಸಿನಲ್ಲಿ ನವೀನ್ ಹತ್ಯೆ ಆಗಿದೆ.

ಪ್ರಧಾನಿ ನರೇಂದ್ರ ಮೋದಿ ಅವರು ಉಕ್ರೇನ್–ರಷ್ಯಾ ಸಂಘರ್ಷಕ್ಕೆ ಸಂಬಂಧಿಸಿ 48 ತಾಸುಗಳಲ್ಲಿ ಉನ್ನತ ಮಟ್ಟದ ನಾಲ್ಕು ಸಭೆಗಳನ್ನು ನಡೆಸಿದ್ದಾರೆ. ಮಂಗಳವಾರವೂ ಅವರು ಸಭೆ ನಡೆಸಿದ್ದಾರೆ.

ಮೋದಿ ಅವರು ನವೀನ್ ಅವರ ತಂದೆಯ ಜತೆಗೆ ದೂರವಾಣಿ ಮೂಲಕ ಮಾತನಾಡಿ ಸಾಂತ್ವನ ಹೇಳಿದ್ದಾರೆ.

'ಉಕ್ರೇನ್‌ನಲ್ಲಿ ಭಾರತದ ವಿದ್ಯಾರ್ಥಿ ನವೀನ್ ಬಲಿಯಾದ ದುರಂತ ಸುದ್ದಿ ಬಂದಿದೆ. ನವೀನ್ ಅವರ ಕುಟುಂಬ ಮತ್ತು ಸ್ನೇಹಿತರಿಗೆ ನನ್ನ ಸಾಂತ್ವನಗಳು. ಉಕ್ರೇನ್‌ನಿಂದ ವಿದ್ಯಾರ್ಥಿಗಳನ್ನು ಸುರಕ್ಷಿತವಾಗಿ ತೆರವು ಮಾಡಲು ಭಾರತ ಸರ್ಕಾರವು ವ್ಯವಸ್ಥಿತವಾದ ಯೋಜನೆ ಹಾಕಿಕೊಳ್ಳಬೇಕು ಎಂಬುದನ್ನು ನಾನು ಮತ್ತೆ ಹೇಳುತ್ತಿದ್ದೇನೆ. ಇಲ್ಲಿ ಪ್ರತಿಯೊಂದು ನಿಮಿಷವೂ ಮಹತ್ವದ್ದು' ಎಂದು ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಟ್ವೀಟ್ ಮಾಡಿದ್ದಾರೆ.

ತೆರವಿಗೆ ವಾಯುಪಡೆ: ಉಕ್ರೇನ್‌ನಲ್ಲಿ ಸಿಲುಕಿರುವ ಭಾರತೀಯರ ತೆರವಿಗೆ ಭಾರತೀಯ ವಾಯುಪಡೆ ಕೂಡ ಕೈಜೋಡಿಸಬೇಕು ಎಂದು ಪ್ರಧಾನಿ ಮಂಗಳವಾರ ಹೇಳಿದ್ದಾರೆ. ವಾಯುಪಡೆಯು ಸಿ–17 ವಿಮಾನಗಳನ್ನು ಜನರ ತೆರವಿಗೆ ನಿಯೋಜಿಸುವ ಸಾಧ್ಯತೆ ಇದೆ. 300 ಜನರನ್ನು ಕರೆದೊಯ್ಯುವ ಸಾಮರ್ಥ್ಯ ಈ ವಿಮಾನಕ್ಕೆ ಇದೆ. ಈವರೆಗೆ ಖಾಸಗಿ ವಿಮಾನಯಾನ ಸಂಸ್ಥೆಗಳು ಮಾತ್ರ ತೆರವು ಕಾರ್ಯಾಚರಣೆ 'ಆಪರೇಷನ್ ಗಂಗಾ'ದಲ್ಲಿ ಭಾಗಿಯಾಗಿದ್ದವು. ಉಕ್ರೇನ್ ಜತೆಗೆ ಭೂ ಗಡಿ ಹೊಂದಿರುವ ರೊಮೇನಿಯಾ ಮತ್ತು ಹಂಗೆರಿ ಮೂಲಕ ಭಾರತೀಯರ ತೆರವು ಕಾರ್ಯಾಚರಣೆ ನಡೆಯುತ್ತಿದೆ.

ರಾಯಭಾರಿಗಳ ಜತೆ ಮಾತು: ಭಾರತದಲ್ಲಿರುವ ರಷ್ಯಾ ಮತ್ತು ಉಕ್ರೇನ್ ರಾಯಭಾರಿಗಳನ್ನು ವಿದೇಶಾಂಗ ಸಚಿವಾಲಯದ ಕಾರ್ಯದರ್ಶಿ ಹರ್ಷವರ್ಧನ್ ಶೃಂಗ್ಲಾ ಅವರು ಕರೆಸಿಕೊಂಡು ಉಕ್ರೇನ್‌ನಲ್ಲಿ ಸಿಲುಕಿರುವ ಭಾರತೀಯರು ಸುರಕ್ಷಿತವಾಗಿ ಹೊರ ಬರುವುದನ್ನು ಖಾತರಿಪಡಿಸಬೇಕು ಎಂದಿದ್ದಾರೆ.

ರಷ್ಯಾ ಮತ್ತು ಉಕ್ರೇನ್‌ನಲ್ಲಿರುವ ಭಾರತೀಯ ರಾಯಭಾರಿಗಳಾದ ಪವನ್ ಕಪೂರ್ ಮತ್ತು ಪಾರ್ಥ ಸತ್ಪತಿ ಅವರು ಆಯಾ ದೇಶಗಳ ಸರ್ಕಾರದ ಜತೆಗೆ ಮಾತುಕತೆ ನಡೆಸಿದ್ದಾರೆ. ಭಾರತದ ವಿದ್ಯಾರ್ಥಿಗಳು ಸುರಕ್ಷಿತವಾಗಿ ಸ್ವದೇಶಕ್ಕೆ ಬರುವುದನ್ನು ಖಾತರಿಪಡಿಸಬೇಕು ಎಂದು ಕೋರಿದ್ದಾರೆ.

ಭಾರತಕ್ಕೆ ಹೊಸದಾಗಿ ನೇಮಕವಾಗಿರುವ ರಷ್ಯಾ ರಾಯಭಾರಿ ಡೆನಿಸ್ ಅಲಿಪೊವ್ ಮತ್ತು ಉಪ ರಾಯಭಾರಿ ರೋಮನ್ ಬಬುಷ್ಕಿನ್ ಅವರನ್ನು ಶೃಂಗ್ಲಾ ಅವರು ಕರೆಸಿಕೊಂಡಿದ್ದಾರೆ.

ಮಾಸ್ಕೊದ ಭಾರತೀಯ ರಾಯಭಾರ ಕಚೇರಿಯು ಉಕ್ರೇನ್ ಗಡಿಗೆ ಸಮೀಪದಲ್ಲಿರುವ ರಷ್ಯಾದ ನಗರ ಬೆಲ್‌ಗರೊಡ್‌ನಲ್ಲಿ ತಂಡವೊಂದನ್ನು ನಿಯೋಜಿಸಿದೆ. ಹಾರ್ಕಿವ್ ಮತ್ತು ಇತರ ಸ್ಥಳಗಳಿಂದ ಭಾರತೀಯರನ್ನು ತೆರವು ಮಾಡಲು ನೆರವಾಗಲು ಈ ಕ್ರಮ ಕೈಗೊಳ್ಳಲಾಗಿದೆ.

ವಿಶೇಷ ಪುಟ 6

ಉಕ್ರೇನ್‌ನ ರಾಜಧಾನಿ ಕೀವ್‌ನ ಬ್ರೋವರಿ ಪಟ್ಟಣದಲ್ಲಿ ರಷ್ಯಾದ ಪಡೆಗಳು ನಡೆಸಿದ ಶೆಲ್ ದಾಳಿಯಿಂದ ನಿರ್ಮಾಣವಾಗಿರುವ ಹೊಂಡ –ಎಎಫ್‌ಪಿ ಚಿತ್ರ

ನವೀನ ಗ್ಯಾನಗೌಡರ್

- ಉಕ್ರೇನ್‌ನ ಎರಡನೇ ಅತ್ಯಂತ ದೊಡ್ಡ ನಗರ ಹಾರ್ಕಿವ್ ಮೇಲೆ ರಷ್ಯಾದ ದಾಳಿ ತೀವ್ರಗೊಂಡಿದೆ. ಅಲ್ಲಿನ ಸ್ಥಳೀಯ ಆಡಳಿತ ಕಟ್ಟಡವು ದಾಳಿಯಲ್ಲಿ ಧ್ವಂಸವಾಗಿದೆ. ಹತ್ತು ಮಂದಿ ಈ ಕ್ಷಿಪಣಿ ದಾಳಿಗೆ ಬಲಿಯಾಗಿದ್ದಾರೆ
- ಉಕ್ರೇನ್‌ನಲ್ಲಿ ಈವರೆಗೆ 536 ಮಂದಿ ನಾಗರಿಕರು ದಾಳಿಗೆ ಬಲಿಯಾಗಿದ್ದಾರೆ. ಅವರಲ್ಲಿ 13 ಮಕ್ಕಳು ಇದ್ದಾರೆ. 400ಕ್ಕೂ ಹೆಚ್ಚು ಮಂದಿ ಗಾಯಗೊಂಡಿದ್ದಾರೆ ಎಂದು ವಿಶ್ವಸಂಸ್ಥೆ ಹೇಳಿದೆ
- ಉಕ್ರೇನ್‌ನ ಬಂದರು ನಗರ ಮರಿಯುಪೋಲ್‌ನಲ್ಲಿ ದಾಳಿಯಿಂದಾಗಿ ವಿದ್ಯುತ್ ಕಡಿತಗೊಂಡಿದೆ
- 6.60 ಲಕ್ಷ ಮಂದಿ ಕಳೆದ ಐದು ದಿನಗಳಲ್ಲಿ ಉಕ್ರೇನ್ ತೊರೆದು ನೆರೆಯ ದೇಶಗಳಲ್ಲಿ ಆಶ್ರಯ ಪಡೆದಿದ್ದಾರೆ. 10 ಲಕ್ಷಕ್ಕೂ ಹೆಚ್ಚು ಮಂದಿ ನಿರಾಶ್ರಿತರಾಗಿದ್ದಾರೆ ಎಂದು ವಿಶ್ವಸಂಸ್ಥೆ ಮಾಹಿತಿ ನೀಡಿದೆ

ಪಾರ್ಥಿವ ಶರೀರ ತರಲು ಪ್ರಯತ್ನ: ಬೊಮ್ಮಾಯಿ

ಬೆಂಗಳೂರು: ಉಕ್ರೇನ್‌ನಲ್ಲಿ ಶೆಲ್ ದಾಳಿಯಲ್ಲಿ ಮೃತಪಟ್ಟ ಹಾವೇರಿ ಜಿಲ್ಲೆಯ ಯುವಕ ನವೀನ ಗ್ಯಾನಗೌಡರ್ ಅವರ ಪಾರ್ಥಿವ ಶರೀರವನ್ನು ರಾಜ್ಯಕ್ಕೆ ತರಲು ಎಲ್ಲ ಪ್ರಯತ್ನ ಮಾಡಲಾಗಿದೆ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ತಿಳಿಸಿದರು.

ನವೀನ್ ಅವರ ತಂದೆ ಶೇಖಪ್ಪ ಗ್ಯಾನಗೌಡರ್ ಅವರಿಗೆ ದೂರವಾಣಿ ಮೂಲಕ ಸಾಂತ್ವನ ಹೇಳಿದ ಬಳಿಕ ಸುದ್ದಿಗಾರರ ಜತೆ ಮಾತನಾಡಿದರು. 'ನನಗೆ ಬೇಕಾದ ಕುಟುಂಬವಿದು. ಈ ಘಟನೆಯಿಂದ ದುಃಖವಾಗಿದೆ' ಎಂದು ಮುಖ್ಯಮಂತ್ರಿ ಭಾವುಕರಾದರು.

5ನೇ ಪುಟ ನೋಡಿ

ವಿಡಿಯೊ ನೋಡಲು ಕೋಡ್ ಸ್ಕ್ಯಾನ್ ಮಾಡಿ
ಪ್ರಜಾವಾಣಿ ನೋಡಿಯೊ

ಶಿವರಾತ್ರಿ ಜಾಗರಣೆ ಮಹಾಶಿವರಾತ್ರಿ ಪ್ರಯುಕ್ತ ಶ್ರೀ ಕ್ಷೇತ್ರ ಧರ್ಮಸ್ಥಳದಲ್ಲಿ ಮಂಗಳವಾರ ಸಾವಿರಾರು ಭಕ್ತರು ಸೇರಿದ್ದರು –ಪ್ರಜಾವಾಣಿ ಚಿತ್ರ

ಆಳಂದ: ಇಡೀ ದಿನ ಉದ್ವಿಗ್ನ

ಕೇಂದ್ರ ಸಚಿವ ಭಗವಂತ ಖೂಬಾ, ಮಾಜಿ ಶಾಸಕರ ಕಾರು ಜಖಂ

ಪ್ರಜಾವಾಣಿ ವಾರ್ತೆ

ಆಳಂದ (ಕಲಬುರಗಿ ಜಿಲ್ಲೆ): ಹಿಂದೂ–ಮುಸ್ಲಿಂ ಸಂಘಟನೆಗಳ ವಿವಾದದ ಕೇಂದ್ರವಾದ ಇಲ್ಲಿನ ಲಾಡ್ಲೆ ಮಶಾಕ ದರ್ಗಾ ಆವರಣದಲ್ಲಿ ಮಂಗಳವಾರ ಇಡೀ ದಿನ ಉದ್ವಿಗ್ನ ಸ್ಥಿತಿ ನಿರ್ಮಾಣವಾಗಿತ್ತು. ಕೊನೆಗೆ ದರ್ಗಾ ಆವರಣದಲ್ಲಿರುವ ರಾಘವಚೈತನ್ಯ ಲಿಂಗಕ್ಕೆ ಪೂಜೆ ಸಲ್ಲಿಸಲು ಅವಕಾಶ ನೀಡಿದ್ದರಿಂದ ಪರಿಸ್ಥಿತಿ ತಿಳಿಯಾಯಿತು.

ಕೇಂದ್ರ ಸಚಿವ ಭಗವಂತ ಖೂಬಾ, ಕಾಂಗ್ರೆಸ್ ಮುಖಂಡ ಬಿ.ಆರ್.ಪಾಟೀಲ, ಜಿಲ್ಲಾಧಿಕಾರಿ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಹಾಗೂ ಹಲವು ಮುಖಂಡರ ಕಾರುಗಳ ಮೇಲೂ ಕಿಡಿಗೇಡಿಗಳು ಕಲ್ಲು ತೂರಿದ್ದರಿಂದ ಕಾರುಗಳು ಜಖಂಗೊಂಡಿವೆ.

ದರ್ಗಾ ಆವರಣದಲ್ಲಿ ಗುರು ರಾಘವಚೈತನ್ಯ ಅವರ ಸಮಾಧಿ ಮೇಲೆ ಲಿಂಗ ಪ್ರತಿಷ್ಠಾಪನೆ ಮಾಡಲಾಗಿದೆ. ಈಚೆಗೆ ಕಿಡಿಗೇಡಿಯೊಬ್ಬ ಲಿಂಗದ ಬಳಿ ಗಲೀಜು ಮಾಡಿದ್ದರಿಂದ ಶ್ರೀರಾಮ ಸೇನೆ ಹಾಗೂ ಬಿಜೆಪಿ ಮುಖಂಡರು ತೀವ್ರ ಹೋರಾಟ ನಡೆಸಿದ್ದರು. ಮಂಗಳವಾರ ಮಹಾಶಿವರಾತ್ರಿ ಅಂಗವಾಗಿ ಲಿಂಗದ ಶುದ್ಧೀಕರಣ ಮಾಡಲು ಹೊರಟಿದ್ದರು. ಇದೇ ದಿನ ದರ್ಗಾದಲ್ಲಿ ಲಾಡ್ಲೆ ಮಶಾಕ ಅವರ ಸಂದಲ್ ಕಾರ್ಯಕ್ರಮವನ್ನೂ ಇಟ್ಟುಕೊಂಡಿದ್ದರಿಂದ, ಹಿಂದೂಧರ್ಮದ ಯಾರಿಗೂ ಪ್ರವೇಶ ನೀಡುವುದಿಲ್ಲ ಎಂದು ದರ್ಗಾ ಸಮಿತಿಯವರು ಬಾಗಿಲು ಮುಚ್ಚಿದ್ದರು.

ಇದರಿಂದ ಆಕ್ರೋಶಗೊಂಡ ಹಿಂದೂ ಸಂಘಟನೆಗಳ ಕಾರ್ಯಕರ್ತರು ಬೃಹತ್ ಮೆರವಣಿಗೆ ಮೂಲಕ ದರ್ಗಾಗೆ ನುಗ್ಗಲು ಮುಂದಾದರು. ನಿಷೇಧಾಜ್ಞೆ ನಡುವೆಯೂ ಕೇಂದ್ರ ಸಚಿವ ಭಗವಂತ ಖೂಬಾ ಹಾಗೂ ಕೆಲವು ಬಿಜೆಪಿ ಶಾಸಕರ ನೇತೃತ್ವದಲ್ಲಿ ಮೆರವಣಿಗೆ ಆರಂಭಿಸಲಾಯಿತು. ಆದರೆ, ಪೊಲೀಸರು ಅದನ್ನು ಅರ್ಧಕ್ಕೇ ತಡೆದರು. ಕೊನೆಗೆ ದರ್ಗಾದ ಸುತ್ತ ನೂರಡಿ ಅಂತರದಲ್ಲಿ ಹಿಂದೂ–ಮುಸ್ಲಿಂ ಕಾರ್ಯಕರ್ತರು ಪರಸ್ಪರ ಎದುರಾಗಿ ನಿಂತರು. ಇದರಿಂದ ಇಡೀ ದಿನ ತ್ವೇಷಮಯ ವಾತಾವರಣ ನಿರ್ಮಾಣವಾಯಿತು.

4ನೇ ಪುಟ ನೋಡಿ

ವಿಡಿಯೊ ನೋಡಲು ಕೋಡ್ ಸ್ಕ್ಯಾನ್ ಮಾಡಿ
ಪ್ರಜಾವಾಣಿ ನೋಡಿಯೊ

ಬಸವಕಲ್ಯಾಣದ ಅನುಭವ ಮಂಟಪದ ಆವರಣದಲ್ಲಿ ಜನಾಂದೋಲನ ಮಹಾಮೈತ್ರಿಯ ಜಾಥಾಕ್ಕೆ ಹೋರಾಟಗಾರ ಎಸ್.ಆರ್. ಹಿರೇಮಠ ಚಾಲನೆ ನೀಡಿದರು. ಬಡಗಲಪುರ ನಾಗೇಂದ್ರ, ಹೋರಾಟಗಾರ್ತಿ ಕೆ.ನೀಲಾ, ಚಾಮರಸ ಮಾಲಿಪಾಟೀಲ, ರವಿಕುಮಾರ ಪೂಣಚ್ಚ ಇದ್ದಾರೆ

ಬಸವಕಲ್ಯಾಣ: ಜನಾಂದೋಲನ ಮಹಾಮೈತ್ರಿ ಜಾಥಾ ಆರಂಭ

ಪ್ರಜಾವಾಣಿ ವಾರ್ತೆ

ಬಸವಕಲ್ಯಾಣ: ಇಲ್ಲಿನ ಅನುಭವ ಮಂಟಪದ ಆವರಣದಿಂದ ಜನಾಂದೋಲನ ಮಹಾಮೈತ್ರಿಯ ಜಾಥಾ ಮಂಗಳವಾರ ಆರಂಭವಾಗಿದ್ದು, ಬೆಂಗಳೂರಿಗೆ ಪ್ರಯಾಣ ಬೆಳೆಸಿತು.

ಹೋರಾಟಗಾರ ಎಸ್.ಆರ್. ಹಿರೇಮಠ ಅವರು ಜಾಥಾದ ವಾಹನಕ್ಕೆ ಹಸಿರು ಶಾಲು ತೋರಿಸಿ ಚಾಲನೆ ನೀಡಿ, 'ಮೂರು ಕರಾಳ ಕೃಷಿ ಕಾನೂನುಗಳನ್ನು ರಾಜ್ಯ ಸರ್ಕಾರ ಶೀಘ್ರ ಹಿಂದಕ್ಕೆ ಪಡೆಯಬೇಕು. ಶಾಸನಾತ್ಮಕ ಕನಿಷ್ಠ ಬೆಂಬಲ ಬೆಲೆ ಘೋಷಿಸಬೇಕು' ಎಂದು ಆಗ್ರಹಿಸಿದರು.

ರೈತ ಸಂಘದ ರಾಜ್ಯ ಘಟಕದ ಅಧ್ಯಕ್ಷ ಬಡಗಲಪುರ ನಾಗೇಂದ್ರ ಮಾತನಾಡಿ, 'ರಾಜ್ಯದ ನಾಲ್ಕು ಕಡೆಗಳಿಂದ ಜಾಥಾ ಆರಂಭಗೊಂಡಿದ್ದು, ಬೆಂಗಳೂರಿನಲ್ಲಿ ಮುಕ್ತಾಯವಾಗಲಿದೆ. ಅಲ್ಲಿ ಇದೇ 15 ಮತ್ತು 16ರಂದು ನಡೆಯುವ ರೈತ ಸಮಾವೇಶದಲ್ಲಿ ರೈತರು ಅಧಿಕ ಸಂಖ್ಯೆಯಲ್ಲಿ ಪಾಲ್ಗೊಳ್ಳಬೇಕು' ಎಂದು ಮನವಿ ಮಾಡಿದರು.

ಏಪ್ರಿಲ್, ಮೇ ತಿಂಗಳಲ್ಲಿ ಜೆಇಇ ಮೇನ್ ಪರೀಕ್ಷೆ 3A
ಎಲ್‌ಪಿಜಿ, ಎಟಿಎಫ್ ಬೆಲೆ ಏರಿಕೆ 3A

ಚಿನಕುರಳಿ

ಪ್ರಕಾಶ್ ಶೆಟ್ಟಿ

ಸಚಿವ ಸಂಪುಟದ ಅನುಮೋದನೆ ಪಡೆಯಲು ನಗರಾಭಿವೃದ್ಧಿ ಇಲಾಖೆಯಿಂದ ಪ್ರಸ್ತಾವ ಸಿದ್ಧ

ಈಜಿಪುರ ಮೇಲ್ಸೇತುವೆ: ಟೆಂಡರ್ ರದ್ದು?

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೋರಮಂಗಲದ ಈಜಿಪುರ ಜಂಕ್ಷನ್‌ನಿಂದ ಕೇಂದ್ರೀಯ ಸದನ ನಡುವಿನ ಮೇಲ್ಸೇತುವೆ ಕಾಮಗಾರಿ ವಿಳಂಬವಾಗಿರುವ ಬಗ್ಗೆ ಹೈಕೋರ್ಟ್ ತರಾಟೆಗೆ ತೆಗೆದುಕೊಂಡ ಬೆನ್ನಲ್ಲೇ ಇದರ ಗುತ್ತಿಗೆಯನ್ನು ರದ್ದುಪಡಿಸುವುದಕ್ಕೆ ನಗರಾಭಿವೃದ್ಧಿ ಇಲಾಖೆಯು ಸಿದ್ಧತೆ ನಡೆಸಿದೆ. ಈ ಗುತ್ತಿಗೆ ರದ್ದತಿಗೆ ಸಚಿವ ಸಂಪುಟ ಅನುಮೋದನೆಯ ಅಗತ್ಯವಿದ್ದು, ಇದಕ್ಕಾಗಿ ಇಲಾಖೆಯು ಪ್ರಸ್ತಾವ ಸಿದ್ಧಪಡಿಸಿದೆ.

ಒಟ್ಟು 2.5 ಕಿಲೋ ಮೀಟರ್ ಉದ್ದದ ಮೇಲ್ಸೇತುವೆ ಕಾಮಗಾರಿಯನ್ನು ಬಿಬಿಎಂಪಿಯು ಸಿಂಪ್ಲೆಕ್ಸ್ ಇನ್‌ಫ್ರಾಸ್ಟ್ರಕ್ಚರ್ ಲಿಮಿಟೆಡ್ ಸಂಸ್ಥೆಗೆ ಗುತ್ತಿಗೆ ನೀಡಿದೆ. ಗುತ್ತಿಗೆ ಒಪ್ಪಂದದ ಪ್ರಕಾರ 2019ರ ನವೆಂಬರ್ 4ರಂದೇ ಕಾಮಗಾರಿ ಪೂರ್ಣಗೊಳ್ಳಬೇಕಿತ್ತು. ಆದರೆ, ಕಾಮಗಾರಿ ಅರ್ಧಕ್ಕೆ ಸ್ಥಗಿತಗೊಂಡಿದೆ. ಈ ಸಂಬಂಧ ಆದಿನಾರಾಯಣ ಶೆಟ್ಟಿ ಎಂಬವರು ಹೈಕೋರ್ಟ್‌ಗೆ ರಿಟ್ ಅರ್ಜಿ ಸಲ್ಲಿಸಿದ್ದರು. ಈ ಅರ್ಜಿಯ ವಿಚಾರಣೆ ಸಂದರ್ಭದಲ್ಲಿ ಮುಖ್ಯ ನ್ಯಾಯಮೂರ್ತಿ ನೇತೃತ್ವದ ಪೀಠ ಕಾಮಗಾರಿ ವಿಳಂಬದ ಬಗ್ಗೆ ತೀವ್ರ ಅತೃಪ್ತಿ ವ್ಯಕ್ತಪಡಿಸಿತ್ತು. ಆ ಬಳಿಕ ಬಿಬಿಎಂಪಿಯು ಈ ಕಾಮಗಾರಿಯ ಗುತ್ತಿಗೆ ರದ್ದುಪಡಿಸಲು ಅನುಮೋದನೆ ಕೋರಿ ನಗರಾಭಿವೃದ್ಧಿ ಇಲಾಖೆಗೆ 2022ರ ಜ.13ರಂದು ಪ್ರಸ್ತಾವನೆ ಸಲ್ಲಿಸಿತ್ತು. ಆದರೆ, ನಗರಾಭಿವೃದ್ಧಿ ಇಲಾಖೆ ಈ ಬಗ್ಗೆ ಯಾವುದೇ ಕ್ರಮ ಕೈಗೊಂಡಿರಲಿಲ್ಲ.

‘ಯೋಜನೆಯು ವಿಳಂಬವಾಗಲು ಗುತ್ತಿಗೆದಾರ ಸಂಸ್ಥೆಯೇ ಕಾರಣ ಎನ್ನುವುದು ಮೇಲ್ನೋಟಕ್ಕೆ ಕಂಡು ಬರುತ್ತಿದೆ. ಯೋಜನೆಯಲ್ಲಿ ಸಾರ್ವಜನಿಕ ಹಣ ವಿನಿಯೋಗಿಸಲಾಗಿದ್ದು, ಕಾಮಗಾರಿ ವಿಳಂಬದಿಂದ ಹೆಚ್ಚಿನ ಜನರಿಗೆ ಅನನುಕೂಲ ಉಂಟಾಗಿದೆ. ಕಾಮಗಾರಿಯ ಗುತ್ತಿಗೆಯನ್ನು ಒಂದು ವಾರದ ಒಳಗೆ ರದ್ದುಪಡಿಸಬೇಕು. ಅವರ ವಿರುದ್ಧ ಎಫ್‌ಐಆರ್ ದಾಖಲಿಸಬೇಕು. ಬೇರೆ ಏಜೆನ್ಸಿಯನ್ನು ನೇಮಿಸಿ ಕಾಮಗಾರಿಯನ್ನು ಕಾಲಮಿತಿಯೊಳಗೆ ಪೂರ್ಣಗೊಳಿಸಬೇಕು’ ಎಂದು ನ್ಯಾಯ ಪೀಠವು 2022ರ ಫೆ. 17 ರಂದು ನಿರ್ದೇಶನ ನೀಡಿತ್ತು. ಆ ಬಳಿಕ ಎಚ್ಚೆತ್ತುಕೊಂಡ ನಗರಾಭಿವೃದ್ಧಿ ಇಲಾಖೆಯು ಕಾಮಗಾರಿಯ ಗುತ್ತಿಗೆಯನ್ನು ರದ್ದುಪಡಿಸಲು ಪ್ರಸ್ತಾವ ಸಿದ್ಧಪಡಿಸಿದೆ ಎಂದು ಗೊತ್ತಾಗಿದೆ. ಮುಂದಿನ ಸಚಿವ ಸಂಪುಟ ಸಭೆಯಲ್ಲಿ ಈ ಪ್ರಸ್ತಾವಕ್ಕೆ ಅನುಮೋದನೆ ಸಿಗುವ ನಿರೀಕ್ಷೆ ಇದೆ.

ರಾಜ್ಯ ಹಣಕಾಸು ಆಯೋಗದ ನಿಧಿಯ ₹ 204 ಕೋಟಿ ಅನುದಾನದಲ್ಲಿ ಈ ಮೇಲ್ಸೇತುವೆ ಕಾಮಗಾರಿ ಕೈಗೆತ್ತಿಕೊಳ್ಳಲು 2017ರ ಮಾ.16ರಂದು ಸಚಿವ ಸಂಪುಟ ಸಭೆಯಲ್ಲಿ ಅನುಮೋದನೆ ನೀಡಲಾಗಿತ್ತು. 2017ರ ಮೇ 4ರಂದು ಕಾರ್ಯಾದೇಶ ನೀಡಲಾಗಿತ್ತು. 30 ತಿಂಗಳಲ್ಲಿ ಕಾಮಗಾರಿ ಪೂರ್ಣಗೊಳಿಸುವಂತೆ ಷರತ್ತು ವಿಧಿಸಲಾಗಿತ್ತು. ಒಮ್ಮೆ ದಂಡರಹಿತವಾಗಿ ಹಾಗೂ ಇನ್ನೊಮ್ಮೆ ₹ 1.09 ಕೋಟಿ ದಂಡ ವಿಧಿಸಿ ಒಟ್ಟು ಎರಡು ಬಾರಿ ಕಾಮಗಾರಿ ಗಡುವು ವಿಸ್ತರಿಸಲಾಗಿತ್ತು. ಆದರೆ, 4 ವರ್ಷ 10 ತಿಂಗಳು ಕಳೆದರೂ ಕಾಮಗಾರಿ ಪೂರ್ಣಗೊಂಡಿಲ್ಲ.



ಬೆಂಗಳೂರಿನ ಈಜುಪುರ ಕೇಂದ್ರೀಯ ಸದನ ವರೆಗಿನ ಮೇಲ್ಸೇತುವೆ ಕಾಮಗಾರಿ ಅರ್ಧದಲ್ಲೇ ಸ್ಥಗಿತಗೊಂಡಿರುವುದು –ಪ್ರಜಾವಾಣಿ ಚಿತ್ರ

ಕಾಮಗಾರಿ: ಪ್ರಗತಿ ವಿವರ

ಶೇ **49** ಭೌತಿಕ ಪ್ರಗತಿ

ಶೇ **37.93** ಆರ್ಥಿಕ ಪ್ರಗತಿ

571 ಸೆಗ್ಮೆಂಟ್ ನಿರ್ಮಾಣ ಬಾಕಿ

ಈ ಮೇಲ್ಸೇತುವೆಯ ಕಾಮಗಾರಿಯ ಸೆಗ್ಮೆಂಟ್ ನಿರ್ಮಾಣ ಶೇ 25ರಷ್ಟು ಮಾತ್ರ ಪೂರ್ಣಗೊಂಡಿದೆ. ಒಟ್ಟು 762ರಲ್ಲಿ 191 ಸೆಗ್ಮೆಂಟ್‌ಗಳನ್ನು ಮಾತ್ರ ನಿರ್ಮಿಸಲಾಗಿದೆ. ನಿರ್ಮಾಣಗೊಂಡ ಸೆಗ್ಮೆಂಟ್‌ಗಳನ್ನು ಇಡಲು ಜಾಗದ ಕೊರತೆ ಇದೆ. ಟೆಂಡರ್ ಷರತ್ತುಗಳ ಪ್ರಕಾರ 12 ಸಾವಿರ ಚ.ಮೀ ವಿಸ್ತೀರ್ಣದ ಕಾಸ್ಟಿಂಗ್ ಯಾರ್ಡನ್ನು ಗುತ್ತಿಗೆದಾರರು ಹೊಂದಿರಬೇಕು. ಆದರೆ 9,500 ಚ.ಮೀ ಜಾಗ ಮಾತ್ರ ಲಭ್ಯ ಇದೆ. ಷರತ್ತಿನ ಪ್ರಕಾರ ಗುತ್ತಿಗೆದಾರರು ಎರಡು ಲಾಂಚಿಂಗ್ ಗರ್ಡರ್‌ಗಳನ್ನು ಬಳಸಬೇಕಿತ್ತು. ಆದರೆ, ಒಂದನ್ನು ಮಾತ್ರ ಬಳಸುತ್ತಿದ್ದರು. ನಾಲ್ಕು ಕ್ರೇನ್ ಬದಲು ಎರಡು ಕ್ರೇನ್‌ಗಳನ್ನು ಮಾತ್ರ ಬಳಸುತ್ತಿದ್ದರು.

ಗುಣಮಟ್ಟವೂ ಕಳಪೆ?

ಈ ಮೇಲ್ಸೇತುವೆ ಪಿಯರ್ ಕ್ಯಾಪ್‌ಗಳು ಗುಣನಿಯಂತ್ರಣ ಪರೀಕ್ಷೆಯಲ್ಲೂ ವಿಫಲಗೊಂಡಿವೆ. ನಿರ್ಮಿಸಿದ್ದ 18 ಮತ್ತು 19ನೇ ಪಿಯರ್ ಕ್ಯಾಪ್‌ಗಳನ್ನು ತೆರವುಗೊಳಿಸುವಂತೆ ಗುತ್ತಿಗೆದಾರರಿಗೆ ಬಿಬಿಎಂಪಿಯು ಸೂಚಿಸಿತ್ತು. ಈ ಬಗ್ಗೆಯೂ ಗುತ್ತಿಗೆದಾರರು ಯಾವುದೇ ಕ್ರಮ ಕೈಗೊಂಡಿಲ್ಲ.

ಭದ್ರತಾ ಠೇವಣಿ ಮುಟ್ಟುಗೋಲು

ಗುತ್ತಿಗೆ ಸಂಸ್ಥೆಯು ಕಾಮಗಾರಿಯ ಗುತ್ತಿಗೆ ಪಡೆಯುವ ಸಂದರ್ಭದಲ್ಲಿ ₹ 10.16 ಕೋಟಿ ಭದ್ರತಾ ಠೇವಣಿ ಇಟ್ಟಿದೆ. ಈ ಮೊತ್ತವನ್ನೂ ಮುಟ್ಟುಗೋಲು ಹಾಕಿಕೊಳ್ಳುವಂತೆಯೂ ನಗರಾಭಿವೃದ್ಧಿ ಇಲಾಖೆ ಶಿಫಾರಸು ಮಾಡಿದೆ.

ಈ ಕಾಮಗಾರಿ ಸಂಬಂಧ ಬಿಬಿಎಂಪಿ ಯಾವುದೇ ಬಿಲ್‌ಗಳನ್ನು ಪಾಲಿಕೆ ಬಾಕಿ ಉಳಿಸಿಕೊಂಡಿಲ್ಲ. ಇದುವರೆಗೆ ಒಟ್ಟು 14 ಬಿಲ್‌ಗಳನ್ನು ಗುತ್ತಿಗೆದಾರರಿಗೆ ಪಾವತಿ ಮಾಡಿದ್ದು, ಒಟ್ಟು ₹ 75.11 ಕೋಟಿ ಸಂದಾಯವಾಗಿದೆ.

ಎಪಿಎಂಸಿ ಮಾಜಿ ಅಧ್ಯಕ್ಷರ ಮನೆಯಲ್ಲಿ ದರೋಡೆ

ಕೋಲಾರ: ನಗರದ ಬೈರೇಗೌಡನಗರ ನಿವಾಸಿ, ಎಪಿಎಂಸಿ ಮಾಜಿ ಅಧ್ಯಕ್ಷ ರಮೇಶ್ ಅವರ ಮನೆಗೆ ಆದಾಯ ತೆರಿಗೆ ಇಲಾಖೆ (ಐ.ಟಿ) ಅಧಿಕಾರಿಗಳ ಸೋಗಿನಲ್ಲಿ ನುಗ್ಗಿದ್ದ ದುಷ್ಕರ್ಮಿಗಳು ಕುಟುಂಬ ಸದಸ್ಯರನ್ನು ಕಟ್ಟಿ ಹಾಕಿ ₹ 40 ಲಕ್ಷ ನಗದು, ಒಂದೂವರೆ ಕೆ.ಜಿ ಚಿನ್ನಾಭರಣ ದೋಚಿರುವ ಘಟನೆ ನಡೆದಿದೆ.

ಸೋಮವಾರ ರಾತ್ರಿ ಕಾರಿನಲ್ಲಿ ಬಂದಿದ್ದ 6 ಮಂದಿ ದುಷ್ಕರ್ಮಿಗಳು ದಾಖಲೆಪತ್ರಗಳ ಪರಿಶೀಲನೆ ನೆಪದಲ್ಲಿ ಮನೆ ಬಾಗಿಲು ತೆರೆಸಿದ್ದಾರೆ. ಆಸ್ತಿ, ಹಣಕಾಸು ವಹಿವಾಟು ಸಂಬಂಧಪಟ್ಟ ದಾಖಲೆಗಳ ಪರಿಶೀಲನೆ ನಾಟಕವಾಡಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ.

ರಮೇಶ್‌ರ ಪತ್ನಿ ಆರತಿ ಅವರು ಆರೋಪಿಗಳ ಬಗ್ಗೆ ಅನುಮಾನಗೊಂಡು ಪ್ರಶ್ನಿಸಿದ್ದಾರೆ. ಆಗ ದುಷ್ಕರ್ಮಿಗಳು ಪಿಸ್ತೂಲ್‌ನಿಂದ ಬೆದರಿಸಿ ರಮೇಶ್, ಆರತಿ ಮತ್ತು ಅವರ ಮಗ ನಿಶಾಂತ್‌ನ ಕೈ ಕಾಲು ಕಟ್ಟಿ, ಕೂಡಿ ಹಾಕಿ ದುಷ್ಕೃತ್ಯ ಎಸಗಿದ್ದಾರೆ ಎಂದು ತಿಳಿಸಿದ್ದಾರೆ.

ಅಲ್ಮೇರಾದಲ್ಲಿದ್ದ ಹಣ, ಚಿನ್ನಾಭರಣ, ಸುಮಾರು ₹ 50 ಸಾವಿರ ಮೌಲ್ಯದ ಬೆಳ್ಳಿ ಆಭರಣ ಸೇರಿದಂತೆ ₹ 95 ಲಕ್ಷ ಮೌಲ್ಯದ ವಸ್ತುಗಳನ್ನು ದುಷ್ಕರ್ಮಿಗಳು ದೋಚಿ ಪರಾರಿಯಾಗಿದ್ದಾರೆ. ಬಳಿಕ ರಮೇಶ್ ದಂಪತಿ ಕೈ ಕಾಲಿನ ಹಗ್ಗ ಬಿಡಿಸಿಕೊಂಡು ಹೊರ ಬಂದು ಸಹಾಯಕ್ಕೆ ಕೂಗಿಕೊಂಡಿದ್ದಾರೆ. ಚೀರಾಟ ಕೇಳಿದ ನೆರೆಹೊರೆಯವರು ಬಂದಾಗ ಪ್ರಕರಣ ಬೆಳಕಿಗೆ ಬಂದಿದೆ.

ಕ್ಯಾಮೆರಾದಲ್ಲಿ ಸೆರೆ: ಎಪಿಎಂಸಿಯಲ್ಲಿ ಟೊಮೆಟೊ ಮಂಡಿ ನಡೆಸುವ ರಮೇಶ್ ಅವರು ಲೇವಾದೇವಿ ಮತ್ತು ಚೀಟಿ ವ್ಯವಹಾರ ಸಹ ಮಾಡುತ್ತಾರೆ. ಕಾರಂಜಿಕಟ್ಟೆಯಲ್ಲಿ ಫೈನಾನ್ಸ್ ಕಚೇರಿಯಿದೆ. ಅವರು ನಿತ್ಯದಂತೆ ರಾತ್ರಿ 7.30ರ ಸುಮಾರಿಗೆ ಕಚೇರಿಯಿಂದ ಬೈಕ್‌ನಲ್ಲಿ ಮನೆಗೆ ಬಂದಿದ್ದರು. ಅದಕ್ಕೂ ಮುನ್ನವೇ ದುಷ್ಕರ್ಮಿಗಳು ಕಾರಿನಲ್ಲಿ ಮನೆ ಸುತ್ತಮುತ್ತ ಮೂರ್ನಾಲ್ಕು ಸುತ್ತು ಹಾಕಿದ್ದಾರೆ. ಈ ದೃಶ್ಯಾವಳಿ ರಮೇಶ್‌ರ ಮನೆ ಬಳಿಯ ಸಿ.ಸಿ ಕ್ಯಾಮೆರಾದಲ್ಲಿ ಸೆರೆಯಾಗಿದೆ ಎಂದು ಪೊಲೀಸರು ಮಾಹಿತಿ ನೀಡಿದ್ದಾರೆ.

₹68.65 ಲಕ್ಷ ವಿದ್ಯಾರ್ಥಿವೇತನ ದುರ್ಬಳಕೆ

ಚಿಂತಾಮಣಿ: ನಗರದ ಸರ್ಕಾರಿ ಪ್ರಥಮದರ್ಜೆ ಕಾಲೇಜು ಹಾಗೂ ಸ್ನಾತಕೋತ್ತರ ಕೇಂದ್ರದಲ್ಲಿ ಪ್ರಾಂಶುಪಾಲರ ಸಹಿ ನಕಲು ಮಾಡಿ ₹68.65 ಲಕ್ಷ ದುರುಪಯೋಗ ಮಾಡಿದ ಆರೋಪದಡಿ ದ್ವಿತೀಯ ದರ್ಜೆ ಸಹಾಯಕ ಎ.ಎನ್.ಸಂತೋಷ್ ಅವರನ್ನು ಪೊಲೀಸರು ಬಂಧಿಸಿದ್ದಾರೆ.

ಆರೋಪಿ 2012ರ ಜೂನ್ 1ರಿಂದಲೂ ಕಾಲೇಜಿನಲ್ಲಿ ಕೆಲಸ ಮಾಡುತ್ತಿದ್ದರು. 2019 ನವೆಂಬರ್ 23ರಿಂದ ವಿದ್ಯಾರ್ಥಿ ವೇತನ ವಿಭಾಗದಲ್ಲಿ ಕೆಲಸ ಮಾಡುತ್ತಿದ್ದರು. ವಿದ್ಯಾರ್ಥಿವೇತನಕ್ಕೆ ಸಂಬಂಧಿಸಿದ ದಾಖಲೆಗಳು ವಶದಲ್ಲಿದ್ದವು. 2021ರ ಏಪ್ರಿಲ್‌ನಿಂದ ಕೆಲಸಕ್ಕೆ ಗೈರುಹಾಜರಾಗಿದ್ದರು. ಕಡತಗಳನ್ನು ಪರಿಶೀಲಿಸಿದಾಗ ಹಣದ ದುರ್ಬಳಕೆ ಪತ್ತೆಯಾಗಿತ್ತು.

ಹೊಸಕೆರೆಹಳ್ಳಿ ಬಳಿ ಮಂಗಳವಾರ ಕಾಂಗ್ರೆಸ್ ಪಾದಯಾತ್ರೆ ಸಾಗಿ ಬಂದಾಗ ಚಿತ್ರನಟ ದುನಿಯಾ ವಿಜಯ್ ಅವರು ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಜತೆಗೂಡಿ ಹೆಜ್ಜೆ ಹಾಕಿದರು – ಪ್ರಜಾವಾಣಿ ಚಿತ್ರ

ಕಾಂಗ್ರೆಸ್ ಪಕ್ಷದ ಪಾದಯಾತ್ರೆಯಿಂದಾಗಿ ನಾಯಂಡಹಳ್ಳಿ ಬಳಿ ಸಂಚಾರ ದಟ್ಟಣೆ ಉಂಟಾಗಿತ್ತು – ಪ್ರಜಾವಾಣಿ ಚಿತ್ರ

‘ಕೈ’ ಪಾದಯಾತ್ರೆ: ಗಂಟೆಗಟ್ಟಲೆ ಸಂಚಾರ ದಟ್ಟಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮೇಕೆದಾಟು ಯೋಜನೆ ಅನುಷ್ಠಾನಕ್ಕೆ ಆಗ್ರಹಿಸಿ ಕಾಂಗ್ರೆಸ್ ಹಮ್ಮಿಕೊಂಡಿರುವ ಪಾದಯಾತ್ರೆಯಲ್ಲಿ ಮಂಗಳವಾರ ಹತ್ತಾರು ಸಾವಿರ ಜನರು ಪಾಲ್ಗೊಂಡಿದ್ದರಿಂದ ನಗರದ ಹಲವು ರಸ್ತೆಗಳಲ್ಲಿ ಗಂಟೆಗಟ್ಟಲೆ ಸಂಚಾರ ದಟ್ಟಣೆ ಸೃಷ್ಟಿಯಾಯಿತು. ಪಾದಯಾತ್ರೆಯು ಸಾಗಿಬಂದ ಮಾರ್ಗಗಳಲ್ಲಿ ವಾಹನ ಸವಾರರು ರಸ್ತೆಯ ನಡುವೆಯೇ ಸಿಲುಕಿ ಪರದಾಡಿದರು.

ಬೆಳಿಗ್ಗೆ ಪಾದಯಾತ್ರೆ ಪಟ್ಟಣಗೆರೆಯಲ್ಲಿ ಆರಂಭವಾಗುತ್ತಿದ್ದಂತೆಯೇ ಸಾವಿರಾರು ಮಂದಿ ಮೈಸೂರು ರಸ್ತೆಗಿಳಿದರು. ಅಲ್ಲಿಂದ ದಾರಿಯುದ್ದಕ್ಕೂ ಸಹಸ್ರಾರು ಜನರು ಬಂದು ಸೇರುತ್ತಲೇ ಇದ್ದರು. ಮಧ್ಯಾಹ್ನದವರೆಗೂ ಪಾದಯಾತ್ರೆ ಇದೇ ಮಾರ್ಗದಲ್ಲಿ ಸಾಗಿತು. ಮಧ್ಯಾಹ್ನದ ಬಳಿಕ ಪಾದಯಾತ್ರೆ ನಾಯಂಡಹಳ್ಳಿ ಜಂಕ್ಷನ್‌ನಿಂದ ವರ್ತುಲ ರಸ್ತೆಯತ್ತ ತಿರುಗಿತು.

ಮೈಸೂರು ರಸ್ತೆಯಲ್ಲಿ ಒಂದು ಬದಿಯಲ್ಲಿ ಪಾದಯಾತ್ರೆ ಸಾಗಲು ಅವಕಾಶ ನೀಡಲಾಗಿತ್ತು. ಮತ್ತೊಂದು ಬದಿಯಲ್ಲಿ ವಾಹನ ಸಂಚಾರಕ್ಕೆ ಅನುವು ಮಾಡಲಾಗಿತ್ತು. ಆದರೆ, ಹಲವೆಡೆ ಜನರು ರಸ್ತೆಯ ಎರಡೂ ಬದಿಗಳನ್ನು ಆವರಿಸಿಕೊಂಡರು. ವಾಹನಗಳು ಮುಂದಕ್ಕೆ ಸಾಗಲು ಅವಕಾಶವಿಲ್ಲದಂತಾಯಿತು. ವಾಹನ ಸಂಚಾರ ನಿಯಂತ್ರಿಸಲು ಪೊಲೀಸರು ಹರಸಾಹಸ ಪಡುತ್ತಿದ್ದ ದೃಶ್ಯಗಳು ಕಂಡುಬಂದವು.

ಪಟ್ಟಣಗೆರೆ, ನಾಯಂಡಹಳ್ಳಿ, ವಿಜಯನಗರ, ಗೋವಿಂದರಾಜನಗರ ಮತ್ತು ಸುತ್ತಮುತ್ತಲಿನ ಪ್ರದೇಶಗಳಲ್ಲಿ ಮಧ್ಯಾಹ್ನದವರೆಗೂ ವಾಹನಗಳು ನಿಧಾನಗತಿಯಲ್ಲಿ ಸಂಚರಿಸುತ್ತಿದ್ದವು. ರಾಜರಾಜೇಶ್ವರಿನಗರ ಸೇರಿದಂತೆ ಹಲವು ಕಡೆಗಳಲ್ಲೂ ಸಂಚಾರ ಸಮಸ್ಯೆ ಉಂಟಾಗಿತ್ತು.

ಮಧ್ಯಾಹ್ನದ ಬಳಿಕ ವರ್ತುಲ ರಸ್ತೆಯಲ್ಲಿ ಪಾದಯಾತ್ರೆ ಸಾಗಿತು. ಆಗಲೂ ವಾಹನ ಸಂಚಾರಕ್ಕೆ ಅಡಚಣೆ ಉಂಟಾಯಿತು. ಕಾಮಾಕ್ಯ ಜಂಕ್ಷನ್‌ನಿಂದ ಕದಿರೇನಹಳ್ಳಿ ಜಂಕ್ಷನ್, ಬನಶಂಕರಿ, ಜಯನಗರದವರೆಗೂ ವಾಹನದಟ್ಟಣೆ ವ್ಯಾಪಿಸಿತ್ತು. ಪದ್ಮನಾಭನಗರ, ಬಸವನಗುಡಿ ಸೇರಿದಂತೆ ಹಲವು ಪ್ರದೇಶಗಳಲ್ಲೂ ಈ ಸಮಸ್ಯೆ ಇತ್ತು.

ರಸ್ತೆ ಮಧ್ಯದಲ್ಲೇ ಸೆಲ್ಫಿ: ಪಾದಯಾತ್ರೆಗೆ ಬಂದಿದ್ದ ಕಾಂಗ್ರೆಸ್ ಕಾರ್ಯಕರ್ತರು ಪಕ್ಷದ ನಾಯಕರು ಕಂಡಾಗಲೆಲ್ಲ ಸೆಲ್ಫಿ ಕ್ಲಿಕ್ಕಿಸಿಕೊಳ್ಳುವುದಕ್ಕೆ ಮುಗಿಬೀಳುತ್ತಿದ್ದರು. ರಸ್ತೆ ಮಧ್ಯದಲ್ಲೇ ಸೆಲ್ಫಿ ತೆಗೆದುಕೊಳ್ಳುತ್ತಿದ್ದರಿಂದ ವಾಹನಗಳ ಸಂಚಾರಕ್ಕೆ ತೊಂದರೆ ಆಗುತ್ತಿತ್ತು. ಕಾಂಗ್ರೆಸ್ ನಾಯಕರೂ ಕಿರಿಕಿರಿಗೆ ಒಳಗಾದರು. ಒಮ್ಮೆ ತಾಳ್ಮೆ ಕಳೆದುಕೊಂಡ ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್, ಕಾರ್ಯಕರ್ತರ ಮೇಲೆ ಗರಂ ಆದರು.

ಸಂಚಾರ ನಿಯಂತ್ರಿಸಿದ ಖಾದರ್

ಮಧ್ಯಾಹ್ನದ ವಿರಾಮದ ಬಳಿಕ ಪಾದಯಾತ್ರೆ ಆರಂಭವಾದಾಗ ವರ್ತುಲ ರಸ್ತೆಯಲ್ಲಿ ಸಂಚಾರ ದಟ್ಟಣೆ ಸೃಷ್ಟಿಯಾಯಿತು. ಆಗ ಸಮೀಪದಲ್ಲಿದ್ದ ವಿಧಾನಸಭೆ ವಿರೋಧ ಪಕ್ಷದ ಉಪ ನಾಯಕ ಯು.ಟಿ. ಖಾದರ್ ಪೊಲೀಸರಂತೆ ರಸ್ತೆ ಮಧ್ಯದಲ್ಲೇ ನಿಂತು ವಾಹನಗಳ ಸಂಚಾರಕ್ಕೆ ದಾರಿ ಮಾಡಿಕೊಟ್ಟರು.

ಶಿವಲಿಂಗಕ್ಕೆ ಪುಷ್ಪಾರ್ಚನೆ

ಶಿವರಾತ್ರಿ ಪ್ರಯುಕ್ತ ಜ್ಞಾನಭಾರತಿ ಮೆಟ್ರೊ ರೈಲು ನಿಲ್ದಾಣದ ಬಳಿ ಶಿವಲಿಂಗ ಇರಿಸಲಾಗಿತ್ತು. ಪಾದಯಾತ್ರೆಯಲ್ಲಿ ಬಂದ ಕಾರ್ಯಕರ್ತರು ಶಿವಲಿಂಗಕ್ಕೆ ಪುಷ್ಪಾರ್ಚನೆ ಮಾಡಿ ಮುಂದಕ್ಕೆ ಸಾಗಿದರು.

ಕೀವ್ ತೊರೆದ ಭಾರತೀಯರು

ನವದೆಹಲಿ (ಪಿಟಿಐ): ‘ಎಲ್ಲಾ ಭಾರತೀಯರು ಉಕ್ರೇನ್‌ನ ಕೀವ್ ತೊರೆದಿದ್ದಾರೆ’ ಎಂದು ವಿದೇಶಾಂಗ ಕಾರ್ಯದರ್ಶಿ ಹರ್ಷವರ್ಧನ್ ಶ್ರಿಂಗ್ಲಾ ಮಂಗಳವಾರ ತಿಳಿಸಿದ್ದಾರೆ. ‘ಹಾರ್ಕಿವ್ ಮತ್ತು ಇತರೆಡೆ ಸಿಲುಕಿದ್ದ ಭಾರತೀಯರ ಸುರಕ್ಷಿತ ನಿರ್ಗಮನಕ್ಕೆ ತುರ್ತು ಮಾರ್ಗ ಒದಗಿಸಲು ರಷ್ಯಾ ಮತ್ತು ಉಕ್ರೇನ್‌ಗೆ ಮನವಿ ಮಾಡಲಾಗಿದೆ’ ಎಂದರು.

ಬಿಬಿಎಂಪಿ ಅಲ್ಲ; ಬಿಜೆಪಿ ಕಚೇರಿ: ಡಿಕೆಶಿ ವಾಗ್ದಾಳಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಫ್ಲೆಕ್ಸ್ ಬ್ಯಾನರ್ ವಿಚಾರದಲ್ಲಿ ರಾಜಕಾರಣ ಮಾಡುತ್ತಿರುವ ಬಿಬಿಎಂಪಿ ಕಚೇರಿಯ ನಾಮಫಲಕವನ್ನು ಬದಲಿಸಿ, ಬಿಜೆಪಿ ಕಚೇರಿ ಎಂದು ಘೋಷಿಸಬೇಕು ಎಂದು ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಮಂಗಳವಾರ ವಾಗ್ದಾಳಿ ನಡೆಸಿದರು.

ರಾಜರಾಜೇಶ್ವರಿನಗರದ ಪೂರ್ಣಿಮಾ ಪ್ಯಾಲೇಸ್ ಕಲ್ಯಾಣ ಮಂಟಪದಿಂದ ಪಾದಯಾತ್ರೆ ಆರಂಭಿಸುವ ಮುನ್ನ ಪತ್ರಿಕಾಗೋಷ್ಠಿಯಲ್ಲಿ ಅವರು, ‘ಪೊಲೀಸರು ಮತ್ತು ಪಾಲಿಕೆ ಅಧಿಕಾರಿಗಳು ಸೇರಿಕೊಂಡು ಕಾಂಗ್ರೆಸ್ ಪಕ್ಷದ ಬ್ಯಾನರ್, ಫ್ಲೆಕ್ಸ್‌ಗಳನ್ನು ಕಿತ್ತು ಹಾಕುತ್ತಿದ್ದಾರೆ. ಇದೇ ಧೋರಣೆ ಮುಂದುವರಿದರೆ ಬಿಜೆಪಿಯವರ ಬ್ಯಾನರ್, ಫ್ಲೆಕ್ಸ್‌ಗಳನ್ನು ನಮ್ಮ ಕಾರ್ಯಕರ್ತರ ಮೂಲಕ ಕಿತ್ತು ಹಾಕಿಸುತ್ತೇವೆ’ ಎಂದರು.

ಸಚಿವರಾದ ಅಶ್ವತ್ಥನಾರಾಯಣ, ವಿ.ಸೋಮಣ್ಣ ಹುಟ್ಟುಹಬ್ಬದ ಸಮಾರಂಭ, ಬೊಮ್ಮನಹಳ್ಳಿಯಲ್ಲಿ ಸಿ.ಎಂ ಕಾರ್ಯಕ್ರಮಕ್ಕೂ ಫ್ಲೆಕ್ಸ್ ಹಾಕಬಹುದು. ಕಾಂಗ್ರೆಸ್‌ನವರು ಮಾತ್ರ ಹಾಕಬಾರದೇ? ಬಿಜೆಪಿಯವರಿಗೆ ಬೇರೆ ಕಾನೂನಿದೆಯೇ? ಗೌರವ್ ಗುಪ್ತ ಅವರೇ ಪಾಲಿಕೆ ಕಚೇರಿಗೆ ಬಿಜೆಪಿ ಕಚೇರಿ ಎಂದು ಫಲಕ ಹಾಕಿಕೊಳ್ಳಿ ಎಂದು ಹೇಳಿದರು.

ಕಾನೂನು ಹೋರಾಟ ಮಾಡಲಿ: ‘ಕಾಂಗ್ರೆಸ್‌ನ ಪಾದಯಾತ್ರೆಯಿಂದ ರಾಜ್ಯದ ಕಾನೂನು ಹೋರಾಟಕ್ಕೆ ತೊಂದರೆ ಆಗುತ್ತದೆ’ ಎಂಬ ಜಲ ಸಂಪನ್ಮೂಲ ಸಚಿವ ಗೋವಿಂದ ಕಾರಜೋಳ ಹೇಳಿಕೆಗೆ, ‘ನಾನು ಕೂಡಾ ಜಲಸಂಪನ್ಮೂಲ ಸಚಿವನಾಗಿದ್ದೆ. ನನಗೂ ಸ್ವಲ್ಪ ಜ್ಞಾನ ಇದೆ. ಅವರು ಮೊದಲು ಅಧಿಕಾರಿಗಳ ಜತೆ ಸಭೆ ನಡೆಸಲಿ. ರಾಜ್ಯದ ಕಾನೂನು ಹೋರಾಟವನ್ನು ಸರಿಯಾಗಿ ಮುನ್ನಡೆಸಲಿ’ ಎಂದು ಅವರು ಹೇಳಿದರು.

‘ಶಿವಕುಮಾರ್ ಪಾದಯಾತ್ರೆ ಮೂಲಕ ಅಕ್ರಮ ಹಣದ ಪ್ರದರ್ಶನ ಮಾಡುತ್ತಿದ್ದಾರೆ’ ಎಂಬ ಸಂಸದ ವಿ.ಶ್ರೀನಿವಾಸ ಪ್ರಸಾದ್ ಹೇಳಿಕೆಗೆ ಪ್ರತಿಕ್ರಿಯಿಸಿದ ಅವರು, ‘ನಾನು ಅವರ ಬಳಿ ಹೋಗಿ ಹಿತವಚನ ಕೇಳಿ, ತಿಳಿದುಕೊಳ್ಳುತ್ತೇನೆ’ ಎಂದರು.

‘ಜನರ ಕ್ಷಮೆ ಕೋರುವೆ’

‘ಪಾದಯಾತ್ರೆಯಿಂದ ಬೆಂಗಳೂರಿನ ಜನರಿಗೆ ಸಂಚಾರ ದಟ್ಟಣೆಯ ಸಮಸ್ಯೆ ಆಗಲಿದೆ. ಆದರೆ, ಭವಿಷ್ಯದ ದೃಷ್ಟಿಯಿಂದ ಈ ಹೋರಾಟ ಅಗತ್ಯ. ಬೆಂಗಳೂರಿನ ಜನರಿಗೆ ಕುಡಿಯುವ ನೀರು ಒದಗಿಸಲು ಮೇಕೆದಾಟು ಯೋಜನೆ ಅನಿವಾರ್ಯ. ಪಾದಯಾತ್ರೆಯಿಂದ ಜನರಿಗೆ ತೊಂದರೆ ಆಗಿರುವುದಕ್ಕೆ ಕ್ಷಮೆ ಕೋರುವೆ’ ಎಂದು ಶಿವಕುಮಾರ್ ಹೇಳಿದರು.

‘ವಿದೇಶದಲ್ಲಿ ವೈದ್ಯ ಪದವಿ ಪಡೆದವರು ಇಲ್ಲಿ ಪಾಸಾಗುವುದಿಲ್ಲ’

ಬೆಳಗಾವಿ: ‘ವಿದೇಶದಲ್ಲಿ ವೈದ್ಯಕೀಯ ಪದವಿ ಪಡೆದು ಬರುವ ಶೇ 90ರಷ್ಟು ವಿದ್ಯಾರ್ಥಿಗಳು ಇಲ್ಲಿ ವೈದ್ಯರಾಗಿ ಸೇವೆ ಸಲ್ಲಿಸಲು ಅಗತ್ಯವಿರುವ ಅರ್ಹತಾ ಪರೀಕ್ಷೆಯಲ್ಲಿ ಉತ್ತೀರ್ಣರಾಗುವುದಿಲ್ಲ’ ಎಂದು ಕೇಂದ್ರದ ಸಂಸದೀಯ ವ್ಯವಹಾರಗಳ ಸಚಿವ ಪ್ರಲ್ಹಾದ ಜೋಶಿ ಹೇಳಿದ್ದಾರೆ.

ಇಲ್ಲಿನ ಸಾಂಬ್ರಾ ವಿಮಾನ ನಿಲ್ದಾಣದಲ್ಲಿ ಸೋಮವಾರ ಮಾತನಾಡಿದ ಅವರು, ‘ವಿದೇಶ ಹಾಗೂ ಭಾರತದಲ್ಲಿನ ವೈದ್ಯಕೀಯ ಶಿಕ್ಷಣಕ್ಕಾಗಿ ತಗಲುವ ವೆಚ್ಚ ಎಷ್ಟೇ ಇರಲಿ ಆ ಕುರಿತು ಈಗ ವಿವರವಾದ ಚರ್ಚೆ ಬೇಡ. ಆ ಚರ್ಚೆಗೆ ಇದು ಸಮಯವೂ ಅಲ್ಲ’ ಎಂದಿದ್ದಾರೆ.

‘ವೈದ್ಯಕೀಯ ಪದವಿಗೆ ಭಾರತದಲ್ಲಿ ಜಾಸ್ತಿ ಖರ್ಚಾಗುತ್ತದೆ, ಉಕ್ರೇನ್‌ನಲ್ಲಿ ಕಡಿಮೆ ಖರ್ಚಾಗುತ್ತದೆ ಹೀಗಾಗಿ ಹೋಗುತ್ತಾರೆ ಎಂಬ ಮಾತಿದೆಯಲ್ಲಾ’ ಎಂಬ ಪ್ರಶ್ನೆಗೆ, ‘ವೆಚ್ಚದ ಹೋಲಿಕೆ ಮಾಡಲು ನಾನು ಬಯಸುವುದಿಲ್ಲ. ಯಾವುದೇ ವಿವಾದ ಅಥವಾ ಚರ್ಚೆಗೆ ಈಗ ಬಯಸುವುದಿಲ್ಲ. ಅಲ್ಲಿ ಕಲಿತು ಬಂದವರಿಗೆ ಒಳ್ಳೆಯದಾಗಲಿ ಎಂದಷ್ಟೇ ಹಾರೈಸಬಲ್ಲೆ’ ಎಂದು ಅವರು ಹೇಳಿದ್ದಾರೆ.

ವಾಜಪೇಯಿ ಕ್ರೀಡಾಂಗಣ ಉದ್ಘಾಟನೆ • ಮುಖ್ಯಮಂತ್ರಿ ವಿಶ್ವಾಸ

‘ಬಿಜೆಪಿಯಿಂದಲೇ ಮೇಕೆದಾಟು ಜಾರಿ’

ಪ್ರಜಾವಾಣಿ ವಾರ್ತೆ

ಬೊಮ್ಮನಹಳ್ಳಿ: ‘ಮೇಕೆದಾಟು ಯೋಜನೆಯನ್ನು ಅನುಷ್ಠಾನಗೊಳಿಸಿ ಬೆಂಗಳೂರಿಗೆ ನೀರು ಕೊಡಲು ಸಾಧ್ಯವಿರುವುದು ಬಿಜೆಪಿ ಮಾತ್ರ ಸಾಧ್ಯ ಎಂಬ ವಿಶ್ವಾಸ ಜನರಿಗಿದೆ’ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ತಿಳಿಸಿದರು.

ಬೊಮ್ಮನಹಳ್ಳಿ ವಿಧಾನಸಭಾ ಕ್ಷೇತ್ರದ ಎಚ್‌ಎಸ್‌ಆರ್ ಬಡಾವಣೆಯಲ್ಲಿ ನೂತನಾಗಿ ನಿರ್ಮಿಸಿರುವ ಅಟಲ್ ಬಿಹಾರಿ ವಾಜಪೇಯಿ ಹೊನಲು ಬೆಳಕಿನ ಸುಸಜ್ಜಿತ ಕ್ರೀಡಾಂಗಣವನ್ನು ಮಂಗಳವಾರ ಉದ್ಘಾಟನೆ ಮಾಡಿ ಅವರು ಮಾತನಾಡಿದರು.

‘ನಾನು ಜಲಸಂಪನ್ಮೂಲ ಸಚಿವನಾಗಿದ್ದ ಸಂದರ್ಭದಲ್ಲೇ ಮೇಕೆದಾಟು ಯೋಜನೆಗೆ ರೂಪುರೇಷೆ ನೀಡಿ, ಚಾಲನೆ ನೀಡಿದ್ದು. ಕರ್ನಾಟಕ ವಿದ್ಯುತ್ ನಿಗಮದಿಂದ ಸಮಗ್ರ ಯೋಜನಾ ವರದಿ (ಡಿಪಿಎಆರ್) ತಯಾರಿಸಲಾಗಿತ್ತು. ಅದು ಆಗಿದ್ದು ಕಾಂಗ್ರೆಸ್‌ನ ಹೋರಾಟದಿಂದಲ್ಲ. ನಮ್ಮ ಇಚ್ಛಾಶಕ್ತಿಯಿಂದ. ವಿದ್ಯುತ್ ಉತ್ಪಾದನೆಯ ನಾಲ್ಕು ಯೋಜನೆಗಳ ಪೈಕಿ ಮೇಕೆದಾಟು ಕೂಡಾ ಒಂದಾಗಿತ್ತು. ಯೋಜನೆ ಕೇಂದ್ರ ಸರ್ಕಾರದಿಂದ ಆಗಬೇಕೆಂಬ ಚರ್ಚೆಗೆ ಒಳಗಾಗಿ ಸ್ವಲ್ಪ ತಡವಾಯಿತು. ಕುಡಿಯುವ ನೀರಿಗಾಗಿ ಡಿಪಿಆರ್‌ಗೆ ಹೊಸ ಸ್ವರೂಪ ನೀಡಿದೆವು’ ಎಂದರು.

‘ಆ ಬಳಿಕ ಬಂದ ಕಾಂಗ್ರೆಸ್ ಸರ್ಕಾರ ಅದನ್ನು ಮುಂದುವರೆಸಲಿಲ್ಲ. ಡಿಪಿಆರ್ ಮಾಡದೇ ಐದು ವರ್ಷ ಕಾಲ ಕಳೆದರು. ಅದನ್ನು ಮಾಡಲು ಸುಲಭವಿತ್ತು. ಅರಣ್ಯ ಮುಳುಗದಂತೆ ನೋಡಿಕೊಂಡು ಬೆಂಗಳೂರಿಗೆ ನೀರು ಒದಗಿಸುವಂತೆ ಮಾಡಬಹುದಿತ್ತು. ಸಮ್ಮಿಶ್ರ ಸರ್ಕಾರ ಅಧಿಕಾರಕ್ಕೆ ಬಂದ ಬಳಿಕ ಡಿಪಿಆರ್ ಆಗಿದೆ. ಈಗ ತಮಿಳುನಾಡು ಮಧ್ಯೆ ಬಂದು ಕುಳಿತು ವಿವಾದಕ್ಕೆ ಕಾರಣವಾಗಿದೆ. ಸುಲಭವಾಗಿ ಮಾಡುವುದನ್ನು ಮಾಡದೇ, ಜಟಿಲಗೊಳಿಸಿ ಈಗ ಬೆಂಗಳೂರಿಗೆ ನೀರಿಗೆ ಕೊಡಲು ಹೋರಾಟ ಮಾಡುತ್ತೇವೆ ಎನ್ನುವುದು ಎಷ್ಟರ ಮಟ್ಟಿಗೆ ಸರಿ? ಯಾವ ನೈತಿಕತೆ ಇದೆ’ ಎಂದು ಅವರು ಪ್ರಶ್ನಿಸಿದರು.

‘ಇವರ ಆಟ ಬೆಂಗಳೂರಿನ ಜನ ಅರ್ಥ ಮಾಡಿಕೊಂಡಿದ್ದಾರೆ. ಹೀಗಾಗಿ ಯಾರೂ ಈ ಹೋರಾಟದ ಬಗ್ಗೆ ತಲೆ ಕೆಡಿಸಿಕೊಂಡಿಲ್ಲ. ನೀರು ಒದಗಿಸುವುದಾದರೆ ಬಿಜೆಪಿ ಸರ್ಕಾರದಿಂದ ಮಾತ್ರ ಸಾಧ್ಯ. ಕಾವೇರಿ 4 ನೇ ಹಂತ ಮಾಡಿದ್ದು, ಈಗ 5 ನೇ ಹಂತ ಕಾರ್ಯಗತ ಆಗುತ್ತಿದೆ. ಎತ್ತಿನಹೊಳೆ ಯೋಜನೆಯಲ್ಲಿ ಬೆಂಗಳೂರಿಗೆ ಕುಡಿಯುವ ನೀರಿಗಾಗಿ 2 ಟಿಎಂಸಿ ನೀರನ್ನು ಒದಗಿಸಲು ಡಿಪಿಆರ್‌ನಲ್ಲಿ ವ್ಯವಸ್ಥೆ ಮಾಡಲಾಗಿದೆ. ಉತ್ತರ ಭಾಗದ ನೀರಿನ ಸಮಸ್ಯೆಯನ್ನು ಇದರಿಂದ ಬಗೆಹರಿಸಲು ಸಾಧ್ಯ’ ಎಂದು ಬೊಮ್ಮಾಯಿ ತಿಳಿಸಿದರು.

ಶಾಸಕ ಎಂ.ಸತೀಶ್ ರೆಡ್ಡಿ, ‘ಕ್ಷೇತ್ರದ ಅಭಿವೃದ್ಧಿಗಾಗಿ ರಾಜ್ಯ ಸರ್ಕಾರದಿಂದ ₹207 ಕೋಟಿ ಅನುದಾನ ದೊರೆತಿದೆ. ಕೆರೆಗಳ ಅಭಿವೃದ್ಧಿ, ರಸ್ತೆ ನಿರ್ವಹಣೆ ಸೇರಿದಂತೆ ವಿವಿಧ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲಾಗಿದೆ. ಕ್ಷೇತ್ರದ ಸಮಗ್ರ ಅಭಿವೃದ್ಧಿಗೆ ಪ್ರಾಮಾಣಿಕ ಯತ್ನ ನಡೆದಿದೆ’ ಎಂದರು.

ಕಂದಾಯ ಸಚಿವ ಆರ್ ಅಶೋಕ, ‘ಅಧಿಕಾರದಲ್ಲಿದ್ದಾಗ ಪೆನ್ನು ಪೇಪರ್ ಎರಡೂ ಅವರ (ಕಾಂಗ್ರೆಸ್) ಕೈಯಲ್ಲಿತ್ತು. ಆಗ ಗಮನಹರಿಸದವರು ಈಗ ಅಧಿಕಾರಕ್ಕಾಗಿ ಪಾದಯಾತ್ರೆ ಶುರು ಮಾಡಿದ್ದಾರೆ. ನಾವು ಪಾದಯಾತ್ರೆ ಮಾಡದೇ ಅಭಿವೃದ್ಧಿಯತ್ತ ಗಮನ ನೀಡಿದ್ದೇವೆ’ ಎಂದರು.

ಬಿಬಿಎಂಪಿ ಆಡಳಿತಾಧಿಕಾರಿ ರಾಕೇಶ್ ಸಿಂಗ್, ಮುಖ್ಯ ಆಯುಕ್ತ ಗೌರವ್ ಗುಪ್ತ, ಬಿಬಿಎಂಪಿ ಬೊಮ್ಮನಹಳ್ಳಿ ವಲಯ ಆಯುಕ್ತ ಡಾ.ಕೆ. ಹರೀಶ್ ಕುಮಾರ್, ವಿಧಾನ ಪರಿಷತ್ ಸದಸ್ಯ ಗೋಪಿನಾಥ ರೆಡ್ಡಿ, ಜಂಟಿ ಆಯುಕ್ತ ಎಂ.ರಾಮಕೃಷ್ಣ ಇದ್ದರು.

ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ದೀಪ ಬೆಳಗಿಸುವ ಮೂಲಕ ಕ್ರೀಡಾಂಗಣವನ್ನು ಉದ್ಘಾಟಿಸಿದರು. ಕಂದಾಯ ಸಚಿವ ಆರ್.ಅಶೋಕ, ಶಾಸಕ ಎಂ.ಸತೀಶ್ ರೆಡ್ಡಿ, ಬಿಬಿಎಂಪಿ ಆಡಳಿತಾಧಿಕಾರಿ ರಾಕೇಶ್ ಸಿಂಗ್, ಮುಖ್ಯಆಯುಕ್ತ ಗೌರವ್ ಗುಪ್ತ, ಡಾ.ಕೆ.ಹರೀಶ್ ಕುಮಾರ್, ವಿಧಾನ ಪರಿಷತ್ ಸದಸ್ಯ ಗೋಪಿನಾಥರೆಡ್ಡಿ ಇದ್ದಾರೆ.

ಬೆಂಗಳೂರು ನಗರ ಜಿಲ್ಲಾ ಕೋವಿಡ್ ಅಂಕಿ–ಅಂಶ

17,78,672 ಒಟ್ಟು ಸೋಂಕಿತರು (17,78,361 ನಿನ್ನೆಯ ವಿವರ)

ಸಕ್ರಿಯ ಪ್ರಕರಣ	ಗುಣಮುಖ ಆದವರು	ಒಟ್ಟು ಸಾವು
3,003	17,58,748	16,920

ದಿನದ ಏರಿಕೆ

ಹೊಸ ಪ್ರಕರಣ	150
ಗುಣಮುಖ	393
ಸಾವು	3

ಆಧಾರ: ಆರೋಗ್ಯ ಇಲಾಖೆ

ಪ್ರಜಾವಾಣಿ ಗ್ರಾಫಿಕ್ಸ್

ಕೋವಿಡ್ ಅಂಕಿ–ಅಂಶ

ಆಧಾರ: ವರ್ಲ್ಡೋಮೀಟರ್ / ಕೋವಿಡ್19 ಇಂಡಿಯಾ.ಆರ್ಗ್

	ವಿಶ್ವ	ಭಾರತ
ಒಟ್ಟು ಪ್ರಕರಣ	43.78 ಕೋಟಿ	4.29 ಕೋಟಿ
ಸಕ್ರಿಯ ಪ್ರಕರಣ	6.22 ಕೋಟಿ	92,472
ಗುಣಮುಖ	36.95 ಕೋಟಿ	4.23 ಕೋಟಿ
ಸಾವು	59.78 ಲಕ್ಷ	5.14 ಲಕ್ಷ

ದಿನದ ಮಾಹಿತಿ

	ವಿಶ್ವ	ಭಾರತ
ಹೊಸ ಪ್ರಕರಣ	11.10 ಲಕ್ಷ	6,915
ಗುಣಮುಖ	20.21 ಲಕ್ಷ	16,864
ಸಾವು	5,788	180

ಎಲ್ಲಿ ಹೆಚ್ಚು ಪ್ರಕರಣ (ಹಿಂದಿನ 24 ಗಂಟೆಗಳಲ್ಲಿ): 95,396 ಜರ್ಮನಿ; 1.06 ಲಕ್ಷ ರಷ್ಯಾ; 51,899 ಬ್ರಿಟನ್

ಎಲ್ಲಿ ಹೆಚ್ಚು ಸಕ್ರಿಯ ಪ್ರಕರಣಗಳು: 2.79 ಕೋಟಿ ಅಮೆರಿಕ; 36.90 ಲಕ್ಷ ಜರ್ಮನಿ; 24.89 ಲಕ್ಷ ರಷ್ಯಾ

ಎಲ್ಲಿ ಹೆಚ್ಚು ಸಾವು (ಒಟ್ಟು): 1.43 ಲಕ್ಷ ಮಹಾರಾಷ್ಟ್ರ; 65,333 ಕೇರಳ; 38,004 ತಮಿಳುನಾಡು

ಎಲ್ಲಿ ಹೆಚ್ಚು ಪ್ರಕರಣ (ಲಕ್ಷಗಳಲ್ಲಿ): 78.65 ಮಹಾರಾಷ್ಟ್ರ; 64.99 ಕೇರಳ; 34.49 ತಮಿಳುನಾಡು

ಭಾರತದ ಕೋವಿಡ್ ಸಂಖ್ಯೆ ವಿವರ: ಮಂಗಳವಾರ ಬೆಳಿಗ್ಗೆ 8ರವರೆಗಿನ ಮಾಹಿತಿ

ಪ್ರಜಾವಾಣಿ ಗ್ರಾಫಿಕ್ಸ್

ಸಂಕ್ಷಿಪ್ತ ಸುದ್ದಿ

ಆನ್‌ಲೈನ್ ಚಿತ್ರಕಲಾ ಪ್ರದರ್ಶನ

ಬೆಂಗಳೂರು: ಕ್ರಿಯೇಟಿವ್ ಮೈಂಡ್ಸ್ ಸಂಸ್ಥೆಯು ‘ಈಸ್ಥೆಟಿಕ್–2022’ ಆನ್‌ಲೈನ್ ಚಿತ್ರಕಲಾ ಪ್ರದರ್ಶನವನ್ನು ಮಾರ್ಚ್ 20ರವರೆಗೆ ಆನ್‌ಲೈನ್ ಮೂಲಕ ಆಯೋಜಿಸಿದೆ.

ಬೆಂಗಳೂರಿನ ಪ್ರಜಕ್ತಾ ಸರ್ವೇಶ್ ಹುದ್ದೇದಾರ್, ಮಹಾರಾಷ್ಟ್ರದ ನಾಸಿಕ್‌ನ ಅನಂತ ಅಶೋಕ್ ಸಹಾನೆ, ಉತ್ತರಾಖಂಡದ ರಾಜೀವ್ ಕಪೂರ್, ರಮ್ಯಾ ಕೃಷ್ಣಸ್ವಾಮಿ, ಸಿದ್ಧಾರ್ಥನ್ ವಿಶು ಯಲ್ ಸೇರಿ 20ಕ್ಕೂ ಹೆಚ್ಚು ಕಲಾವಿದರ 80ಕ್ಕೂ ಹೆಚ್ಚು ಚಿತ್ರಗಳು ಪ್ರದರ್ಶನಗೊಳ್ಳಲಿವೆ.ಪ್ರದರ್ಶನವನ್ನು ಕ್ರಿಯೇಟಿವ್ ಮೈಂಡ್ಸ್ ಸಂಸ್ಥೆಯ ಯೂ ಟ್ಯೂಬ್ ಚಾನೆಲ್ https://youtu.be/xNd8hkIHzeo ಮೂಲಕ ವೀಕ್ಷಿಸಬಹುದು ಎಂದು ಪ್ರಕಟಣೆ ತಿಳಿಸಿದೆ.

‘ಸರ್ಕಾರದ ನಿರ್ಲಕ್ಷ್ಯದಿಂದ ನವೀನ ಸಾವು’

ಬೆಂಗಳೂರು: ‘ರಷ್ಯಾ ಮತ್ತು ಉಕ್ರೇನ್ ನಡುವೆ ನಡೆಯುತ್ತಿರುವ ಯುದ್ಧದ ಘರ್ಷಣೆಯಲ್ಲಿ ರಾಜ್ಯದ ವಿದ್ಯಾರ್ಥಿ ನವೀನ ಸಾವಿಗೀಡಾಗಲು ರಾಜ್ಯ ಸರ್ಕಾರ ನೇರ ಹೊಣೆ’ ಎಂದು ಎಸ್‌ಡಿಪಿಐ ರಾಜ್ಯ ಘಟಕದ ಅಧ್ಯಕ್ಷ ಅಬ್ದುಲ್ ಮಜೀದ್ ಮೈಸೂರು ಆರೋಪಿಸಿದ್ದಾರೆ.

‘ಉಕ್ರೇನ್‌ನಿಂದ ತಮ್ಮ ಪ್ರಜೆಗಳನ್ನು ಸುರಕ್ಷಿತವಾಗಿ ಕರೆತರುವಲ್ಲಿ ಸರ್ಕಾರ ಮೌನವಾಗಿತ್ತು. ‘ನಮ್ಮನ್ನು ದೇಶಕ್ಕೆ ಮರಳಿಸಿ, ರಕ್ಷಿಸಿ’ ಎಂದು ಅಂಗಲಾಚಿದರೂ ಕರ್ನಾಟಕವು ಸೇರಿ ದೇಶದ ವಿದ್ಯಾರ್ಥಿಗಳನ್ನು ಕರೆತರುವಲ್ಲಿ ಕೇಂದ್ರ, ರಾಜ್ಯ ಸರ್ಕಾರ ವಿಫಲವಾಗಿವೆ’ ಎಂದು ದೂರಿದ್ದಾರೆ.

ಏಪ್ರಿಲ್, ಮೇ ತಿಂಗಳಲ್ಲಿ ಜೆಇಇ ಮೇನ್ ಪರೀಕ್ಷೆ



ನವದೆಹಲಿ (ಪಿಟಿಐ): ಜೆಇಇ ಮೇನ್ ಪರೀಕ್ಷೆಯ ಮೊದಲ ಹಂತದ ಪರೀಕ್ಷೆಗಳು ಏಪ್ರಿಲ್ 16ರಿಂದ 21ರವರೆಗೆ ಮತ್ತು ಎರಡನೇ ಹಂತದ ಪರೀಕ್ಷೆಗಳು ಮೇ 24 ರಿಂದ 29ರವರೆಗೂ ನಡೆಯಲಿವೆ.

ಜೆಇಇ ಮೇನ್ ಪರೀಕ್ಷೆಯು ಎರಡು ಭಾಗವನ್ನು ಒಳಗೊಂಡಿರುತ್ತದೆ ಎಂದು ರಾಷ್ಟ್ರೀಯ ಪರೀಕ್ಷಾ ಸಂಸ್ಥೆ (ಎನ್‌ಟಿಎ) ಮಂಗಳವಾರ ಪ್ರಕಟಿಸಿದೆ. ಇದು, ಐಐಟಿಗಳಿಗೆ ಪ್ರವೇಶ ಕಲ್ಪಿಸಲು ನಡೆಸಲಿರುವ ಜೆಇಇ-ಅಡ್ವಾನ್ಸಡ್ ಪರೀಕ್ಷೆಗೆ ಅರ್ಹತಾ ಪರೀಕ್ಷೆಯೂ ಆಗಿರಲಿದೆ.

ಮೊದಲನೇ ಭಾಗವು ಎನ್‌ಐಟಿ, ಐಐಐಟಿಗಳಲ್ಲಿ ಬಿಇ., ಬಿ.ಟೆಕ್ ಪದವಿ ಕೋರ್ಸ್‌ಗಗಳಿಗೆ ಪ್ರವೇಶ ಪರೀಕ್ಷೆಯಾಗಿದ್ದರೆ, ಎರಡನೇ ಭಾಗವು ಆರ್ಕಿಟೆಕ್ಚರ್ ಮತ್ತು ಪ್ಲಾನಿಂಗ್ ಕೋರ್ಸ್‌ಗಳಿಗೆ ಪ್ರವೇಶ ಪರೀಕ್ಷೆಯಾಗಿರಲಿದೆ.

ಬೆಂಗಳೂರು ವರದಿ: ಜೆಇಇ ಮೇನ್ ಪರೀಕ್ಷೆ ನಡೆಯುವ ಸಂದರ್ಭದಲ್ಲೇ ದ್ವಿತೀಯ ಪಿ.ಯು ಪರೀಕ್ಷೆಗಳನ್ನು ನಡೆಸಲು ಪದವಿ ಪೂರ್ವ ಶಿಕ್ಷಣ ಮಂಡಳಿ ವೇಳಾಪಟ್ಟಿ ಪ್ರಕಟಿಸಿದೆ. ಏಪ್ರಿಲ್ 16ರಂದು ಗಣಿತ, 20ರಂದು ಭೌತವಿಜ್ಞಾನ, 21ರಂದು ಫ್ರೆಂಚ್ ಭಾಷಾ ಪರೀಕ್ಷೆಗಳು ನಡೆಯಲಿವೆ. ಅದೇ ದಿನ ಜೆಇ ಪರೀಕ್ಷೆಗಳೂ ನಡೆಯುವುದರಿಂದ ಕರ್ನಾಟಕದ ವಿದ್ಯಾರ್ಥಿಗಳು ಗೊಂದಲಕ್ಕೆ ಸಿಲುಕಿದ್ದಾರೆ.

ಎಇ ಹುದ್ದೆಗೆ ಅರ್ಜಿ: ಆಕಾಂಕ್ಷಿಗಳಿಗೆ ಅವಕಾಶ ತಪ್ಪುವ ಆತಂಕ

ಕೋರ್ಸ್ 'ತತ್ಸಮಾನ' ಗೊಂದಲ

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು
- ವಿಶ್ವೇಶ್ವರಯ್ಯ ತಾಂತ್ರಿಕ ವಿ.ವಿ 2020ರ ಆ. 25ರಂದು ಸುತ್ತೋಲೆ
- ನೂರಾರು ಉದ್ಯೋಗಾ-ಕಾಂಕ್ಷಿಗಳಿಗೆ ಕಳವಳ

ಬೆಂಗಳೂರು: ಬಿಇ ಸಿವಿಲ್ ಎಂಜಿನಿಯರಿಂಗ್ ಕೋರ್ಸ್‌ಗೆ ಬಿಇ ಎನ್ವಿರಾನ್‌ಮೆಂಟ್ ಎಂಜಿನಿಯರಿಂಗ್ ಹಾಗೂ ಕನ್‌ಸ್ಟ್ರಕ್ಷನ್ ಟೆಕ್ನಾಲಜಿ ಮತ್ತು ಮ್ಯಾನೇಜ್‌ಮೆಂಟ್ ಎಂಜಿನಿಯರಿಂಗ್ ಕೋರ್ಸ್ ತತ್ಸಮಾನ ಎಂದು ಪರಿಗಣಿಸಲಾಗಿದೆ. ಆದರೆ, ಸಹಾಯಕ ಎಂಜಿನಿಯರ್ ಹುದ್ದೆಗಳಿಗೆ ಅರ್ಜಿ ಸಲ್ಲಿಸುವ ವೇಳೆ 'ತತ್ಸಮಾನ' ಎಂದು ಪರಿಗಣಿಸದಿರುವುದು ನೂರಾರು ಉದ್ಯೋಗಾಕಾಂಕ್ಷಿಗಳನ್ನು ಚಿಂತೆಗೆ ದೂಡಿದೆ.

ಉದ್ಯೋಗಾವಕಾಶ ಮತ್ತು ಅಧ್ಯಯನಕ್ಕೆ ಸಂಬಂಧಿಸಿದಂತೆ ಈ ಕೋರ್ಸ್‌ಗಳು ತತ್ಸಮಾನ ಎಂದು ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ 2020ರ ಆ. 25ರಂದು ಸುತ್ತೋಲೆ ಹೊರಡಿಸಿದೆ.

ಅಲ್ಲದೆ, ಇತ್ತೀಚೆಗೆ ಲೋಕೋಪಯೋಗಿ ಇಲಾಖೆಯ ಸಹಾಯಕ ಎಂಜಿನಿಯರ್ (ಎಇ) ಗ್ರೇಡ್-1 ಹುದ್ದೆಗಳಿಗೆ ಕೆಪಿಎಸ್‌ಸಿ ನಡೆಸಿದ ನೇಮಕಾತಿಯಲ್ಲಿ ಈ ಕೋರ್ಸ್‌ಗಳು ತತ್ಸಮಾನ ಎಂದು ಪರಿಗಣಿಸಿ ಅರ್ಜಿ ಸಲ್ಲಿಸಲು ಅವಕಾಶ ನೀಡಲಾಗಿದೆ.

ಆದರೆ, ಇದೀಗ ಗ್ರಾಮೀಣ ಕುಡಿಯುವ ನೀರು ನೈರ್ಮಲ್ಯ ಇಲಾಖೆಯಲ್ಲಿ ಖಾಲಿ ಇರುವ ಸಹಾಯಕ ಎಂಜಿನಿಯರ್ (ಗ್ರೇಡ್-1) ಹುದ್ದೆಗಳು ಮತ್ತು ಕರ್ನಾಟಕ ವಿದ್ಯುತ್ ಪ್ರಸರಣ ನಿಗಮದಲ್ಲಿ (ಕೆಪಿಟಿಸಿಎಲ್) ಸಹಾಯಕ ಎಂಜಿನಿಯರ್ ಹುದ್ದೆಗಳಿಗೆ ನೇಮಕಾತಿ ಅರ್ಜಿ ಆಹ್ವಾನಿಸಲಾಗಿದ್ದು, ಈ ಹುದ್ದೆಗಳಿಗೆ ಸಿವಿಲ್ ಎಂಜಿನಿಯರಿಂಗ್ ಕೋರ್ಸ್ ಕಲಿತವರಿಗೆ ಮಾತ್ರ ಅರ್ಜಿ ಸಲ್ಲಿಸಲು ಅವಕಾಶ ನೀಡಲಾಗಿದೆ.

'ಬಿಇ ಸಿವಿಲ್ ಎಂಜಿನಿಯರಿಂಗ್, ಬಿಇ ಎನ್ವಿರಾನ್‌ಮೆಂಟ್ ಎಂಜಿನಿಯರಿಂಗ್, ಬಿಇ ಕನ್‌ಸ್ಟ್ರಕ್ಷನ್ ಎಕ್ನಾಲಜಿ ಮತ್ತು ಮ್ಯಾನೇಜ್‌ಮೆಂಟ್ ಎಂಜಿನಿಯರಿಂಗ್ ಮೂರೂ ಕೋರ್ಸ್‌ಗಳು ತತ್ಸಮಾನ ಕೋರ್ಸ್‌ಗಳು ಎಂದು ಪರಿಗಣಿಸುವಂತೆ ಸುತ್ತೋಲೆ ಇದ್ದರೂ, ಸಹಾಯಕ ಎಂಜಿನಿಯರ್ ಹುದ್ದೆಗಳಿಗೆ ಅರ್ಜಿ ಸಲ್ಲಿಸಲು ಅವಕಾಶ ನೀಡಿಲ್ಲ. ಇದರಿಂದ ಉದ್ಯೋಗ ಗಿಟ್ಟಿಸಿಕೊಳ್ಳುವ ಅವಕಾಶದಿಂದ ವಂಚಿತರಾಗಿದ್ದೇವೆ' ಎಂದು ಉದ್ಯೋಗಾಕಾಂಕ್ಷಿಯೊಬ್ಬರು ದೂರಿದರು.

ಎಲ್‌ಪಿಜಿ, ಎಟಿಎಫ್ ಬೆಲೆ ಏರಿಕೆ

ಬೆಂಗಳೂರು: ವಾಣಿಜ್ಯ ಬಳಕೆಯ ಅಡುಗೆ ಅನಿಲದ ದರವನ್ನು ಪ್ರತಿ ಸಿಲಿಂಡರ್‌ಗೆ ಮಂಗಳವಾರ ₹ 105ರಷ್ಟು ಹೆಚ್ಚಳ ಮಾಡಲಾಗಿದೆ. ಇದರಿಂದಾಗಿ ವಾಣಿಜ್ಯ ಬಳಕೆಯ 19 ಕೆ.ಜಿ. ತೂಕದ ಎಲ್‌ಪಿಜಿ ಸಿಲಿಂಡರ್ ಬೆಲೆಯು ಬೆಂಗಳೂರಿನಲ್ಲಿ ₹ 2,075ಕ್ಕೆ ಏರಿಕೆ ಆಗಿದೆ ಎಂದು ಮೂಲಗಳು ತಿಳಿಸಿವೆ.

ಫೆಬ್ರುವರಿ 28ರಂದು ವಾಣಿಜ್ಯ ಬಳಕೆ ಎಲ್‌ಪಿಜಿ ದರವು ಬೆಂಗಳೂರಿನಲ್ಲಿ ₹ 1,970 ಆಗಿತ್ತು.

ನವದೆಹಲಿ ವರದಿ (ಪಿಟಿಐ): ವಿಮಾನಗಳಲ್ಲಿ ಬಳಸುವ ಇಂಧನದ (ಎಟಿಎಫ್) ಬೆಲೆಯನ್ನು ಮಂಗಳವಾರದಿಂದ ಜಾರಿಗೆ ಬರುವಂತೆ ಶೇಕಡ 3.22ರಷ್ಟು ಹೆಚ್ಚಳ ಮಾಡಲಾಗಿದೆ. ದೆಹಲಿಯಲ್ಲಿ ಎಟಿಎಫ್ ಬೆಲೆಯು ಪ್ರತಿ ಕಿಲೋ ಲೀಟರ್‌ಗೆ ₹ 3,010ರಷ್ಟು ಹೆಚ್ಚಾಗಿ, ₹ 93,530ಕ್ಕೆ ತಲುಪಿದೆ. ಇದು ಸಾರ್ವಕಾಲಿಕ ಗರಿಷ್ಠ ಮೊತ್ತ.

ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಕಚ್ಚಾ ತೈಲದ ಬೆಲೆಯು ಜಾಸ್ತಿ ಆಗುತ್ತಿರುವ ಪರಿಣಾಮವಾಗಿ ಎಟಿಎಫ್ ಬೆಲೆಯನ್ನು ಕೂಡ ಹೆಚ್ಚಿಸಲಾಗಿದೆ. ಆದರೆ, ಪೆಟ್ರೋಲ್ ಹಾಗೂ ಡೀಸೆಲ್ ಬೆಲೆಯಲ್ಲಿ ಸತತ 116 ದಿನಗಳಿಂದ ಬದಲಾವಣೆ ಮಾಡಿಲ್ಲ. ಜನವರಿಯ ಆರಂಭದಿಂದ ಇದುವರೆಗೆ ಎಟಿಎಫ್ ಬೆಲೆಯನ್ನು ಕಿಲೋ ಲೀಟರ್‌ಗೆ ₹ 19,508ರಷ್ಟು ಹೆಚ್ಚಳ ಮಾಡಲಾಗಿದೆ.

'ಬಜೆಟ್‌ನಲ್ಲಿ ದಮನಿತ ವರ್ಗ ನಿರ್ಲಕ್ಷಿಸಿದರೆ ಹೋರಾಟದ ಎಚ್ಚರಿಕೆ'

ಬೆಂಗಳೂರು: '2022-23ನೇ ಸಾಲಿನ ರಾಜ್ಯ ಬಜೆಟ್‌ನಲ್ಲಿ ಪರಿಶಿಷ್ಟ ಜಾತಿ ಮತ್ತು ಪಂಗಡಗಳ ಜನರಿಗೆ ನ್ಯಾಯಯುತ ಅನುದಾನ ಒದಗಿಸಬೇಕು' ಎಂದು ಒತ್ತಾಯಿಸಿ ಮುಖ್ಯಮಂತ್ರಿಗೆ ಪತ್ರ ಬರೆದಿರುವ ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ, ದಮನಿತ ವರ್ಗಗಳ ಕಲ್ಯಾಣವನ್ನು ಈ ಬಜೆಟ್‌ನಲ್ಲಿಯೂ ನಿರ್ಲಕ್ಷಿಸಿದರೆ ಹೋರಾಟ ಹಮ್ಮಿಕೊಳ್ಳಲಾಗುವುದು ಎಂದು ಎಚ್ಚರಿಕೆ ನೀಡಿದ್ದಾರೆ.

'ಸಮಾಜದ ಅಂಚಿನಲ್ಲಿರುವ ಜನರ ಕಲ್ಯಾಣ ಸಾಧ್ಯವಾಗದೆ ಅಭಿವೃದ್ಧಿ ಸಾಧ್ಯವಿಲ್ಲ. ಶಿಕ್ಷಣ, ಕೌಶಲಾಭಿವೃದ್ಧಿ, ಉದ್ಯೋಗ, ಕೃಷಿ, ವ್ಯಾಪಾರ, ಮೂಲ ಸೌಕರ್ಯ ಮುಂತಾದ ಯೋಜನೆಗಳಿಗೆ ನ್ಯಾಯಯುತವಾಗಿ ಅನುದಾನ ಒದಗಿಸಬೇಕು. ಈ ವರ್ಗಗಳಿಗಾಗಿ ಮೀಸಲಿಡುವ ಅನುದಾನವನ್ನು ಇತರ ಯಾವುದೇ ಯೋಜನೆಗಳಿಗೆ ಪರಿವರ್ತಿಸಬಾರದು' ಎಂದಿದ್ದಾರೆ.

'2011ರ ಜನಗಣತಿಯಂತೆ ಶೇ 24.1ರಷ್ಟು ಎಸ್‌ಸಿ ಮತ್ತು ಎಸ್‌ಟಿ ಜನರು ರಾಜ್ಯದಲ್ಲಿದ್ದಾರೆ. ಈ ವರ್ಗಗಳ ಕಲ್ಯಾಣಕ್ಕೆ 2013ರಲ್ಲಿ ನಮ್ಮ ಸರ್ಕಾರ ಇದ್ದಾಗ ಕಾಯ್ದೆ ಜಾರಿಗೆ ತಂದಿದ್ದೆವು. ಜನಸಂಖ್ಯೆಗೆ ಅನುಗುಣವಾಗಿ ಅನುದಾನ ಒದಗಿಸಿ, ಅದೇ ವರ್ಷ ಖರ್ಚು ಮಾಡುವ ಶಾಸನ ಬದ್ಧ ಅನಿವಾರ್ಯತೆಯನ್ನು ಈ ಕಾಯ್ದೆ ಮೂಲಕ ರೂಪಿಸಿದ್ದೆವು. ಬಿಜೆಪಿ ಸರ್ಕಾರ ಈ ಕಾಯ್ದೆಯಲ್ಲಿರುವ ವಿಚಾರಗಳನ್ನು ಕಡೆಗಣಿಸಿದೆ' ಎಂದು ಹೇಳಿದ್ದಾರೆ.

'ಬಿಜೆಪಿ ಸರ್ಕಾರದ ಅವಧಿಯಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಕಲ್ಯಾಣ ಇಲಾಖೆಗಳಿಗೆ ಅನುದಾನ ಪ್ರತಿ ವರ್ಷ ಕಡಿಮೆ ಆಗುತ್ತಿದೆ. ನಮ್ಮ ಸರ್ಕಾರದ ಅವಧಿಯಲ್ಲಿ ಸಮಾಜ ಕಲ್ಯಾಣ ಇಲಾಖೆಗೆ ₹ 5000 ಕೋಟಿವರೆಗೆ ಅನುದಾನ ಒದಗಿಸುತ್ತಿದ್ದೆವು. ಬಿಜೆಪಿ ಸರ್ಕಾರ ಬಂದ ಮೇಲೆ 2020-21 ರಲ್ಲಿ ₹ 3,119 ಕೋಟಿ, 2021-22ರಲ್ಲಿ ₹ 3,762 ಕೋಟಿ ಮಾತ್ರ ಒದಗಿಸಿದೆ. ಪರಿಶಿಷ್ಟ ವರ್ಗಗಳ ಕಲ್ಯಾಣಕ್ಕಾಗಿ ನಮ್ಮ ಸರ್ಕಾರವಿದ್ದಾಗ ₹ 1,650 ಕೋಟಿ ಅನುದಾನ ನೀಡಿದ್ದೆವು. ಈಗ ₹ 1,350 ಕೋಟಿಗೆ ಇಳಿದಿದೆ' ಎಂದಿದ್ದಾರೆ.

ನಗರದಲ್ಲಿ ಇಂದು

ಗಣ್ಯರಿಗೆ ಅಭಿನಂದನೆ: ಉದ್ಘಾಟನೆ-ಶಾಸಕ ದಿನೇಶ್ ಗುಂಡೂರಾವ್, ಅಧ್ಯಕ್ಷತೆ-ಬಿ.ಎನ್.ಜಗದೀಶ್, ಅತಿಥಿಗಳು-ಬಿ.ಎನ್. ಯೋಗಾನಂದ್, ಎಚ್.ರಾಮಚಂದ್ರಯ್ಯ, ಆರ್.ಹರೀಶ್, ಆಯೋಜನೆ-ಜಯ ಕರ್ನಾಟಕ, ಸ್ಥಳ-ಗುಂಡೂರಾವ್ ಕ್ರೀಡಾಂಗಣ, ಶೇಷಾದ್ರಿಪುರ, ಬೆಳಿಗ್ಗೆ

ಶಿವರುದ್ರಪ್ಪ ಅವರ ಕಾವ್ಯಗಳ ಸಾಮಾಜಿಕ ಮಹತ್ವ ಹಾಗೂ ಸಂಗೀತ ರೂಪಕ: ಜಿಎಸ್‌ಎಸ್ ಅವರ ಕವಿತೆಗಳ ಸಾಮಾಜಿಕ ಮಹತ್ವ ಕುರಿತು-ಎಂ.ಎಸ್. ಆಶಾದೇವಿ, ಕೆ.ವೈ.ನಾರಾಯಣಸ್ವಾಮಿ, ಅತಿಥಿ-ಜಿ.ಎಸ್.ಜಯದೇವ್, ಅಧ್ಯಕ್ಷತೆ-ಎಸ್.ಜಿ.ಸಿದ್ದರಾಮಯ್ಯ, ಆಯೋಜನೆ-ಜಿ.ಎಸ್.ಶಿವರುದ್ರಪ್ಪ ಪ್ರತಿಷ್ಠಾನ, ಸ್ಥಳ-ಸಿ.ಅಶ್ವತ್ಥ್ ಕಲಾಭವನ, ಸಂಜೆ 6

ಪ್ರಜಾವಾಣಿ ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

JOB OPPORTUNITIES

Teachers/ Professors

FORCE18 ACADEMY, Require Faculty minimum 7 years experience 12th English, Maths, Science, Social Studies, GK. Coaching for CDS/ NDA/ Other Competitive Exams. Marathahalli /Gauribidanur 9008254079, academy@force18security.com

B.B.U.L. Jain Vidyalaya
(Managed by: Shree Mahaveer Jain Shikshan Sangh)
(Affiliated to CBSE, Delhi)
84, K.R. ROAD, SHANKARAPURAM, B' LORE- 4
REQUIRED TEACHERS
- **Nursery Teachers:** Qualified, experienced, young, enthusiastic, fluent in English
- **Middle and High School:** Graduates with B.Ed. to teach English, Social Science, Maths & Science.
- **Qualified Teachers** for P.T., Art, Yoga
- **Librarian:** with B.Lib.
- **Vice-Principal for Nursery & Primary Section:** Post Graduate with 10 years Experience in teaching in a CBSE School

Walk-in Interview on 7th March, 2022 Between 10am to 2pm.
Send the latest resume to principal.jv@gmail.com on or before 4th March, 2022 mentioning the subject.
Ph: 080 41554379 / 22422936 / 7795482145

THE RACE FOR EXCELLENCE HAS NO FINISH LINE
We are looking for dynamic and result driven individuals to be a part of our exciting journey
- **SENIOR HINDI TEACHER (HIGH SCHOOL) – HOD** Capable of handling Curricular demands ofthe ICSE Board and Assist/ Guide the Teachers in the Hindi Department in Curricular and Cocurricular matters related to the subject. Post Graduate in Hindi with B Ed and minimum 5 years' Experience in an ICSE School
- **HINDI TEACHERS (MIDDLE SCHOOL)** Graduate in Hindi with B Ed and at least 3 years' Experience teaching in ICSE School. Being a Post-Graduate is an added advantage.
- **SCIENCE TEACHER (MIDDLE SCHOOL)** Graduate in Biology/ Chemistry with B Ed and at least 2 years' experience in an ICSE School. Being a Post-Graduate is an added advantage.
- **KINDERGARTEN TEACHER** A proactive Candidate who can handle young minds with compassion and care. Good proficiency in English language is a must. Graduation with Montessori training / NTT with at least 2 years' experience.
- **OFFICER/ EXECUTIVE – FEE COLLECTION & ERP** B Com with Good Knowledge and Experience in Tally, ERPs and M S Office (Word, Excel, Power Point etc.). Should know to speak, read, and write Kannada language. Proficiency in English is must. Minimum 5 years' experience in Accounts, Fee Collections, Usage of Tally and ERP. Experience in handling administration/Knowledge in Software/ Hardware is an advantage.

Interested candidates may send detailed CV with a Passport size Photograph to hr@stmaryspublicschool.co.in
SCAN THE QR CODE TO APPLY ONLINE
St. Mary's Public School SINCE 1983 Inspiring Excellence.
#13, Queens Road, Bengaluru - 560052 080 2220 2854
www.stmaryspublicschool.co.in
Veritas Assurance International USA Accredited Institution

DMCS Deva Matha Central School
Emphasis is on life
(Affiliated to Central Board of Secondary Education, New Delhi)
Defence Layout, Vidyaranyapura, Bengaluru - 560 097 | Horamavu, Banaswadi, Bengaluru - 560113

Principal : A Post Graduate with a teaching degree and at least eight years of teaching experience in a recognised High School or Higher Secondary School.

Vice Principal: A Post Graduate with a teaching degree and at least five years of teaching experience in a recognised High School or Higher Secondary School.

Montessori / Nursery Trained Teachers: Kindergarten
Trained Graduate Teachers: English, Mathematics, Science, Social Science, Hindi, Kannada, French & Sanskrit.
Post Graduate Teachers: English, Physics, Chemistry, Mathematics, Biology, Computer Science, Accountancy, Business Studies & Economics.
Professionally Trained Teachers: Physical Education, Art & Craft, Music, Dance, Yoga & Taekwondo

POSITIONS ARE ALSO AVAILABLE FOR LAB ASSISTANTS, ACCOUNTANT, ADMISSION OFFICERS, DRIVERS, HOUSEKEEPING AND SECURITY.

QUALIFICATION AS PER CBSE BOARD NORMS
SALARY AS PER ACADEMIC QUALIFICATION, EXPERIENCE AND INDUSTRY STANDARDS.
SPECIAL PREFERENCE WILL BE GIVEN TO SC / ST CANDIDATES
Interested Candidates Can Apply Within 10 days to Human Resource Department, Deva Matha Central School, Horamavu, Banaswadi, Bengaluru - 560 113
E-mail your resumes to hr@dmcs.edu.in

SRI AHAM_AATHMA VIDYALAYA-[ICSE], Gruhalakshmi Layout, Nagasandra post, Peenya Dasarahalli, Bangalore-73 Invites applications for the following posts with good English vocabulary for the academic year 2021-22/2022-23 (1).Computer science- BCA/ MCA/Geography (2).Teachers to teach all the subjects for Nursery/ Primary/ Middle/ High-school. (3).Office Staff/ Clerk/ Data-Entry with Tally (4).Lab-Assistant/ Librarian. Offers Attractive Salary. 'Transportation provided'. Call 9880200172, 9663778869 Email: sriaavapplic@gmail.com

WANTED POST Graduate Teachers for high school (English medium) Qualification: B.Sc, B.Ed (PCM, CBZ) M.A, B.Ed, English, History, Geography, Kannada & Hindi, 5 years experience, fluent in English. Freshers & Retd. Can also apply. Walk-in interview with originals on 7-03-2022 & 9-03-2022, Timings: 10:30 am to 1:00 pm Or Apply to- The Principal/ Secretary, PT. Jawaharlal Nehru Memorial High School, 6/23/1, 4th main road, 9th cross Chamarajpet (near Nayara petrol bunk) Bangalore-560018. Contact: 9632315392/ 080-26747725

SARVODAYA NATIONAL PUBLIC SCHOOL
Affiliated ICSE, New Delhi (KA 152)
#12.10th Main, Binny Layout, Nagarbhavi Main Road, Vijayanagar, Bengaluru-40
Inviting Professional Qualified & Passionate Teachers for

NURSERY	QUALIFICATION: Post Graduate or Degree with B.Ed
PRIMARY	
MIDDLE & HIGH SCHOOL	EXPERIENCE: 5 years of teaching in ICSE Curriculum
FOR ALL THE SUBJECTS.	

Kindly forward your resume to : harshitha.nv@sarvodayanps.edu.in Call : 9902144542 9108706803

ST.PHILOMENA'S MEMORIAL SCHOOL & PU COLLEGE Mariyappanapalya, nearJnanabharathi, Bengaluru-560056. Affiliated to ICSE-KA413. Required Qualified& Experienced Teachers for High School. Subjects:- English, Social, G.Science, Hindi, Computer, Maths &Accountant for Office. Contact No: 080-23241515, 7411940787.

BLOOMFIELD HIGH No. 38, 6th Cross, 3rd Block, Thyagarajanagar, Bangalore-28. (Nursery- Std X CBSE Curriculum) Requires the following faculty members to teach CBSE Curriculum for Pre-Primary to Grade X. Trained Graduates with B.Ed/ TCH/ D.Ed/ NTT/ Montessori/ BP.Ed with minimum 3 years' experience with good command in English. COMPUTER TEACHERS- 2, SCIENCE TEACHER- 1, ENGLISH TEACHER- 1, KANNADA TEACHER- 1, HINDI TEACHERS- 2, PE TEACHERS- 2, BIOLOGY AND CHEMISTRY TEACHER- 1, PRE-PRIMARY TEACHERS-2 , ART AND CRAFT- 1, SUPPORT STAFF- 5, (Minimum qualification SSLC Pass/ Fail), DRIVERS- 4, (2 years' experience as school driver With no bad habits) ACCOUNTANT- 1, (B.Com with minimum 2 years' experience in a school & should have knowledge of Tally/ Excel/ MS-Office) APPLY IMMEDIATELY: Contact 080-26763777, 9448528484, 6366947181, 6366947182, EMail resume: bloomfieldadm@gmail.com

MOUNT CARMEL PU COLLEGE, #58, Palace Road, Bengaluru-52. mountcarmelpucollege @yahoo.co.in Phone-22370404, requires LECTURERS Post Graduates with B.Ed in MATHEMATICS. Apply before 08/03/2022.

VIDYASHREE HIGH SCHOOL (CBSE) Anjananagar, Bengaluru Required Trained Experienced PRT, TGT and PGT Teachers for the academic year 2022-23 to teach Mathematics, Science and English for Primary and High School. Walk-in interview between 9:00 am to 4:30 pm. E-Mail: vidyashreeschool@gmail.com Contact: 8197087813

Accounts & Finance

WANTED FEMALE Office Assistant Knowing Accounts with Tally Having Fluency In English & Hindi In & Around Rajajinagar Contact: 9108458798/ 23384085

WANTED FEMALE **EXPERIENCED** ACCOUNTANTS with Knowledge of TALLY, GST IT. Candidates in and around Vijayanagar, Rajajinagar, RR Nagar. Send your resume to jayaramaiah24@gmail.com. Call:9066669897

REQUIRED LADY Accounts Assistant. Unit in Machohalli Gate Magadi Road. Knowledge of Tally ERP must. Contact 9845057606.

General

WANTED "STENOGRAPHER" with around 5 years experience for an Advocate office at Malleshwaram 11th Cross,Candidate should be comfortable with Computers. Contact: 'Shreehari'- 9986082088

MALE CLERKS: Graduates with computer knowledge. Contact: RES Polytechnic, Sunkadakatte, Hegganahalli Cross, Bengaluru-91. Email: respt450@gmail.com

ATOP SECURITY Required Ex-Man/ Civilian Field Executive,Tally Clerk Good Communication in English Ph:080-23437474/ 23437797

Shishu Mandir Where liberation is awakening!
We are : a girls' home on the outskirts of Bangalore with 25 girls aged between 5 and 18 years
We are looking for : a mature, warm hearted and family orientated residential HOUSEMOTHER to look after a unit of 8 girls in our modern facility.
ARE YOU : kind and motherly, but firm a good communicator and problem solver open to new ideas and happy to work in a team? Do you love and respect children? Do you speak English?
What do we offer ? A six day week with plenty of free time during the day, a fair salary, free food and accommodation. No cleaning, no cooking, so that you can fully concentrate on the mental and physical well-being of "your" 8 girls.
Are you this person ? If you are, then we want to meet you. For further details please contact: anand@shishumandir.org

WANTED SECURITY GUARDS, Experience HEAVY BUS DRIVER. Contact: 9886236341. Bangalore.

OPPORTUNITY FOR Retired Officials, Bankers,NRI, Teachers,Professionals, Homemakers, CAs. Earn salary+ Incentives. 8095301555

Engg/ Production Technical

WANTED AUTOCAD CAD Draftsman Civil for structural consultants office in Mahalakshmi Layout. Call: 9845171084, Email- civiltechstru86@gmail.com

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
GM-Advertisement

REQUIRED: 1] SITE ENGINEER: BE (Civil) with 3 years + Experience. 2] STRUCTURAL ENGINEER: BE with CGPA 7 +. E-mail resume: turnkeyce.jobs@gmail.com Phone: 9886444592

Marketing & Sales

DALVI GROUP
WANTED
For reputed Facility Management Company at Bengaluru
- Manager Marketing / Executive
Commitment and ability to achieve business promotion target.
Salary: Negotiable
Email: personnel@dalvigroup.com
Mobile : 9881507793

AN HONEST Working Salesman for Hitech Paint Industries, Peenya. Experience with Similar Field Required. Contact: 9844017838

REQUIRED LADY STENO /RECEPTIONIST with 1- 3 years Experience For Yeshwanthpur. Please send email to hiren5665@gmail.com

Graphic Designers

WANTED DTP Operator/ Graphic Designer Corel Draw, Illustrator & Photoshop for a Pvt Limited Company in around Rajajinagar Contact: 23307910/ 9108458798

Security & Detectives

URGENTLY REQUIRED Male & Female Security Guards to Work in and around Yelahanka, Bagalur & Kattigenahalli. Contact: 9880732601, 9880732605

HRD & Admin

REQUIRE SMART candidates for Admission Exe./ Counsellor: Having 5 yrs. Exp. In students counselling, admissions, customer relations, with excellent communication skills. jobs@isme.in. 080-28019800 ISME ,Bangalore

RENTAL PROPERTIES

Accommodation Available

Flats

3BHK 1340 sqftHosapalya ITI layour Hsr 7 semi furnished family 20k 9441124742

REAL ESTATE SELLING

House

Mysore Road

NEW 30X50 East 3 Floor 1.25Cr Mysore Road Christ Collage 30X40 East Site Nagarabhavi: 9036401369

Industrial & Factory

Tumkur Road

AVAILABLE INDUSTRIAL, Warehouse, Agriculture, Commercial Property. 1/ 2/ 3/ 12/ 40/ 100 acres. 9141326819, 9972636255

Joint Development

Mysore

HIGHLY PROFITABLE JOINT DEVELOPMENT PROJECT ON MYSOREEXPRESS HIGHWAY REQUIRES BUILDERS FOR J.V. CONTACT OWNER 7676770503/ 9741019028

Sites

Doddabalapur

BUY 30X40/ 40x60 Plots. Just Pay 1 Lakh Remaining from Bank Loan/ Instalment Facility. Doddaballapura Town Best Investment Opportunity: 9591146666

Yelahanka

SALE BDA approved North Facing 1427 sft Site Jayasurya Nagar, Iii Phase 'A' Block, (Vidhana Soudha Layout) at Agrahara, Yelahanka, Bangalore, Contact 9535773366, 9448488818

EDUCATIONAL

Correspondence Courses

PASS IN ONE YEAR! LL.B/LL.M/B.Tech/M.Tech/ Diploma/M.Phil/MBA/MCA/ M.Sc/BCA/BBA/B.Sc/B.Com/ 10th/ PU (NIOS). Asha Academy, Bangalore: 9448460103/ 7093438248

PUBLIC NOTICE

PUBLIC NOTICE
My client **Sri K.Kishore Kumar,** Aged about 50 years, S/o. Krishna Raju, residing at GF-1, May Flower Heights, 6th cross, 3rd Main, B.G.Road, Dollars Colony, BTM 2nd Stage, Bengaluru- 560076 entered into Agreement of Sale dated 24.11.2006 in respect of Schedule Property with **Smt. B Yashodha Bai,** Aged about 60 years, W/o. Late N. Ananda Rao, residing at No.8/ 114, Ayyappa Nilaya, Near Venkateshwara Theater, Anekal Town, Bengaluru District. My client is proceeding to purchase the Schedule Property for valuable sale consideration.
Notice is hereby given for the information of the General Public that if any person/s having any right, title, interest or claim over the Schedule Property, may lodge his/ her/ their objection/ claim with the undersigned with documentary proof in support of such objection/claim within **FIFTEEN (15) DAYS** from the date of this public notice. If no such objections/ claim is received by the undersigned within the said period, it shall be presumed that no one has any right, title, interest or objections/ claim over the Schedule Property and my client will proceed with the sale transaction with the above said original owner/Vendor.
SCHEDULE PROPERTY
All the piece and parcel of the agricultural land bearing Sy. No.3. measuring 5 acres 12 guntas, situated at Chikka Hegade/Chikka Papade Village, Kasaba Hobli, Anekal Taluk, Bengaluru District, and bounded on ;
East by : B.R.Ramaswamy Rcddy's land **West by:** Private Property **North by :** Way to Panchayath Road and **South by:** Sri.Chikkakamaiah & another's land.
(G.B.Nagappa)
ADVOCATE: Ph 9740365034
Dated .02.03.2022

BUSINESS

Business Offers

Finance

WANTED BUSINESS Partner Non Veg Hotel 5 to 10 Lakhs Investment Daily Income: 9606701007/ 8892501007

NRI'S INVESTMENT And Finance Available On Low Interest Against Properties, Land & Building, Sites, Flats, Converted& Agriculture Lands Call: 7411265189

PERSONAL

Change of Name

I, ASHOK Ghanshyamdas Narasinghani, aged 66 Years S/o Late Ghanshyamdas Narsinghani, Residing at No. 3042. High Point- III, 45, Palace Road, Bangalore - 560001, have changed my name to ASHOK GHANSHYAMDAS NARSINGHANI vide affidavit dated 28.02.2022 before notary P.K. Nalinakshi, Bangalore.

I, VINITA NIGAM, aged about 54 years, wife of Mr.Sudeep Shrivastava and daughter of Mr.Ramesh Kumar Nigam, residing at No. 2021, Sobha Dahlis, Bellandur, BENGALURU-560103 have changed my name to VINITA SHRIVASTAVA Vide affidavit dated 28-02-2022 sworn before Advocate & Notary L.Gopalakrishna, Bengaluru

I, T. ANJALI DEVI THANGAVELU, THANGAVEL DEVI, R/o. #29, 2nd Cross, 2nd Main, Gowthamapuram, Halasuru, Bangalore-08, have changed my name to T. ANJALI DEVI affidavit 28.02.2022, notary A.R.Muneer Ahmed, Bangalore.

Lost

LOST
I, Radhika Abhiram Athavale, 314, 7th 'B' Main, HRBR Layout, 1st Block, Kalyan Nagar, Bangalore-560043, Phone No 98339 23627, have lost Original Sale Deed (bearing number 1865) and original release deed (Bearing No 3633) of property 25/1,1st Cross, Gupta Layout, Ulsoor, Bangalore-560008. If anybody finds them, please contact nearest Police Station or send it to my above address.

DH DECCAN HERALD ಪ್ರಜಾವಾಣಿ
BOOK YOUR CLASSIFIEDS ONLINE
5 EASY STEP
5 Easy steps to book your ads
- LOG INTO WWW.DHCLASSIFIEDS.COM
- CHOOSE THE CATEGORY
- CHOOSE THE AD DATES
- COMPOSE THE MATTER
- CONFIRM AND PAY

TO BOOK YOUR CLASSIFIEDS ADS ONLINE
JOB | LOST | REAL ESTATE | NAME CHANGE | EDU | HEALTH
MATRI | AUTO | ASTRO | NOTICE | TRAVEL
condition apply*
WWW.DHCLASSIFIEDS.COM
For more information Contact:
9880856233 | 9731810277 | 9901641752 | 9845114560 | 9886213331
Email: dhclassifieds@deccanherald.co.in

ಅನುದಾನ ಹಂಚಿಕೆ ತಾರತಮ್ಯ: ಪ್ರಗತಿಗೆ ಮಾರಕ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಎಲ್ಲ ವಿಷಯದಲ್ಲೂ ರಾಜಕೀಯ ಲಾಭ ಹುಡುಕುವ ದಿನಗಳಲ್ಲಿ ನಗರದ ಅಭಿವೃದ್ಧಿಯ ಸಮಗ್ರ ಮುನ್ನೋಟದೊಂದಿಗೆ ಯೋಜನೆ ರೂಪಿಸಿ ಅನುದಾನ ಹಂಚಿಕೆ ಮಾಡುವ ಕಾಲವೀಗ ಇಲ್ಲವಾಗಿದೆ.

ಆಡಳಿತದಲ್ಲಿ ಇರುವ ಪಕ್ಷದ ಶಾಸಕರ ಕ್ಷೇತ್ರಕ್ಕೆ ಹೆಚ್ಚಿನ ಅನುದಾನ ನೀಡುವುದು ಇತ್ತೀಚೆಗೆ ಪರಿಪಾಠವಾಗಿದೆ. ಮೂರು ಪಕ್ಷಗಳೂ (ಬಿಜೆಪಿ, ಕಾಂಗ್ರೆಸ್, ಜೆಡಿಎಸ್) ಈ ವಿಷಯದಲ್ಲಿ ಭಿನ್ನವಾಗಿಲ್ಲ. ಅತ್ಯಂತ ವೇಗವಾಗಿ ಬೆಳೆಯುತ್ತಿರುವ ಹೊರ ವಲಯಕ್ಕೆ ಹೆಚ್ಚಿನ ಮೂಲ ಸೌಕರ್ಯ ಅಗತ್ಯವಿದೆ. ಹೊರವಲಯವನ್ನು ಪ್ರತಿನಿಧಿಸುವ ಶಾಸಕರು ಆಡಳಿತ ಪಕ್ಷದಲ್ಲಿ ಇಲ್ಲ ಎಂಬ ಕಾರಣಕ್ಕೆ ಅನುದಾನ ಕಡಿಮೆ ಮಾಡಿದರೆ ಬೆಂಗಳೂರಿನ ಅಭಿವೃದ್ಧಿಗೆ ಹಿನ್ನಡೆ ಉಂಟಾಗುತ್ತದೆ. ಈ ಕುರಿತು ನಗರದ ನಾಗರಿಕರು 'ಪ್ರಜಾವಾಣಿ' ಜತೆ ಅಭಿಪ್ರಾಯ ಹಂಚಿಕೊಂಡಿದ್ದಾರೆ.

ರಾಜಧಾನಿ ಒಡಲದನಿ

'ದೂರದೃಷ್ಟಿ ಇಲ್ಲ, ದುರುದ್ದೇಶವೇ ಎಲ್ಲ'

ಬೆಂಗಳೂರು ಕಟ್ಟಿದ ಕೆಂಪೇಗೌಡರಿಗೆ ನಾಲ್ಕು ದಿಕ್ಕಿನಲ್ಲೂ ಸಮಾನವಾಗಿ ಬೆಳೆಯಬೇಕು ಎಂಬ ಆಶಯ ಇತ್ತು. ಆ ನಿಟ್ಟಿನಲ್ಲೇ ಅಂದು ಅಭಿವೃದ್ಧಿ ಕಾರ್ಯಕ್ರಮಗಳನ್ನು ಕೈಗೊಳ್ಳಲಾಗಿತ್ತು. ಈಗ ನಮ್ಮನ್ನು ಆಳುವವರಿಗೆ ಈ ರೀತಿಯ ಆಶಯ ಅಥವಾ ಆಲೋಚನೆ ಇಲ್ಲವೇ ಇಲ್ಲ. ಅನ್ಯ ಪಕ್ಷದ ಶಾಸಕರ ಕ್ಷೇತ್ರಕ್ಕೆ ಅನುದಾನ ಬಿಡುಗಡೆ ಮಾಡಿದರೆ ಅವರಿಗೆ ರಾಜಕೀಯ ಮತ್ತು ಹಣಕಾಸಿನ ಲಾಭವಾಗುತ್ತದೆ ಎಂಬ ಕಾರಣಕ್ಕೆ ಅನುದಾನ ಬಿಡುಗಡೆ ಮಾಡದೆ, ಆಡಳಿತ ಪಕ್ಷದ ಶಾಸಕರಿಗೆ ಲಾಭ ದೊರಕಿಸಿಕೊಡುವ ಪರಿಪಾಟವನ್ನು ಸರ್ಕಾರಗಳು ಬೆಳಸಿಕೊಳ್ಳುತ್ತಿವೆ. ಯಾವುದೇ ಪಕ್ಷ ಆಡಳಿತದಲ್ಲಿ ಇದ್ದರೂ ಇದೇ ಪರಿಸ್ಥಿತಿ ಇದೆ. ನಂಬರ್ ಒನ್ ಕ್ರಿಯಾಶೀಲ ನಗರ ಎಂಬ ಹೆಗ್ಗಳಿಕೆಗೆ ಪಾತ್ರವಾಗಿರುವ ಬೆಂಗಳೂರಿನ ಸಮಗ್ರ ಅಭಿವೃದ್ಧಿಗೆ ಇದು ಮಾರಕವಾಗಲಿದೆ. ಯಾವ ಭಾಗದಲ್ಲಿ ಮೂಲಸೌಕರ್ಯ ಕೊರತೆ ಇದೆ ಎಂಬುದನ್ನು ಗುರುತಿಸಿ ದೂರದೃಷ್ಟಿಯ ಯೋಜನೆಗಳನ್ನು ರೂಪಿಸುವಂತಾಗಬೇಕು.

ಅನಿಲ್, ಉದ್ಯಮಿ

'ಅಭಿವೃದ್ಧಿಗೆ ದ್ರೋಹ'

ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಎಲ್ಲ ವಿಧಾನಸಭಾ ಕ್ಷೇತ್ರಗಳಲ್ಲೂ ಆಡಳಿತ ಪಕ್ಷದವರೇ ಶಾಸಕರಾಗಿರಲು ಸಾಧ್ಯವಿಲ್ಲ. ಯಾವ ಕ್ಷೇತ್ರದಲ್ಲಿ ಹೆಚ್ಚು ಸಮಸ್ಯೆಗಳಿವೆ ಎಂಬುದನ್ನು ನೋಡಿಕೊಂಡು ಅನುದಾನ ನಿಗದಿ ಮಾಡದಿದ್ದರೆ ಬೆಂಗಳೂರಿನ ಸಮಗ್ರ ಅಭಿವೃದ್ಧಿ ಸಾಧ್ಯವಾಗುವುದಿಲ್ಲ. ವಿರೋಧ ಪಕ್ಷದ ಶಾಸಕರ ಕ್ಷೇತ್ರಕ್ಕೆ ಅನುದಾನ ಬಿಡುಗಡೆ ಮಾಡದಿದ್ದರೆ ಅದು ಆ ಕ್ಷೇತ್ರದ ಶಾಸಕರ ಮೇಲಿನ ದ್ವೇಷದ ರಾಜಕಾರಣವಷ್ಟೇ ಆಗುವುದಿಲ್ಲ. ಬೆಂಗಳೂರಿನ ನಾಗರಿಕರಿಗೆ ಮತ್ತು ಅಭಿವೃದ್ಧಿಗೆ ಮಾಡುವ ದ್ರೋಹವಾಗುತ್ತದೆ. ದಾಸರಹಳ್ಳಿ ವಿಧಾನಸಭಾ ಕ್ಷೇತ್ರ ಕೈಗಾರಿಕಾ ಪ್ರದೇಶವನ್ನು ಒಳಗೊಂಡಿದ್ದು, ವೇಗವಾಗಿ ಬೆಳೆಯುತ್ತಿರುವ ಪ್ರದೇಶ. ಈ ಕ್ಷೇತ್ರಕ್ಕೆ ಕಳೆದ ಮೂರು ವರ್ಷಗಳಲ್ಲಿ ಅನುದಾನ ದೊರೆಯದೆ ನಾಗರಿಕರು ತೊಂದರೆ ಅನುಭವಿಸಬೇಕಾಯಿತು. ರಾಜಕೀಯ ಲಾಭವನ್ನಷ್ಟೇ ನೋಡದೆ ಸಮಸ್ಯೆ ಆಧರಿಸಿ ಅನುದಾನ ಬಿಡುಗಡೆ ಮಾಡುವ ಪದ್ಧತಿ ಬೆಳೆಯಬೇಕು.

ವಿ.ಜಿ. ರಂಗಸ್ವಾಮಿ, ಬೆಲ್ಮಾರ್ ಲೇಔಟ್ ನಿವಾಸಿಗಳ ಕ್ಷೇಮಾಭಿವೃದ್ಧಿ ಸಂಘದ ಅಧ್ಯಕ್ಷ

'ಮುನ್ನೋಟ ಇಲ್ಲ'

ಮೂರು ಪಕ್ಷಗಳಿಗೆ ಬೆಂಗಳೂರಿನ ಬಗ್ಗೆ ನಿಜವಾದ ಕಾಳಜಿ ಮತ್ತು ಮುನ್ನೋಟ ಇಲ್ಲ. ಬಿಬಿಎಂಪಿ ಎಂದರೆ ಮೂರು ಪಕ್ಷಗಳಿಗೆ ಎಟಿಎಂ ಇದ್ದಂತೆ. ನಿರ್ಮಾಣವಾದ ಎಂಟೇ ವರ್ಷದಲ್ಲಿ ಜಯದೇವ ಆಸ್ಪತ್ರೆ ಬಳಿಯ ಮೇಲ್ಸೇತುವೆ ನೆಲಸಮ ಮಾಡಲಾಗಿದೆ. ದೂರದೃಷ್ಟಿ ಇಲ್ಲದಿರುವುದಕ್ಕೆ ಇದೇ ಉದಾಹರಣೆ. ಯಾವುದೇ ಪಕ್ಷ ಆಡಳಿತದಲ್ಲಿ ಇದ್ದರೂ ಶಾಸಕ ಎಂದರೆ ಸರ್ಕಾರ ಭಾಗವೇ ಆಗಿರುತ್ತಾರೆ. ಆಡಳಿತ ಪಕ್ಷದವರು ಗೆದ್ದಿರುವ ಕ್ಷೇತ್ರಗಳು ಮಾತ್ರ ಬೆಂಗಳೂರು ಅಲ್ಲ. ತಮ್ಮ ಪಕ್ಷದ ಶಾಸಕರು ಮತ್ತು ಪಾಲಿಕೆ ಸದಸ್ಯರಿಗೆ ಲಾಭ ಮಾಡಿಕೊಡುವುದಷ್ಟೇ ಬೆಂಗಳೂರಿನ ಅಭಿವೃದ್ಧಿ ಅಲ್ಲ. ಈ ವಿಷಯದಲ್ಲಿ ಮೂರು ಪಕ್ಷಗಳ ಭಿನ್ನವೇನೂ ಅಲ್ಲ. ಈಗ ಬಿಜೆಪಿ ಆಡಳಿತದಲ್ಲಿದೆ, ಮುಂದಿನ ದಿನಗಳಲ್ಲಿ ಕಾಂಗ್ರೆಸ್ ಅಥವಾ ಜೆಡಿಎಸ್ ಅಧಿಕಾರಕ್ಕೆ ಬಂದರೆ ತಾರತಮ್ಯ ಇರುವುದಿಲ್ಲ ಎಂಬುದು ಸುಳ್ಳು. ಬೆಂಗಳೂರಿನ ಅಭಿವೃದ್ಧಿ ಬಗ್ಗೆ ನಿಜವಾದ ಕಾಳಜಿ ಯಾರಿಗೂ ಇಲ್ಲ.

ದರ್ಶನ್ ಜೈನ್, ಆಮ್ ಆದ್ಮಿ ಪಕ್ಷದ (ಎಎಪಿ) ರಾಜ್ಯ ಘಟಕದ ಜಂಟಿ ಕಾರ್ಯದರ್ಶಿ

ಶಿರಸಿಯಲ್ಲಿ ನಡೆದ ಕಾಂಗ್ರೆಸ್ ಸದಸ್ಯತ್ವ ಅಭಿಯಾನ ಸಭೆಯಲ್ಲಿ ಮಾರ್ಗರೇಟ್ ಆಳ್ವಾ ಮಾತನಾಡಿದರು. ಶಾಸಕ ಆರ್.ವಿ.ದೇಶಪಾಂಡೆ, ಜಿಲ್ಲಾ ಘಟಕದ ಅಧ್ಯಕ್ಷ ಭೀಮಣ್ಣ ನಾಯ್ಕ, ಸುಷ್ಮಾ ರಾಜಗೋಪಾಲ, ವಿ.ಎಸ್.ಆರಾಧ್ಯಾ ಇದ್ದಾರೆ

'ದೋಷದಿಂದ ಕೂಡಿದ ಕಾಂಗ್ರೆಸ್ ಸದಸ್ಯತ್ವ ಅಭಿಯಾನ'

ಶಿರಸಿ: 'ಕಾಂಗ್ರೆಸ್ ಪಕ್ಷ ನಡೆಸುತ್ತಿರುವ ಡಿಜಿಟಲ್ ಸದಸ್ಯತ್ವ ಅಭಿಯಾನ ಸೀಮಿತ ಜನರನ್ನು ತಲುಪುತ್ತಿದೆ. ಸಾಮಾಜಿಕ ಬದ್ಧತೆಯುಳ್ಳ ಪಕ್ಷ ಎಲ್ಲರನ್ನೂ ವಿಶ್ವಾಸಕ್ಕೆ ಪಡೆದುಕೊಂಡು ಸಾಗುವ ಚಿಂತನೆ ನಡೆಸಬೇಕು. ಆಫ್‌ಲೈನ್ ಮೂಲಕ ಸದಸ್ಯತ್ವ ನೀಡುವ ಕೆಲಸವೂ ಆಗಬೇಕಿದ್ದು ಈ ಬಗ್ಗೆ ಎಐಸಿಸಿಗೂ ಪತ್ರ ಬರೆಯುತ್ತೇನೆ' ಎಂದು ಪಕ್ಷದ ಹಿರಿಯ ನಾಯಕಿ ಮಾರ್ಗರೇಟ್ ಆಳ್ವಾ ಹೇಳಿದರು.

ಇಲ್ಲಿನ ವಿನಾಯಕ ಸಭಾಂಗಣದಲ್ಲಿ ಮಂಗಳವಾರ ನಡೆದ ಕಾಂಗ್ರೆಸ್ ಡಿಜಿಟಲ್ ಸದಸ್ಯತ್ವದ ಶಿರಸಿ ಬ್ಲಾಕ್ ಮಟ್ಟದ ಸಭೆಯಲ್ಲಿ ಮಾತನಾಡಿದ ಅವರು 'ಗ್ರಾಮೀಣ ಭಾಗದಲ್ಲಿ ಇಂಟರನೆಟ್ ಇಲ್ಲದೆ ಸದಸ್ಯತ್ವ ಪಡೆಯಲು ಸಾಧ್ಯವಾಗುತ್ತಿಲ್ಲ. ಹಾಗಾದರೆ ಹಳ್ಳಿಗರು, ರೈತರು, ವೃದ್ಧರು ಪಕ್ಷದ ಸದಸ್ಯರಾಗಬಾರದೆ' ಎಂದರು.

'ಮಹಿಳೆಯರು ಪಕ್ಷ ಸಂಘಟನೆಗೆ ಬೇಕು. ಆದರೆ ಅಧಿಕಾರ ಪುರುಷರಿಗೆ ಸೀಮಿತವಾಗಿದೆ' ಎಂದು ಬೇಸರಿಸಿದರು.

भारतीय ताराभौतिकी संस्थान
INDIAN INSTITUTE OF ASTROPHYSICS
(विज्ञान व प्रौद्योगिकी विभाग, भारत सरकार के अधीन स्वायत्त संस्थान)
(An Autonomous Body Under Department of Science & Technology, Government of India)
कोरमंगला Koramangala, बेंगलूर Bangalore - 560034.

NOTICE INVITING TENDER

Sealed Tenders are invited for the following works:
1. **Renovation of Purchase Section area** at First floor of Workshop Building, IIA, Koramangala Campus, Bengaluru. *Tender Notice No. 51/IIA/CIVIL/BNG/PURCHASE SECTION/2021-22 dated 02.03.2022.*
2. **Renovation of Old Power house at CREST Campus**, IIA, Hosakote, Bengaluru Rural Dist.- *Tender Notice No.52/IIA/CIVIL/CREST/ HOSKOTE/OLD POWER HOUSE/2021-22 Dated 02.03.2022.*

Detailed Tender Documents can be downloaded from Institute website: **www.iiap.res.in/tenders.htm.**
Last date for receipt of bid for both the Tenders is 01.04.2022 at 1500 hours.

Administrative Officer

ಕರ್ನಾಟಕ ಸರ್ಕಾರ
ಆಯುಕ್ತರು, ಭೂಮಾಪನ ಕಂದಾಯ ವ್ಯವಸ್ಥೆ ಮತ್ತು ಭೂದಾಖಲೆಗಳ ಇಲಾಖೆ.
ಕೆ.ಆರ್.ವೃತ್ತ, ಬೆಂಗಳೂರು–560001, ದೂ: 91–080–22212408, ಫ್ಯಾಕ್ಸ್: 91–080–22277528
ಸಂಖ್ಯೆ: ಎಸ್ ಎಸ್ ಎಲ್ ಆರ್ : 11016/9/2022 ದಿನಾಂಕ: 28–02–2022

ಇ–ಟೆಂಡರ್ ಪ್ರಕಟಣೆ

ಭೂಮಾಪನ ಇಲಾಖೆಯಲ್ಲಿ ಡ್ರೋನ್ / ವೈಮಾನಿಕ ಸಮೀಕ್ಷೆ ಮೂಲಕ ORI Generation For Large Scale Mapping ಸೇವೆ ಒದಗಿಸುವ ಸಂಬಂಧ ಅರ್ಹ ಪ್ರತಿಷ್ಠಿತ ಸಂಸ್ಥೆಗಳಿಂದ ಟೆಂಡರನ್ನು ಆಹ್ವಾನಿಸಲಾಗಿದೆ.

ಇಲಾಖೆಯು ಈ ಸೇವೆಯನ್ನು ಒದಗಿಸಲು ಆಸಕ್ತಿಹೊಂದಿರುವಂತಹ ಸಂಸ್ಥೆಗಳಿಂದ ಆರ್ ಎಫ್ ಪಿಯಲ್ಲಿ ಒಳಗೊಂಡಿರುವ ನಿಯಮಗಳು ಮತ್ತು ಷರತ್ತುಗಳ ಅನ್ವಯ ಇ–ಟೆಂಡರ್‌ಗಳನ್ನು ಆಹ್ವಾನಿಸಿದ್ದು, **ದಿನಾಂಕ: 02.03.2022** ರಿಂದ **http://www.eproc.karnataka.gov.in** ರಲ್ಲಿ ಲಭ್ಯವಿರುತ್ತದೆ. ಆಸಕ್ತ ಸಂಸ್ಥೆಗಳು ಇ–ಆಡಳಿತ ಕೇಂದ್ರದಲ್ಲಿ ನೋಂದಾಯಿಸಿಕೊಂಡು ಬಿಡ್ಡಿಂಗ್ ಪ್ರಕ್ರಿಯೆಯಲ್ಲಿ ಭಾಗವಹಿಸಬಹುದಾಗಿದೆ. ಪ್ರಸ್ತಾವನೆಯನ್ನು ಸಲ್ಲಿಸಲು ಕೊನೆಯ **ದಿನಾಂಕ: 01.04.2022** ಆಗಿರುತ್ತದೆ.

ಸಹಿ/–
ಹೆಚ್ಚುವರಿ ನಿರ್ದೇಶಕರು
ಭೂಮಾಪನ ಕಂದಾಯ ವ್ಯವಸ್ಥೆ ಮತ್ತು ಭೂದಾಖಲೆಗಳ ಇಲಾಖೆ, ಬೆಂಗಳೂರು

ವಾಸಾಸಂಇ/ಬೆಂ.ನ/ಶಿರಡಿ ಸಾಯಿ/3571/2021–22

ಕೋವಿಡ್-19. ಆತಂಕ ಬೇಡ; ಮುನ್ನೆಚ್ಚರಿಕೆ ಇರಲಿ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಕಾಡುಮಲ್ಲೇಶ್ವರ ದೇವಸ್ಥಾನದಲ್ಲಿ ಮಂಗಳವಾರ ಶಿವರಾತ್ರಿ ಹಬ್ಬದ ಪ್ರಯುಕ್ತ ಭಕ್ತಾದಿಗಳು ದೇವರ ದರ್ಶನಕ್ಕಾಗಿ ಸಾಲು ನಿಂತಿರುವ ದೃಶ್ಯ –ಪ್ರಜಾವಾಣಿ ಚಿತ್ರ

ಬಾಪೂಜಿನಗರದಲ್ಲಿರುವ ಬೀರೇಶ್ವರ ದೇವಸ್ಥಾನದಲ್ಲಿ ಭಕ್ತಾದಿಗಳು ದೇವರ ದರ್ಶನ ಪಡೆಯಲು ಹೆಚ್ಚಿನ ಸಂಖ್ಯೆಯಲ್ಲಿ ಭಕ್ತರು ಬಂದಿದ್ದರು. –ಪ್ರಜಾವಾಣಿ ಚಿತ್ರ

ನಗರದೆಲ್ಲೆಡೆ ಸಂಭ್ರಮದ ಶಿವರಾತ್ರಿ ಆಚರಣೆ ● ಬೆಳಿಗ್ಗೆಯಿಂದಲೇ ವಿಶೇಷ ಪೂಜೆ, ರುದ್ರಾಭಿಷೇಕ, ಬಿಲ್ವ ಪತ್ರೆ ಅರ್ಪಣೆ

ದೇಗುಲಗಳಲ್ಲಿ ಶಿವ ಸ್ಮರಣೆ: ಭಕ್ತರಿಂದ ಜಾಗರಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ದೇವಾಲಯಗಳಲ್ಲಿ ಶಿವರಾತ್ರಿ ಪ್ರಯುಕ್ತ ಮಂಗಳವಾರ ಸಂಭ್ರಮ ಮನೆ ಮಾಡಿತ್ತು. ಭಕ್ತರು ಶಿವನ ಧ್ಯಾನದಲ್ಲಿ ಮುಳುಗಿದ್ದರು. ದರ್ಶನ ಪಡೆಯಲು ದೇವಸ್ಥಾನಗಳಿಗೆ ಭಕ್ತಸಾಗರವೇ ಹರಿದು ಬಂತು.

ಶಿವಾಲಯಗಳಲ್ಲಿ ಬೆಳಿಗ್ಗೆಯಿಂದಲೇ ವಿಶೇಷ ಪೂಜೆ, ರುದ್ರಾಭಿಷೇಕ, ಕ್ಷೀರಾಭಿಷೇಕ, ಬಿಲ್ವ ಪತ್ರೆ ಅರ್ಪಣೆ, ಮಹಾ ಮಂಗಳಾರತಿ ಸೇರಿದಂತೆ ಧಾರ್ಮಿಕ ವಿಧಿಗಳು ನೆರವೇರಿದವು. ಶಿವನಾಮ ಸ್ಮರಣೆ, ಜಪ, ತಪಗಳಿಗೆ ವಿಶೇಷ ವ್ಯವಸ್ಥೆ ಮಾಡಲಾಗಿತ್ತು.

ಹಲಸೂರಿನ ಸೋಮೇಶ್ವರ ದೇವಸ್ಥಾನ, ಜರಗನಹಳ್ಳಿ ಗಂಗಾಧರೇಶ್ವರ ಸ್ವಾಮಿ ದೇವಸ್ಥಾನ, ಶ್ರೀಕಂಠೇಶ್ವರ ಸ್ವಾಮಿ ದೇವಸ್ಥಾನ, ಚಂದ್ರಚೂಡೇಶ್ವರ ದೇವಸ್ಥಾನ, ಗವಿಪುರದ ಗವಿ ಗಂಗಾಧರೇಶ್ವರ ದೇವಾಲಯ, ಮಲ್ಲೇಶ್ವರದ ಕಾಡುಮಲ್ಲೇಶ್ವರ ದೇವಾಲಯ, ದಕ್ಷಿಣಮುಖ ನಂದಿ ತೀರ್ಥ ದೇವಾಲಯ, ಚಾಮರಾಜಪೇಟೆಯ ಮಲೆಮಹದೇಶ್ವರ ದೇವಸ್ಥಾನ, ಮುರುಗೇಶಪಾಳ್ಯದ ಶಿವೋಹಂ ಶಿವ ದೇವಸ್ಥಾನ, ಕೋಟೆ ಜಲಕಂಠೇಶ್ವರ ದೇವಸ್ಥಾನ ಸೇರಿದಂತೆ ನಗರದಲ್ಲಿರುವ ಹಲವಾರು ಶಿವಾಲಯಗಳಲ್ಲಿ ದೇವರ ದರ್ಶನಕ್ಕೆ ಭಕ್ತರು ಸಾಲುಗಟ್ಟಿ ನಿಂತಿದ್ದರು.

ಭಕ್ತರು ಉಪವಾಸ ಕೈಗೊಂಡರು. ಜಾಗರಣೆ ಪ್ರಯುಕ್ತ ವಿವಿಧ ಸಂಘ ಸಂಸ್ಥೆಗಳು ಹಾಗೂ ದೇವಾಲಯಗಳು ಮಂಗಳವಾರ ಸಂಜೆಯಿಂದ ಬುಧವಾರ ಬೆಳಿಗ್ಗೆ ತನಕ ಲಕ್ಷ ದೀಪೋತ್ಸವ, ನಾಟಕೋತ್ಸವ, ಸಂಗೀತ–ನೃತ್ಯ ಕಾರ್ಯಕ್ರಮಗಳನ್ನು ಏರ್ಪಡಿಸಿದ್ದವು.

ಗುರುಕುಮಾರ ಪಂಚಾಕ್ಷರೇಶ್ವರ ಸಂಗೀತ ಕಲಾ ವೇದಿಕೆ ವತಿಯಿಂದ ಶಿವರಾತ್ರಿ ಸ್ವರ ಸಂಭ್ರಮ, ಗಾಯನ ಮತ್ತು ವಾದನ, ನಾಟ್ಯ ಸರಸ್ವತಿ ಶಾಂತಲಾ ಕನ್ನಡ ಕಲಾ ಸಂಘವು 'ಮಹಾಶಿವರಾತ್ರಿ ರಂಗ ಮಹೋತ್ಸವ'ದ ಅಂಗವಾಗಿ 'ವರಭ್ರಷ್ಟ' ಹಾಗೂ 'ರೊಟ್ಟಿ ಋಣ' ನಾಟಕ ಪ್ರದರ್ಶನ, ನಾಗಶೆಟ್ಟಿಹಳ್ಳಿಯ ಗಂಧರ್ವ ಸಾಂಸ್ಕೃತಿಕ ಕಲಾವೇದಿಕೆ ವತಿಯಿಂದ ಶಿವರಾತ್ರಿ ನಾಟಕೋತ್ಸವ, ಮುರುಗೇಶಪಾಳ್ಯದ ಶಿವೋಹಂ ಈಶ್ವರ ದೇವಸ್ಥಾನದಲ್ಲಿ ಶಿವನಾಮ ಪಠಣ, ಆರತಿ, ಭಜನೆ ಕಾರ್ಯಕ್ರಮಗಳು ನಡೆದವು.

ತೋಟಗೆರೆಯಲ್ಲಿ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಬಿ.ಸಿ.ಟ್ರಸ್ಟ್ ವತಿಯಿಂದ ಸೂರ್ಯಲಕ್ಷ ದೀಪೋತ್ಸವ, ಜಯನಗರದ ಪಟ್ಟಾಭಿರಾಮ ಸೇವಾ ಮಂಡಳಿಯಿಂದ ವಿಶೇಷ ಪೂಜೆ ಮತ್ತು ಕ್ಷೀರಾಭಿಷೇಕ, ಮಲ್ಲೇಶ್ವರದ ನಂಜನಗೂಡು ಶ್ರೀಕಂಠೇಶ್ವರ ಸೇವಾ ಸಂಘದಿಂದ ಮೃತ್ತಿಕಾ ಶಿವಲಿಂಗ ದರ್ಶನ, ಭಜನೆ, ರುದ್ರಾಭಿಷೇಕ, ಯಶವಂತಪುರದ ಮಹಾಯಾಗ ಕ್ಷೇತ್ರ ಗಾಯತ್ರೀ ದೇವಸ್ಥಾನದಲ್ಲಿ ಶಿವರಾತ್ರಿ ಮಹೋತ್ಸವ– ಜಾಗರಣೆ ಪ್ರಯುಕ್ತ ಅಹೋರಾತ್ರಿ ಸಂಗೀತ ನೃತ್ಯೋತ್ಸವಗಳು ನಡೆದವು.

ಹನುಮಂತನಗರದ ಶ್ರೀಶೇಷಮಹಾಬಲಮುರಿ ಗಣಪತಿ ಹಾಗೂ ಶಿವನ ದೇವಸ್ಥಾನವನ್ನು ಢಮರುಗ ಹಾಗೂ ತ್ರಿಶೂಲಗಳಿಂದ ವಿಶೇಷವಾಗಿ ಅಲಂಕರಿಸಲಾಗಿತ್ತು. ಶೇಷ ಮಹಾಬಲಮುರಿ ಗಣಪತಿ ಸೇವಾ ಸಮಿತಿ ಟ್ರಸ್ಟ್ ವತಿಯಿಂದ ನೃತ್ಯ ಶಿವರಾತ್ರಿ ಕಾರ್ಯಕ್ರಮದಡಿ ಎ.ವಿ.ಸತ್ಯನಾರಾಯಣ ಮತ್ತು ಕಲಾವಿದರು ನೃತ್ಯ ಪ್ರದರ್ಶಿಸಿದರು.

ನಗರದ ಮಲ್ಲೇಶ್ವರದಲ್ಲಿರುವ ದಕ್ಷಿಣ ಮುಖ ನಂದಿ ತೀರ್ಥ ಕಲ್ಯಾಣಿ ದೇವಸ್ಥಾನದಲ್ಲಿ ಮಂಗಳವಾರ ಶಿವರಾತ್ರಿ ಹಬ್ಬದ ಪ್ರಯುಕ್ತ ಭಕ್ತಾದಿಗಳು ದೇವರ ದರ್ಶನ ಪಡೆದರು

ಗಮನ ಸೆಳೆದ 'ಮುಕ್ತಿಪ್ರದ ನಂದೀಶ್ವರ'

ಮಲ್ಲೇಶ್ವರದ ವಾಸವಿ ಕನ್ನಕಾ ಪರಮೇಶ್ವರಿ ದೇವಸ್ಥಾನದಲ್ಲಿ ಶಿವರಾತ್ರಿ ಪ್ರಯುಕ್ತ 'ಮುಕ್ತಿಪ್ರದ ನಂದೀಶ್ವರ'ನ ವಿಶೇಷ ಕಲಾಕೃತಿಗಳನ್ನು ನಿರ್ಮಿಸಲಾಗಿದೆ. ಭಕ್ತರ ಗಮನ ಸೆಳೆಯುವಂತೆ ಹುಲಿಯ ಬಾಯಿ ಆಕಾರದ ಪ್ರವೇಶದ್ವಾರ ಹಾಗೂ ನಂದಿ ಬಾಯಿ ಆಕಾರದ ನಿರ್ಗಮನ ದ್ವಾರಗಳನ್ನು ನಿರ್ಮಿಸಲಾಗಿದೆ. ಭಕ್ತರು ಹುಲಿಯ ಬಾಯೊಳಗೆ ನುಗ್ಗಿ ಬಳಿಕ ಶಿವಲಿಂಗಕ್ಕೆ ಅಭಿಷೇಕ ಮಾಡುವ ಮೂಲಕ ಹಸುವಿನ ಬಾಯೊಳಗಿಂದ ಹೊರಬರುವಂತೆ ವ್ಯವಸ್ಥೆ ಮಾಡಲಾಗಿದೆ.

'ಮನುಷ್ಯ ವ್ಯಾಘ್ರನ ಗುಣಗಳಿಂದ ಗೋವಿನಂತೆ ಶಾಂತ ರೂಪ ಪಡೆಯುವ ಪರಿಕಲ್ಪನೆ'ಯಡಿ ಈ ಕಲಾಕೃತಿ ನಿರ್ಮಿಸಲಾಗಿದೆ. ಕಲಾಸಿಂಧೂರ ತಂಡದವರು ಎರಡು ವಾರಗಳಲ್ಲಿ ಈ ವಿಶೇಷ ಸೆಟ್ ನಿರ್ಮಿಸಿದ್ದು, ಬುಧವಾರ ರಾತ್ರಿ 9 ಗಂಟೆಯವರೆಗೂ ಸಾರ್ವಜನಿಕರಿಗೆ ಉಚಿತ ಪ್ರವೇಶ ಇರಲಿದೆ.

ಕಾಡುಮಲ್ಲೇಶ್ವರ ದೇವಸ್ಥಾನದಲ್ಲಿ ಮಂಗಳವಾರ ಶಿವನಿಗೆ ವಿಶೇಷ ಅಲಂಕಾರ ಮಾಡಿರುವುದು – ಪ್ರಜಾವಾಣಿ ಚಿತ್ರ

ಹನುಮಂತ ನಗರದಲ್ಲಿರುವ ಶ್ರೀ ಶೇಷ ಮಹಾಬಲಮುರಿ ಗಣಪತಿ ದೇವಸ್ಥಾನದಲ್ಲಿ ಶಿವನ ಮೂರ್ತಿಗೆ ಮಾಡಿರುವ ಅಲಂಕಾರ

ನಾಗಶೆಟ್ಟಿಹಳ್ಳಿ ಟೀಚರ್ಸ್ ಕಾಲೊನಿಯಲ್ಲಿನ ಕಾಶೀ ವಿಶ್ವನಾಥೇಶ್ವರ ಸ್ವಾಮಿ ದೇವಸ್ಥಾನದಲ್ಲಿ 40ನೇ ಶಿವರಾತ್ರಿ ಉತ್ಸವದ ಅಂಗವಾಗಿ ಉಭಯ ಮಾರಮ್ಮ ಕಲಾ ವೃಂದದ ಕಲಾವಿದರು 'ನರಸಿಂಹ ವೈಭವಂ' ಎಂಬ ನೃತ್ಯ ರೂಪಕ ಪ್ರದರ್ಶಿಸಿದರು

ಅಪಾರ್ಟ್‌ಮೆಂಟ್‌ನಲ್ಲಿ ಬೆಂಕಿ: 8 ಕುಟುಂಬಗಳ ರಕ್ಷಣೆ

ಬೆಂಗಳೂರು: ಬಾಣಸವಾಡಿ ಬಳಿಯ ಸ್ಪೆನ್ಸರ್ ಅಪಾರ್ಟ್‌ಮೆಂಟ್ ಸಮುಚ್ಚಯದಲ್ಲಿ ಮಂಗಳವಾರ ಸಂಜೆ ಬೆಂಕಿ ಅವಘಡ ಸಂಭವಿಸಿದ್ದು, ಎಂಟು ಕುಟುಂಬಗಳನ್ನು ಅಗ್ನಿಶಾಮಕ ದಳದ ಸಿಬ್ಬಂದಿ ಹಾಗೂ ಪೊಲೀಸರು ರಕ್ಷಿಸಿದ್ದಾರೆ.

'ಅಪಾರ್ಟ್‌ಮೆಂಟ್ ಸಮುಚ್ಚಯದ ಎರಡನೇ ಮಹಡಿಯಲ್ಲಿರುವ ಫ್ಲ್ಯಾಟ್‌ವೊಂದರ ಕೊಠಡಿಯಲ್ಲಿ ಬೆಂಕಿ ಕಾಣಿಸಿಕೊಂಡಿತ್ತು. ಬಳಿಕ ಇಡೀ ಫ್ಲ್ಯಾಟ್‌ಗೆ ಬೆಂಕಿ ಆವರಿಸಿತ್ತು. ಎರಡನೇ ಮಹಡಿಯಲ್ಲೆಲ್ಲ ದಟ್ಟ ಹೊಗೆ ಆವರಿಸಿತ್ತು' ಎಂದು ಅಗ್ನಿಶಾಮಕ ದಳದ ಸಿಬ್ಬಂದಿ ಹೇಳಿದರು.

'ಸಮುಚ್ಚಯದಲ್ಲಿ 8 ಕುಟುಂಬಗಳಿದ್ದವು. ಹೊಗೆ ನೋಡಿ ಗಾಬರಿಗೊಂಡಿದ್ದ ಮೊದಲ, ಎರಡನೇ ಮಹಡಿಯಲ್ಲಿದ್ದ ನಿವಾಸಿಗಳು ಹೊರಗೆ ಓಡಿ ಬಂದಿದ್ದರು. ಮೂರು, ನಾಲ್ಕನೇ ಮಹಡಿಯವರು ಬರಲು ಸಾಧ್ಯವಾಗಿರಲಿಲ್ಲ. ಅವರಲ್ಲಿ ಮಕ್ಕಳು, ವೃದ್ಧರೂ ಇದ್ದರು' ಎಂದೂ ತಿಳಿಸಿದರು.

ಮಕ್ಕಳ ಸಮೇತ ರಕ್ಷಣೆ: ಘಟನಾ ಸ್ಥಳಕ್ಕೆ ಬಂದಿದ್ದ ಅಗ್ನಿಶಾಮಕ ದಳದ ಸಿಬ್ಬಂದಿ ಹಾಗೂ ಪೊಲೀಸರು, ಜಂಟಿ ಕಾರ್ಯಾಚರಣೆ ಆರಂಭಿಸಿದರು. ಮೂರು, ನಾಲ್ಕನೇ ಮಹಡಿಗೆ ಹೋಗಿದ್ದ ಸಿಬ್ಬಂದಿ, ಅಲ್ಲಿ ಸಿಲುಕಿದ್ದ ಮಕ್ಕಳು ಸೇರಿ ಎಲ್ಲರನ್ನೂ ಸುರಕ್ಷಿತವಾಗಿ ಹೊರಗೆ ಕರೆತಂದರು.

ಉರುಳಿಬಿದ್ದ ತರಕಾರಿ ವಾಹನ: ಇಬ್ಬರ ಸಾವು

ಬೆಂಗಳೂರು: ತರಕಾರಿ ಸಾಗಿಸುತ್ತಿದ್ದ ಗೂಡ್ಸ್ ವಾಹನವೊಂದು ನಗರದ ಅರಮನೆ ರಸ್ತೆಯ ಸಿಐಡಿ ಜಂಕ್ಷನ್‌ನಲ್ಲಿ ಸೋಮವಾರ ರಾತ್ರಿ ಉರುಳಿ ಬಿದ್ದಿದ್ದು, 'ಆಂಧ್ರಪ್ರದೇಶದ ಗೋಪಾಲರೆಡ್ಡಿ (47) ಹಾಗೂ ವೆಂಕಟರೆಡ್ಡಿ (30) ಮೃತಪಟ್ಟಿದ್ದಾರೆ. ಮತ್ತಿಬ್ಬರು ಗಾಯಗೊಂಡಿದ್ದು, ಆಸ್ಪತ್ರೆಗೆ ದಾಖಲುಮಾಡಲಾಗಿದೆ' ಎಂದು ಕಬ್ಬನ್ ಪಾರ್ಕ್ ಸಂಚಾರ ಪೊಲೀಸರು ಹೇಳಿದರು.

'ಆಂಧ್ರಪ್ರದೇಶದಿಂದ ಗೂಡ್ಸ್ ವಾಹನದಲ್ಲಿ ನಗರದ ಕೆ.ಆರ್. ಮಾರುಕಟ್ಟೆಗೆ ತರಕಾರಿ ತರಲಾಗುತ್ತಿತ್ತು. ರಾತ್ರಿ 10 ಗಂಟೆ ಸುಮಾರಿಗೆ ಸಿಐಡಿ ಜಂಕ್ಷನ್ ಬಳಿ ನಿಯಂತ್ರಣ ತಪ್ಪಿದ ಗೂಡ್ಸ್ ವಾಹನ ಉರುಳಿತ್ತು.' ಎಂದರು.

'ಅತೀ ವೇಗದ ಚಾಲನೆಯೇ ಅಪಘಾತಕ್ಕೆ ಕಾರಣ. ಚಾಲಕನು ಗಾಯಗೊಂಡಿದ್ದು, ಆತನ ವಿರುದ್ಧ ಪ್ರಕರಣ ದಾಖಲಿಸಿ, ತನಿಖೆ ಮುಂದುವರಿಸಲಾಗಿದೆ' ಎಂದರು.

ಅತ್ತಿಗುಪ್ಪೆ ಬಳಿ ಅಪಘಾತ: ಬ್ಯಾಟರಾಯನಪುರ ಸಂಚಾರ ಠಾಣೆ ವ್ಯಾಪ್ತಿಯ ಅತ್ತಿಗುಪ್ಪೆ ಬಸ್ ನಿಲ್ದಾಣ ಬಳಿ ಸೋಮವಾರ ರಾತ್ರಿ ಅಪಘಾತ ಸಂಭವಿಸಿದ್ದು, ಅಪರಿಚಿತ ಪಾದಚಾರಿಯೊಬ್ಬರು ಮೃತಪಟ್ಟಿದ್ದಾರೆ. 'ಅಪಘಾತದ ನಂತರ ವಾಹನ ಸಮೇತ ಚಾಲಕ ಪರಾರಿಯಾಗಿದ್ದಾನೆ. ಪ್ರಕರಣ ದಾಖಲಾಗಿದೆ' ಎಂದು ಪೊಲೀಸರು ತಿಳಿಸಿದ್ದಾರೆ.

ಫೋಟೊ ಅಪ್‌ಲೋಡ್ ಮಾಡಿ ಕಿರುಕುಳ

ಬೆಂಗಳೂರು: ಮಹಿಳೆಯ ಫೋಟೊವನ್ನು ಫೇಸ್‌ಬುಕ್ ಜಾಲತಾಣದಲ್ಲಿ ಅಪ್‌ಲೋಡ್ ಮಾಡಿ ಕಿರುಕುಳ ನೀಡುತ್ತಿದ್ದ ಆರೋಪದಡಿ ಚಂದ್ರಶೇಖರ್ ಅಲಿಯಾಸ್ ಡಾರ್ಲಿಂಗ್ (35) ಎಂಬಾತನನ್ನು ಬಾಗಲಗುಂಟೆ ಠಾಣೆ ಪೊಲೀಸರು ಬಂಧಿಸಿದ್ದಾರೆ.

'ಪರಿಚಯಸ್ಥ ಮಹಿಳೆಯ ಬಗ್ಗೆ ಫೇಸ್‌ಬುಕ್ ಖಾತೆಯಲ್ಲಿ ಪೋಸ್ಟ್ ಹಾಕಿದ್ದ ಆರೋಪಿ, ಮಹಿಳೆಯ ಫೋಟೊ, ಮೊಬೈಲ್ ನಂಬರ್ ಸಹ ದಾಖಲಿಸಿ ಕೆಟ್ಟದಾಗಿ ಬರೆದಿದ್ದ. ಮಹಿಳೆ ಜೊತೆ ಸಲುಗೆಗೆ ಆರೋಪಿ ಯತ್ನಿಸಿದ್ದ. ಮಹಿಳೆ ಒಪ್ಪಿರಲಿಲ್ಲ. ಅದೇ ಸಿಟ್ಟಿನಿಂದ ಕೃತ್ಯ ಎಸಗಿದ್ದಾನೆ' ಎಂದು ಪೊಲೀಸರು ತಿಳಿಸಿದ್ದಾರೆ.

ಯುಪಿಎಸ್ ಬ್ಯಾಟರಿ ಕಳವು ಇಬ್ಬರ ಬಂಧನ

ಬೆಂಗಳೂರು: ಕಚೇರಿ, ಮಳಿಗೆಗಳಲ್ಲಿ ಅಳವಡಿಸಿದ್ದ ಯುಪಿಎಸ್ ಬ್ಯಾಟರಿಗಳನ್ನು ಕಳ್ಳತನ ಮಾಡುತ್ತಿದ್ದ ಮೂವರನ್ನು ಚಾಮರಾಜಪೇಟೆ ಠಾಣೆ ಪೊಲೀಸರು ಬಂಧಿಸಿದ್ದು, ₹ 1 ಲಕ್ಷ ಮೌಲ್ಯದ 9 ಯುಪಿಎಸ್ ಬ್ಯಾಟರಿ ಜಪ್ತಿ ಮಾಡಿದ್ದಾರೆ.

ಇಮ್ರಾನ್, ಶಂಶೀರ್ ಹಾಗೂ ಸುಹೇಲ್ ಬಂಧಿತರು. ಠಾಣೆ ವ್ಯಾಪ್ತಿಯ ಮಳಿಗೆಯೊಂದರಿಂದ ಜ.4ರಂದು 5 ಯುಪಿಎಸ್ ಬ್ಯಾಟರಿ ಕಳವು ಮಾಡಲಾಗಿದ್ದು, ಈ ಬಗ್ಗೆ ಪ್ರಕರಣ ದಾಖಲಾಗಿತ್ತು.

ಸ್ಪಾ ಮೇಲೆ ದಾಳಿ: ಮೂವರು ಯುವತಿಯರ ರಕ್ಷಣೆ

ಬೆಂಗಳೂರು: ಹೆಸರಘಟ್ಟ ಮುಖ್ಯರಸ್ತೆಯಲ್ಲಿರುವ 'ಸ್ಕೈ ಯುನಿಸೆಕ್ಸ್ ಸಲೂನ್ ಆ್ಯಂಡ್ ಸ್ಪಾ' ಮೇಲೆ ಸಿಸಿಬಿ ಪೊಲೀಸರು ಸೋಮವಾರ ದಾಳಿ ಮಾಡಿದ್ದು, ಮೂವರು ಯುವತಿಯರನ್ನು ರಕ್ಷಿಸಿದ್ದಾರೆ. 'ಉದ್ಯೋಗದ ಆಮಿಷವೊಡ್ಡಿ ಹೊರರಾಜ್ಯದಿಂದ ಯುವತಿಯರನ್ನು ಕರೆಸಿದ್ದು, ವೇಶ್ಯಾವಾಟಿಕೆ ನಡೆಸಲಾಗುತ್ತಿತ್ತು. ಸ್ಪಾದಲ್ಲಿ ಕೆಲಸ ಮಾಡುತ್ತಿದ್ದ ಯುವತಿ, ಗ್ರಾಹಕರೊಬ್ಬರನ್ನು ಬಂಧಿಸಲಾಗಿದೆ' ಎಂದು ಸಿಸಿಬಿ ಮೂಲಗಳು ಹೇಳಿವೆ.

ಬಿಸ್ಕೆಟ್, ಮ್ಯಾಗಿ ಪೊಟ್ಟಣದಲ್ಲಿ ಗಾಂಜಾ

ಬೆಂಗಳೂರು: ಬಿಸ್ಕೆಟ್,ಮ್ಯಾಗಿ ನೂಡಲ್ಸ್ ಪೊಟ್ಟಣಗಳಲ್ಲಿ ಗಾಂಜಾ ಬಚ್ಚಿಟ್ಟು ಸಾಗಿಸುತ್ತಿದ್ದ ಇಬ್ಬರನ್ನು ಮಹಾಲಕ್ಷ್ಮಿ ಲೇಔಟ್ ಠಾಣೆಯ ಪೊಲೀಸರು ಬಂಧಿಸಿದ್ದು, ಅವರಿಂದ 80 ಕೆ.ಜಿ ಗಾಂಜಾ ವಶಪಡಿಸಿಕೊಂಡಿದ್ದಾರೆ.

ಗೌತಮ್ ಮತ್ತು ಅಬ್ದುಲ್ ರಫೀಕ್ ಬಂಧಿತರು. 'ಠಾಣೆಯ ವ್ಯಾಪ್ತಿಯಲ್ಲಿ ಗಾಂಜಾ ಸೇವಿಸುವಾಗ ಸಿಕ್ಕಿಬಿದ್ದಿದ್ದ ಶ್ರೀರಾಮಪುರದ ಮುತ್ತುರಾಜ್, ಈ ಇಬ್ಬರು ಆಂಧ್ರಪ್ರದೇಶದಿಂದ ಗಾಂಜಾ ತಂದು ಮಾರುತ್ತಿದ್ದ ಕುರಿತು ಮಾಹಿತಿ ನೀಡಿದ್ದ' ಎಂದೂ ಪೊಲೀಸ್ ಮೂಲಗಳು ಹೇಳಿವೆ.

ಆಂಧ್ರಪ್ರದೇಶದಿಂದ ಗೂಡ್ಸ್ ವಾಹನದಲ್ಲಿ ಫೆ.24ರಂದು ಗಾಂಜಾ ತರುತ್ತಿರುವ ಕುರಿತ ಮಾಹಿತಿ ಆಧರಿಸಿ ಮಹಾಲಕ್ಷ್ಮಿ ಲೇಔಟ್ ಮೆಟ್ರೊ ನಿಲ್ದಾಣದ ಸಮೀಪ ದಾಳಿ ನಡೆಸಿದರು' ಎಂದೂ ತಿಳಿಸಿವೆ.

ಅಪರಾಧ ಸುದ್ದಿ

ಸುಲಿಗೆಗೆ ಸಂಚು: ರೌಡಿ 'ನಾಯಿ' ಬಂಧನ

ಬೆಂಗಳೂರು: ಸಾರ್ವಜನಿಕರನ್ನು ಅಡ್ಡಗಟ್ಟಿ ಸುಲಿಗೆ ಮಾಡಲು ಸಂಚು ರೂಪಿಸಿದ್ದ ಆರೋಪದಡಿ ರೌಡಿ ಸಂತೋಷ್ ಕುಮಾರ್ ಅಲಿಯಾಸ್ ನಾಯಿಯನ್ನು (23) ಸಿಸಿಬಿ ಪೊಲೀಸರು ಬಂಧಿಸಿದ್ದಾರೆ.

'ಹುಳಿಮಾವು ಠಾಣೆ ವ್ಯಾಪ್ತಿಯ ಅರಕೆರೆ ಬಳಿ ಫೆ.27ರಂದು ಮಾರಕಾಸ್ತ್ರ ಸಮೇತ ರೌಡಿ ಕಾಣಿಸಿಕೊಂಡಿದ್ದ. ಪಾದಚಾರಿಗಳ ಸುಲಿಗೆಗೆ ಹೊಂಚು ಹಾಕಿದ್ದ. ಆತನನ್ನು ಬಂಧಿಸಲಾಗಿದೆ' ಎಂದು ಪೊಲೀಸರು ಹೇಳಿದರ.

'ಕೋಣನಕುಂಟೆ ಠಾಣೆ ವ್ಯಾಪ್ತಿಯಲ್ಲಿ 2017ರಲ್ಲಿ ನಡೆದಿದ್ದ ಜೋಡಿ ಕೊಲೆ ಪ್ರಕರಣದಲ್ಲಿ ಈತ ಆರೋಪಿಯಾಗಿದ್ದ. ಅದೇ ಠಾಣೆಯ ರೌಡಿ ಪಟ್ಟಿಯಲ್ಲಿ ಆತನ ಹೆಸರಿದೆ' ಎಂದೂ ಮೂಲಗಳು ತಿಳಿಸಿವೆ.

ದ್ವಿಚಕ್ರವಾಹನಕ್ಕೆ ಲಾರಿ ಡಿಕ್ಕಿ: ವಿದ್ಯಾರ್ಥಿ ಸಾವು

ಯಲಹಂಕ: ಯಲಹಂಕ-ದೊಡ್ಡಬಳ್ಳಾಪುರ ಮುಖ್ಯರಸ್ತೆಯ ಹೊನ್ನೇನಹಳ್ಳಿ ಗೇಟ್ ಬಳಿ ಮಂಗಳವಾರ ಬೆಳಿಗ್ಗೆ ಲಾರಿ ಮತ್ತು ದ್ವಿಚಕ್ರವಾಹನ ನಡುವೆ ನಡೆದ ಅಪಘಾತದಲ್ಲಿ ಹೆಬ್ಬಾಳ ನಿವಾಸಿ, ಯಲಹಂಕದ ಸರ್ಕಾರಿ ಪಿಯು ಕಾಲೇಜಿನ ವಿದ್ಯಾರ್ಥಿ ತರುಣ್(18) ಮೃತಪಟ್ಟಿದ್ದಾರೆ.

ಸ್ನೇಹಿತನೊಂದಿಗೆ ದ್ವಿಚಕ್ರವಾಹನದಲ್ಲಿ ದೊಡ್ಡಬಳ್ಳಾಪುರಕ್ಕೆ ತೆರಳುವಾಗ ಅಪಘಾತ ಸಂಭವಸಿದೆ. ತರುಣ್ ಸ್ಥಳದಲ್ಲೇ ಮೃತಪಟ್ಟಿದ್ದು, ಸ್ನೇಹಿತನಿಗೆ ಸಣ್ಣಪುಟ್ಟ ಗಾಯಗಳಾಗಿವೆ. ರಾಜಾನುಕುಂಟೆ ಠಾಣೆಯಲ್ಲಿ ಪ್ರಕರಣ ದಾಖಲಿಸಿಕೊಂಡಿದ್ದು, ಚಾಲಕನನ್ನು ಬಂಧಿಸಿದ್ದಾರೆ.

PUBLIC NOTICE

My clients have negotiated to purchase property presently bearing Municipal No.3 (Old No.9 & 10), BTM Ist Stage, Ist Phase, 20th Main Road, Bengaluru, situated in BBMP Ward No.172 (Old No.65) (Shakhambarinagar), Bengaluru, PID No.65-32-03, which is more fully described in the Schedule below from its owners, **M/s VEERA RAGHAVA (VR) CONSTRUCTIONS Pvt Ltd,** having its registered office at No.129, Veera Raghava Krupa, 1st Main 1st Cross, Muneshwara Layout, Bommanahalli, Bengaluru - 560 068, Rep by its authorized Signatory and Managing Director **Sri Raghavappa Krishna Murthy** and Director **Smt Chikka Yellappa Narayana Reddy,** (hereinafter referred to as Owners) who has represented that they are the only Directors of the said Company.

The owners have represented that they had acquired the title to the Schedule Property in the following manner:-

1. The Schedule Property was originally owned by Sri Hanumanthappa who has sold the same in favour of Smt YU HSUE MI, D/o Late Yu Tao Fung, in pursuance of a registered Sale Deed dated 30.04.1984, registered as Document No.357/1984-85, in Book I, Volume 828, at pages 76 to 80, registered in the Office of the Sub Registrar, Jayanagar Bangalore. The Owner has represented that the Certified Copy of the said Sale Deed was only furnished to them by the predecessor in title, as the originals document was not forthcoming.
2. Smt YU HSUE MI, D/o Late Yu Tao Fung, represented by her GPA Holder Sri FRANCIS HUANG, has sold site bearing No.10, forming a portion of Schedule Property, jointly in favour of Sri CHIANG KHUN SHAN SYIEM alias FRANCIS CHIANG and Smt VIRGINIA WONG, in pursuance of a registered Sale Deed dated 31.01.1995 / 02.02.1995, registered as Document No.3321/1984-85, in Book I, Volume 1809, at pages 01 to 06, registered in the Office of the Sub Registrar, Jayanagar Bangalore.
3. Smt YU HSUE MI, D/o Late Yu Tao Fung, represented by her GPA Holder Sri FRANCIS HUANG, has sold site bearing No.09, forming a portion of Schedule Property in favour of Sri CHIANG KHUN SHAN SYIEM alias FRANCIS CHIANG and Smt VIRGINIA WONG, in pursuance of a registered Sale Deed dated 31.01.1995 / 02.02.1995, registered as Document No.3322/1984-85, in Book I, Volume 1809, at pages 76 to 82, registered in the Office of the Sub Registrar, Jayanagar Bangalore. The Owner has represented that the Certified Copy of the said Sale Deed was only furnished to them by the predecessor in title, as the originals document was not forthcoming.
4. Sri CHIANG KHUN SHAN SYIEM alias FRANCIS CHIANG and Smt VIRGINIA WONG, both represented by their General Power of Attorney have executed a Sale Deed dated 23.02.1999 / 23.06.1999, registered as Document No.BNG(U)JNR 910/1999-2000, stored in CD No.ICD-003, registered in the Office of the Sub Registrar, Jayanagar Bangalore, conveying the entire Schedule Property, in favour of Sri K.RAMACHANDRA.
5. Sri K.RAMACHANDRA has executed a Sale Deed dated 03.07.2000 / 17.07.2000, registered as Document No.1181/2000-2001, in Book I, Volume 2232 at pages 88 to 104, registered in the Office of the Sub Registrar, Jayanagar Bangalore, conveying the entire Schedule Property, in favour of M/s TAJ FASHIONS PRIVATE LTD, Represented by its Managing Director, Sir S.A.HAFEZ SURTHI.
6. **M/s TAJ FASHIONS PRIVATE LTD,** Represented by its Managing Director, Sri SURTHI ABDUL HAFEEZ SURTHI and its Director Smt MUMTAZ BEGUM, who claim to be the only Directors, have executed an unregistered Sale Agreement dated 02.11.2019 agreeing to convey the Schedule Property in favour of in favour of Sri RAGHAVAPPA KRISHNA MURTHY.
7. Sri RAGHAVAPPA KRISHNA MURTHY has in pursuance of an unregistered Assignment Deed dated 02.11.2019 has assigned his right, title and interest acquired in pursuance of the above mentioned Un registered Agreement in favour of **M/s VEERA RAGHAVA (VR) CONSTRUCTIONS Pvt Ltd,** having its registered office at No.129, Veera Raghava Krupa, 1st Main 1st Cross, Muneshwara Layout, Bommanahalli, Bengaluru - 560 068, Rep by its authorized Signatory and Managing Director **Sri Raghavappa Krishna Murthy** and Director **Smt Chikka Yellappa Narayana Reddy,** who has represented that they are the only Directors of the said Company.
8. **M/s TAJ FASHIONS PRIVATE LTD,** Represented by its Managing Director, Sri SURTHI ABDUL HAFEEZ SURTHI and its Director Smt MUMTAZ BEGUM, who claim to be the only Directors, have in pursuance of a registered Sale Deed dated 16.01.2020 / 17.01.2020, registered as Document No.SHR-1-04565-2019-2020, stored in C.D.No.SHRD 405, registered in the Office of the Sub Registrar, Shanthinagar (Jayanagar) Bangalore, sold the Schedule Property in favour of **M/s VEERA RAGHAVA (VR) CONSTRUCTIONS Pvt Ltd,** Rep by its authorized Signatory and Managing Director **Sri Raghavappa Krishna Murthy** and Director **Smt Chikka Yellappa Narayana Reddy,** who has represented that they are the only Directors of the said Company. Sri RAGHAVAPPA KRISHNA MURTHY has attested his signature to the Sale Deed as Confirming Party, forgoing his rights acquired in pursuance of the un-registered Agreement of Sale dated 02.11.2019.

Subsequent to the same the Owners have got their entered as the Kathedars in the jurisdictional revenue authorities and are in peaceful possession of the Schedule Property. Further the Owners have put up construction by demolishing the existing old building after obtaining necessary approvals from the concerned authorities.

The Owners have represented that they have obtained a financial assistance by mortgaging the Schedule Property with **The National Co-operative Bank, Kormangala Branch, Bangalore** and that except for the same there are no other charges on the Schedule Property.

Any person/s having any right, title, interest, lien, charge or claim whatsoever in, upon or to the Schedule Property or to any portion thereof, by way of any easement or under agreements, arrangements, lease, trust, inheritance, gift, partition, bequest, possession, succession, mortgage, exchange or under any deed/instrument easement or however otherwise, may submit his/her/its/their objection/s claim/s, in writing to me at the under mentioned address, through Registered Post, along with the supporting documentary evidence, within 7 days of the issuance of this notice, failing which my clients will proceed on the basis that there are no claims over the Schedule Property, to complete the sale transaction.

SCHEDULE

All that property presently bearing Municipal No.3 (Old No.9 & 10), BTM Ist Stage, Ist Phase, 20th Main Road, Bengaluru, situated in BBMP Ward No.172 (Old No.65) (Shakhambarinagar), Bengaluru, PID No.65-32-03, together with standing structures on its consisting of 6 ½ Floors, measuring East to West: 80 Feet and North to South: 30 Feet, in all measuring 2400 Square Feet and bounded as follows:-

ON THE EAST : Road;
WEST : Road;
NORTH : Site No.23 and 24;
SOUTH : Site No.7 and 8;

M.S. Vijayasarathy, Advocate,
Lex Nexus
Advocates and Solicitors
22, First Floor, Viswanatha Rao Road
(Yadava College Road), Madhavanagar, Bengaluru - 560 001.
Mobile No.9845381000. E-mail: vijayasar144@yahoo.com

Bangalore.
Dated 01.03.2022

ಕಾಂಗ್ರೆಸ್ ಪಾದಯಾತ್ರೆಗೆ ಹರಿದುಬಂದ ಜನಸಾಗರ • ಹತ್ತಾರು ಸಾವಿರ ಮಂದಿಯೊಂದಿಗೆ ಹೆಜ್ಜೆ ಹಾಕಿದ ಕೈ ನಾಯಕರು

ರಾಜಧಾನಿಯಲ್ಲಿ 'ನೀರಿಗಾಗಿ ನಡಿಗೆ'ಯ ಅಬ್ಬರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮೇಕೆದಾಟು ಯೋಜನೆ ಅನುಷ್ಠಾನಕ್ಕೆ ಆಗ್ರಹಿಸಿ ಕಾಂಗ್ರೆಸ್ ಹಮ್ಮಿಕೊಂಡಿರುವ ಎರಡನೇ ಹಂತದ ಪಾದಯಾತ್ರೆಯ ಮೂರನೇ ದಿನವಾದ ಮಂಗಳವಾರ 'ನೀರಿಗಾಗಿ ನಡಿಗೆ'ಯಲ್ಲಿ ಹತ್ತಾರು ಸಾವಿರ ಜನ ಹೆಜ್ಜೆ ಹಾಕಿದರು. ಬೆಂಗಳೂರಿನ ಹಲವು ವಿಧಾನಸಭಾ ಕ್ಷೇತ್ರಗಳೂ ಸೇರಿದಂತೆ ರಾಜ್ಯದ ವಿವಿಧೆಡೆಯಿಂದ ಪಾದಯಾತ್ರೆಗೆ ಜನಸಾಗರವೇ ಹರಿದುಬಂದಿತ್ತು.

ರಾಜರಾಜೇಶ್ವರಿ ನಗರ, ವಿಜಯನಗರ, ಗೋವಿಂದರಾಜನಗರ, ಬಸವನಗುಡಿ, ಪದ್ಮನಾಭನಗರ ಮತ್ತು ಜಯನಗರ ವಿಧಾನಸಭಾ ಕ್ಷೇತ್ರಗಳ ವ್ಯಾಪ್ತಿಯಲ್ಲಿ ಕಾಂಗ್ರೆಸ್ ನಾಯಕರು ಹೋರಾಟದ ಕಹಳೆ ಮೊಳಗಿಸಿದರು. ಬಿಸಿಲ ಝಳವನ್ನೂ ಲೆಕ್ಕಿಸದೆ ಹೆಜ್ಜೆಹಾಕಿದ ಕೈ ಪಡೆ, ಮೇಕೆದಾಟು ಯೋಜನೆ ಅನುಷ್ಠಾನದ ವಿಚಾರದಲ್ಲಿ ಬಿಜೆಪಿ ಸರ್ಕಾರ ನಿರಾಸಕ್ತಿ ಹೊಂದಿದೆ ಎಂಬ ಸಂದೇಶವನ್ನು ರಾಜಧಾನಿಯ ನಾಗರಿಕರಿಗೆ ತಲುಪಿಸಲು ಯತ್ನಿಸಿದರು.

ಪಟ್ಟಣಗೆರೆಯ ಪೂರ್ಣಿಮಾ ಕನ್ವೆನ್ಷನ್ ಹಾಲ್‌ನಿಂದ ಬೆಳಿಗ್ಗೆ ಪಾದಯಾತ್ರೆ ಆರಂಭವಾಯಿತು. ಹೊರಟ ಪಾದಯಾತ್ರೆ ನಾಯಂಡನಹಳ್ಳಿ, ನಾಯಂಡನಹಳ್ಳಿ ಜಂಕ್ಷನ್, ಪಿಇಎಸ್ ಕಾಲೇಜು ಜಂಕ್ಷನ್, ಕತ್ರಿಗುಪ್ಪೆ ಮುಖ್ಯ ರಸ್ತೆ ಜಂಕ್ಷನ್ ಮಾರ್ಗವಾಗಿ ಕಾಮಾಕ್ಯ ಜಂಕ್ಷನ್‌ನ ವೆಂಕಟಾದ್ರಿ ಕಲ್ಯಾಣ ಮಂಟಪ ತಲುಪಿತು. ಅಲ್ಲಿ ಊಟ, ವಿಶ್ರಾಂತಿ ಬಳಿಕ ಮತ್ತೆ ಆರಂಭವಾದ ನಡಿಗೆ ಕದಿರೇನಹಳ್ಳಿ ಜಂಕ್ಷನ್, ಬನಶಂಕರಿ ದೇವಾಲಯ, ಜಯದೇವ ಆಸ್ಪತ್ರೆ ಮಾರ್ಗವಾಗಿ ಅದ್ವೈತ್ ಪೆಟ್ರೋಲ್ ಬಂಕ್ ಬಳಿಗೆ ತಲುಪಿತು. ಇದರೊಂದಿಗೆ ಮೂರನೇ ದಿನ 15 ಕಿ.ಮೀ. ಕ್ರಮಿಸಿತು.

ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್, ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ, ವಿಧಾನ ಪರಿಷತ್ ನಾಯಕ ಬಿ.ಕೆ. ಹರಿಪ್ರಸಾದ್, ಕೆಪಿಸಿಸಿ ಕಾರ್ಯಾಧ್ಯಕ್ಷರಾದ ರಾಮಲಿಂಗಾ ರೆಡ್ಡಿ, ಸಲೀಂ ಅಹ್ಮದ್, ವಿಧಾನಸಭೆ ವಿರೋಧ ಪಕ್ಷದ ಉಪ ನಾಯಕ ಯು.ಟಿ. ಖಾದರ್, ಸಂಸದ ಡಿ.ಕೆ. ಸುರೇಶ್, ಶಾಸಕರಾದ ಎಂ. ಕೃಷ್ಣಪ್ಪ, ಪ್ರಿಯಾಂಕ್ ಖರ್ಗೆ, ಮಾಜಿ ಶಾಸಕ ಪ್ರಿಯಕೃಷ್ಣ, ರಾಜರಾಜೇಶ್ವರಿನಗರ ವಿಧಾನಸಭಾ ಕ್ಷೇತ್ರದ ಪರಾಜಿತ ಅಭ್ಯರ್ಥಿ ಕುಸುಮಾ ಸೇರಿದಂತೆ ಹಲವು ನಾಯಕರು, ಮುಖಂಡರು ಪಾದಯಾತ್ರೆಯಲ್ಲಿ ಪಾಲ್ಗೊಂಡು ಕಾರ್ಯಕರ್ತರನ್ನು ಹುರಿದುಂಬಿಸಿದರು.

ಪಾದಯಾತ್ರೆ ಸಾಗಿದ ವಿಧಾನಸಭಾ ಕ್ಷೇತ್ರಗಳ ವ್ಯಾಪ್ತಿಯ ಜನರಲ್ಲದೇ ಯಶವಂತಪುರ, ನೆಲಮಂಗಲ, ಬೆಂಗಳೂರು ದಕ್ಷಿಣ, ಬೊಮ್ಮನಹಳ್ಳಿ, ಕುಣಿಗಲ್ ಸೇರಿದಂತೆ ಇತರ ಕ್ಷೇತ್ರಗಳ ಸಾವಿರಾರು ಜನರು ನಡಿಗೆಯಲ್ಲಿ ಭಾಗಿಯಾಗಿದ್ದರು. ರಾಜರಾಜೇಶ್ವರಿನಗರ, ವಿಜಯನಗರ ಮತ್ತು ಗೋವಿಂದರಾಜನಗರ ವಿಧಾನಸಭಾ ಕ್ಷೇತ್ರಗಳ ವ್ಯಾಪ್ತಿಯಲ್ಲಿ ಪಾದಯಾತ್ರೆ ಸಾಗಿ ಬರುತ್ತಿದ್ದಾಗ ಒಮ್ಮೆಲೇ ಹತ್ತಾರು ಸಾವಿರ ಮಂದಿ ಸೇರಿಕೊಂಡು ಕಾಂಗ್ರೆಸ್ ನಾಯಕರಿಗೆ ಜೈಕಾರ ಹಾಕಿದರು.

ಅದ್ದೂರಿ ಸ್ವಾಗತ: ಪಾದಯಾತ್ರೆಯ ಸಾಗಿ ಬರುತ್ತಿದ್ದಾಗ ನಾಯಂಡನಹಳ್ಳಿ, ವಿಜಯನಗರ, ಗೋವಿಂದರಾಜನಗರ ಮತ್ತಿತರ ಕಡೆಗಳಲ್ಲಿ ಹಿರಿಯ ನಾಯಕರು ಪಾದಯಾತ್ರೆಯಲ್ಲಿ ಬಂದಾಗ ಸ್ಥಳೀಯ ಮುಖಂಡರು ಜೆಸಿಬಿಗಳಿಂದ ಹೂಮಳೆ ಸುರಿಸಿ ಸ್ವಾಗತಿಸಿದರು. ಕೆಲವೆಡೆ ಬೃಹತ್ ಹೂವಿನ ಹಾರ, ಸೇಬು ಹಣ್ಣುಗಳ ಹಾರ ಹಾಕಿ ನಾಯಕರನ್ನು ಗೌರವಿಸಿದರು.

ಪೂರ್ಣಕುಂಭ ಹೊತ್ತ ಮಹಿಳೆಯರು ಪಾದಯಾತ್ರೆಯುದ್ದಕ್ಕೂ ಹೆಜ್ಜೆ ಹಾಕಿದರು. ತಮಟೆ, ವೀರಗಾಸೆ, ಡೊಳ್ಳು ಕುಣಿತ ಸೇರಿದಂತೆ ವಿವಿಧ ಬಗೆಯ ಕಲಾ ತಂಡಗಳು ಪಾದಯಾತ್ರೆಯ ಮೆರುಗು ಹೆಚ್ಚಿಸಿದ್ದವು

ಕಾಂಗ್ರೆಸ್ ಪಕ್ಷವು ಹಮ್ಮಿಕೊಂಡಿರುವ 'ನೀರಿಗಾಗಿ ನಡಿಗೆ' ಪಾದಯಾತ್ರೆ ಬೆಂಗಳೂರಿನ ನಾಯಂಡಹಳ್ಳಿಯಲ್ಲಿ ಮಂಗಳವಾರ ಸಾಗಿ ಬರುತ್ತಿದ್ದಾಗ ನಡಿಗೆಯಲ್ಲಿ ಪಾಲ್ಗೊಂಡಿದ್ದ ಜನಸ್ತೋಮ – ಪ್ರಜಾವಾಣಿ ಚಿತ್ರ

ವಿಡಿಯೊ ನೋಡಲು ಕೋಡ್ ಸ್ಕ್ಯಾನ್ ಮಾಡಿ
ಪ್ರಜಾವಾಣಿ ನೋಡಿಯೊ

ದಾರಿಯುದ್ದಕ್ಕೂ ಆತಿಥ್ಯ

ಬಿಸಿಲ ಝಳ ಹೆಚ್ಚಾಗಿದ್ದರೂ ಪಾದಯಾತ್ರೆಯಲ್ಲಿ ಪಾಲ್ಗೊಂಡಿದ್ದವರು ಬಳಲದಂತೆ ಆತಿಥ್ಯದ ವ್ಯವಸ್ಥೆ ಮಾಡಲಾಗಿತ್ತು. ಅಲ್ಲಲ್ಲಿ ಅರವಟಿಗೆಗಳನ್ನು ಸ್ಥಾಪಿಸಿ ಕಬ್ಬಿನ ಹಾಲು, ಎಳನೀರು, ನೀರು, ನಂದಿನಿ ತಂಪು ಪಾನೀಯಗಳ ವಿತರಣೆಗೆ ವ್ಯವಸ್ಥೆ ಮಾಡಲಾಗಿತ್ತು.

ಸೇಬು, ದ್ರಾಕ್ಷಿ, ಕಿತ್ತಳೆ, ಕಲ್ಲಂಗಡಿ, ಕರಬೂಜ, ಬಾಳೆಹಣ್ಣು ಸೇರಿದಂತೆ ನಾನಾ ಬಗೆಯ ಹಣ್ಣುಗಳನ್ನು ಯಥೇಚ್ಛವಾಗಿ ಪೂರೈಸಲಾಗಿತ್ತು. ಮಹಿಳೆಯರು ಮತ್ತು ಮಕ್ಕಳು ಹೊಟ್ಟೆ ಭರ್ತಿಯಾಗುವಷ್ಟು ಹಣ್ಣುಗಳನ್ನು ತಿಂದ ಬಳಿಕ ಚೀಲಗಳಲ್ಲಿ ಕೊಂಡೊಯ್ಯುತ್ತಿದ್ದ ದೃಶ್ಯ ಕಂಡುಬಂತು.

ಮಧ್ಯಾಹ್ನ ಮತ್ತು ರಾತ್ರಿಯ ಊಟದ ವ್ಯವಸ್ಥೆಯನ್ನೂ ಅಚ್ಚುಕಟ್ಟಾಗಿ ಮಾಡಲಾಗಿತ್ತು. ಎಲ್ಲಿಯೂ ಆಹಾರದ ಕೊರತೆ ಆಗದಂತೆ ಕಾಂಗ್ರೆಸ್ ನಾಯಕರು ಎಚ್ಚರ ವಹಿಸಿದ್ದರು.

'ಬಿಜೆಪಿಯಿಂದ ವಿಳಂಬ ದ್ರೋಹ'

ಬೆಂಗಳೂರು: ಮೇಕೆದಾಟು ಯೋಜನೆಗೆ ಅನುಮತಿ ಪಡೆಯುವ ವಿಚಾರದಲ್ಲಿ ಬಿಜೆಪಿ ಸರ್ಕಾರ ವಿಳಂಬ ದ್ರೋಹ ಮಾಡುತ್ತಿದೆ ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಆರೋಪಿಸಿದರು.

ಮೇಕೆದಾಟು ಯೋಜನೆ ಅನುಷ್ಠಾನಕ್ಕೆ ಆಗ್ರಹಿಸಿ ಕಾಂಗ್ರೆಸ್ ಪಕ್ಷ ನಡೆಸುತ್ತಿರುವ ಪಾದಯಾತ್ರೆಯಲ್ಲಿ ಪಾಲ್ಗೊಂಡಿದ್ದ ಅವರು ವಿಜಯನಗರ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಮಂಗಳವಾರ ಸಾರ್ವಜನಿಕರನ್ನುದ್ದೇಶಿಸಿ ಮಾತನಾಡಿದರು.

'ಕಾಂಗ್ರೆಸ್ ಸರ್ಕಾರದ ಅವಧಿಯಲ್ಲೇ ಮೇಕೆದಾಟು ಯೋಜನೆಗೆ ವಿಸ್ತೃತ ಯೋಜನಾ ವರದಿ (ಡಿಪಿಆರ್) ಸಿದ್ಧಪಡಿಸಲಾಗಿತ್ತು. ಕಾಂಗ್ರೆಸ್- ಜೆಡಿಎಸ್ ಸಮ್ಮಿಶ್ರ ಸರ್ಕಾರದಲ್ಲಿ ಜಲ ಸಂಪನ್ಮೂಲ ಸಚಿವರಾಗಿದ್ದ ಡಿ.ಕೆ. ಶಿವಕುಮಾರ್ ಪರಿಷ್ಕೃತ ಡಿಪಿಆರ್ ಸಲ್ಲಿಸಿದ್ದರು. ಬಿಜೆಪಿ ಸರ್ಕಾರ ಬಂದು ಮೂರು ವರ್ಷ ಸಮೀಪಿಸುತ್ತಿದೆ. ಯೋಜನೆ ಅನುಷ್ಠಾನಕ್ಕೆ ಯಾವ ಕ್ರಮವನ್ನೂ ಕೈಗೊಂಡಿಲ್ಲ' ಎಂದರು.

ಕೇಂದ್ರದಲ್ಲೂ ಬಿಜೆಪಿ ಸರ್ಕಾರ ಇದೆ. ರಾಜ್ಯದಲ್ಲೂ ಬಿಜೆಪಿಯೇ ಆಡಳಿತ ನಡೆಸುತ್ತಿದೆ. ಮೇಕೆದಾಟು ಯೋಜನೆ ಅನುಷ್ಠಾನಕ್ಕೆ ಪರಿಸರ ಇಲಾಖೆಯ ಅನುಮತಿ ಪಡೆಯಲು ಸಾಧ್ಯವಾಗಿಲ್ಲ. ಇದರಿಂದಾಗಿ ಯೋಜನೆ ಅನುಷ್ಠಾನ ವಿಳಂಬವಾಗುತ್ತಿದೆ. ಈ ವಿಚಾರದಲ್ಲಿ ಬಿಜೆಪಿ ಸರ್ಕಾರ ವಿಳಂಬ ದ್ರೋಹ ಮಾಡುತ್ತಿದೆ ಎಂದು ವಾಗ್ದಾಳಿ ನಡೆಸಿದರು.

ವಿಜಯನಗರ ಶಾಸಕ ಎಂ. ಕೃಷ್ಣಪ್ಪ ಮಾತನಾಡಿ, 'ಬಿಜೆಪಿಯವರು 'ಡಬ್ಬಲ್ ಎಂಜಿನ್' ಸರ್ಕಾರ ಎಂದು ಹೇಳಿಕೊಳ್ಳುತ್ತಿದ್ದಾರೆ. ಈ ಸರ್ಕಾರದಲ್ಲಿ 'ಸಿಂಗಲ್ ಎಂಜಿನ್' ಕೂಡ ಕೆಲಸ ಮಾಡುತ್ತಿಲ್ಲ. ಎಂಜಿನ್ ನಿಂತಲ್ಲೇ ನಿಂತಿದೆ. ಹೀಗಾಗಿ ಮೇಕೆದಾಟು ಯೋಜನೆ ಆರಂಭಕ್ಕೆ ಅವಕಾಶ ಸಿಕ್ಕಿಲ್ಲ' ಎಂದರು.

ಬಿಜೆಪಿ ಸರ್ಕಾರ ಜನರ ಪರವಾಗಿ ಕೆಲಸ ಮಾಡುವುದಿಲ್ಲ. ಬೆಂಗಳೂರಿನ ಜನರ ಸಮಸ್ಯೆ ಪರಿಹರಿಸುವ ಆಸಕ್ತಿ ಸರ್ಕಾರಕ್ಕೆ ಇಲ್ಲ. ಮುಂದೆ ಕಾಂಗ್ರೆಸ್ ಸರ್ಕಾರ ಬಂದ ಬಳಿಕ ಮೇಕೆದಾಟು ಯೋಜನೆಯನ್ನು ತ್ವರಿತವಾಗಿ ಅನುಷ್ಠಾನಕ್ಕೆ ತರಲಾಗುವುದು ಎಂದು ಹೇಳಿದರು.

ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಮಾತನಾಡಿ, 'ಗುರುವಾರ ಈ ಪಾದಯಾತ್ರೆ ಸಮಾರೋಪಗೊಳ್ಳಲಿದೆ. ವಿಜಯನಗರ ಮತ್ತು ಸುತ್ತಮುತ್ತಲಿನ ಜನರು ಮೆಟ್ರೊ ರೈಲು ಬಳಸಿಕೊಂಡೇ ಬಸವನಗುಡಿಯ ನ್ಯಾಷನಲ್ ಕಾಲೇಜು ಮೈದಾನಕ್ಕೆ ಹೆಚ್ಚಿನ ಸಂಖ್ಯೆಯಲ್ಲಿ ಬರಬೇಕು' ಎಂದು ಕೇಳಿಕೊಂಡರು.

ಸಂಸದ ಡಿ.ಕೆ. ಸುರೇಶ್, ಮಾಜಿ ಸಚಿವ ಬಿ. ರಮಾನಾಥ ರೈ, ಮಾಜಿ ಶಾಸಕ ಪ್ರಿಯಕೃಷ್ಣ, ಮುಖಂಡರಾದ ಎಂ. ನಾರಾಯಣಸ್ವಾಮಿ, ಕುಸುಮಾ ಸಭೆಯಲ್ಲಿದ್ದರು.

ಸುದ್ದಿ 2 ನಿಮಿಷ

ಗ್ರಾಮ ಪಂಚಾಯಿತಿ ಸದಸ್ಯರ ಗೌರವಧನ ಹೆಚ್ಚಳಕ್ಕೆ ಆಗ್ರಹ

ಶಿವಮೊಗ್ಗ: ಗ್ರಾಮ ಪಂಚಾಯಿತಿ ಸದಸ್ಯರ ಗೌರವಧನ, ದಿನಭತ್ಯೆ ಹೆಚ್ಚಳಕ್ಕೆ ಆಗ್ರಹಿಸಿ ಡಿ.ಎಸ್. ಅರುಣ್ ಸೇರಿ ವಿಧಾನ ಪರಿಷತ್ತಿನ ಹಲವು ಸದಸ್ಯರು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಗ್ರಾಮೀಣಾಭಿವೃದ್ಧಿ ಸಚಿವ ಕೆ.ಎಸ್. ಈಶ್ವರಪ್ಪ ಅವರಿಗೆ ಮನವಿ ಸಲ್ಲಿಸಿದ್ದಾರೆ.

ಹಲವು ವರ್ಷಗಳಿಂದ ಅತ್ಯಂತ ಕಡಿಮೆ ಗೌರವಧನ ನೀಡಲಾಗುತ್ತಿದೆ. ಅಧ್ಯಕ್ಷರಿಗೆ ₹ 3 ಸಾವಿರ, ಉಪಾಧ್ಯಕ್ಷರಿಗೆ ₹ 2 ಸಾವಿರ, ಸದಸ್ಯರಿಗೆ ₹ 1 ಸಾವಿರ ನೀಡಲಾಗುತ್ತಿದೆ. ಸಭಾ ಭತ್ಯೆ ₹ 100 ಇದೆ. ಹೆಚ್ಚಳ ಕುರಿತು ಹಲವು ವರ್ಷಗಳಿಂದ ಚರ್ಚೆ ನಡೆಯುತ್ತಿದ್ದರೂ ಬೇಡಿಕೆ ಈಡೇರಿಲ್ಲ. ಪ್ರಸ್ತುತ ಆರಂಭವಾಗಿರುವ ಅಧಿವೇಶನ ಮುಗಿಯುವುದರ ಒಳಗೆ ಅಂತಿಮ ನಿರ್ಧಾರ ತೆಗೆದುಕೊಳ್ಳಬೇಕು. ಮುಖ್ಯಮಂತ್ರಿ ಅಧೀನದಲ್ಲಿರುವ ಆರ್ಥಿಕ ಇಲಾಖೆ ಸಕಾರಾತ್ಮಕ ಪ್ರತಿಕ್ರಿಯೆ ನೀಡಬೇಕು ಎಂದು ಒತ್ತಾಯಿಸಿದ್ದಾರೆ.

ಹಲವು ಗ್ರಾಮ ಪಂಚಾಯಿತಿಗಳು ವಿಸ್ತಾರವಾಗಿರುತ್ತವೆ. ಸದಸ್ಯರು ಅಲ್ಲಿಗೆ ಭೇಟಿ ನೀಡಬೇಕಿರುತ್ತದೆ. ಸಭೆಗಳಲ್ಲಿ ಭಾಗವಹಿಸಲು ದೂರದಿಂದ ಬರುತ್ತಾರೆ. ಗೌರವಧನ ಕಡಿಮೆ ಇರುವ ಕಾರಣ ಅವರಿಗೆ ಆರ್ಥಿಕ ಹೊರೆಯಾಗುತ್ತದೆ ಎಂದು ಸ್ಥಳೀಯ ಸಂಸ್ಥೆಗಳಿಂದ ಆಯ್ಕೆಯಾಗಿರುವ ವಿಧಾನ ಪರಿಷತ್ ಸದಸ್ಯರು ಪತ್ರ ಬರೆದಿದ್ದಾರೆ.

ನಕಲಿ ವೈದ್ಯಕೀಯ ಪ್ರಮಾಣಪತ್ರ ಜಾಲ ಪತ್ತೆ

ಖಾನಾಪುರ (ಬೆಳಗಾವಿ ಜಿಲ್ಲೆ): ಸಂಧ್ಯಾ ಸುರಕ್ಷಾ, ವಿಧವಾ ವೇತನ ಸೇರಿದಂತೆ ವಿವಿಧ ಸಾಮಾಜಿಕ ಭದ್ರತಾ ಯೋಜನೆಗೆ ಲಗತ್ತಿಸಲು ನಕಲಿ ವೈದ್ಯಕೀಯ ಪ್ರಮಾಣಪತ್ರಗಳನ್ನು ವಿತರಿಸುತ್ತಿದ್ದ ಜಾಲವನ್ನು ತಾಲ್ಲೂಕು ಆರೋಗ್ಯಾಧಿಕಾರಿ (ಟಿಎಚ್‌ಒ) ಡಾ.ಸಂಜೀವ ನಾಂದ್ರೆ ಮತ್ತು ಸಿಬ್ಬಂದಿ ಸೋಮವಾರ ಪತ್ತೆ ಹಚ್ಚಿದ್ದಾರೆ.

ಜಾಲದಲ್ಲಿ ನೇರವಾಗಿ ಭಾಗಿಯಾಗಿದ್ದಾರೆ ಎನ್ನಲಾದ ತಾಲ್ಲೂಕಿನ ಮಂಡೇಗಾಳಿ ಗ್ರಾಮದ ವಾಸು ಗುರವ ಮತ್ತು ಇಲ್ಲಿನ ಸಾರ್ವಜನಿಕ ಆಸ್ಪತ್ರೆ ಸಿಬ್ಬಂದಿ ಇಸ್ಮಾಯಿಲ್ ಬೀಡಿಕರ ಎನ್ನುವವರನ್ನು ದಾಖಲೆಸಹಿತ ಹಿಡಿದು ಪೊಲೀಸರ ವಶಕ್ಕೆ ಒಪ್ಪಿಸಿದ್ದಾರೆ. ಟಿಎಚ್‌ಒ ನೀಡಿದ ದೂರಿನ ಮೇರೆಗೆ ಇಲ್ಲಿನ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

'ವಾಸು, ಸೋಮವಾರ ಸಂಜೆ ಸಂಧ್ಯಾ ಸುರಕ್ಷಾ ಯೋಜನೆಯ ಹಲವು ಅರ್ಜಿಗಳನ್ನು ಹಿಡಿದು ಆಸ್ಪತ್ರೆಯಲ್ಲಿ ಓಡಾಡುತ್ತಿದ್ದಾಗ ಸಿಬ್ಬಂದಿ ಗಮನಿಸಿದ್ದಾರೆ. ವಿಚಾರಿಸಿದಾಗ ಗಾಬರಿಯಿಂದ ತಪ್ಪಿಸಿಕೊಳ್ಳಲು ಯತ್ನಿಸಿದ ವಾಸು ಅವರನ್ನು ಹಿಡಿದ ಸಿಬ್ಬಂದಿಯು, ಮುಖ್ಯ ವೈದ್ಯಾಧಿಕಾರಿಯೂ ಆದ ಟಿಎಚ್‌ಒ ನಾಂದ್ರೆ ಬಳಿಗೆ ಕರೆದೊಯ್ದಿದ್ದಾರೆ. ವಾಸು ಅವರ ಬಳಿ ಇದ್ದ ದಾಖಲೆಗಳನ್ನು ಪರಿಶೀಲಿಸಿ ವಿಚಾರಿಸಿದಾಗ, ಇಸ್ಮಾಯಿಲ್ ಹಲವು ತಿಂಗಳುಗಳಿಂದ ವೈದ್ಯಕೀಯ ಪ್ರಮಾಣಪತ್ರಗಳನ್ನು ಸಿದ್ಧಪಡಿಸಿ ಕೊಡುತ್ತಿದ್ದುದು ಗೊತ್ತಾಗಿದೆ' ಎಂದು ತಿಳಿದುಬಂದಿದೆ.

'ತಾನು ಆಸ್ಪತ್ರೆಯ ಮತ್ತು ವೈದ್ಯರ ನಕಲಿ ರಬ್ಬರ್ ಸ್ಟ್ಯಾಂಪ್ ಬಳಸಿ ವೈದ್ಯಕೀಯ ಪ್ರಮಾಣಪತ್ರಗಳನ್ನು ಮಾಡಿಕೊಡುತ್ತಿದ್ದುದಾಗಿ ಇಸ್ಮಾಯಿಲ್ ಒಪ್ಪಿಕೊಂಡಿದ್ದಾರೆ. ದೂರು ದಾಖಲಿಸಿಕೊಂಡ ಪೊಲೀಸರು ಇಸ್ಮಾಯಿಲ್ ಮನೆಯಲ್ಲಿದ್ದ ನಕಲಿ ರಬ್ಬರ್ ಸ್ಟ್ಯಾಂಪ್ ಹಾಗೂ ಇತರ ದಾಖಲೆಗಳನ್ನು ವಶಕ್ಕೆ ಪಡೆದಿದ್ದಾರೆ' ಎಂದು ಮೂಲಗಳು ತಿಳಿಸಿವೆ.

ಆಳಂದ: ಇಡೀ ದಿನ ಉದ್ವಿಗ್ನ

ಒಂದನೇ ಪುಟದಿಂದ

ಜಿಲ್ಲಾಧಿಕಾರಿ ಯಶವಂತ್ ಗುರುಕರ್, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಇಶಾ ಪಂತ್, ಎರಡೂ ಕಡೆಯ ಮುಖಂಡರೊಂದಿಗೆ ಹಲವು ಸುತ್ತಿನ ಮಾತುಕತೆ ನಡೆಸಿದರು. ಕೊನೆಗೆ 12 ಜನರು ದರ್ಗಾ ಒಳಗೆ ಹೋಗಿ ಲಿಂಗದ ಶುದ್ಧೀಕರಣ ಮಾಡಲು ಒಪ್ಪಿದರು. ಇದಕ್ಕೆ ದರ್ಗಾ ಸಮಿತಿಯವರೂ ಒಪ್ಪಿಗೆ ನೀಡಿದರು.

ಮನೆಯ ಮೇಲೆ ಕಲ್ಲು ಹಾಗೂ ಬಡಿಗೆಗಳನ್ನು ಸಂಗ್ರಹಿಸಿ ಇಟ್ಟುಕೊಂಡವರನ್ನು ಪತ್ತೆ ಮಾಡಲು ಪೊಲೀಸರು ಡ್ರೋನ್ ಬಳಸಬೇಕಾಯಿತು.

'ಚಲೋ ಆಳಂದ'ಗೆ ಕರೆ ಕೊಟ್ಟಿದ್ದ ಆಂದೋಲಾ ಮಠದ ಸಿದ್ಧಲಿಂಗ ಸ್ವಾಮೀಜಿ ಹಾಗೂ ಶ್ರೀರಾಮ ಸೇನೆಯ ಹಲವು ಕಾರ್ಯಕರ್ತರನ್ನು ಪೊಲೀಸರು ಕಲಬುರಗಿ ಹೊರವಲಯದಲ್ಲಿ ವಶಕ್ಕೆ ಪಡೆದರು.

ನಿಷೇಧಾಜ್ಞೆ ಇದ್ದರೂ ಎರಡೂ ಧರ್ಮಗಳ ಕಡೆಯವರು ಅಪಾರ ಸಂಖ್ಯೆಯಲ್ಲಿ ಸೇರಿ, ನಿಷೇಧಾಜ್ಞೆ ಉಲ್ಲಂಘಿಸಿದರು.

ಆಳಂದ ಪಟ್ಟಣದ ಲಾಡ್ಲೆ ಮಶಾಕ ದರ್ಗಾ ಆವರಣದಲ್ಲಿರುವ ರಾಘವಚೈತನ್ಯ ಲಿಂಗಕ್ಕೆ ಪೂಜೆ ಸಲ್ಲಿಸಲು ಮಂಗಳವಾರ ಮೆರವಣಿಗೆ ಹೊರಟ ಕೇಂದ್ರ ಸಚಿವ ಭಗವಂತ ಖೂಬಾ, ಶಾಸಕರಾದ ಬಸವರಾಜ ಮತ್ತಿಮೂಡ, ರಾಜಕುಮಾರ ಪಾಟೀಲ ತೇಲ್ಕೂರ, ಸುಭಾಷ ಗುತ್ತೇದಾರ, ಮಾಜಿ ಶಾಸ ಮಾಲೀಕಯ್ಯ ಗುತ್ತೇದಾರ ಹಾಗೂ ಶ್ರೀರಾಮ ಸೇನೆ ಕಾರ್ಯಕರ್ತರನ್ನು ಪೊಲೀಸರು ತಡೆದರು

ಗುರುಲಿಂಗ ಕಾಪಸೆ ಅವರಿಗೆ ಜಿಎಸ್ಸೆಸ್ ಪ್ರಶಸ್ತಿ ಪ್ರದಾನ

'ಪ್ರೀತಿಯ ಉಪಾಸಕ ಜಿ.ಎಸ್.ಶಿವರುದ್ರಪ್ಪ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಮಧುರಚೆನ್ನ, ಕುವೆಂಪು, ದ.ರಾ.ಬೇಂದ್ರೆ ಅವರಂತೆ ಜಿ.ಎಸ್.ಶಿವರುದ್ರಪ್ಪ ಅವರೂ ಪ್ರೀತಿಯ ಉಪಾಸಕರು' ಎಂದು ಸಾಹಿತಿ ಡಾ. ಗುರುಲಿಂಗ ಕಾಪಸೆ ಹೇಳಿದರು.

ಡಾ.ಜಿಎಸ್ಸೆಸ್ ವಿಶ್ವಸ್ತ ಮಂಡಳಿ ನಗರದಲ್ಲಿ ಮಂಗಳವಾರ ಏರ್ಪಡಿಸಿದ್ದ ಸಮಾರಂಭದಲ್ಲಿ ಡಾ.ಜಿಎಸ್ಸೆಸ್ ಪ್ರಶಸ್ತಿ ಸ್ವೀಕರಿಸಿ ಮಾತನಾಡಿದ ಅವರು, 'ಪ್ರೀತಿಯನ್ನು ವಸ್ತುವನ್ನಾಗಿಸಿಕೊಂಡು ಹಲವು ಪದ್ಯಗಳನ್ನು ಇವರು ಬರೆದಿದ್ದಾರೆ' ಎಂದರು.

'ಕುವೆಂಪು ಮತ್ತು ಬೇಂದ್ರೆ ಅವರಿಗೆ ಬಿ.ಎಂ.ಶ್ರೀಕಂಠಯ್ಯ ಅವರು ಗುರುಗಳಾಗಿದ್ದರು. ಆದ್ದರಿಂದ ಅವರನ್ನು ಗುರುಪಿತಾಮಹರೆಂದು ಕರೆಯಬಹುದು. ಕುವೆಂಪು ಮತ್ತು ಬೇಂದ್ರೆಯವರಿಗೆ ಜಿ.ಎಸ್.ಶಿವರುದ್ರಪ್ಪ, ಚೆನ್ನವೀರ ಕಣವಿ ಮತ್ತು ನಾನು ಶಿಷ್ಯರು. ಗುರು–ಶಿಷ್ಯರ ಸಾಹಿತ್ಯಿಕ ಸಂಬಂಧ ಎಲ್ಲದಕ್ಕೂ ಮೀರಿ ಬೆಳೆದಿತ್ತು' ಎಂದರು.

'ಶಿವರುದ್ರಪ್ಪ ಅವರು ತ.ಸು. ಶಾಮರಾಯರ ಶಿಷ್ಯ ಎಂಬುದು ಎಲ್ಲರಿಗೂ ತಿಳಿದಿದೆ. ಕವಿತೆ ಬರೆಯುತ್ತಿದ್ದ ಶಿವರುದ್ರಪ್ಪ ಅವರ ತೊಂದರೆ ನೋಡಿದ್ದ ಗುರುಗಳು, ಮೈಸೂರಿನ ಸುತ್ತೂರು ಮಠಕ್ಕೆ ತಮ್ಮ ಶಿಷ್ಯನನ್ನು ಕರೆದೊಯ್ದು ಶಿಕ್ಷಣಕ್ಕೆ ಆಶ್ರಯ ಕೋರುತ್ತಾರೆ. ಈ ಇಬ್ಬರ ಸಂಬಂಧ ನಡುವೆ ಜಾತಿಯ ಗೋಡೆ ಇರಲಿಲ್ಲ. ಅದಕ್ಕೂ ಮೀರಿದ ಪ್ರೀತಿಯನ್ನು ಕಂಡು ಮಠದ ಹಿಂದಿನ ಸ್ವಾಮೀಜಿಯವರೇ ಮೆಚ್ಚುಗೆ ವ್ಯಕ್ತಪಡಿಸಿದ್ದರು' ಎಂದು ಸ್ಮರಿಸಿಕೊಂಡರು.

'ಗುರು–ಶಿಷ್ಯರ ಸಂಬಂಧ ಎಂದರೆ ಅಲ್ಲಿ ಜಾತಿಯ ಬೇಲಿ ಇರಲು ಸಾಧ್ಯವೇ ಇಲ್ಲ. ಬುದ್ಧಿವಂತಿಕೆ ಮತ್ತು ವಿದ್ಯಾರ್ಥಿಯ ಬೆಳವಣಿಗೆಯಷ್ಟೇ ಗುರುವಿಗೆ ಮುಖ್ಯವಾಗುತ್ತದೆ' ಎಂದರು.

'ಶಿವರುದ್ರಪ್ಪ ಅವರ ಸರಳತೆ ಹಲವರಿಗೆ ಪ್ರೇರಣೆಯಾಗಿದೆ. ಅವರು ಸಾಹಿತ್ಯ ಕ್ಷೇತ್ರಕ್ಕೆ ನೀಡಿದ ಕೊಡುಗೆ ಅನನ್ಯವಾದುದು. ಅವರ ಪ್ರಭಾವ ಮತ್ತು ಪ್ರೇರಣೆ ನನ್ನ ಬರವಣಿಗೆ ಮೇಲೂ ಆಗಿದೆ' ಎಂದು ಹೇಳಿದರು.

ಡಾ.ಜಿಎಸ್ಸೆಸ್ ವಿಶ್ವಸ್ತ ಮಂಡಳಿಯ ಗೌರವಾಧ್ಯಕ್ಷ ಬಸವರಾಜ ಕಲ್ಗುಡಿ ಮಾತನಾಡಿ, 'ಸತ್ಯ, ಶಿವ ಮತ್ತು ಸೌಂದರ್ಯದ ಪರಮಾರ್ಥ ಎಂದರೆ ಪ್ರೀತಿ ಎಂದು ಜಿಎಸ್ಸೆಸ್ ಸಾರಿದ್ದಾರೆ. ಅವರ ಗೆಳೆಯರಾದ ಗುರುಲಿಂಗ ಕಾಪಸೆ ಅವರಿಗೆ ಈ ಪ್ರಶಸ್ತಿ ನೀಡಿರುವುದು ಅರ್ಥಪೂರ್ಣವಾಗಿದೆ' ಎಂದರು.

ಲೇಖಕಿ ಡಾ.ಎಂ.ಎಸ್. ಆಶಾದೇವಿ ಅಭಿನಂದನಾ ಭಾಷಣ ಮಾಡಿದರು. ಮಂಡಳಿಯ ಅಧ್ಯಕ್ಷ ಡಾ.ನಟರಾಜ ಬೂದಾಳು ಪ್ರಾಸ್ತಾವಿಕವಾಗಿ ಮಾತನಾಡಿದರು.

ಡಾ. ಜಿಎಸ್ಸೆಸ್ ಪ್ರಶಸ್ತಿಯನ್ನು ಗುರುಲಿಂಗ ಕಾಪಸೆ ಅವರಿಗೆ ಬಸವರಾಜ ಕಲ್ಗುಡಿ ಮತ್ತು ನಟರಾಜ ಬೂದಾಳ್ ಪ್ರದಾನ ಮಾಡಿದರು. ಮಂಡಳಿಯ ಕಾರ್ಯದರ್ಶಿ ಲಲಿತಾ ಶ್ರೀನಿವಾಸ್, ಖಜಾಂಚಿ ಜಿ.ಎಸ್.ಜಯಂತಿ, ಡಾ.ಎಂ.ಎಸ್. ಆಶಾದೇವಿ ಇದ್ದರು —ಪ್ರಜಾವಾಣಿ ಚಿತ್ರ

ಸಿಎಂ ಬೊಮ್ಮಾಯಿ ಜೆಡಿಎಸ್‌ನ ಮಾಜಿ ಶಾಸಕ ಪಿಳ್ಳಮುನಿಶಾಮಪ್ಪ ಅವರನ್ನು ಬಿಜೆಪಿಗೆ ಸೇರಿಸಿಕೊಂಡರು. ಬಿಜೆಪಿ ಅಧ್ಯಕ್ಷ ನಳಿನ್ ಕುಮಾರ್ ಕಟೀಲ್, ಬಿಜೆಪಿ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಸಿ.ಟಿ.ರವಿ, ಸಂಸದ ಪಿ.ಸಿ.ಮೋಹನ್ ಇದ್ದರು

'ರಾಜಕೀಯ ಸಮೀಕರಣ ಆರಂಭ'

ಬೆಂಗಳೂರು: ರಾಜ್ಯದಲ್ಲಿ ರಾಜಕೀಯ ಸಮೀಕರಣ ಆರಂಭವಾಗಿದ್ದು, ಮುಂಬರುವ ದಿನಗಳಲ್ಲಿ ಕಾಂಗ್ರೆಸ್ ಮತ್ತು ಜೆಡಿಎಸ್‌ನಿಂದ ಹೆಚ್ಚಿನ ನಾಯಕರು ಬಿಜೆಪಿ ಸೇರಲಿದ್ದಾರೆ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ತಿಳಿಸಿದರು.

ಮಂಗಳವಾರ ಬಿಜೆಪಿ ರಾಜ್ಯ ಕಚೇರಿಯಲ್ಲಿ ನಡೆದ ದೇವನಹಳ್ಳಿಯ ಮಾಜಿ ಶಾಸಕ ಹಾಗೂ ಜೆಡಿಎಸ್‌ನ ಪಿಳ್ಳ ಮುನಿಶಾಮಪ್ಪ ಮತ್ತು ಇತರ ಮುಖಂಡರ ಪಕ್ಷ ಸೇರ್ಪಡೆ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಬೆಳಗಾವಿ ಮತ್ತು ರಾಮನಗರದಲ್ಲಿ ಆರಂಭವಾದ ಕಾಂಗ್ರೆಸ್ ಮತ್ತು ಜೆಡಿಎಸ್ ನಾಯಕರ ಸೇರ್ಪಡೆ ಕಾರ್ಯಕ್ರಮ ಮುಂಬರುವ ದಿನಗಳಲ್ಲಿ ಇನ್ನಷ್ಟು ಜಿಲ್ಲೆಗಳಿಗೆ ವ್ಯಾಪಿಸಲಿದೆ. ಇವೆರಡೂ ಪಕ್ಷಗಳಲ್ಲಿರುವ ಜನಹಿತ ಬಯಸುವ ಅನೇಕ ಮುಖಂಡರು ನಮ್ಮ ಸಂಪರ್ಕದಲ್ಲಿದ್ದಾರೆ ಎಂದರು.

ಬಿಜೆಪಿ ಕೇಂದ್ರದಲ್ಲಿ ಅತ್ಯುತ್ತಮ ಆಡಳಿತ ನೀಡುತ್ತಿದೆ. ರಾಜ್ಯದಲ್ಲೂ ಕ್ರಿಯಾಶೀಲ, ಜನಪರ ಸರ್ಕಾರ ಇದೆ. ಮುಂದಿನ ದಿನಗಳಲ್ಲಿ ರಾಜ್ಯದಲ್ಲಿ ಹೊಸ ಕಾರ್ಯಕ್ರಮಗಳ ಮೂಲಕ ಎಲ್ಲ ಸಮುದಾಯಗಳಿಗೆ ನ್ಯಾಯ ನೀಡಲಾಗುವುದು ಎಂದು ಬೊಮ್ಮಾಯಿ ತಿಳಿಸಿದರು.

'ಸಿಎಂ ಆಗಲ್ಲ':

'ಹಿಂದೆ ಸಿದ್ದರಾಮಯ್ಯ ಅವರು 2014 ರಲ್ಲಿ ಅಪ್ಪನಾಣೆಗೂ ಮೋದಿ ಪ್ರಧಾನಿ ಆಗಲ್ಲ ಎಂದಿದ್ದರು. 2018 ರಲ್ಲಿ ಯಡಿಯೂರಪ್ಪ ಮುಖ್ಯಮಂತ್ರಿ ಆಗಲ್ಲ ಎಂದಿದ್ದರು. ಈಗ ನಾನು ಹೇಳುವುದಿಷ್ಟೇ, ನಿಮ್ಮ ಅಪ್ಪನಾಣೆಗೂ ಮುಂದೆ ಮುಖ್ಯಮಂತ್ರಿ ಆಗಲ್ಲ, ಕಾಂಗ್ರೆಸ್ ಅಧಿಕಾರಕ್ಕೆ ಬರಲ್ಲ' ಎಂದು ಬಿಜೆಪಿ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಸಿ.ಟಿ.ರವಿ ಹೇಳಿದರು.

ಬಿಜೆಪಿ ರಾಜ್ಯ ಘಟಕ ಅಧ್ಯಕ್ಷ ನಳಿನ್ ಕುಮಾರ್ ಕಟೀಲ್, ಆರೋಗ್ಯ ಸಚಿವ ಡಾ.ಕೆ.ಸುಧಾಕರ್ ಮಾತನಾಡಿದರು. ಜೆಡಿಎಸ್ ರಾಜ್ಯ ಸಂಘಟನಾ ಕಾರ್ಯದರ್ಶಿ ಅಶ್ವಥಪ್ಪ, ದೇವನಹಳ್ಳಿ–ಚಿಕ್ಕಬಳ್ಳಾಪುರ ಶಿಕ್ಷಣ ಸಂಸ್ಥೆ ಅಧ್ಯಕ್ಷ ಚಂದ್ರಶೇಖರ್, ಭೂಮಂಜೂರಾತಿ ಸಮಿತಿ ಮಾಜಿ ಸದಸ್ಯ ಆರ್.ಎನ್. ಸುಬ್ಬೇಗೌಡ, ಜೆಡಿಎಸ್ ಅಲ್ಪಸಂಖ್ಯಾತ ಮುಖಂಡ ಸಿ.ರಿಯಾಜ್, ದೇವನಹಳ್ಳಿ ಕಾಂಗ್ರೆಸ್ ಮುಖಂಡ ಜೊಳ್ಳಪ್ಪ ನಾರಾಯಣಸ್ವಾಮಿ ಬಿಜೆಪಿ ಸೇರಿದರು.

ನಿಧನ ವಾರ್ತೆ

ಲೇಖಕ ಪ್ರೊ.ಕೆ.ಭೈರವಮೂರ್ತಿ

ಮೈಸೂರು: ಲೇಖಕ ಪ್ರೊ. ಕೆ.ಭೈರವಮೂರ್ತಿ (77) ಇಲ್ಲಿನ ಖಾಸಗಿ ಆಸ್ಪತ್ರೆಯಲ್ಲಿ ಸೋಮವಾರ ತಡರಾತ್ರಿ ನಿಧನರಾದರು. ಅವರಿಗೆ ಪುತ್ರ ಇದ್ದಾರೆ.

ಪಾರ್ಥಿವ ಶರೀರವನ್ನು ವಿದ್ಯಾರಣ್ಯಾಪುರಂನ ನಿವಾಸದಲ್ಲಿ ಅಂತಿಮ ದರ್ಶನಕ್ಕೆ ಇಡಲಾಗಿತ್ತು. ಚಾಮುಂಡಿಬೆಟ್ಟದ ತಪ್ಪಲಲ್ಲಿ ಅಂತ್ಯಕ್ರಿಯೆಯ ನಡೆಯಿತು.

ಮಂಡ್ಯ ಜಿಲ್ಲೆಯ ಕೊತ್ತತ್ತಿ ಹೋಬಳಿಯ ಸಂತೆ ಕೆಸಲಗೆರೆ ಗ್ರಾಮದಲ್ಲಿ 1945ರ ಮೇ 30ರಂದು ಜನಿಸಿದ ಅವರು, ಮೈಸೂರಿನ ಮಹಾರಾಜ ಕಾಲೇಜಿನಲ್ಲಿ ಪದವಿ, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆಯಲ್ಲಿ ಸ್ನಾತಕೋತ್ತರ ಪದವಿಯನ್ನು ಮೂರನೆಯ ರ‍್ಯಾಂಕ್‌ನೊಂದಿಗೆ ಪಡೆದಿದ್ದರು.

1969ರಲ್ಲಿ ಮೈಸೂರು ಮಹಾರಾಜ ಸಂಜೆ ಕಾಲೇಜಿನಲ್ಲಿ ಕನ್ನಡ ಅಧ್ಯಾಪಕರಾಗಿ ವೃತ್ತಿ ಜೀವನ ಆರಂಭಿಸಿ, 36 ವರ್ಷ ಸೇವೆ ಸಲ್ಲಿಸಿ ಪ್ರಾಧ್ಯಾಪಕರಾಗಿ ನಿವೃತ್ತರಾಗಿದ್ದರು.

ಸಾವಿರಕ್ಕೂ ಹೆಚ್ಚು ಆಧುನಿಕ ವಚನಗಳನ್ನು ಹಾಗೂ ನಾಲ್ಕು ನೂರಕ್ಕೂ ಹೆಚ್ಚು ಅಂಕಣ ಬರಹಗಳನ್ನು ಬರೆದಿದ್ದ ಅವರು, ಮಂಡ್ಯ ಜಿಲ್ಲಾ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿದ್ದರು.

ಕವಿತೆ, ಶಿಶು ಸಾಹಿತ್ಯ, ಚುಟುಕು ಸಾಹಿತ್ಯ, ಚಿಂತನ ಕೃತಿಗಳು, ಸಾಹಿತ್ಯ ವಿಮರ್ಶೆಯ ಕೃತಿಗಳು ಪ್ರಕಟವಾಗಿವೆ. ಹದಿನೈದಕ್ಕೂ ಹೆಚ್ಚು ಗ್ರಂಥಗಳನ್ನು ಸಂಪಾದಿಸಿದ್ದ ಅವರು, ದೇಜಗೌ ಕುರಿತು 'ಕಾಯಕ ವಿಭೂತಿ' ಅಭಿನಂದನ ಗ್ರಂಥವನ್ನು ಹೊರತಂದಿದ್ದರು. ದೊಡ್ಡರಂಗೇಗೌಡರನ್ನು ಕುರಿತು 'ಮಧುಗಿರಿಯ ಮಾಣಿಕ್ಯ' ಸಂಭಾವನೆ ಗ್ರಂಥ ಇತ್ತೀಚೆಗೆ ಬಿಡುಗಡೆಯಾಗಿತ್ತು. ಅವರನ್ನು ಕುರಿತು 'ಶಿವಮಯ', 'ಅಕ್ಷಯ' ಬೃಹತ್ ಅಭಿನಂದನ ಗ್ರಂಥಗಳು ಪ್ರಕಟವಾಗಿವೆ. ವಿವಿಧ ಲೇಖಕರು ರಚಿಸಿರುವ ಚುಟುಕುಗಳ 'ಭೈರವ ದೀಪ್ತಿ' ಪುಸ್ತಕ ಬಿಡುಗಡೆಯಾಗಬೇಕಿತ್ತು.

ರಘುನಾಥ ನಾಕೋಡಗೆ ಪುಟ್ಟರಾಜ ಸಮ್ಮಾನ

ಧಾರವಾಡ: ಇಲ್ಲಿನ ಡಾ.ಪುಟ್ಟರಾಜ ಗವಾಯಿ ಪ್ರತಿಷ್ಠಾನದ 2022ನೇ ಸಾಲಿನ ಪುಟ್ಟರಾಜ ಸಮ್ಮಾನ ಪ್ರಶಸ್ತಿಯು ಹಿರಿಯ ತಬಲಾ ವಾದಕ ಪಂಡಿತ್ ರಘುನಾಥ ನಾಕೋಡ ಅವರಿಗೆ ಲಭಿಸಿದೆ.


ಪಂ. ರಘುನಾಥ ನಾಕೋಡ

ಪ್ರಶಸ್ತಿಯು ₹1ಲಕ್ಷ ನಗದು ಹಾಗೂ ಸ್ಮರಣಿಕೆಯನ್ನು ಒಳಗೊಂಡಿದೆ. ಪುಟ್ಟರಾಜ ಗವಾಯಿ ಅವರ 109ನೇ ಜನ್ಮದಿನದ ಅಂಗವಾಗಿ ಮಾರ್ಚ್ 3ರಂದು ಸಂಜೆ 6ಕ್ಕೆ ಆಯೋಜಿಸಲಾಗಿರುವ ಪ್ರಶಸ್ತಿ ಪ್ರದಾನ ಸಮಾರಂಭವು ಇಲ್ಲಿನ ಸೃಜನಾ ರಂಗಮಂದಿರದಲ್ಲಿ ನಡೆಯಲಿದೆ ಎಂದು ಪ್ರತಿಷ್ಠಾನದ ಕಾರ್ಯದರ್ಶಿ ಪಂ.ಡಾ. ಎಂ.ವೆಂಕಟೇಶಕುಮಾರ ತಿಳಿಸಿದ್ದಾರೆ.

ಕೊರೊನಾ ಭೀತಿ ಬೇಡ, ಮುಂಜಾಗ್ರತೆ ಇರಲಿ

ಹೃದಯಾಘಾತಕ್ಕೆ ಬಲಿಯಾದ ಟಗರು

ಬಾಗಲಕೋಟೆ: ಟಗರಿನ ಕಾಳಗಕ್ಕೆ ಹೆಸರು ಮಾಡಿದ್ದ, ₹8 ಲಕ್ಷ ಬೆಲೆಬಾಳುತ್ತಿದ್ದ 'ಲವ್ಲಿ ಬಾಯ್' ಟಗರು ಮಂಗಳವಾರ ಸೀಗಿಕೇರಿ ಗ್ರಾಮದಲ್ಲಿ ಹೃದಯಾಘಾತದಿಂದ ಸಾವನ್ನಪ್ಪಿದೆ.

ನಾಟಕಕಾರ, ಕಲಾವಿದ ಎಚ್.ಎನ್. ಶೇಬನ್ನವರ ಟಗರು ಈ ಭಾಗದಲ್ಲಿಯೇ ಹೆಸರುವಾಗಿತ್ತು. ಎಲ್ಲಿ ಸ್ಪರ್ಧೆ ಮಾಡಿದರೂ ಗೆಲುವು ಮಾತ್ರ ಕಟ್ಟಿಟ್ಟ ಬುತ್ತಿ. ಮುನ್ನೂರಕ್ಕೂ ಹೆಚ್ಚು ಟಗರುಗಳಿಗೆ ಡಿಚ್ಚಿ ಕೊಟ್ಟಿದ್ದ 'ಲವ್ಲಿ ಬಾಯ್' ಎಂಬ ಹೆಸರಿನಿಂದಲೇ ಈ ಟಗರನ್ನು ಕರೆಯಲಾಗುತ್ತಿತ್ತು.

ಚಿನ್ನ, ಬೆಳ್ಳಿ ಅಷ್ಟೇ ಅಲ್ಲದೇ ₹10 ಲಕ್ಷ ಗಳವರೆಗಿನ ನಗದು ಬಹುಮಾನ ಗಿಟ್ಟಿಸಿಕೊಂಡಿದ್ದ ಈ ಟಗರು ಬೈಕು, ಹೋರಿ, ಪ್ರಶಸ್ತಿ ಪತ್ರ...ಹೀಗೆ ಸಾಲು ಸಾಲು ಬಹುಮಾನಗಳನ್ನು ತಂದಿತ್ತು. ₹8 ಲಕ್ಷ ಬೆಲೆಗೆ ಕೇಳಿದ್ದರೂ ಮಾಲಿಕ ಶೇಬನ್ನವರ ಟಗರು ಮಾರಿರಲಿಲ್ಲ. 6 ವರ್ಷ ವಯಸ್ಸಿನ ಟಗರನ್ನು ನೋಡಲು ಅಭಿಮಾನಿಗಳ ದಂಡೇ ಸೇರುತ್ತಿತ್ತು. ಸೋಲಿಲ್ಲದ ಸರದಾರ ಎನಿಸಿಕೊಂಡಿದ್ದ ಟಗರು ಸಾವಿಗೀಡಾಗಿದ್ದು ಮಾಲಿಕ ಶೇಬನ್ನವರ ದುಃಖದ ಮಡುವಿನಲ್ಲಿದ್ದಾರೆ.

ಶ್ರದ್ಧಾಂಜಲಿ: ಸೀಗಿಕೇರಿ ಗ್ರಾಮದಲ್ಲಿ ಮೃತ ಟಗರಿಗೆ ಶ್ರದ್ಧಾಂಜಲಿ ನಡೆಯಿತು. ಮಾಲೆ, ಹಣೆಗೆ ಬೆಳ್ಳಿ, ಬಂಗಾರದ ಖಡಗ, ಭಂಡಾರ ಬಳಿದು ಪ್ರಶಸ್ತಿಗಳನ್ನು ಅದರ ಮುಂದಿಟ್ಟು ಊರಿನವರು, ಅಭಿಮಾನಿಗಳು ಭಾವಪೂರ್ಣ ಶ್ರದ್ಧಾಂಜಲಿ ಅರ್ಪಿಸಿದರು. ಅಭಿಮಾನಿಗಳ ಮಹಾಪೂರವೇ ಗ್ರಾಮಕ್ಕೆ ಹರಿದು ಬಂದಿದ್ದು, ದರ್ಶನಕ್ಕೆ ವ್ಯವಸ್ಥೆ ಮಾಡಲಾಗಿತ್ತು.

ಪೌಷ್ಟಿಕ ಆಹಾರ ಸೇವಿಸಿ

ಭಾರತ ಸರ್ಕಾರ, ಬಾಹ್ಯಾಕಾಶ ಇಲಾಖೆ
ನಿರ್ಮಾಣ ಮತ್ತು ನಿರ್ವಹಣೆ ಸಮೂಹ
ಮುಖ್ಯ ನಿಯಂತ್ರಣ ಸೌಲಭ್ಯ
ಪಿ.ಬಿ.ನಂ. 66, ಹಾಸನ-573210, ಭಾರತ. ದೂರವಾಣಿ : 08172-273343 ಫ್ಯಾಕ್ಸ್: 08172-273953

ಸಂಕ್ಷಿಪ್ತ ಇ-ಟೆಂಡರ್ ಆಹ್ವಾನದ ಸೂಚನೆ

1.ಭಾರತದ ರಾಷ್ಟ್ರಪತಿಗಳ ಪರವಾಗಿ, ಈ ಕೆಳಗಿನ ಕೆಲಸಗಳಿಗಾಗಿ ಆನ್‌ಲೈನ್ ಮೂಲಕ ಐಟಂ ರೇಟ್ ಇ-ಟೆಂಡರುಗಳನ್ನು ಆಹ್ವಾನಿಸಲಾಗಿದೆ.

ಎನ್‌ಐಟಿ ಸಂಖ್ಯೆ	ಕೆಲಸದ ಹೆಸರು	ಅಂದಾಜು ಮೊತ್ತ (ರೂ.)	ಇಎಂಡಿ (ಮೊತ್ತ ರೂ.)	ಕೆಲಸ ಮುಗಿಸಲು ಕಾಲಾವಧಿ
MCF/CMG/H/eTN-20/2021-22 Dtd. 25.02.2022	ಎಂಸಿಎಫ್ ಹಾಸನದ ಕಾರ್ ಪಾರ್ಕಿಂಗ್‌ನ ವಿಸ್ತರಣೆಯ ಸಿವಿಲ್ ಕಾಮಗಾರಿಗಳು.	18,01,600/-	36,032/-	04 ತಿಂಗಳು
MCF/CMG/H/eTN-21/2021-22 Dtd. 25.02.2022	ಎಂಸಿಎಫ್ ಹಾಸನದ ಎಸ್‌ಸಿಸಿ ಮುಖ್ಯ ಕಟ್ಟಡದಲ್ಲಿ 3ನೇ ಹಂತದ ಲೈಟ್ ರೂಫಿಂಗ್ ಒದಗಿಸುವುದು.	17,88,825/-	35,776/-	03 ತಿಂಗಳು
MCF/CMG/H/eTN-22/2021-22 Dtd. 25.02.2022	ಎಂಸಿಎಫ್ ಹಾಸನದ ನ್ಯೂಲ್ಯಾಂಡ್‌ನ ಸಿಐಎಸ್‌ಎಫ್ ಆಫೀಸ್‌ನಲ್ಲಿ ಸುರಕ್ಷತಾ ಯಂತ್ರೋಪಕರಣಗಳನ್ನು ಇಡಲು ಸಿವಿಲ್ ಕಾಮಗಾರಿಗಳು.	9,17,902/-	18,358/-	03 ತಿಂಗಳು
MCF/CMG/H/eTN-23/2021-22 Dtd. 25.02.2022	ಒಂದು ವರ್ಷದ ಅವಧಿಗೆ ಎಂಸಿಎಫ್ ಹಾಸನದ ಅಂತರಿಕ್ಷನಗರ ಮತ್ತು ಸಿಐಎಸ್‌ಎಫ್ ಕ್ವಾರ್ಟಸ್‌ನಲ್ಲಿ ಮರುವಿತರಣೆಗೊಂಡ ಕ್ವಾರ್ಟಸ್‌ಗಳ ಪೇಂಟಿಂಗ್ ಕಾಮಗಾರಿ.	7,16,019/-	14,320/-	12 ತಿಂಗಳು
MCF/CMG/H/eTN-24/2021-22 Dtd. 25.02.2022	ಎಂಸಿಎಫ್ ಹಾಸನದ ಎಸ್‌ಸಿಸಿ ಮುಖ್ಯ ಕಟ್ಟಡದ ಛಾವಣಿಗೆ ಪಿಯು ಮತ್ತು ಟಿಪಿಓ ವಾಟರ್ ಪ್ರೂಫಿಂಗ್ ಕಾಮಗಾರಿಗಳು.	10,79,943/-	21,599/-	03 ತಿಂಗಳು

ಟೆಂಡರ್ ದಸ್ತಾವೇಜುಗಳನ್ನು ಡೌನ್‌ಲೋಡ್ ಮಾಡಿಕೊಳ್ಳುವ ಅವಧಿ: 03.03.2022ರ 10.00 ಗಂಟೆಯಿಂದ 14.03.2022ರ 17.00 ಗಂಟೆವರೆಗೆ
ಬಿಡ್ ಸ್ಪಷ್ಟನೆ ಪಡೆಯುವ ಅವಧಿ : 03.03.2022ರ 10:01 ಗಂಟೆಯಿಂದ 15.03.2022ರ 17.00 ಗಂಟೆವರೆಗೆ
ಬಿಡ್ ಸ್ಪಷ್ಟನೆಗೆ ಉತ್ತರ ನೀಡುವ ಕಡೇ ದಿನಾಂಕ ಮತ್ತು ಸಮಯ: 16.03.2022ರ 17:30 ಗಂಟೆವರೆಗೆ
ಟೆಂಡರ್‌ಗಳನ್ನು ಸ್ವೀಕರಿಸುವ ಕಡೇ ದಿನಾಂಕ ಮತ್ತು ಸಮಯ: 17.03.2022ರ 17.00 ಗಂಟೆವರೆಗೆ
ಟೆಂಡರ್‌ಗಳನ್ನು ತೆರೆಯುವ ದಿನಾಂಕ ಮತ್ತು ಸಮಯ : 25.03.2022 ರಂದು 11.30 ಗಂಟೆಯ ನಂತರ

2. ಆಸಕ್ತ ಟೆಂಡರುದಾರರು ಅರ್ಹತಾ ಅಗತ್ಯತೆ ಮತ್ತು ಇತರೆ ವಿವರಗಳಿಗಾಗಿ ವಿವರವಾದ ಟೆಂಡರ್ ಆಹ್ವಾನ ಪ್ರಕಟಣೆ (ಎನ್‌ಐಟಿ) ನೋಡಬಹುದು. ಇದನ್ನು ವೆಬ್‌ಸೈಟ್: www.isro.gov.in ನಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು. ಬಿಡ್ ಫಾರಂಗಳನ್ನು ಮತ್ತು ಇತರೆ ವಿವರಗಳನ್ನು ವೆಬ್‌ಸೈಟ್ www.tenderwizard.com/ISRO ಇಂದ ಡೌನ್‌ಲೋಡ್ ಮಾಡಿಕೊಳ್ಳಬಹುದು. ಎಲ್ಲಾ ತಿದ್ದುಪಡಿ, ಸಮಯ ವಿಸ್ತರಣೆ, ಸ್ಪಷ್ಟೀಕರಣ ಇತ್ಯಾದಿಗಳನ್ನು ವೆಬ್‌ಸೈಟ್‌ನಲ್ಲಿ ಅಪ್‌ಲೋಡ್ ಮಾಡಲಾಗುವುದು ಮತ್ತು ಪತ್ರಿಕೆಗಳಲ್ಲಿ ಪ್ರಕಟಿಸುವುದಿಲ್ಲ. ಟೆಂಡರ್ ದಾರರು ತಿದ್ದುಪಡಿಗಾಗಿ ನಿಯಮಿತವಾಗಿ ವೆಬ್‌ಸೈಟ್‌ಗೆ ಭೇಟಿ ನೀಡಬೇಕು

ವಿಭಾಗ ಮುಖ್ಯಸ್ಥರು, ಸಿಸಿಎಂಡಿ-ಸಿಎಂಜಿ

'ಗೃಹ ಸಚಿವರಾಗಲು ಜ್ಞಾನೇಂದ್ರ ಅನರ್ಹ'

ಬೆಂಗಳೂರು: ಶಿವಮೊಗ್ಗದಲ್ಲಿ ಸಚಿವ ಕೆ.ಎಸ್. ಈಶ್ವರಪ್ಪ ನೇತೃತ್ವದಲ್ಲಿ ಶವ ಮೆರವಣಿಗೆ ನಡೆಸಿರುವುದನ್ನು ಸಮರ್ಥಿಸಿಕೊಳ್ಳುತ್ತಿರುವ ಆರಗ ಜ್ಞಾನೇಂದ್ರ ಗೃಹ ಸಚಿವ ಸ್ಥಾನದಲ್ಲಿರಲು ಅನರ್ಹ ಎಂದು ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಹೇಳಿದರು.

'ಈಶ್ವರಪ್ಪ ಸ್ಥಳೀಯ ಶಾಸಕರಾಗಿ ಮೆರವಣಿಗೆಯಲ್ಲಿ ಪಾಲ್ಗೊಂಡಿದ್ದರು' ಎಂಬ ಗೃಹ ಸಚಿವರ ಹೇಳಿಕೆ ಕುರಿತು ಮಂಗಳವಾರ ಪ್ರತಿಕ್ರಿಯಿಸಿದ ಅವರು, 'ಸ್ಥಳೀಯ ಶಾಸಕರಾಗಿದ್ದರೆ ಮೃತನ ಮನೆಗೆ ಹೋಗಿ ಸಾಂತ್ವನ ಹೇಳಬೇಕಿತ್ತು. ನಿಷೇಧಾಜ್ಞೆ ಇರುವಾಗ ಮೆರವಣಿಗೆ ಮಾಡಿದ್ದೇಕೆ? ಎಲ್ಲ ಗಲಭೆಗೂ ಅವರೇ ಕಾರಣ. ಆತ, ಗೃಹ ಸಚಿವನಾಗಿರಲು ಅನರ್ಹ' ಎಂದರು.

ಮೃತ ಹರ್ಷನ ಮನೆಗೆ ಕಾಂಗ್ರೆಸ್ ನಾಯಕರು ಭೇಟಿ ನೀಡದಿರುವ ಬಗ್ಗೆ ಬಿಜೆಪಿ ನಾಯಕರ ಟೀಕೆಗೆ ಪ್ರತಿಕ್ರಿಯಿಸಿದ ಶಿವಕುಮಾರ್, 'ಬಿಜೆಪಿಯವರಿಂದ ಹೇಳಿಸಿಕೊಂಡು ನಾನು ಕಲಿಯಬೇಕಿಲ್ಲ. ಪಾದಯಾತ್ರೆ ಬಳಿಕ ನಾನು ಮೃತ ಯುವಕನ ಮನೆಗೆ ಭೇಟಿ ನೀಡುವೆ' ಎಂದು ತಿಳಿಸಿದರು.

ವಿಶ್ವನಾಥ್ ತಾಯಿ ಸಂಕಷ್ಟಕ್ಕೆ ಹಲವರ ಸ್ಪಂದನೆ, ವಿಧವಾ ವೇತನಕ್ಕೆ ಕ್ರಮ

ಬಾಗಿಲು ದುರಸ್ತಿಗೆ ಕ್ರಿಶ್ಚಿಯನ್ ಸಹೋದರರ ಸಾಥ್

ಪ್ರಜಾವಾಣಿ ವಾರ್ತೆ

ಶಿವಮೊಗ್ಗ: ಕೋಮುದ್ವೇಷಕ್ಕೆ ಏಳು ವರ್ಷಗಳ ಹಿಂದೆ ಹತ್ಯೆಯಾಗಿದ್ದ ವಿಶ್ವನಾಥ ಶೆಟ್ಟಿ ಅವರ ಮನೆಯನ್ನು ಮುಸ್ಲಿಂ ಯುವಕರು ಸ್ವಚ್ಛಗೊಳಿಸಿದ ಮಾನವೀಯ ನಡೆಯಿಂದ ಸ್ಫೂರ್ತಿ ಪಡೆದ ಬಡಗಿ ವೃತ್ತಿಯ ಕ್ರಿಶ್ಚಿಯನ್ ಸಹೋದರರು ತಾವೂ ಕೂಲಿ ಪಡೆಯದೇ ಮುರಿದ ಬಾಗಿಲು, ಕಿಟಕಿ ದುರಸ್ತಿ ಮಾಡಿಕೊಡಲು ಮುಂದೆ ಬಂದಿದ್ದಾರೆ.

ಅಂಥೋಣಿ, ಜ್ಞಾನ ಪ್ರಕಾಶ್ ಸಹೋದರರು ನಗರದಲ್ಲಿ ಹಲವು ವರ್ಷಗಳಿಂದ ಬಡಗಿ ವೃತ್ತಿ ಮಾಡಿಕೊಂಡು ಜೀವನ ಸಾಗಿಸುತ್ತಿದ್ದಾರೆ. ಮೀನಾಕ್ಷಮ್ಮ ಅವರ ಸ್ಥಿತಿ ಕಂಡು ಮರುಗಿದ ಅವರು ಯಾವುದೇ ಹಣ ಪಡೆಯದೇ ಕೆಲಸ ಮಾಡಿಕೊಡಲು ಒಪ್ಪಿಕೊಂಡಿದ್ದಾರೆ.

'ಮೃತ ವಿಶ್ವನಾಥ್ ತಾಯಿ ಮೀನಾಕ್ಷಮ್ಮ ಅವರ ಪಾಳುಬಿದ್ದ ಮನೆಯನ್ನು ಸ್ವಚ್ಛಗೊಳಿಸಿ, ಬಣ್ಣ ಬಳಿದುಕೊಟ್ಟ ಜಬೀಉಲ್ಲಾ ತಂಡಕ್ಕೆ ಹಣ ನೀಡಲು ಹೋದರೂ ಪಡೆಯಲಿಲ್ಲ. ನಮ್ಮದು ಅಳಿಲು ಸೇವೆ ಎಂದು ತಿರಸ್ಕರಿಸಿದರು. ಅಂಥೋಣಿ ಸಹೋದರರೂ ಉಚಿತವಾಗಿ ಸೇವೆ ಸಲ್ಲಿಸಲು ಮುಂದೆ ಬಂದಿದ್ದಾರೆ. ಕಿಟಕಿ ಗಾಜುಗಳು, ಬಾಗಿಲಿಗೆ ಅಗತ್ಯವಾದ ಮರ ಕೊಡಿಸಿದ್ದೇವೆ' ಎಂದು ಮುಖಂಡ ಎಂ. ಶ್ರೀಕಾಂತ್ ಮಾಹಿತಿ ನೀಡಿದರು.

ಮೀನಾಕ್ಷಮ್ಮ ಅವರಿಗೆ ಹಲವರು ಸಹಾಯಹಸ್ತ ಚಾಚಿದ್ದಾರೆ. 'ಪ್ರಜಾವಾಣಿ' ಮಾರ್ಚ್ 1ರ ಸಂಚಿಕೆಯಲ್ಲಿ ಪ್ರಕಟವಾದ 'ವಿಶ್ವನಾಥ್ ಮನೆ ಸ್ವಚ್ಛಗೊಳಿಸಿದ ಮುಸ್ಲಿಂ ಯುವಕರು' ವರದಿ ಓದಿದ ದಾವಣಗೆರೆಯ ಕೆಲವರು ಶಿವರಾತ್ರಿ ಹಬ್ಬಕ್ಕೆ ಬೇಕಾದ ಹಣ್ಣು, ಹಂಪಲು, ಮೂರು ತಿಂಗಳಿಗಾಗುವಷ್ಟು ದಿನಸಿ ಕೊಡಿಸಿದ್ದಾರೆ. ವಿಧವಾ ವೇತನ ದೊರೆಯದ ವಿಷಯ ತಿಳಿದ ಕಂದಾಯ ಇಲಾಖೆ ಅಧಿಕಾರಿ ಅ.ಮ.ಶಿವಮೂರ್ತಿ ಮತ್ತು ಸಿಬ್ಬಂದಿ ಮನೆಗೆ ಭೇಟಿ ನೀಡಿ, ಮಾಹಿತಿ ಪಡೆದುಕೊಂಡಿದ್ದಾರೆ.

'ವಿಶ್ವನಾಥ್ ಅವರ ತಾಯಿ ಮೀನಾಕ್ಷಮ್ಮ ಅವರು ವಿಧವಾ ವೇತನಕ್ಕೆ ಅಲೆದಾಡುತ್ತಿರುವ ವಿಷಯ ಗಮನಕ್ಕೆ ಬಂದಿರಲಿಲ್ಲ. 'ಪ್ರಜಾವಾಣಿ' ವರದಿ ನೋಡಿದ ತಕ್ಷಣ ಸಿಬ್ಬಂದಿ ಕಳುಹಿಸಿ, ದಾಖಲೆ ಪರಿಶೀಲಿಸಲಾಗಿದೆ. ತಕ್ಷಣ ವೇತನ ಮಂಜೂರು ಮಾಡಲು ಸೂಚಿಸಲಾಗಿದೆ' ಎಂದು ಉಪ ವಿಭಾಗಾಧಿಕಾರಿ ಟಿ.ವಿ. ಪ್ರಕಾಶ್ ಪ್ರತಿಕ್ರಿಯಿಸಿದರು.

ಬಣ್ಣ ಕಂಡ ಮೀನಾಕ್ಷಮ್ಮ ಅವರ ಮನೆ

ಈಶಾ ಫೌಂಡೇಷನ್: ರಾತ್ರಿಯಿಡೀ ಮಹಾಶಿವರಾತ್ರಿ ಆಚರಣೆ

ಆಧ್ಯಾತ್ಮಿಕ ಅನುಭವಗಳ ಅನಾವರಣ

• ಎ.ಎಂ.ಸುರೇಶ

ಈಶಾ ಫೌಂಡೇಷನ್ ಆಶ್ರಯದಲ್ಲಿ ನಡೆದ ಮಹಾಶಿವರಾತ್ರಿ ಉತ್ಸವ ಕಾರ್ಯಕ್ರಮದಲ್ಲಿ ಸದ್ಗುರು ಭಾಗವಹಿಸಿದ್ದರು

ಕೊಯಮತ್ತೂರು: ಮಹಾಶಿವರಾತ್ರಿ ಅಂಗವಾಗಿ ಈಶಾ ಫೌಂಡೇಷನ್ ನ ಈಶಾ ಯೋಗ ಕೇಂದ್ರದಲ್ಲಿ ರಾತ್ರಿಯಿಡೀ ನಡೆದ ಸಂಗೀತ, ಯೋಗ, ನೃತ್ಯ ಮೊದಲಾದ ಸಾಂಸ್ಕೃತಿಕ ಕಾರ್ಯಕ್ರಮಗಳು ಭಕ್ತರ ಮನಸೂರೆಗೊಂಡವು.

ಲಿಂಗಭೈರವಿ ಮೆರವಣಿಗೆ, ಲಿಂಗಭೈರವಿ ಮಹಾ ಆರತಿ, ಧ್ಯಾನಲಿಂಗ, ಮಹಾಯೋಗ ಯಜ್ಞ, ಮಧ್ಯರಾತ್ರಿ ಧ್ಯಾನ, ದಿವ್ಯದರ್ಶನ, ಖ್ಯಾತ ಕಲಾವಿದರು ನಡೆಸಿಕೊಟ್ಟ ಸಂಗೀತ, ನೃತ್ಯ ಪ್ರದರ್ಶನ ಆಧ್ಯಾತ್ಮಿಕ ಲೋಕದ ಅನುಭವಗಳನ್ನು ಅನಾವರಣಗೊಳಿಸಿತು.

ಸಂಜೆ 6ಕ್ಕೆ ಆರಂಭವಾಗಿ ಬೆಳಿಗ್ಗೆ 6ರವರೆಗೂ ನಡೆದ ವಿವಿಧ ಕಾರ್ಯಕ್ರಮಗಳನ್ನು ದೇಶ, ವಿದೇಶಗಳಿಂದ ಬಂದಿದ್ದ ಸಾವಿರಾರು ಭಕ್ತರು ಕಣ್ತುಂಬಿಸಿಕೊಂಡು ಪುಳಕಿತರಾದರು.

ಧ್ಯಾನಲಿಂಗದ ಸನ್ನಿಧಿಯಲ್ಲಿ ಈಶಾ ವಿಭೂತಿ ಜೊತೆಗೆ ರುದ್ರಾಕ್ಷಿಗಳನ್ನು ಸಹ ನೀಡಲಾಯಿತು. ಲೋಕಸಭೆಯ ಸ್ಪೀಕರ್ ಓಂ ಬಿರ್ಲಾ ಸೇರಿದಂತೆ ರಾಜಕೀಯ ಪಕ್ಷಗಳ ಮುಖಂಡರು ಭಾಗಿಯಾಗಿದ್ದರು. ಈಶಾ ಫೌಂಡೇಶನ್‌ನ ಹಮ್ಮಿಕೊಂಡಿದ್ದ ಈ ಕಾರ್ಯಕ್ರಮವನ್ನು ಯೂಟ್ಯೂಬ್ ಚಾನೆಲ್‌ನಲ್ಲಿ ನೇರಪ್ರಸಾರ ಮಾಡಲಾಯಿತು.

ಜಾಗೃತರಾಗಿ: ದೀಪ ಬೆಳಗಿಸುವ ಮೂಲಕ ಕಾರ್ಯಕ್ರಮಕ್ಕೆ ಚಾಲನೆ ನೀಡಿದ ಸದ್ಗುರು ಮಾತನಾಡಿ, ಇದು ವಿಶೇಷವಾದ ದಿನ. ಈ ಪವಿತ್ರವಾದ ದಿನದಂದು ಜಾಗರಣೆಯೊಂದಿಗೆ ಜಾಗೃತರಾಗಿ ಎಂದು ಸಲಹೆ ಮಾಡಿದರು.

ಕಳೆದ ಎರಡು ವರ್ಷಗಳಿಂದ ಕೋವಿಡ್ ಕಾರಣದಿಂದಾಗಿ ಹಲವು ಸಂಕಷ್ಟಗಳನ್ನು ಎದುರಿಸಿದ್ದೇವೆ. ಹತ್ತಿರದವರನ್ನು ಕಳೆದುಕೊಂಡಿದ್ದೇವೆ. ಆದರೆ, ಇದರಿಂದ ವಿಚಲಿತರಾಗಬಾರದು. ಇನ್ನಷ್ಟು ದೃಢ ಸಂಕಲ್ಪದೊಂದಿಗೆ ಭವಿಷ್ಯದತ್ತ ಹೆಜ್ಜೆ ಹಾಕಿ ಎಂದು ಕಿವಿ ಮಾತು ಹೇಳಿದರು ಭೂಮಿಗೂ, ಸೂರ್ಯನಿಗೂ ಬೆಳಕಿನ ಸಂಬಂಧವಿದೆ. ಭೂಮಿಗೆ ಶಿವ ದೇವರು. ಇಂದಿನ ಜನಾಂಗದವರ ನಿರ್ಲಕ್ಷ್ಯ, ಅಜ್ಞಾನದಿಂದ ಭೂಮಿ ಹಾಳಾಗುತ್ತಿದೆ. ಅವರಲ್ಲಿ ಅರಿವು ಮೂಡಿಸುವ ಮೂಲಕ ಮಣ್ಣನ್ನು ಉಳಿಸುವ ಕೆಲಸ ಮಾಡಬೇಕಾಗಿದೆ ಎಂದರು.

ಮಣ್ಣನ್ನು ಉಳಿಸಿ ಎಂಬುದು ಈ ಬಾರಿಯ ಮಹಾಶಿವರಾತ್ರಿಯ ಘೋಷವಾಕ್ಯವಾಗಿದ್ದು, ಕಾರ್ಯಕ್ರಮಕ್ಕೆ ಬಂದವರಿಗೆ ಇದಕ್ಕೆ ಸಂಬಂಧಿಸಿದ ಸ್ಟಿಕರ್ ಗಳನ್ನು ನೀಡಲಾಯಿತು.

ಧ್ಯಾನಲಿಂಗದಲ್ಲಿ ಪಂಚ ಭೂತ ಆರಾಧನೆಯೊಂದಿಗೆ ಪ್ರಾರಂಭವಾದ ಮಹಾಶಿವರಾತ್ರಿಯ ಆಚರಣೆಯಲ್ಲಿ ಲಿಂಗ ಭೈರವಿ ಮಹಾ ಆರತಿ, ಸದ್ಗುರುಗಳೊಂದಿಗೆ ಸತ್ಸಂಗ, ಮಧ್ಯರಾತ್ರಿ ಧ್ಯಾನ ಮತ್ತು ಅದ್ಭುತವಾದ ಆದಿಯೋಗಿಯ ದಿವ್ಯ ದರ್ಶನವಾಯಿತು.

ದೇಶದ ವಿವಿಧ ಭಾಗಗಳಿಂದ ಬಂದಿದ್ದ ಹೆಸರಾಂತ ಕಲಾವಿದರಾದ ಪಾಪೋನ್, ಮಾಸ್ಟರ್ ಸಲೀಂ, ಹಂಸರಾಜ್ ರಘುವಂಶಿ, ಮಂಗ್ಲಿ ಮತ್ತು ಶಾನ್ ರೋಲ್ಡನ್ ಅವರು ತಮ್ಮ ವಿಶಿಷ್ಟ ಮತ್ತು ವೈವಿಧ್ಯಮಯ ಸಂಗೀತದ ಮೂಲಕ ಪ್ರೇಕ್ಷಕರನ್ನು ರಂಜಿಸಿದರು. ಈಶಾ ಫೌಂಡೇಶನ್‌ನ ಸ್ವಂತ ವಾದ್ಯಗೋಷ್ಠಿಯಾದ ಸೌಂಡ್ಸ್ ಆಫ್ ಈಶಾದಿಂದ ಸಂಗೀತ ಮತ್ತು ಈಶಾ ಸಂಸ್ಕೃತಿಯಿಂದ ನೃತ್ಯ ಪ್ರದರ್ಶನ ನಡೆಯಿತು. ಕಲಾವಿದರೊಂದಿಗೆ ಸದ್ಗುರು ಸಹ ಹೆಜ್ಜೆ ಹಾಕಿದರಲ್ಲದೆ ಹಾಡುಗಳನ್ನು ಹಾಡಿದರು.

ಪ್ರದರ್ಶನ ನೀಡಿದ ಕಲಾವಿದರು: ರಂಗನಾಮ ಪಾಪೋನ್‌ನಿಂದ ಜನಪ್ರಿಯರಾಗಿರುವ ಅಸ್ಸಾಂನ ಹಿನ್ನೆಲೆ ಗಾಯಕ ಅಂಗರಾಗ್ ಮಹಾಂತ, ಪಂಜಾಬಿ ಗಾಯಕ ಮಾಸ್ಟರ್ ಸಲೀಂ, ಹಂಸರಾಜ್ ರಘುವಂಶಿ ಅವರ ಬಹುತೇಕ ಹಾಡುಗಳು ಶಿವನಿಗೆ ಅರ್ಪಿತವಾದವು. ಮಂಗ್ಲಿ ಎಂದೇ ಜನಪ್ರಿಯರಾಗಿರುವ ಆಂಧ್ರಪ್ರದೇಶದ ಸತ್ಯವತಿ ರಾಥೋಡ್ ಅವರು ತಮ್ಮ ಭಾವಪೂರ್ಣ ಕಂಠದಿಂದ ಎಲ್ಲರನ್ನು ಪುಳಕಿತಗೊಳಿಸಿದರು. ಈಶಾದ ಮಹಾಶಿವರಾತ್ರಿಯಲ್ಲಿ ಇದು ಅವರಿಗೆ ಎರಡನೇ ಕಾರ್ಯಕ್ರಮ. ಶಾನ್ ರೋಲ್ಡನ್ ಎಂದೇ ಜನಪ್ರಿಯರಾಗಿರುವ ರಾಘವೇಂದ್ರ ರಾಜಾರಾವ್ ಮೊದಲಾದವರು ನೀಡಿದ ಕಾರ್ಯಕ್ರಮಗಳು ಮನಸೂರೆಗೊಂಡವು.

ಅನ್ನದಾನ: ಅನ್ನದಾನವು ಮಹಾಶಿವರಾತ್ರಿ ಆಚರಣೆಯ ಅವಿಭಾಜ್ಯ ಅಂಗವಾಗಿದೆ. ಮಹಾಶಿವರಾತ್ರಿಯ ದಿನವಾದ ಮಂಗಳವಾರ ರಾತ್ರಿಯಿಂದ ಏಳು ದಿನಗಳ ಕಾಲ ಸಾವಿರಾರು ಮಂದಿಗೆ ಅನ್ನದಾನದ ವ್ಯವಸ್ಥೆ ಮಾಡಲಾಗಿದೆ. ನೂರಾರು ಸ್ವಯಂ ಸೇವಕರು ಇದರಲ್ಲಿ ಭಾಗಿಯಾಗಿದ್ದಾರೆ.

ಮಣ್ಣು ಉಳಿಸಲು ಬೈಕ್ ಯಾತ್ರೆ

ಈ ಹಿಂದೆ ಕಾವೇರಿ ಉಳಿಸಿ ಅಭಿಯಾನ ಹಮ್ಮಿಕೊಂಡಿದ್ದಾಗ 35 ಸಾವಿರ ಕಿ.ಮೀ. ಬೈಕ್ ಯಾತ್ರೆ ಮಾಡಿದ್ದೆ. ಅದೇ ರೀತಿ ಈಗ ಮಣ್ಣನ್ನು ಉಳಿಸಿ ಅಭಿಯಾನಕ್ಕೆ ಮಾರ್ಚ್ 21ರಂದು ಲಂಡನ್ ನಲ್ಲಿ ಬೈಕ್ ಯಾತ್ರೆ ಮೂಲಕ ಚಾಲನೆ ನೀಡಲಾಗುವುದು. 30 ಸಾವಿರ ಕಿ.ಮೀ. ದೂರ ಈ ಯಾತ್ರೆ ಸಾಗಲಿದೆ ಎಂದು ಸದ್ಗುರು ತಿಳಿಸಿದರು.

100 ದಿನಗಳ ಕಾಲ ಇದು ಸಾಗಲಿದೆ. ಸರ್ಕಾರಗಳು, ವಿಜ್ಞಾನಿಗಳ ಕಣ್ಣು ತೆರೆಸುವುದು ಇದರ ಉದ್ದೇಶ. ಜನ ಕೂಡ ಜಾಗೃತರಾಗಬೇಕು. ಮಣ್ಣಿನ ಸಂರಕ್ಷಣೆಗೆ ನೀತಿ ರೂಪಿಸುವಂತೆ ಒತ್ತಡ ಹೇರಬೇಕು. ಜನರು ಮಾತನಾಡುವ ಸಮಯ ಬಂದಿದೆ ಎಂದರು.

ಪ್ರತಿದಿನ ಹತ್ತು ನಿಮಿಷವಾದರೂ ಮಣ್ಣಿನ ಬಗ್ಗೆ ಯೋಚಿಸಿ ಅಭಿಯಾನಕ್ಕೆ ಸಾಮಾಜಿಕ ಜಾಲತಾಣಗಳ ಮೂಲಕ ಬೆಂಬಲ ಸೂಚಿಸಿ ಎಂದು ಮನವಿ ಮಾಡಿದರು. 2035ರ ವೇಳೆಗೆ ಆಹಾರದ ಸಮಸ್ಯೆ ಉಂಟಾಗಲಿದೆ. ಈಗಲೇ ಎಚ್ಚೆತ್ತುಕೊಳ್ಳದಿದ್ದರೆ ಮುಂದೆ ಕಷ್ಟವಾಗಲಿದೆ ಎಂದು ಎಚ್ಚರಿಸಿದರು.

ಕಾವೇರಿ ವಿಷಯ ಪ್ರಸ್ತಾಪಿಸುತ್ತಿದ್ದಂತೆಯೇ ಒಂದು ಕ್ಷಣ ಭಾವುಕರಾಗಿ ಕಣ್ಣೀರು ಹಾಕಿದರು.

ಚಿಕ್ಕಬಳ್ಳಾಪುರ ತಾಲ್ಲೂಕಿನ ನಂದಿ ಗ್ರಾಮದ ಭೋಗ ನಂದೀಶ್ವರ ದೇಗುಲದಲ್ಲಿ ನಡೆದ ಶಿವೋತ್ಸವ ಕಾರ್ಯಕ್ರಮದಲ್ಲಿ ಮಹಾಶಿವನಿಗೆ ಆರೋಗ್ಯ ಸಚಿವ ಡಾ.ಕೆ. ಸುಧಾಕರ್, ಕೇಂದ್ರ ಸಚಿವ ಎ. ನಾರಾಯಣಸ್ವಾಮಿ, ರಾಜ್ಯಪಾಲ ಥಾವರಚಂದ್ ಗೆಹಲೋತ್, ಸಿರಿಗೆರೆ ತರಳಬಾಳು ಮಠದ ಶಿವಮೂರ್ತಿ ಶಿವಾಚಾರ್ಯ ಸ್ವಾಮೀಜಿ, ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಎಂ.ಟಿ.ಬಿ. ನಾಗರಾಜು, ಸತ್ಯಸಾಯಿ ಗ್ರಾಮದ ಮಧುಸೂದನ ಸಾಯಿ, ಬಿ.ಎ. ಬಸವರಾಜು ಪೂಜೆ ಸಲ್ಲಿಸಿದರು

ನಂದಿಯಲ್ಲಿ ಅದ್ದೂರಿ ಶಿವೋತ್ಸವ

ಪ್ರಜಾವಾಣಿ ವಾರ್ತೆ

ಚಿಕ್ಕಬಳ್ಳಾಪುರ: ಸೂರ್ಯ ಮುಳುಗುತ್ತಲೇ ಇತ್ತ ತಾಲ್ಲೂಕಿನ ನಂದಿ ಗ್ರಾಮದ ಭೋಗ ನಂದೀಶ್ವರ ದೇಗುಲದ ಆವರಣದಲ್ಲಿ ಶಿವ ಬೆಳಕು ಜಗಮಗಿಸಿತು.

ಶಿವರಾತ್ರಿ ಹಬ್ಬದ ಹಿನ್ನೆಲೆಯಲ್ಲಿ ಸೋಮವಾರ ರಾತ್ರಿ ಸಚಿವ ಡಾ.ಕೆ. ಸುಧಾಕರ್ ಫೌಂಡೇಷನ್ ನೇತೃತ್ವದಲ್ಲಿ ಹಾಗೂ ಜಿಲ್ಲಾಡಳಿತದ ಸಹಯೋಗದಲ್ಲಿ ನಡೆದ 'ಶಿವೋತ್ಸವ' ಕಾರ್ಯಕ್ರಮದಲ್ಲಿ ಶಿವಸ್ತುತಿ ಅನುರಣಿಸಿತು.

ರಾಜ್ಯಪಾಲ ಥಾವರಚಂದ್ ಗೆಹಲೋತ್ ಶಂಖನಾದ ಮೊಳಗಿಸುವ ಮೂಲಕ ಶಿವೋತ್ಸವಕ್ಕೆ ವಿಧ್ಯುಕ್ತ ಚಾಲನೆ ನೀಡಿದರು. ಈ ವೇಳೆ ಆಗಮಿಕರು ಶಿವಸ್ತುತಿ, ರುದ್ರ ಪಠಣ ನಡೆಸಿಕೊಟ್ಟರು. ಮಹಾದೇವನಿಗೆ ರುದ್ರಾಭಿಷೇಕ ನೆರವೇರಿಸಲಾಯಿತು. ಹರ ಹರ ಮಹಾದೇವ ಘೋಷಣೆಗಳು ಮೊಳಗಿದವು.

ಮಹಾಶಿವರಾತ್ರಿ ಮತ್ತು ಶಿವೋತ್ಸವದ ಅಂಗವಾಗಿ ಜಿಲ್ಲೆ, ಹೊರ ಜಿಲ್ಲೆಯಷ್ಟೇ ಅಲ್ಲದೆ ನೆರೆಯ ಆಂಧ್ರಪ್ರದೇಶದ ವಿವಿಧ ಭಾಗಗಳಿಂದ ಬೆಳಿಗ್ಗೆಯಿಂದಲೇ ಭೋಗ ನಂದೀಶ್ವರ ದೇವಾಲಯಕ್ಕೆ ಭಕ್ತರು ಬಂದರು. ನಂದಿಗಿರಿಧಾಮದಲ್ಲಿ ಲೇಸರ್ ಶೋ ವ್ಯವಸ್ಥೆ ಮಾಡಲಾಗಿತ್ತು.

ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಮಾತನಾಡಿ, 'ಎತ್ತಿನಹೊಳೆ ಯೋಜನೆಗೆ ವೇಗ ನೀಡಲಾಗುವುದು. ಭೂಸ್ವಾಧೀನಕ್ಕೆ ಹಣ ನೀಡುವೆ. ಪ್ರಸಕ್ತ ವರ್ಷ ಎತ್ತಿನಹೊಳೆ ಯೋಜನೆ ಹೆಚ್ಚಿನ ವೇಗ ಪಡೆಯಲಿದೆ' ಎಂದು ಹೇಳಿದರು.

ಶಿವೋತ್ಸವದ ರೂವಾರಿ ಸಚಿವ ಸುಧಾಕರ್, 'ಮುಂದಿನ ವರ್ಷ ಹಂಪಿ ಉತ್ಸವ ಮತ್ತು ಮೈಸೂರು ದಸರಾ ಉತ್ಸವದ ಮಾದರಿಯಲ್ಲಿ ನಂದಿಯಲ್ಲಿ ಶಿವೋತ್ಸವವನ್ನು ರಾಜ್ಯಮಟ್ಟದ ಕಾರ್ಯಕ್ರಮವಾಗಿ ಆಚರಿಸೋಣ' ಎಂದು ಪ್ರಕಟಿಸಿದರು.

ಶಿವೋತ್ಸವದ ಅಂಗವಾಗಿ ಇಡೀ ರಾತ್ರಿಪೂರ್ತಿ ಪ್ರಸಿದ್ಧ ಗಾಯಕರು ಸಾಂಸ್ಕೃತಿಕ ರಸದೌತಣವನ್ನು ಉಣಬಡಿಸಿದರು. ಸಿರಿಗೆರೆ ತರಳಬಾಳು ಮಠದ ಶಿವಮೂರ್ತಿ ಶಿವಾಚಾರ್ಯ ಸ್ವಾಮೀಜಿ ಇದ್ದರು.

ಮಹದೇಶ್ವರ ಬೆಟ್ಟ: ಶಿವರಾತ್ರಿ ಜಾತ್ರೆ ನಿರ್ಬಂಧ ತೆರವು

ಪ್ರಜಾವಾಣಿ ವಾರ್ತೆ

ಮಹಾ ಶಿವರಾತ್ರಿ ದಿನವಾದ ಮಂಗಳವಾರ ಸಂಜೆ ಮಲೆ ಮಹದೇಶ್ವರ ಸ್ವಾಮಿ ದೇವಾಲಯದಲ್ಲಿ ಕಂಡು ಬಂದ ಭಕ್ತ ಸಮೂಹ

ಮಹದೇಶ್ವರ ಬೆಟ್ಟ: 'ಇಲ್ಲಿನ ಮಲೆ ಮಹದೇಶ್ವರಸ್ವಾಮಿ ದೇವಾಲಯದಲ್ಲಿ ಶಿವರಾತ್ರಿ ಜಾತ್ರೆಗೆ ವಿಧಿಸಲಾಗಿದ್ದ ನಿರ್ಬಂಧಗಳನ್ನು ವಾಪಸ್ ಪಡೆಯಲಾಗಿದೆ. ಕ್ಷೇತ್ರದಲ್ಲಿ ಭಕ್ತರ ವಾಸ್ತವ್ಯಕ್ಕೆ ಹಾಗೂ 3ರಂದು ನಡೆಯಲಿರುವ ರಥೋತ್ಸವದಲ್ಲಿ ಭಾಗವಹಿಸಲು ಅವಕಾಶ ನೀಡಲಾಗಿದೆ' ಎಂದು ಚಾಮರಾಜನಗರ ಜಿಲ್ಲಾ ಉಸ್ತುವಾರಿ ಸಚಿವ ಹಾಗೂ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರದ ಉಪಾಧ್ಯಕ್ಷ ವಿ.ಸೋಮಣ್ಣ ಮಂಗಳವಾರ ಹೇಳಿದರು.

ಬೆಟ್ಟದಲ್ಲಿ ಜಿಲ್ಲೆಯ ಶಾಸಕರು ಹಾಗೂ ಅಧಿಕಾರಿಗಳೊಂದಿಗೆ ಸಭೆ ನಡೆಸಿದ ಬಳಿಕ ಮಾತನಾಡಿದ ಅವರು, 'ನಿರ್ಬಂಧಕ್ಕೆ ಸಂಬಂಧಿಸಿ ಸ್ಥಳೀಯವಾಗಿ ಚರ್ಚಿಸಿ ತೀರ್ಮಾನ ಕೈಗೊಳ್ಳುವಂತೆ ಮುಖ್ಯಮಂತ್ರಿ ಸೂಚಿಸಿದ್ದರು. ಅದರಂತೆ ಸಭೆ ನಡೆಸಿದ್ದು, ಕೋವಿಡ್ ಕಡಿಮೆಯಾಗಿರುವುದರಿಂದ ಹಾಗೂ ಬೇರೆಯಡೆಯೂ ಭಕ್ತರಿಗೆ ಅವಕಾಶ ಕಲ್ಪಿಸುತ್ತಿರುವುದರಿಂದ ಇಲ್ಲಿಯೂ ಶಿವರಾತ್ರಿ ಸಂದರ್ಭದಲ್ಲಿ ಭಕ್ತರಿಗೆ ನಿರ್ಬಂಧ ವಿಧಿಸದಿರಲು ತೀರ್ಮಾನಿಸಲಾಗಿದೆ' ಎಂದರು.

'ಭಕ್ತರು ಕೋವಿಡ್ ನಿಯಮ ಪಾಲಿಸಬೇಕು. ಮಾಸ್ಕ್, ಸ್ಯಾನಿಟೈಸರ್ ಬಳಕೆ, ಸುರಕ್ಷಿತ ಅಂತರ ಕಾಪಾಡಿಕೊಳ್ಳಬೇಕು' ಎಂದು ಕೋರಿದರು.

ನಿಷೇಧಾಜ್ಞೆ: ಸಂಜೆ ಬಳಿಕ ಬಾಗಿಲು ಮುಚ್ಚಿದ ದೇವಸ್ಥಾನಗಳು

ಪ್ರಜಾವಾಣಿ ವಾರ್ತೆ

ಶಿವಮೊಗ್ಗ: ನಗರದಲ್ಲಿ ಬಜರಂಗದಳದ ಕಾರ್ಯಕರ್ತ ಹರ್ಷ ಹತ್ಯೆಯಾದ ಬಳಿಕ ಜಿಲ್ಲಾಡಳಿತ ಮಾರ್ಚ್ 4ರವರೆಗೂ ನಿಷೇಧಾಜ್ಞೆ ಜಾರಿಗೊಳಿಸಿರುವುದರಿಂದ ಮಂಗಳವಾರ ಸಂಜೆ 7ರ ನಂತರ ಮಹಾಶಿವರಾತ್ರಿಯ ದಿನವಾಗಿದ್ದರೂ ನಗರದ ಪ್ರಮುಖ ದೇವಾಲಯಗಳಲ್ಲಿ ಬಾಗಿಲು ಮುಚ್ಚಿಸಲಾಯಿತು.

ನೆಹರೂ ರಸ್ತೆ, ಓಟಿ ರಸ್ತೆ, ಎಂಕೆಕೆ ರಸ್ತೆ, ಬಿಎಚ್ ರಸ್ತೆ ಎಲ್ಲೆಡೆ ಪೊಲೀಸರು ಅಂಗಡಿಗಳನ್ನು ಬಂದ್ ಮಾಡಲು ಸೂಚಿಸಿದರು. ರಾತ್ರಿ 7ರಿಂದ ಬೆಳಿಗ್ಗೆ 6ರವರೆಗೂ ಕರ್ಫ್ಯೂ ಇರುವುದರಿಂದ ಎಲ್ಲ ರೀತಿಯ ಚಟುವಟಿಕೆಗೆ ಬ್ರೇಕ್ ಹಾಕಲಾಗಿದೆ. ಕೋಟೆ ಭೀಮೇಶ್ವರ ದೇವಸ್ಥಾನದಲ್ಲಿ ಸಂಜೆಯ ನಂತರ ಭಕ್ತರ ಆಗಮನ ಹೆಚ್ಚಿನ ಸಂಖ್ಯೆಯಲ್ಲಿತ್ತು. ಆದರೆ, ಪೊಲೀಸರು ಸಂಜೆ 7ಕ್ಕೆ ದೇವಸ್ಥಾನದ ಮುಂಬಾಗಿಲಿನ ಗೇಟ್ ಬಂದ್ ಮಾಡಿ ಭಕ್ತರನ್ನು ವಾಪಸ್ ಕಳುಹಿಸಿದರು.

ಗಂಗೆಯಲ್ಲಿ ಮಿಂದ 3.40 ಲಕ್ಷ ಜನ

ಪ್ರಯಾಗ್‌ರಾಜ್ (ಪಿಟಿಐ): ಮಹಾಶಿವರಾತ್ರಿಯ ಪ್ರಯುಕ್ತ ಮಂಗಳವಾರ ಇಲ್ಲಿನ ಗಂಗಾ ನದಿಯಲ್ಲಿ ಸುಮಾರು 3.40 ಲಕ್ಷ ಜನರು ಪವಿತ್ರ ಸ್ನಾನ ಮಾಡಿದರು ಎಂದು ಅಧಿಕಾರಿಯೊಬ್ಬರು ಹೇಳಿದರು.

ದರಗಂಜ್‌ನಲ್ಲಿರುವ ನಾಗವಾಸುಕಿ ದೇವಸ್ಥಾನ ಮತ್ತು ಯಮುನಾ ತೀರದಲ್ಲಿರುವ ಮಂಕಮೇಶ್ವರ ದೇವಸ್ಥಾನದಲ್ಲಿ ಬೆಳಿಗ್ಗೆಯಿಂದ ಶಿವಭಕ್ತರು ಈಶ್ವರನಿಗೆ ನೀರು ಮತ್ತು ಹಾಲಿನ ಅಭಿಷೇಕ ಮಾಡಿದರು ಎಂದು ಮಾಘ ಮೇಳ ಪ್ರಾಧಿಕಾರ ಹೇಳಿದೆ.

ಶಿವಪಂಚಾಕ್ಷರಿ ಪಠಣದೊಂದಿಗೆ ಅಹೋರಾತ್ರಿ ಜಾಗರಣೆ

ಪ್ರಜಾವಾಣಿ ವಾರ್ತೆ

ಉಜಿರೆ: 'ಧರ್ಮದ ಮರ್ಮವನ್ನರಿತು ನಮ್ಮನ್ನು ನಾವು ಶುದ್ಧೀಕರಿಸಿ ಜಾಗೃತಿಗಾಗಿ ಜಾಗರಣೆ ಮಾಡಬೇಕು. ಸಂಸಾರದ ಕಷ್ಟಗಳನ್ನು ಪಾರು ಮಾಡಲು ಧರ್ಮದ ಅನುಷ್ಠಾನದೊಂದಿಗೆ ದೇವರ ಅನುಗ್ರಹವೂ ಅಗತ್ಯ' ಎಂದು ಧರ್ಮಾಧಿಕಾರಿ ಡಿ. ವೀರೇಂದ್ರ ಹೆಗ್ಗಡೆ ಹೇಳಿದರು.

ಧರ್ಮಸ್ಥಳದಲ್ಲಿ ಮಂಗಳವಾರ ಶಿವರಾತ್ರಿ ಸಂದರ್ಭದಲ್ಲಿ ಶಿವಪಂಚಾಕ್ಷರಿ ಪಠಣದೊಂದಿಗೆ ಅಹೋರಾತ್ರಿ ಜಾಗರಣೆಯನ್ನು ಉದ್ಘಾಟಿಸಿ ಅವರು ಮಾತನಾಡಿದರು

'ನಮ್ಮೆಲ್ಲರ ಸುಖ-ಶಾಂತಿ, ನೆಮ್ಮದಿಯೊಂದಿಗೆ ವಿಶ್ವಶಾಂತಿಗಾಗಿ ನಾವು ಪಾರ್ಥನೆ ಮಾಡಬೇಕಾದ ಅನಿವಾರ್ಯತೆ ಹಾಗೂ ಸಂಕ್ರಮಣ ಕಾಲದಲ್ಲಿ ನಾವು ಈಗ ಇದ್ದೇವೆ. ಸತ್ಯ, ಧರ್ಮ, ನ್ಯಾಯ ಮತ್ತು ನೀತಿಯ ಪಾಲನೆ ಮಾಡಬೇಕು. ಹಿತ-ಮಿತ ಆಹಾರ ಸೇವನೆಯೊಂದಿಗೆ ಶಿಸ್ತು, ಸಂಯಮ ಹಾಗೂ ಮಾನವೀಯ ಮೌಲ್ಯಗಳನ್ನು ಬೆಳೆಸಿಕೊಳ್ಳಬೇಕು' ಎಂದರು.

ಪಾದಯಾತ್ರಿಗಳು ಪರಿಸರ ಮಾಲಿನ್ಯ ಮಾಡಬಾರದು. ಶಿಸ್ತಿನೊಂದಿಗೆ ಪರಿಸರ ಸಂರಕ್ಷಣೆ ಮಾಡಿ ಸ್ವಚ್ಛತೆಯನ್ನೂ ಕಾಪಾಡಬೇಕು. ಪ್ಲಾಸ್ಟಿಕ್ ಹಾಗೂ ಇತರ ತ್ಯಾಜ್ಯಗಳನ್ನು ಅಲ್ಲಲ್ಲಿ ಬಿಸಾಡಿ ಇತರರಿಗೆ ತೊಂದರೆ ಉಂಟುಮಾಡಬಾರದು ಎಂದು ಅವರು ಕಿವಿಮಾತು ಹೇಳಿದರು.

ಪಾದಯಾತ್ರೆಯ ರೂವಾರಿ ಬೆಂಗಳೂರಿನ ಹನುಮಂತಪ್ಪ ಗುರೂಜಿ ಮತ್ತು ಮರಿಯಪ್ಪ ಗೌಡ ಇದ್ದರು. ರಾತ್ರಿ ಇಡೀ ಭಕ್ತರು ದೇವರ ಪ್ರಾರ್ಥನೆ, ಧ್ಯಾನ, ಭಜನೆಯೊಂದಿಗೆ ಜಾಗರಣೆ ಮಾಡಿದರು.

30 ಸಾವಿರಕ್ಕೂ ಅಧಿಕ ಪಾದಯಾತ್ರಿಗಳು: ರಾಜ್ಯದ ಹಾಗೂ ಹೊರರಾಜ್ಯದ ವಿವಿಧ ಊರುಗಳಿಂದ 30 ಸಾವಿರಕ್ಕೂ ಅಧಿಕ ಪಾದಯಾತ್ರಿಗಳು ಧರ್ಮಸ್ಥಳಕ್ಕೆ ಬಂದಿದ್ದು, ಅವರನ್ನು ಮುಖ್ಯ ಪ್ರವೇಶದ್ವಾರದ ಬಳಿ ಸ್ವಾಗತಿಸಲಾಯಿತು.

ಸಾಕೇತ ಮತ್ತು ಗಂಗೋತ್ರಿ ವಸತಿ ಛತ್ರಗಳಲ್ಲಿ ಹಾಗೂ ಶಾಲೆಯಲ್ಲಿ ಉಚಿತ ವಸತಿ ಸೌಲಭ್ಯ ಮಾಡಲಾಗಿದ್ದು, ಉಜಿರೆಯ ಶಾಲಾ, ಕಾಲೇಜು ಹಾಗೂ ಇತರ ವಿದ್ಯಾಸಂಸ್ಥೆಗಳಲ್ಲಿ ಉಚಿತ ವಸತಿ ಸೌಲಭ್ಯವಿದೆ.

ದೇವಸ್ಥಾನ, ವಸತಿಛತ್ರಗಳು ಹಾಗೂ ಇತರ ಕಟ್ಟಡಗಳನ್ನು ವಿವಿಧ ವಿನ್ಯಾಸಗಳಿಂದ ಅಲಂಕರಿಸಲಾಗಿದೆ. ಉಜಿರೆಯ ಎಸ್‌ಡಿಎಂ ಆಸ್ಪತ್ರೆ, ಸಂಚಾರಿ ಆಸ್ಪತ್ರೆ, ಆಂಬುಲೆನ್ಸ್ ಮೂಲಕ ಪಾದಯಾತ್ರಿಗಳಿಗೆ ಅಗತ್ಯವಿದ್ದಲ್ಲಿ ಉಚಿತ ವೈದ್ಯಕೀಯ ತಪಾಸಣೆ ವ್ಯವಸ್ಥೆ ಮಾಡಲಾಗಿದೆ.

ನೇತ್ರಾವತಿ ಸ್ನಾನಘಟ್ಟದಲ್ಲಿ ಪುಣ್ಯಸ್ನಾನ ಮಾಡಿದ ಭಕ್ತರು ದೇವರ ದರ್ಶನ ಪಡೆದರು. ನಂತರ ಧರ್ಮಾಧಿಕಾರಿ ಡಿ.ವೀರೇಂದ್ರ ಹೆಗ್ಗಡೆ ಅವರನ್ನು ಭೇಟಿಯಾಗಿ ಆಶೀರ್ವಾದ ಪಡೆದರು. ಕೆಎಸ್‌ಆರ್‌ಟಿಸಿಯಿಂದ ಧರ್ಮಸ್ಥಳಕ್ಕೆ ವಿಶೇಷ ಬಸ್ ಸೌಲಭ್ಯ ಕಲ್ಪಿಸಲಾಗಿದೆ. ಬಿಗಿಭದ್ರತೆಗಾಗಿ ಹೆಚ್ಚಿನ ಪೊಲೀಸರನ್ನು ನಿಯೋಜಿಸಲಾಗಿದೆ.

'ತ್ರಿಪುರಾಸುರರ ಸಂಹಾರಕ್ಕೆ ಪೂಜೆ'

ಪ್ರಜಾವಾಣಿ ವಾರ್ತೆ

ಮೈಸೂರು: 'ಕೊರಿಯಾ, ರಷ್ಯಾ ಮತ್ತು ಚೀನಾದಲ್ಲಿರುವ ಅಧುನಿಕ ತ್ರಿಪುರಾಸುರರ ಸಂಹಾರಕ್ಕಾಗಿ ಶಿವರಾತ್ರಿ ದಿನ ವಿಶೇಷ ಪೂಜೆ ಸಲ್ಲಿಸಿದ್ದೇನೆ' ಎಂದು ಇಲ್ಲಿನ ಅವಧೂತ ದತ್ತಪೀಠದ ಗಣಪತಿ ಸಚ್ಚಿದಾನಂದ ಸ್ವಾಮೀಜಿ ತಿಳಿಸಿದರು.

'ಕೊರಿಯಾ, ರಷ್ಯಾ ಮತ್ತು ಚೀನಾದ ಅಧ್ಯಕ್ಷರು ಆಧುನಿಕ ರಾಕ್ಷಸರು. ಅವರಿಗೆ ಸಹಾಯ ಮಾಡುವ ರಾಕ್ಷಸನೊಬ್ಬ ಪಾಕಿಸ್ತಾನದಲ್ಲಿದ್ದಾನೆ. ಈ ರಾಕ್ಷಸರಿಂದ ಇಡೀ ವಿಶ್ವವೇ ಹಾಳಾಗುತ್ತಿದ್ದು, ಜನ ಸಂಕಷ್ಟ ಅನುಭವಿಸುತ್ತಿದ್ದಾರೆ. ಅವರಿಗೆ ಒಳ್ಳೆಯ ಬುದ್ಧಿ ಅಥವಾ ಶಿಕ್ಷೆ ಕೊಡಲಿ ಎಂದು ಶಿವನನ್ನು ಬೇಡಿದ್ದೇನೆ' ಎಂದು ಮಾಧ್ಯಮವರಿಗೆ ಹೇಳಿದರು.

'ಉಕ್ರೇನ್‌ನಲ್ಲೂ ನನ್ನ ಭಕ್ತರಿದ್ದಾರೆ. ಒಂದು ವಾರ ಅಲ್ಲಿ ತಂಗಿದ್ದೆ. ಅಲ್ಲಿನ ಜನ ರಷ್ಯಾ ವಿರುದ್ಧ ಧೈರ್ಯದಿಂದ ಹೋರಾಡುತ್ತಿದ್ದಾರೆ. ಅಲ್ಲಿರುವ ಎಲ್ಲ ಭಾರತೀಯರೂ ಸುರಕ್ಷಿತವಾಗಿ ತಾಯ್ನಾಡಿಗೆ ಮರಳುವಂತಾಗಲಿ' ಎಂದರು.

ರಾಜ್ಯದಲ್ಲಿ ಕೋವಿಡ್ ಪ್ರಕರಣ ಇಳಿಮುಖ

ಬೆಂಗಳೂರು: ರಾಜ್ಯದಲ್ಲಿ ಕೋವಿಡ್ ಸಕ್ರಿಯ ಪ್ರಕರಣಗಳ ಸಂಖ್ಯೆ ಮಂಗಳವಾರವೂ ಇಳಿಮುಖವಾಗಿದೆ. 4,847 ಸೋಂಕಿತರು ಆಸ್ಪತ್ರೆ ಸೇರಿದಂತೆ ವಿವಿಧೆಡೆ ಚಿಕಿತ್ಸೆ ಪಡೆಯುತ್ತಿದ್ದಾರೆ. ಸೋಮವಾರ 5,623 ಸಕ್ರಿಯ ಪ್ರಕರಣಗಳು ವರದಿಯಾಗಿದ್ದವು.

ಕೋವಿಡ್ ಹೊಸ ಪ್ರಕರಣಗಳ ಸಂಖ್ಯೆ 202ಕ್ಕೆ, ಸೋಂಕು ದೃಢ ಪ್ರಮಾಣವೂ ಶೇ 0.50ಕ್ಕೆ ಇಳಿಕೆಯಾಗಿದೆ.

ಬಾಗಲಕೋಟೆ, ಚಾಮರಾಜನಗರ, ಚಿಕ್ಕಬಳ್ಳಾಪುರ, ಧಾರವಾಡ, ಹಾವೇರಿ, ಕಲಬುರಗಿ, ಕೊಡಗು, ಕೊಪ್ಪಳ, ಮಂಡ್ಯ, ರಾಯಚೂರು, ರಾಮನಗರ, ಯಾದಗಿರಿ ಜಿಲ್ಲೆಗಳಲ್ಲಿ ಸೋಂಕು ಪ್ರಕರಣಗಳು ವರದಿಯಾಗಿಲ್ಲ.

ಬೆಂಗಳೂರು, ಉಡುಪಿ ಹೊರತುಪಡಿಸಿ ಉಳಿದ ಜಿಲ್ಲೆಗಳಲ್ಲಿ ಹೊಸ ಪ್ರಕರಣಗಳ ಸಂಖ್ಯೆ ಒಂದಂಕಿಗೆ ಇಳಿದಿದೆ. ಬೆಂಗಳೂರಿನಲ್ಲಿ 150 ಸೋಂಕು ಪ್ರಕರಣಗಳು ದೃಢಪಟ್ಟಿವೆ. ಈವರೆಗೆ ದೃಢಪಟ್ಟ ಒಟ್ಟು ಪ್ರಕರಣಗಳ ಸಂಖ್ಯೆ 39.41 ಲಕ್ಷಕ್ಕೆ ಏರಿಕೆಯಾಗಿದೆ.

ಸೋಂಕಿತರ ಪೈಕಿ ಬೆಂಗಳೂರಿನಲ್ಲಿ 393 ಮಂದಿ ಸೇರಿದಂತೆ ರಾಜ್ಯದಲ್ಲಿ 791 ಮಂದಿ ಚೇತರಿಸಿಕೊಂಡಿದ್ದಾರೆ. ರಾಜ್ಯದಲ್ಲಿ ಈವರೆಗೆ ಗುಣಮುಖರಾದವರ ಒಟ್ಟು ಸಂಖ್ಯೆ 38.96 ಲಕ್ಷಕ್ಕೆ ತಲುಪಿದೆ.

ಸೋಂಕಿತರಲ್ಲಿ 7 ಮಂದಿ ಮೃತಪಟ್ಟಿರುವುದು ದೃಢಪಟ್ಟಿದೆ. ಬೆಂಗಳೂರಿನಲ್ಲಿ 3, ರಾಯಚೂರು, ದಾವಣಗೆರೆ, ದಕ್ಷಿಣ ಕನ್ನಡ, ಬಳ್ಳಾರಿಯಲ್ಲಿ ತಲಾ ಒಬ್ಬರು ಸಾವಿಗೀಡಾಗಿದ್ದಾರೆ.

ರಾಜ್ಯದಲ್ಲಿ ಮರಣ ಪ್ರಮಾಣ ದರವು ಶೇ 3.47ರಷ್ಟು ವರದಿಯಾಗಿದೆ. ಈವರೆಗೆ ಕೋವಿಡ್‌ಗೆ ಸಾವಿಗೀಡಾದವರ ಒಟ್ಟು ಸಂಖ್ಯೆ 39,957ಕ್ಕೆ ತಲುಪಿದೆ.



ಪಾರ್ಥಿವ ಶರೀರ ತರಲು ಪ್ರಯತ್ನ: ಬೊಮ್ಮಾಯಿ

ಒಂದನೇ ಪುಟದಿಂದ

'ಮೃತ ಯುವಕ ನಾಲ್ಕನೇ ವರ್ಷದ ವೈದ್ಯಕೀಯ ಕೋರ್ಸ್ ಓದುತ್ತಿದ್ದರು. ಕಳೆದ ಒಂದು ವಾರದಿಂದ ಬಂಕರ್‌ನಲ್ಲಿ ಇದ್ದರು. ಇವತ್ತು ಹೊರಗೆ ಬಂದಾಗ ಶೆಲ್ ದಾಳಿಗೆ ಸಿಲುಕಿ ಮೃತಪಟ್ಟರು. ಈ ಸಂಬಂಧ ವಿದೇಶಾಂಗ ಇಲಾಖೆ ಕಾರ್ಯದರ್ಶಿ ಮತ್ತು ಪ್ರಧಾನಿಯವರ ಜತೆಗೂ ಮಾತನಾಡಿದ್ದೇನೆ. ಅವರೂ ಕೂಡ ಕುಟುಂಬದ ವಿವರ ಕೇಳಿದ್ದು, ಮಾತನಾಡುವ ಸಾಧ್ಯತೆ ಇದೆ' ಎಂದು ಹೇಳಿದರು.

'ಮೃತರ ಪಾರ್ಥಿವ ಶರೀರವನ್ನು ರಾಜ್ಯಕ್ಕೆ ತರಲು ಎಲ್ಲ ಪ್ರಯತ್ನ ನಡೆಸಲಾಗಿದೆ. ಯುದ್ಧಪೀಡಿತ ಪ್ರದೇಶವಾಗಿರುವುದರಿಂದ, ದೇಹ ಯಾವ ಸ್ಥಿತಿಯಲ್ಲಿ ಇದೆ ಮತ್ತು ಹೇಗೆ ತರಬೇಕು ಎಂಬ ಬಗ್ಗೆ ಚರ್ಚಿಸಿದ್ದೇನೆ. ಸಾಧ್ಯವಾದರೆ 2– 3 ದಿನಗಳಲ್ಲಿ ತರಲು ಸಾಧ್ಯವೇ ಎಂಬ ಬಗ್ಗೆಯೂ ಮಾತನಾಡಿದ್ದೇನೆ. ಈ ಘಟನೆಯಿಂದ ದುಃಖಿತನಾಗಿದ್ದೇನೆ' ಎಂದು ಬೊಮ್ಮಾಯಿ ತಿಳಿಸಿದರು.

ಹಾವೇರಿ ವಿದ್ಯಾರ್ಥಿ ಸಾವು: ಪೋಷಕರ ಆತಂಕ ಹೆಚ್ಚಳ

ಪ್ರಜಾವಾಣಿ ವಾರ್ತೆ

ಬೆಳಗಾವಿ: ಯುದ್ಧಪೀಡಿತ ಉಕ್ರೇನ್‌ನಲ್ಲಿ ಹಾವೇರಿ ಜಿಲ್ಲೆಯ ವಿದ್ಯಾರ್ಥಿ ಮಂಗಳವಾರ ಸಾವಿಗೀಡಾದ ಹಿನ್ನೆಲೆಯಲ್ಲಿ, ಅಲ್ಲಿ ಸಿಲುಕಿರುವ ಜಿಲ್ಲೆಯ ವಿದ್ಯಾರ್ಥಿಗಳ ಪೋಷಕರು ಆತಂಕಗೊಂಡಿದ್ದಾರೆ. ನಮ್ಮ ಮಕ್ಕಳನ್ನು ಸುರಕ್ಷಿತವಾಗಿ ಕರೆತರಲು ಕ್ರಮ ಕೈಗೊಳ್ಳಬೇಕು ಎಂದು ಸರ್ಕಾರವನ್ನು ಕೋರಿದ್ದಾರೆ.

ಜಿಲ್ಲಾಡಳಿತ ನೀಡಿರುವ ಅಧಿಕೃತ ಮಾಹಿತಿ ಪ್ರಕಾರ ಉಕ್ರೇನ್‌ನಲ್ಲಿ ಜಿಲ್ಲೆಯ 12 ಮಂದಿ ಎಂಬಿಬಿಎಸ್ ವಿದ್ಯಾರ್ಥಿ–ವಿದ್ಯಾರ್ಥಿನಿಯರು ಉಕ್ರೇನ್‌ನಲ್ಲಿದ್ದಾರೆ. ಅವರಲ್ಲಿ ಕೆಲವರಷ್ಟೇ ಸಂಪರ್ಕಕ್ಕೆ ಸಿಕ್ಕಿದ್ದಾರೆ. ಉಳಿದವರು ಸಂಪರ್ಕಕ್ಕೆ ಲಭ್ಯವಾಗಿಲ್ಲ. ಇದು ಪೋಷಕರ ಆತಂಕ ಹೆಚ್ಚಾಗಲು ಕಾರಣವಾಗಿದೆ. 'ಮಕ್ಕಳು ಹೇಗಿದ್ದಾರೋ, ಏನಾಗಿಯದೆಯೋ?' ಎಂಬ ಚಿಂತೆಯಲ್ಲಿದ್ದಾರೆ. ಜಿಲ್ಲೆಯ ಗೋಕಾಕ ಹೊರವಲಯದ ಗೋಕಾಕಫಾಲ್ಸ್‌ನ ಎಂಬಿಬಿಎಸ್ ವಿದ್ಯಾರ್ಥಿನಿ, ಪುತ್ರಿ ರಜಿಯಾ ಬಾಗಿ ಅವರನ್ನು ಸುರಕ್ಷಿತವಾಗಿ ಕರೆತರುವಂತೆ ತಂದೆ, ಸಿಆರ್‌ಪಿಎಫ್ ಯೋಧ ಯಾಸಿನ್ ಬಾಗಿ ಸರ್ಕಾರಕ್ಕೆ ಮನವಿ ಮಾಡಿದ್ದಾರೆ.

ಬೆಳಗಾವಿ ಜಿಲ್ಲೆಯ ರಾಯಬಾಗದ ಕಂಕಣವಾಡಿಯ ಪ್ರಿಯಾ ನಿಡಗುಂದಿ ಅವರು ತಂದೆ ಭಗವಂತ ಅವರಿಗೆ ಹಾರ್ಕಿವ್‌ನಿಂದ ಕಳುಹಿಸಿರುವ ಫೋಟೊ

'ಪುತ್ರಿ ಪ್ರಿಯಾ ನಿಡಗುಂದಿ ಹಾರ್ಕಿವ್‌ನಲ್ಲಿ ಬೇಸ್‌ಮೆಂಟ್‌ನಲ್ಲಿದ್ದಳು. ರಾಯಭಾರಿ ಕಚೇರಿಯ ಮಾಹಿತಿ ಮೇರೆಗೆ ಕರ್ನಾಟಕದ 10 ಮಂದಿ ಸೇರಿದಂತೆ ಹಲವರು ವಾಹನಗಳಲ್ಲಿ ರೈಲು ನಿಲ್ದಾಣಕ್ಕೆ ಹೊರಟಿದ್ದ ಬಗ್ಗೆ ಪುತ್ರಿ ತಿಳಿಸಿದ್ದಳು. ಹಾರ್ಕಿವ್ ಹಾಗೂ ಕೀವ್ ನಗರಗಳನ್ನು ಹಾದು ಗಡಿ ತಲುಪುವುದು ಸವಾಲಾಗಿ ಪರಿಣಮಿಸಿದೆಯಂತೆ. ಸದ್ಯ ಸೇಫಾಗಿದ್ದೇವೆ ಎಂದು ಪುತ್ರಿ ಹೇಳಿದ್ದಾಳೆ. ಅವರೆಲ್ಲರೂ ಸುರಕ್ಷಿತವಾಗಿ ಹಿಂದಿರುಗಲಿ ಎಂದು ನಾವೂ ಪ್ರಾರ್ಥಿಸುತ್ತಿದ್ದೇವೆ' ಎಂದು ರಾಯಬಾಗ ತಾಲ್ಲೂಕು ಕಂಕಣವಾಡಿಯ ಭಗವಂತ 'ಪ್ರಜಾವಾಣಿ'ಗೆ ತಿಳಿಸಿದರು.

'ಬೆಳಿಗ್ಗೆ ಕರ್ನಾಟಕದ ಮಂದಿ ಬಂದಿಳಿದರು. ಅಲ್ಲಿನ ಪರಿಸ್ಥಿತಿ ಬಗ್ಗೆ ಅವರಿಂದ ಮಾಹಿತಿ ಪಡೆದಿದ್ದೇವೆ. ನಮ್ಮವರೆಲ್ಲರೂ ಬಂಕರ್‌ಗಳಲ್ಲಿದ್ದಾರೆಂದು ಅವರು ತಿಳಿಸಿದರು. ವಾಹನಗಳಲ್ಲಿ ಬರುವುದಕ್ಕೆ ತುಂಬಾ ತೊಂದರೆ ಆಗುತ್ತಿದೆಯಂತೆ. ಪರಿಸ್ಥಿತಿ ಬಹಳ ಕ್ಲಿಷ್ಟಕರವಾಗಿದೆ ಎನ್ನುತ್ತಿದ್ದಾರೆ. ನಡೆದುಕೊಂಡು ಹೋಗಬೇಕಾಗಿದೆಯಂತೆ. ಬೆಳಿಗ್ಗೆ ಮರಳಿದವರಲ್ಲಿ ಬೆಳಗಾವಿಯವರು ಯಾರೂ ಇರಲಿಲ್ಲ' ಎಂದು ಸಮನ್ವಯಕ್ಕಾಗಿ ನೋಡಲ್ ಅಧಿಕಾರಿಯಾಗಿ ನಿಯೋಜನೆಗೊಂಡು ಸದ್ಯ ಮುಂಬೈನಲ್ಲಿರುವ ಬೆಳಗಾವಿ ಉಪ ವಿಭಾಗಾಧಿಕಾರಿ ರವೀಂದ್ರ ಕರಲಿಂಗಣ್ಣವರ ಪ್ರತಿಕ್ರಿಯಿಸಿದರು.

'ಅರಣ್ಯ ಅತಿಕ್ರಮಣದಾರರ ಕೃಷಿ ಪಂಪಸೆಟ್‌ಗೆ ವಿದ್ಯುತ್ ಸಂಪರ್ಕ'

ಶಿರಸಿ: ಅರಣ್ಯ ಅತಿಕ್ರಮಣದಾರರಿಗೆ ಕೃಷಿ ಪಂಪಸೆಟ್‌ಗೆ ವಿದ್ಯುತ್ ಸಂಪರ್ಕ ಪಡೆಯಲು ಅನುಮತಿ ನೀಡುವ ಸಂಬಂಧ ವಾರದೊಳಗೆ ಆದೇಶ ಹೊರಡಿಸಲಾಗುವುದು ಎಂದು ಇಂಧನ ಸಚಿವ ವಿ.ಸುನೀಲಕುಮಾರ್ ಭರವಸೆ ನೀಡಿದರು.

ತಾಲ್ಲೂಕಿನ ಬನವಾಸಿಯಲ್ಲಿ ಮಂಗಳವಾರ ನಡೆದ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, 'ಕೃಷಿ ಚಟುವಟಿಕೆಗೆ ಅನುಕೂಲವಾಗುವಂತೆ ಈ ಆದೇಶ ಹೊರಡಿಸಲಾಗುವುದು. ಅರಣ್ಯ ಭೂಮಿಯಲ್ಲಿ ವಾಸವಿದ್ದು ಆ ಜಾಗಕ್ಕೆ ಜಿಪಿಎಸ್ ಮಾಡಿಸಿಕೊಂಡಿರುವವರಿಗೆ ಮಾತ್ರ ಈ ಆದೇಶ ಅನ್ವಯವಾಗಲಿದೆ' ಎಂದರು.

ಉಕ್ರೇನ್‌ನಲ್ಲಿದ್ದ ಜೀವಿತಾ ಇಂದು ತಾಯ್ನಾಡಿಗೆ?

ಕಲಬುರಗಿ: ಉಕ್ರೇನ್‌ನ ಕೀವ್ ನಗರದಲ್ಲಿ ಸಿಲುಕಿದ್ದ ಕಲಬುರಗಿಯ ವೈದ್ಯ ವಿದ್ಯಾರ್ಥಿನಿ ಜೀವಿತಾ ಶಿಂಧೆ ಅವರು, ಮಂಗಳವಾರ ಹಂಗೇರಿ ಗಡಿ ತಲುಪಿದ್ದಾರೆ. ವಿಶೇಷ ವಿಮಾನದ ಮೂಲಕ ಬುಧವಾರ (ಮಾರ್ಚ್ 2) ಸಂಜೆ ನವದೆಹಲಿ ತಲುಪುವ ಸಾಧ್ಯತೆ ಇದೆ ಎಂದು ಅವರು 'ಪ್ರಜಾವಾಣಿ'ಗೆ ಮಾಹಿತಿ ನೀಡಿದರು.

'ರಷ್ಯಾದ ಬಾಂಬ್ ದಾಳಿ ಆರಂಭವಾದಾಗಿನಿಂದಲೂ ತಮ್ಮ ಅಪಾರ್ಟ್‌ಮೆಂಟ್‌ನ ಬಂಕರ್‌ನಲ್ಲಿ ಆಶ್ರಯ ಪಡೆದಿದ್ದ ಜೀವಿತಾ, ಸೋಮವಾರ ಅಲ್ಲಿಂದ ಹೊರಬಂದು ಸುರಕ್ಷಿತ ಸ್ಥಳಕ್ಕಾಗಿ ತಡಕಾಡಿದ್ದರು. ಕೀವ್ ನಗರದ ರೈಲು ನಿಲ್ದಾಣದಲ್ಲಿ ಇಡೀ ದಿನ ಕಳೆದ ಅವರು, ಕೊನೆಗೆ ಬಸ್ ಮೂಲಕ ಮಂಗಳವಾರ ಬೆಳಿಗ್ಗೆ ಲಿವೆ ನಗರ ತಲುಪಿದ್ದರು. ಅಲ್ಲಿಂದ ಹಂಗೇರಿ ಗಡಿ ಸಮೀಪಿಸಿದ್ದಾರೆ. ಕೆಲ ದಿನಗಳಿಂದ ಬಂದ್ ಆಗಿದ್ದ ಹಂಗೇರಿಯಾ ಗಡಿಯಲ್ಲಿ ಈಗ ಪ್ರವೇಶ ನೀಡಲಾಗುತ್ತಿದೆ. ಹೀಗಾಗಿ, ಅವರು ಸುರಕ್ಷಿತವಾಗಿದ್ದಾರೆ' ಎಂದು ಜೀವಿತಾ ಅವರ ತಾಯಿ ಡಾ.ಜೆ. ಲಲಿತಾ ಮಾಹಿತಿ ನೀಡಿದರು.



ಜೀವಿತಾ ಶಿಂಧೆ

'ನವೀನ್ ಸಾವಿನ ಬಳಿಕ ಆತ್ಮವಿಶ್ವಾಸವೇ ಹೋಗಿದೆ'

ಪ್ರಜಾವಾಣಿ ವಾರ್ತೆ

ಮೈಸೂರು/ಚಾಮರಾಜನಗರ: 'ಯುದ್ಧ ಆರಂಭವಾಗಲು 13 ದಿನಗಳಿರುವಾಗ ಮಗ ಉಕ್ರೇನಿಗೆ ಹೋದ. ಆತ ಇದ್ದ ಹಾಸ್ಟೆಲ್‌ನಲ್ಲೇ ಇದ್ದ ಹಿರಿಯ ವಿದ್ಯಾರ್ಥಿ, ಹಾವೇರಿಯ ನವೀನ್ ಗ್ಯಾನಗೌಡರ್ ಯುದ್ಧದ ದಾಳಿಯಲ್ಲಿ ಮೃತಪಟ್ಟ ನಂತರ ಮಗನ ಆತ್ಮವಿಶ್ವಾಸವೇ ಹೋಗಿದೆ..'

–ಉಕ್ರೇನ್‌ನ ಹಾರ್ಕಿವ್ ನಗರದಲ್ಲಿರುವ ಹುಣಸೂರು ತಾಲ್ಲೂಕಿನ ದೊಡ್ಡಹೆಜ್ಜೂರಿನ ರಕ್ಷಿತ್ ಡಿ.ಆಚಾರ್ ಅವರ ತಂದೆ ಧರಣೇಶ್ ಮಂಗಳವಾರ ಆತಂಕದಿಂದ ಹೇಳಿದ ಮಾತಿದು.

'ಹಾಸ್ಟೆಲ್‌ನಿಂದ 1 ಕಿ.ಮೀ ದೂರದಲ್ಲಿರುವ ರೈಲು ನಿಲ್ದಾಣಕ್ಕೆ ಹೇಗಾದರೂ ಹೊರಡಿ ಎಂಬ ಸಂದೇಶ ಭಾರತೀಯ ರಾಯಭಾರ ಕಚೇರಿಯಿಂದ ಬಂದಾಕ್ಷಣ ಎಲ್ಲರೂ ಸಿದ್ಧರಾದರು. ಅಷ್ಟರಲ್ಲಿ ದಾಳಿ ಹೆಚ್ಚಾಯಿತು. ಈಗ ಬೇಸ್‌ಮೆಂಟ್ ತಲುಪಲೂ ಆಗದೆ ಮಗ ಮೊದಲ ಮಹಡಿಯಲಿದ್ದಾನೆ. ಅಲ್ಲಿರುವ ಕರ್ನಾಟಕದವರೆಲ್ಲರೂ ಹಸಿವಿನಿಂದ ಬಳಲಿದ್ದಾರೆ' ಎಂದು ಅಸಹಾಯಕತೆ ವ್ಯಕ್ತಪಡಿಸಿದರು.

ಹಾಳಾದ ರಸ್ತೆ; 1,500 ಕಿ.ಮೀ ಪ್ರಯಾಣ!: ಕೀವ್ ನಗರದಲ್ಲಿ ಐಎಫ್‌ಎಸ್ ಅಧಿಕಾರಿಯೊಬ್ಬರ ಕಚೇರಿಯಲ್ಲಿ ಆಶ್ರಯ ಪಡೆದಿದ್ದ ಮೈಸೂರು ಜಿಲ್ಲೆಯ ವೈದ್ಯ ವಿದ್ಯಾರ್ಥಿನಿಯನ್ನು ವಾಪಸ್ ಬರುವಂತೆ ರಾಯಭಾರ ಕಚೇರಿ ಸಂದೇಶ ಕಳುಹಿಸಿದೆ.

'ಸೋಮವಾರ ಸಂಜೆಯಿಂದ ಆಕೆಯ ಪ್ರಯಾಣ ರೈಲು ಮತ್ತು ಬಸ್‌ನಲ್ಲಿ ಆರಂಭವಾಗಿದೆ. ಆಹಾರ ಸಿಗುತ್ತಿಲ್ಲ. ಯಾವ ಊರೆಂಬುದೂ ತಿಳಿಯುತ್ತಿಲ್ಲ. ಪೋಲೆಂಡ್ ಗಡಿ ಕಡೆಗೆ ಕರೆದೊಯ್ಯುತ್ತಿರಬಹುದು' ಎಂದು ಆಕೆಯ ತಂದೆ 'ಪ್ರಜಾವಾಣಿ'ಗೆ ತಿಳಿಸಿದರು.

'ಹಾಳಾದ ರಸ್ತೆಗಳು, ಧ್ವಂಸಗೊಂಡ ಕಟ್ಟಡಗಳು, ಸೇತುವೆಗಳೇ ಕಾಣಿಸುತ್ತಿವೆ. ಯುದ್ಧ ಭೀಕರವಾಗಿದೆ ಎಂದು ಭಯದಿಂದ ಹೇಳಿದಳು. ನಮಗೆ ದಿಕ್ಕೇ ತೋಚದಂತಾಗಿದೆ' ಎಂದರು.

ವಿದ್ಯಾರ್ಥಿ ಚಂದನ್ ರೊಮೆನಿಯಾ ಗಡಿ ದಾಟಿದ್ದು, 'ವಿಮಾನ ನಿಲ್ದಾಣದತ್ತ ಕರೆದೊಯ್ಯುತ್ತಿದ್ದಾರೆ. ಯಾವ ನಗರದಲ್ಲಿದ್ದೇನೆಂಬುದು ತಿಳಿಯುತ್ತಿಲ್ಲ' ಎಂದು ಉಕ್ರೇನಿನಿಂದಲೇ ತಿಳಿಸಿದರು.

ಚಾಮರಾಜನಗರ ಜಿಲ್ಲೆಯ ನಾಲ್ವರ ಪೈಕಿ, ಒಡೆಯರಪಾಳ್ಯದ ಸಿದ್ದೇಶ್, ನೆರೆಯ ಹಂಗೆರಿಗೆ ತಲುಪಿದ್ದು, ಅಲ್ಲಿನ ಭಾರತೀಯ ರಾಯಭಾರ ಕಚೇರಿಯ ಆಶ್ರಯ ಪಡೆದಿದ್ದಾರೆ.

ಕೊಳ್ಳೇಗಾಲದ ವಿದ್ಯಾರ್ಥಿನಿ ಭೂಮಿಕಾ ಅವರಿಗೆ ಒಂದೂವರೆ ದಿನದ ಕಾಯುವಿಕೆ ಬಳಿಕ ಕೀವ್‌ನಿಂದ ಗಡಿಯತ್ತ ಸಾಗಲು ರೈಲು ದೊರಕಿದೆ. ಮತ್ತೊಬ್ಬ ವಿದ್ಯಾರ್ಥಿನಿ ಸ್ವಾತಿ, ಸೋಮವಾರವೇ ಹಂಗೆರಿ ಗಡಿ ತಲುಪಿದ್ದರು. ನಂತರ ಕುಟುಂಬದವರನ್ನೂ ಸಂಪರ್ಕಿಸಿಲ್ಲ.

ಹಾರ್ಕಿವ್‌ನಲ್ಲಿರುವ ಗುಂಡ್ಲುಪೇಟೆಯ ಕಾವ್ಯಾ ಬಂಕರ್‌ನಲ್ಲಿದ್ದಾರೆ. 'ಇದುವರೆಗೂ ರಾಯಭಾರ ಕಚೇರಿ ಅವರನ್ನು ಸಂಪರ್ಕಿಸಿಲ್ಲ' ಎಂದು ಕುಟುಂಬದವರು ತಿಳಿಸಿದ್ದಾರೆ. ಕಾವ್ಯಾ ಜೊತೆ ಓದಿದ್ದ ನವೀನ್ ನಿಧನದ ಸುದ್ದಿ ಕೇಳಿ ಆತಂಕಗೊಂಡಿದ್ದಾರೆ.

'ಇನ್ನೂ ಎಷ್ಟು ಹೆಣ ಬೀಳಬೇಕು?'

ಹುಬ್ಬಳ್ಳಿ: 'ಹಾರ್ಕಿವ್ ನಗರದಲ್ಲಿ ಸಿಲುಕಿರುವ ನನ್ನ ಮಗಳನ್ನು ಸುರಕ್ಷಿತವಾಗಿ ವಾಪಸ್ ಕರೆ ತನ್ನಿ ಎಂದು ಸರ್ಕಾರಕ್ಕೆ ಹಲವು ಬಾರಿ ಮನವಿ ಮಾಡಿದರೂ ಪ್ರಯೋಜನವಾಗಿಲ್ಲ. ಇನ್ನೂ ಎಷ್ಟು ಹೆಣ ಬೀಳಬೇಕು?' ಎಂದು ಧಾರವಾಡ ಜಿಲ್ಲೆ ಕುಂದಗೋಳ ತಾಲ್ಲೂಕಿನ ಯರಗುಪ್ಪಿ ಗ್ರಾಮದ ಗಂಗಾಧರ ಸಂಶಿ ಆಕ್ರೋಶ ಹೊರಹಾಕಿದ್ದಾರೆ.

ಗಂಗಾಧರ ಅವರ ಪುತ್ರಿ ಚೈತ್ರಾ, ಹಾರ್ಕಿವ್ ರಾಷ್ಟ್ರೀಯ ವೈದ್ಯಕೀಯ ವಿಶ್ವವಿದ್ಯಾಲಯದಲ್ಲಿ ಎಂಬಿಬಿಎಸ್ ಓದುತ್ತಿದ್ದಾರೆ.

'ಬಹಳಷ್ಟು ಸಂಕಷ್ಟದಲ್ಲಿದ್ದೇವೆ ಅಪ್ಪ. ಜೀವ ಕೈಯಲ್ಲಿ ಹಿಡಿದುಕೊಂಡು ಬದುಕುತ್ತಿದ್ದೇವೆ ಎಂದು ಮಗಳು ಕಣ್ಣೀರಾಗಿ ಪದೇ ಪದೇ ಹೇಳಿದರೂ ಸರ್ಕಾರ ಅಪಾಯಕಾರಿ ಸ್ಥಳವಾಗಿರುವ ಹಾರ್ಕಿವ್ ನಗರದಿಂದ ವಿದ್ಯಾರ್ಥಿಗಳನ್ನು ಕರೆತರುವ ಪ್ರಯತ್ನ ಮಾಡುತ್ತಿಲ್ಲ. ಈಗ ಹಾವೇರಿ ಜಿಲ್ಲೆಯ ವಿದ್ಯಾರ್ಥಿ ದಾಳಿಗೆ ಬಲಿಯಾಗಿದ್ದಾನೆ. ಇನ್ನೂ ಎಷ್ಟು ಹೆಣ ಬೀಳಬೇಕು' ಎಂದು ಕಣ್ಣೀರಾದರು.

'ಮಗಳು ಸಂಕಷ್ಟದ ಪರಿಸ್ಥಿತಿಯಲ್ಲಿರುವುದರಿಂದ ಮನೆಯಲ್ಲಿ ನಾವು ಬದುಕಿದ್ದೂ ಸತ್ತಂತಾಗಿದೆ. ನವೀನ್ ಸಾವಿನ ಬಳಿಕವಾದರೂ ಸರ್ಕಾರ ಎಚ್ಚೆತ್ತುಕೊಳ್ಳಬೇಕು. ಉಳಿದ ಎಲ್ಲ ಭಾರತೀಯರನ್ನು ಆದಷ್ಟು ಬೇಗನೆ ವಾಪಸ್ ಕರೆಯಿಸಿಕೊಳ್ಳಬೇಕು' ಎಂದು ಮನವಿ ಮಾಡಿದ್ದಾರೆ.

> **ಉಕ್ರೇನ್ ಸರ್ಕಾರ ಹಾಸ್ಟೆಲ್‌ನಲ್ಲಿರುವ ಭಾರತದ ಮಕ್ಕಳಿಗೆ ಕನಿಷ್ಠ ನೀರು ಹಾಗೂ ಊಟವನ್ನಾದರೂ ಕೊಡಲಿ. ಬೇಸ್‌ಮಂಟ್‌ನಲ್ಲಿ ಹೇಗೊ ಬದುಕಿಕೊಳ್ಳುತ್ತಾರೆ**
> **ಗಂಗಾಧರ ಸಂಶಿ,** ಚೈತ್ರಾ ತಂದೆ

ಹಾರ್ಕಿವ್ ನಲ್ಲಿ ಸಿಲುಕಿರುವ ಮೂಲತಃ ಉತ್ತರ ಕನ್ನಡ ಜಿಲ್ಲೆ ಮುಂಡಗೋಡಿನವರಾದ ಹುಬ್ಬಳ್ಳಿಯ ಇನ್ನೊಬ್ಬ ವಿದ್ಯಾರ್ಥಿ ನಾಜಿಲ್ಲಾ ಬಾಬಾಜಾನ್ ಗಾಜಿಪುರ್ ಅವರ ಸಹೋದರ ಇಮ್ತಿಯಾಜ್ ಮಾತನಾಡಿ, 'ಹಾರ್ಕಿವ್ ನಲ್ಲಿ ಪರಿಸ್ಥಿತಿ ಕೈ ಮೀರುತ್ತಿದೆ. ನಿಮ್ಮ ಬ್ಯಾಗ್‌ಗಳನ್ನು ತೆಗೆದುಕೊಂಡು ಇಲ್ಲಿಂದ ಹೊರಡಿ ಎಂದು ಹಾಸ್ಟೆಲ್‌ನವರು ಹೇಳುತ್ತಿದ್ದಾರೆ ಎಂದು ಸಹೋದರಿ ತಿಳಿಸಿದರು' ಎಂದು ಆತಂಕ ವ್ಯಕ್ತಪಡಿಸಿದರು.

'ಅಲ್ಲಿ ಯುದ್ಧ ನಡೆಯುತ್ತಿದೆ; ಅಲ್ಲಿನ ದೇಶದವರು ಹೊರಡಿ ಎಂದರೆ ವಿದ್ಯಾರ್ಥಿಗಳು ಎಲ್ಲಿಗೆ ಹೋಗಬೇಕು' ಎಂದು ಆಕ್ರೋಶ ವ್ಯಕ್ತಪಡಿಸಿದರು.

ದಿನದ ಬೆಳವಣಿಗೆಗಳು

- ಉಕ್ರೇನ್ ಸೇನೆಯ 70ಕ್ಕೂ ಹೆಚ್ಚು ಸೈನಿಕರ ಸಾವು, ಹಲವು ನಾಗರಿಕರಿಗೆ ಗಾಯ, ಸರ್ಕಾರಿ ಕಚೇರಿ ನಾಶ
- ಮಾತುಕತೆಯ ಮೂಲಕವೇ ಉಕ್ರೇನ್ ಬಿಕ್ಕಟ್ಟು ಬಗೆಹರಿಸಿಕೊಳ್ಳುವಂತೆ ವಿಶ್ವಸಂಸ್ಥೆಯಲ್ಲಿ ಮತ್ತೊಮ್ಮೆ ಒತ್ತಾಯಿಸಿದ ಭಾರತ
- ರಷ್ಯಾ ಅಧ್ಯಕ್ಷ ಪುಟಿನ್ ಅವರಿಗೆ ನೀಡಿದ್ದ ಟೇಕ್ವಾಂಡೊ 'ಬ್ಲ್ಯಾಕ್ ಬೆಲ್ಟ್' ಅನ್ನು ವಿಶ್ವ ಟೇಕ್ವಾಂಡೊ ಒಕ್ಕೂಟ ಸೋಮವಾರ ಹಿಂಪಡೆದಿದೆ
- ರಷ್ಯಾ ಹಾಗೂ ಅದರ ಮಿತ್ರ ರಾಷ್ಟ್ರ ಬೆಲರೂಸ್ ಅನ್ನು ಅಂತರರಾಷ್ಟ್ರೀಯ ರಗ್ಬಿ ಕ್ರೀಡೆಯಿಂದ ಅಮಾನತುಗೊಳಿಸಿದ ವಿಶ್ವ ರಗ್ಬಿ ಒಕ್ಕೂಟ
- ಫುಟ್‌ಬಾಲ್ ವಿಶ್ವಕಪ್ ಟೂರ್ನಿ ಮತ್ತು ಅರ್ಹತಾ ಪಂದ್ಯಗಳಿಂದಲೂ ರಷ್ಯಾವನ್ನು ಫಿಫಾ ಹೊರಗಿಟ್ಟಿದೆ
- ಭಾರತ, ಇಸ್ರೇಲ್, ಆಸ್ಟ್ರೇಲಿಯಾ, ತೈವಾನ್ ದೇಶಗಳಿಂದ ಉಕ್ರೇನ್‌ಗೆ ಔಷಧ ಮತ್ತು ಅಗತ್ಯ ವಸ್ತುಗಳ ರವಾನೆ
- ಕೀವ್ ಸಮೀಪ 64 ಕಿ.ಮೀ. ಉದ್ದಕ್ಕೂ ಬೀಡುಬಿಟ್ಟಿರುವ ರಷ್ಯಾ ಸೇನಾ ವಾಹನಗಳು
- ರಷ್ಯಾದ ಅಣ್ವಸ್ತ್ರ ಪಡೆ ಸನ್ನದ್ಧತೆಯ ನಡುವೆಯೂ ಸದ್ಯಕ್ಕೆ ಅಣ್ವಸ್ತ್ರ ಸಮರದ ಭಯ ಬೇಡವೆಂದು ತಮ್ಮ ಪ್ರಜೆಗಳಿಗೆ ಅಮೆರಿಕ ಅಧ್ಯಕ್ಷ ಜೋ ಬೈಡನ್ ಅಭಯ
- ಭಾರತೀಯರ ಕರೆತರಲು ವಾಯುಪಡೆಯ ಸರಕುಸಾಗಣೆ ವಿಮಾನ ಬಳಕೆ
- ರಷ್ಯಾ ನೆರವಿಲ್ಲದೇ ಐಎಸ್‌ಎಸ್ ಅನ್ನು ನಿರ್ವಹಿಸುವ ಮಾರ್ಗ ಶೋಧಿಸುತ್ತಿರುವ ನಾಸಾ
- ರಷ್ಯಾದ ಯುದ್ಧ ಟ್ಯಾಂಕ್ ಅನ್ನು ಬರಿಗೈಯಲ್ಲೇ ತಡೆದು ನಿಲ್ಲಿಸಿ ವಿಶ್ವದ ಗಮನ ಸೆಳೆದ ಉಕ್ರೇನ್ ದೇಶಪ್ರೇಮಿ
- ಗೂಢಚರ್ಯೆ ನಡೆಸುತ್ತಿರುವ ಆರೋಪದ ಮೇರೆಗೆ ರಷ್ಯಾದ 12 ರಾಜತಾಂತ್ರಿಕರನ್ನು ವಿಶ್ವಸಂಸ್ಥೆಯಿಂದ ಹೊರದಬ್ಬಿದ ಅಮೆರಿಕ
- ಯುದ್ಧಕ್ಕೆ ತಮ್ಮ ಸೇನಾಪಡೆ(ಇಂಟರ್ ನ್ಯಾಷನಲ್ ಡಿಫೆನ್ಸ್ ಲೀಜನ್) ಸೇರಲು ಸಿದ್ಧವಿರುವ ವಿದೇಶಿಯರಿಗೆ ಪ್ರವೇಶ ವೀಸಾಗಳ ಅಗತ್ಯವನ್ನು ತಾತ್ಕಾಲಿಕವಾಗಿ ಕೈಬಿಡುವ ಆದೇಶಕ್ಕೆ ಉಕ್ರೇನ್ ಅಧ್ಯಕ್ಷ ಝೆಲೆನ್‌ಸ್ಕಿ ಸಹಿ
- ಉಕ್ರೇನ್‌ನಲ್ಲಿ ಸಿಲುಕಿದ್ದ 616 ಭಾರತೀಯರು ಬುಕಾರೆಸ್ಟ್ ಮತ್ತು ಬುಡಾಪೆಸ್ಟ್‌ನಿಂದ ಮೂರು ವಿಮಾನಗಳಲ್ಲಿ ತಾಯ್ನಾಡಿಗೆ ವಾಪಸ್

ವಿರೋಧ ಪಕ್ಷಗಳ ನಾಯಕರಿಂದ ಟ್ವೀಟ್ ● ಸಾಮಾಜಿಕ ಜಾಲತಾಣಗಳಲ್ಲಿ ಅಭಿಯಾನ

ವಿದ್ಯಾರ್ಥಿಗಳ ತೆರವಿಗೆ ಹೆಚ್ಚಿದ ಒತ್ತಡ

ನವದೆಹಲಿ/ಬೆಂಗಳೂರು: ಉಕ್ರೇನ್‌ನಲ್ಲಿ ರಷ್ಯಾ ಸೇನೆಯ ದಾಳಿಗೆ ಭಾರತದ ವಿದ್ಯಾರ್ಥಿಯೊಬ್ಬರು ಬಲಿಯಾದ ನಂತರ, ಉಕ್ರೇನ್‌ನಲ್ಲಿ ಸಿಲುಕಿರುವ ಭಾರತೀಯ ವಿದ್ಯಾರ್ಥಿಗಳನ್ನು ತಕ್ಷಣವೇ ತೆರವು ಮಾಡಬೇಕು ಎಂದು ಕೇಂದ್ರ ಸರ್ಕಾರದ ಮೇಲೆ ಒತ್ತಡ ಹೆಚ್ಚುತ್ತಿದೆ.

ಒಂದೆಡೆ, ವಿರೋಧ ಪಕ್ಷಗಳು ಪ್ರಧಾನಿ ನರೇಂದ್ರ ಮೋದಿ ಮತ್ತು ಕೇಂದ್ರ ಸರ್ಕಾರದ ಮೇಲೆ ಒತ್ತಡ ಹೇರುತ್ತಿದ್ದರೆ, ಮತ್ತೊಂದೆಡೆ ವಿದ್ಯಾರ್ಥಿಗಳ ಪೋಷಕರು ದೇಶದ ಹಲವೆಡೆ ಪ್ರತಿಭಟನೆ ನಡೆಸಿದ್ದಾರೆ. ವಿದ್ಯಾರ್ಥಿಗಳನ್ನು ತಕ್ಷಣವೇ ತೆರವು ಮಾಡಿ ಎಂದು #ModiActNow ಎಂಬ ಹ್ಯಾಷ್‌ಟ್ಯಾಗ್‌ನ ಮೂಲಕ ಸಾಮಾಜಿಕ ಜಾಲತಾಣಗಳಲ್ಲೂ ಒತ್ತಡ ಸೃಷ್ಟಿಯಾಗುತ್ತಿದೆ.

ಉಕ್ರೇನ್‌ನಿಂದ ಹೊರಬರಲು ವಿದ್ಯಾರ್ಥಿಗಳು ಪಡಿಪಾಟಲು ಪಡುತ್ತಿರುವ ವಿಡಿಯೊಗಳು ಎರಡು–ಮೂರು ದಿನಗಳಿಂದ ಸಾಮಾಜಿಕ ಜಾಲತಾಣಗಳಲ್ಲಿ ವೈರಲ್ ಆಗಿವೆ. ಇವುಗಳ ಆಧಾರದಲ್ಲಿ, ವಿದ್ಯಾರ್ಥಿಗಳ ತೆರವಿಗೆ ಸರ್ಕಾರವು ಪೂರ್ಣ ಪ್ರಮಾಣದಲ್ಲಿ ಯತ್ನಿಸುತ್ತಿಲ್ಲ ಎಂದು ವಿರೋಧ ಪಕ್ಷಗಳು ಹರಿಹಾಯ್ದಿದ್ದವು. ಆದರೆ, ಸರಿಯಾಗಿ ಕೆಲಸ ಮಾಡುತ್ತಿದ್ದೇವೆ ಎಂದು ಸರ್ಕಾರವು ಸಮರ್ಥನೆ ನೀಡಿತ್ತು. ಇದರ ಬೆನ್ನಲ್ಲೇ ಕರ್ನಾಟಕದ ಹಾವೇರಿಯ ವಿದ್ಯಾರ್ಥಿ ನವೀನ್ ಎಸ್.ಜಿ. ಉಕ್ರೇನ್‌ನ ಹಾರ್ಕಿವ್‌ನಲ್ಲಿ ರಷ್ಯಾ ಸೈನಿಕರ ದಾಳಿಗೆ ಬಲಿಯಾಗಿದ್ದಾರೆ. ಈ ಸುದ್ದಿ ಬಂದ ನಂತರ ವಿರೋಧ ಪಕ್ಷಗಳು, ವಿದ್ಯಾರ್ಥಿಗಳ ಪೋಷಕರ ಆಗ್ರಹದ ತೀವ್ರತೆ ಹೆಚ್ಚಾಗಿದೆ.

ಪೋಷಕರ ಒಂದು ಗುಂಪು ದೆಹಲಿಯಲ್ಲಿರುವ ರಷ್ಯಾ ರಾಯಭಾರ ಕಚೇರಿಗೆ ಭೇಟಿ ನೀಡಿದೆ. ಉಕ್ರೇನ್‌ನಲ್ಲಿ ಸಿಲುಕಿರುವ ಭಾರತೀಯ ವಿದ್ಯಾರ್ಥಿಗಳನ್ನು ರಷ್ಯಾ ಸರ್ಕಾರವೇ ತೆರವು ಮಾಡಬೇಕು ಎಂದು ಈ ಗುಂಪು ಮನವಿ ಮಾಡಿಕೊಂಡಿದೆ.

ನವೀನ್ ಸಾವಿನ ಸುದ್ದಿ ಪ್ರಕಟವಾದ ಬೆನ್ನಲ್ಲೇ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಟ್ವೀಟ್ ಮಾಡಿ, ತೆರವು ಕಾರ್ಯಾಚರಣೆಯನ್ನು ತ್ವರಿತಗೊಳಿಸಲು ಆಗ್ರಹಿಸಿದ್ದಾರೆ. ಉಕ್ರೇನ್‌ನಿಂದ ವಿದ್ಯಾರ್ಥಿಗಳನ್ನು ಸುರಕ್ಷಿತವಾಗಿ ತೆರವು ಮಾಡಲು ಸರ್ಕಾರವು ವ್ಯವಸ್ಥಿತವಾದ ಯೋಜನೆ ಹಾಕಿಕೊಳ್ಳಬೇಕು. ಇದರಲ್ಲಿ ಪ್ರತಿ ನಿಮಿಷವೂ ಅತ್ಯಂತ ಮಹತ್ವದ್ದು ಎಂದು ರಾಹುಲ್ ಗಾಂಧಿ ಹೇಳಿದ್ದಾರೆ.

ಇದರ ಬೆನ್ನಲ್ಲೇ ದೆಹಲಿ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ಸಹ ಟ್ವೀಟ್ ಮಾಡಿದ್ದಾರೆ. 'ಈ ಸುದ್ದಿ ಆಘಾತಕಾರಿಯಾಗಿದೆ. ಆ ಕುಟುಂಬಕ್ಕೆ ನನ್ನ ಸಾಂತ್ವನಗಳು. ಉಕ್ರೇನ್‌ನಲ್ಲಿ ಸಿಲುಕಿರುವ ವಿದ್ಯಾರ್ಥಿಗಳ ಸುರಕ್ಷತೆಗಾಗಿ ಪ್ರಾರ್ಥಿಸೋಣ. ಅವರೆಲ್ಲಾ ಬೇಗ ವಾಪಸ್ಸಾಗಲಿ. ಈ ಸಂಘರ್ಷ ಶೀಘ್ರವೇ ಕೊನೆಯಾಗಲಿ' ಎಂದು ಕೇಜ್ರಿವಾಲ್ ಟ್ವೀಟ್ ಮಾಡಿದ್ದಾರೆ.

'ಇದೊಂದು ಭೀಕರ ದುರಂತ. ಸಂತ್ರಸ್ತ ಕುಟುಂಬ ಮತ್ತು ಅಲ್ಲಿ ಸಿಲುಕಿರುವ ವಿದ್ಯಾರ್ಥಿಗಳ ಕುಟುಂಬದೊಂದಿಗೆ ನಾವಿದ್ದೇವೆ. ವಿದ್ಯಾರ್ಥಿಗಳನ್ನು ಮನೆಗೆ ಕರೆತರಲು ಏನು ಸಾಧ್ಯವೋ ಅವನ್ನೆಲ್ಲಾ ಮಾಡಬೇಕು' ಎಂದು ಕಾಂಗ್ರೆಸ್ ಸಂಸದ ಶಶಿ ತರೂರ್ ಟ್ವೀಟ್ ಮಾಡಿದ್ದಾರೆ.

ಉಕ್ರೇನ್‌ನಲ್ಲಿ ಸಿಲುಕಿರುವ ಭಾರತೀಯ ವಿದ್ಯಾರ್ಥಿಗಳನ್ನು ತ್ವರಿತವಾಗಿ ತೆರವು ಮಾಡಿ ಎಂದು ಒತ್ತಾಯಿಸಿ ಯುವ ಕಾಂಗ್ರೆಸ್ ಕಾರ್ಯಕರ್ತರು ದೆಹಲಿಯಲ್ಲಿ ಮಂಗಳವಾರ ಪ್ರತಿಭಟನೆ ನಡೆಸಿದರು –ಎಎಫ್‌ಪಿ ಚಿತ್ರ

'#ಮೋದಿಆ್ಯಕ್ಟ್‌ನೌ'

ಉಕ್ರೇನ್‌ನಲ್ಲಿ ಸಿಲುಕಿರುವ ವಿದ್ಯಾರ್ಥಿಗಳನ್ನು ತ್ವರಿತವಾಗಿ ತೆರವು ಮಾಡಬೇಕು ಎಂದು ಒತ್ತಾಯಿಸಲು ಸಾರ್ವಜನಿಕರು, ವಿದ್ಯಾರ್ಥಿಗಳು ಟ್ವಿಟರ್ ಮತ್ತು ಫೇಸ್‌ಬುಕ್‌ನಲ್ಲಿ #ModiActNow ಹ್ಯಾಷ್‌ಟ್ಯಾಗ್‌ನಲ್ಲಿ ಅಭಿಯಾನ ಆರಂಭಿಸಿದ್ದಾರೆ.

ಉಕ್ರೇನ್‌ನಲ್ಲಿ ಸಿಲುಕಿರುವ ವಿದ್ಯಾರ್ಥಿಗಳನ್ನು ತೆರವು ಮಾಡುವುದು ಮೋದಿ ಅವರಿಗೆ ಮುಖ್ಯವಾಗಿಲ್ಲ. ಅವರಿಗೆ ಉತ್ತರ ಪ್ರದೇಶದ ಚುನಾವಣೆಯೇ ಮುಖ್ಯವಾಗಿದೆ ಎಂದು ಹಲವರು ಲೇವಡಿ ಮಾಡಿದ್ದಾರೆ.

'ಉತ್ತರ ಪ್ರದೇಶ ಚುನಾವಣೆ ಮುಗಿಯುವವರೆಗೂ ಕಾಯಿರಿ. ಮೋದಿ ಅವರು ಅಲ್ಲಿ ಸೋಲುವ ಬಗ್ಗೆ ಹೆಚ್ಚು ತಲೆಕೆಡಿಸಿಕೊಂಡಿದ್ದಾರೆ' ಎಂದು @VishalGPatel12 ಎಂಬುವವರು ಟ್ವೀಟ್ ಮಾಡಿದ್ದಾರೆ.

'ಆದರಣೀಯ ಪ್ರಚಾರ ಮಂತ್ರಿಗಳೇ, ಇವತ್ತು ನವೀನ್ ಎಂಬ ಒಂದು ಅತ್ಯಮೂಲ್ಯವಾದ ಜೀವವನ್ನು ನಾವು ಕಳೆದುಕೊಂಡಿದ್ದೇವೆ. ನಿಮ್ಮ ದೌರ್ಬಲ್ಯದ ಕಾರಣದಿಂದ ಇನ್ನೂ ನೂರಾರು ನವೀನ್‌ಗಳನ್ನು ಕಳೆದುಕೊಳ್ಳುವ ಮೊದಲು, ಮೋದಿ ಅವರೇ ಕಾರ್ಯಪ್ರವೃತ್ತರಾಗಿ' ಎಂದು @arjundsage1 ಎಂಬುವವರು ಆಗ್ರಹಿಸಿದ್ದಾರೆ.

'ಪರಿಸ್ಥಿತಿ ಬಿಗಡಾಯಿಸುತ್ತಲೇ ಇದೆ. ಆದರೆ ನಮ್ಮ ವಿಶ್ವಗುರು ಚುನಾವಣಾ ಪ್ರಚಾರ ಮತ್ತು ರ‍್ಯಾಲಿಗಳಲ್ಲಿ ವ್ಯಸ್ತರಾಗಿದ್ದಾರೆ. ಬಿಜೆಪಿಗೆ ಚುನಾವಣೆ ಮತ್ತು ಕೋಮುಗಲಭೆಯೇ ಮುಖ್ಯ, ದೇಶ ಮತ್ತು ದೇಶದ ಜನತೆಯಲ್ಲ' ಎಂದು @AkshayKtrs ಎಂಬುವವರು ಟೀಕಿಸಿದ್ದಾರೆ.

ಪ್ರಧಾನಿ ನರೇಂದ್ರ ಮೋದಿ ಪ್ರಚಾರಕ್ಕೆ ಕಾಂಗ್ರೆಸ್ ತರಾಟೆ

ಪ್ರಧಾನಿ ನರೇಂದ್ರ ಮೋದಿ ಅವರು ಮಣಿಪುರ ವಿಧಾನಸಭಾ ಚುನಾವಣೆಯ ಅಂಗವಾಗಿ ಮಂಗಳವಾರ ವರ್ಚುವಲ್ ರ‍್ಯಾಲಿ ನಡೆಸಿರುವುದನ್ನು ಕಾಂಗ್ರೆಸ್ ತರಾಟೆಗೆ ತೆಗೆದುಕೊಂಡಿದೆ.

ಮಣಿಪುರದಲ್ಲಿ ಮೋದಿ ಅವರು ಪ್ರಚಾರ ನಡೆಸಿರುವ ಬಗ್ಗೆ ಪ್ರಕಟವಾಗಿರುವ ಸುದ್ದಿಯ ಲಿಂಕ್ ಅನ್ನು ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ರಣದೀಪ್ ಸಿಂಗ್ ಸುರ್ಜೇವಾಲಾ ಅವರು ಟ್ವೀಟ್ ಮಾಡಿದ್ದಾರೆ. ಜತೆಗೆ, 'ಉಕ್ರೇನ್‌ನಲ್ಲಿ ಭಾರತದ 20,000ಕ್ಕೂ ಹೆಚ್ಚು ವಿದ್ಯಾರ್ಥಿಗಳ ಜೀವ ಅಪಾಯದಲ್ಲಿ ಇದೆ. ಅಂತಹ ಸಂದರ್ಭದಲ್ಲಿ ನೀವು ಇದನ್ನು ಮಾಡುತ್ತಿದ್ದೀರಾ' ಎಂದು ಸುರ್ಜೇವಾಲಾ ಟ್ವೀಟ್‌ನಲ್ಲಿ ಹರಿಹಾಯ್ದಿದ್ದಾರೆ.

'ಸರ್ಕಾರದ ಸಂವೇದನಾರಹಿತ ನಡೆಗಳಿಂದಾಗಿ ಬಲಿಯಾಗಿರುವ ವಿದ್ಯಾರ್ಥಿಯ ಕುಟುಂಬಕ್ಕೆ ಪ್ರಧಾನಿ ನರೇಂದ್ರ ಮೋದಿ ಅವರು ಏನು ಹೇಳುತ್ತಾರೆ' ಎಂದು ಸುರ್ಜೇವಾಲಾ ಪ್ರಶ್ನಿಸಿದ್ದಾರೆ.

'ವಿದೇಶಗಳಲ್ಲಿ ಎಂಬಿಬಿಎಸ್ ಓದುವ ವಿದ್ಯಾರ್ಥಿಗಳಲ್ಲಿ ಶೇ 90ರಷ್ಟು ಮಂದಿ ಅರ್ಹತಾ ಪರೀಕ್ಷೆಗಳಲ್ಲಿ ಉತ್ತೀರ್ಣರಾಗುವುದಿಲ್ಲ ಎಂದು ಕೇಂದ್ರ ಸಚಿವ ಪ್ರಲ್ಹಾದ ಜೋಷಿ ಹೇಳಿದ್ದಾರೆ. ವಿದ್ಯಾರ್ಥಿಗಳ ತೆರವಿಗೆ ಬಿಜೆಪಿ ಸರ್ಕಾರದ ಬಳಿ ಕಾರ್ಯಯೋಜನೆಯೇ ಇಲ್ಲ. ಮೋದಿ ಸರ್ಕಾರವು ನಮ್ಮ ಯುವಜನರನ್ನು ಅನಾಥರನ್ನಾಗಿಸಿದೆ. ಆದರೆ ಪ್ರಲ್ಹಾದ ಜೋಷಿ ಅವರು ನಮ್ಮ ವಿದ್ಯಾರ್ಥಿಗಳನ್ನು ಅಪಮಾನಿಸಿದ್ದಾರೆ. ಇಲ್ಲಿ ಪ್ರಚಾರ ಮಾತ್ರ ಇದೆ, ಕೆಲಸ ಆಗುತ್ತಿಲ್ಲ' ಎಂದು ಅವರು ಹರಿಹಾಯ್ದಿದ್ದಾರೆ.

'ಒಂದೇ ರೂಮಿನಲ್ಲಿದ್ದರು...'

ರಾಣೆಬೆನ್ನೂರು: 'ಉಕ್ರೇನ್‌ಲ್ಲಿ ಮಂಗಳವಾರ ನಡೆದ ಶೆಲ್ ದಾಳಿಯಲ್ಲಿ ಮೃತ ಪಟ್ಟ ತಾಲ್ಲೂಕಿನ ಚಳಗೇರಿಯ ಯುವಕ ನವೀನ್ ಗ್ಯಾನಗೌಡರ್ ಹಾಗೂ ನನ್ನ ಮಗ ಶ್ರೇಯಾನ್ಸ್ ಜೈನ್ ಇವರಿಬ್ಬರೂ ನಾಲ್ಕು ವರ್ಷದಿಂದ ಉಕ್ರೇನ್‌ನಲ್ಲಿ ಒಟ್ಟಿಗೆ ಎಂಬಿಬಿಎಸ್ ಓದುತ್ತಿದ್ದರು. ತಾವೇ ಅಡುಗೆ ಮಾಡಿಕೊಂಡು ಉಂಡು, ಒಂದೇ ರೂಮಿನಲ್ಲಿದ್ದು ಖುಷಿಯಿಂದ ಅಧ್ಯಯನ ಮಾಡುತ್ತಿದ್ದರು. ಈಗ ಏಕಾಏಕಿ ನವೀನ್ ಮೃತಪಟ್ಟಿದ್ದು ನಮಗೆಲ್ಲರಿಗೂ ತೀವ್ರ ಆಘಾತ ತಂದಿದೆ...'

ಶ್ರೇಯಾನ್ಸ್ ಜೈನ್

– ಹೀಗೆಂದು ರಾಣೆಬೆನ್ನೂರಿನ ನೆಹರೂ ಮಾರುಕಟ್ಟೆ ವರ್ತಕ ನತುಲ್ ಜೈನ್ ಅವರು 'ಪ್ರಜಾವಾಣಿ'ಯೊಂದಿಗೆ ದುಃಖ ತೋಡಿಕೊಂಡರು.

'ನವೀನ್ ಹಾಗೂ ಶ್ರೇಯಾನ್ಸ್ ಇಬ್ಬರೂ ಅನ್ಯೋನ್ಯವಾಗಿದ್ದರು. ನವೀನ್ ಸಾವು ಆತನಿಗೂ ಆಘಾತ ತಂದಿದೆ' ಎಂದು ವಿಷಾದಿಸಿದರು.

ಶಾಸಕ, ಸಂಸದರ ವಿರುದ್ಧ ಕುಟುಂಬಸ್ಥರ ಆಕ್ರೋಶ

ನವೀನ್ ಮನೆಯಲ್ಲಿ ಮೌನ

● ಸಿದ್ದು ಆರ್.ಜಿ.ಹಳ್ಳಿ/ಎಸ್.ಎಸ್.ನಾಯಕ

ಚಳಗೇರಿ (ಹಾವೇರಿ ಜಿಲ್ಲೆ): ಉಕ್ರೇನ್‌ನ ಹಾರ್ಕಿವ್ ನಗರದ ಬಳಿ ಮಂಗಳವಾರ ಬೆಳಿಗ್ಗೆ ನಡೆದ ರಷ್ಯಾ ಪಡೆಗಳ ಶೆಲ್ ದಾಳಿಯಲ್ಲಿ ಮಗ ನವೀನ್ ಗ್ಯಾನಗೌಡರ್ ಮೃತಪಟ್ಟಿರುವ ಸುದ್ದಿ ತಿಳಿದು, ಆತನ ಬರುವಿಕೆಗಾಗಿ ಎದುರು ನೋಡುತ್ತಿದ್ದ ತಂದೆ– ತಾಯಿಗೆ ಬರಸಿಡಿಲು ಬಡಿದಂತಾಗಿದೆ.

ನವೀನ್ ಉಕ್ರೇನ್‌ನ ಹಾರ್ಕಿವ್ ನ್ಯಾಷನಲ್ ಮೆಡಿಕಲ್ ಯೂನಿವರ್ಸಿಟಿಯಲ್ಲಿ ನಾಲ್ಕನೇ ವರ್ಷದ ಎಂಬಿಬಿಎಸ್ ವ್ಯಾಸಂಗ ಮಾಡುತ್ತಿದ್ದರು. ಅಗತ್ಯ ವಸ್ತು ಮತ್ತು ಆಹಾರ ತರಲು ಕಾಲೇಜಿನ ಬಂಕರ್‌ನಿಂದ ಸೂಪರ್ ಮಾರ್ಕೆಟ್‌ಗೆ ಹೋದಾಗ ಶೆಲ್ ದಾಳಿಗೆ ಬಲಿಯಾಗಿದ್ದಾರೆ.

ನವೀನ್ ಅವರ ಸ್ವಗ್ರಾಮ ಚಳಗೇರಿಯ ಮನೆಯಲ್ಲಿ ತಂದೆ ಶೇಖಪ್ಪ ಗ್ಯಾನಗೌಡರ್ ಮತ್ತು ತಾಯಿ ವಿಜಯಲಕ್ಷ್ಮಿ ರೋದಿಸುತ್ತಿದ್ದ ದೃಶ್ಯ ಅಲ್ಲಿ ನೆರೆದಿದ್ದವರ ಕಣ್ಣುಗಳನ್ನು ಒದ್ದೆಯಾಗುವಂತೆ ಮಾಡಿತು. ಗ್ರಾಮಸ್ಥರು ಕೂಡ ಊರಿನ ಮಗನನ್ನು ಕಳೆದುಕೊಂಡೆವು ಎಂದು ಮಮ್ಮಲ ಮರುಗಿದರು.

ತಂದೆಗೆ ಕೊನೆಯ ಕರೆ: ಯುದ್ಧ ಘೋಷಣೆಯಾದ ನಂತರ ನವೀನ್ ಉಕ್ರೇನ್‌ನಿಂದ ಹಲವು ಬಾರಿ ತಂದೆಗೆ ಕರೆ ಮಾಡಿ ಅಲ್ಲಿನ ಬೆಳವಣಿಗೆಗಳ ಬಗ್ಗೆ ಮಾಹಿತಿ ನೀಡುತ್ತಿದ್ದರು. ಮಂಗಳವಾರ ಬೆಳಿಗ್ಗೆ ಕೂಡ ತಂದೆಗೆ ಕರೆ ಮಾಡಿದ್ದರು. ಆದರೆ, ತಂದೆ ಕಾರಣಾಂತರದಿಂದ ಕರೆ ಸ್ವೀಕರಿಸಿರಲಿಲ್ಲ. ನಂತರ ಮಗನಿಗೆ ಕರೆ ಮಾಡಿದರೆ, ಸಂಪರ್ಕ ಸಾಧ್ಯವಾಗಲಿಲ್ಲ ಎಂದು ಕುಟುಂಬಸ್ಥರು ತಿಳಿಸಿದರು.

ನವೀನ್ ಅವರು ಪ್ರಾಥಮಿಕ ಶಾಲೆಯಿಂದ ಪಿಯುಸಿವರೆಗೆ ನಂಜನಗೂಡಿನ ಜೆಎಸ್‌ಎಸ್ ವಿದ್ಯಾಲಯದಲ್ಲಿ ವ್ಯಾಸಂಗ ಮಾಡಿದ್ದರು. ನಂತರ ಎಂಬಿಬಿಎಸ್ ಓದಲು ಉಕ್ರೇನ್‌ಗೆ ನಾಲ್ಕು ವರ್ಷಗಳ ಹಿಂದೆ ತೆರಳಿದ್ದರು. ಇವರೊಂದಿಗೆ ಚಳಗೇರಿ ಗ್ರಾಮದ ಅಮಿತ್ ವೈಶ್ಯರ ಮತ್ತು ಸುಮನ್ ವೈಶ್ಯರ ಕೂಡ ಉಕ್ರೇನ್‌ಗೆ ವ್ಯಾಸಂಗಕ್ಕೆ ತೆರಳಿದ್ದಾರೆ.

ನವೀನ್ ಅವರ ತಂದೆ ಶೇಖಪ್ಪ ಗ್ಯಾನಗೌಡರ್ ಬಿ.ಇ. ಮೆಕ್ಯಾನಿಕಲ್ ಓದಿದ್ದು, ಅಬುಧಾಬಿಯಲ್ಲಿ 10 ವರ್ಷ ಆಯಿಲ್ ಇಂಡಿಯನ್ ಕಂಪನಿಯಲ್ಲಿ ಕೆಲಸ ಮಾಡಿದ್ದಾರೆ. ನಂತರ ಮೈಸೂರು ಜಿಲ್ಲೆ ನಂಜನಗೂಡಿನ ಸೌತ್ ಇಂಡಿಯನ್ ಪೇಪರ್ ಮಿಲ್‌ನಲ್ಲಿ 15 ವರ್ಷ ಕೆಲಸ ಮಾಡಿ, ಎರಡು ವರ್ಷಗಳ ಹಿಂದೆ ಸ್ವಗ್ರಾಮ ಚಳಗೇರಿಗೆ ಹಿಂತಿರುಗಿದ್ದರು.

ಚಳಗೇರಿಯಲ್ಲಿದ್ದ ಪಿತ್ರಾರ್ಜಿತ ಆಸ್ತಿ ಎರಡು ಎಕರೆಯ ಜೊತೆಗೆ ಮತ್ತೆರಡು ಎಕರೆ ಜಮೀನು ಖರೀದಿಸಿ, ಅಡಿಕೆ ಬೆಳೆದಿದ್ದಾರೆ. ನವೀನ್ ಅವರ ಅಣ್ಣ ಹರ್ಷ ಗ್ಯಾನಗೌಡರ್ ಬೆಂಗಳೂರು ಕೃಷಿ ವಿಶ್ವವಿದ್ಯಾಲಯದಲ್ಲಿ ಪಿಎಚ್‌.ಡಿ ವ್ಯಾಸಂಗ ಮಾಡುತ್ತಿದ್ದಾರೆ.

ಹಾವೇರಿ ಜಿಲ್ಲೆ ರಾಣೆಬೆನ್ನೂರು ತಾಲ್ಲೂಕಿನ ಚಳಗೇರಿ ಗ್ರಾಮದಲ್ಲಿರುವ ತಮ್ಮ ಮನೆಯ ಮುಂದೆ ಮಂಗಳವಾರ ದುಃಖತಪ್ತವಾಗಿ ಕುಳಿತಿರುವ ನವೀನ್ ಗ್ಯಾನಗೌಡರ್ ಅವರ ತಂದೆ ಶೇಖಪ್ಪ ಗ್ಯಾನಗೌಡರ್ (ಲುಂಗಿ, ಬನಿಯನ್‌ನಲ್ಲಿ ಕುಳಿತಿರುವವರು) –ಪ್ರಜಾವಾಣಿ ಚಿತ್ರ

'ನಮ್ಮ ದೇಶದಲ್ಲಿ ಸೀಟು ಸಿಗಲಿಲ್ಲ'

'ನವೀನ್ ಗ್ಯಾನಗೌಡರ್ ಪಿಯುಸಿಯಲ್ಲಿ ಶೇ 97ರಷ್ಟು ಅಂಕ ಪಡೆದಿದ್ದರೂ, ನಮ್ಮ ರಾಜ್ಯದಲ್ಲಿ ಎಂಬಿಬಿಎಸ್ ಸೀಟು ಸಿಗಲಿಲ್ಲ. ಹೀಗಾಗಿ ಉಕ್ರೇನ್‌ಗೆ ವ್ಯಾಸಂಗಕ್ಕೆ ಕಳುಹಿಸಿ, ಮಗನನ್ನು ಕಳೆದುಕೊಳ್ಳುವ ಪರಿಸ್ಥಿತಿ ಬಂತು' ಎಂದು ನವೀನ್ ಅವರ ತಂದೆ ಶೇಖಪ್ಪ ಗ್ಯಾನಗೌಡರ್ ಕಣ್ಣೀರು ಹಾಕಿದರು.

'ನಮ್ಮ ದೇಶದಲ್ಲೇ ಉನ್ನತ ಶಿಕ್ಷಣ ಕೈಗೆಟುಕುವ ದರದಲ್ಲಿ ಸಿಕ್ಕಿದ್ದರೆ ನಾವೇಕೆ ಉಕ್ರೇನ್‌ಗೆ ಮಗನನ್ನು ಕಳುಹಿಸುತ್ತಿದ್ದೆವು?' ಎಂದು ಸಾಂತ್ವನ ಹೇಳಲು ಮನೆಗೆ ಬಂದಿದ್ದ ರಾಣೆಬೆನ್ನೂರು ಶಾಸಕ ಅರುಣ್‌ಕುಮಾರ್ ಪೂಜಾರ್ ಅವರಿಗೆ ಪ್ರಶ್ನಿಸಿದರು.

'ಉಕ್ರೇನ್‌ನಲ್ಲಿರುವ ಭಾರತೀಯ ವಿದ್ಯಾರ್ಥಿಗಳನ್ನು ಭಾರತದ ರಾಯಭಾರಿ ಇದುವರೆಗೂ ಸಂಪರ್ಕಿಸಿಲ್ಲ. ಕೇಂದ್ರ ಸಚಿವ ಪ್ರಲ್ಹಾದ ಜೋಶಿ ಅವರ ಮನೆಗೆ ಹೋಗಿ 3 ತಾಸು ಕಾದರೂ ಅವರ ಭೇಟಿ ಸಾಧ್ಯವಾಗಲಿಲ್ಲ. ಆತಂಕವಿಲ್ಲದ ಪ್ರದೇಶಗಳಿಂದ ಮಾತ್ರ ವಿದ್ಯಾರ್ಥಿಗಳನ್ನು ತಾಯ್ನಾಡಿಗೆ ಕರೆಸುತ್ತಿದ್ದಾರೆ. ಆದರೆ, ಯುದ್ಧಪೀಡಿತ ಪ್ರದೇಶಗಳಲ್ಲಿ ಸಿಲುಕಿರುವವರ ಸುರಕ್ಷತೆಗೆ ಕ್ರಮ ಕೈಗೊಂಡಿಲ್ಲ' ಎಂದು ಶೇಖಪ್ಪ ಅಸಮಾಧಾನ ವ್ಯಕ್ತಪಡಿಸಿದರು.

'ದೇವರ ಮೇಲೆ ಭಾರ ಹಾಕಿದ್ದೀವಿ'

'ನನ್ನ ಮಗ ಸುಮನ್ ವೈಶ್ಯರ್ ಮತ್ತು ತಮ್ಮನ ಮಗ ಅಮಿತ್ ವೈಶ್ಯರ್ ಇನ್ನೂ ಉಕ್ರೇನ್‌ನಲ್ಲಿಯೇ ಸಿಲುಕಿದ್ದಾರೆ. ಇವರು ನವೀನ್ ಗ್ಯಾನಗೌಡರ್ ಇದ್ದ ಬಂಕರ್‌ನಲ್ಲೇ ಸಿಲುಕಿದ್ದಾರೆ. ನಮ್ಮ ಮಕ್ಕಳ ಬಗ್ಗೆ ಆತಂಕ ಕಾಡುತ್ತಿದೆ. ದೇವರ ಮೇಲೆ ಭಾರ ಹಾಕಿದ್ದೀವಿ' ಎಂದು ರಾಣೆಬೆನ್ನೂರು ತಾಲ್ಲೂಕಿನ ಚಳಗೇರಿ ಗ್ರಾಮದ ಶ್ರೀಧರ ವೈಶ್ಯರ್ ನೋವಿನಿಂದ ನುಡಿದರು.

'ನನ್ನ ಮಗ (ಸುಮನ್ ವೈಶ್ಯರ್) ಸಂಸದ ಶಿವಕುಮಾರ ಉದಾಸಿ ಅವರಿಗೆ ಕರೆ ಮಾಡಿದರೂ, ಕರೆ ಸ್ವೀಕರಿಸಿಲ್ಲ. ಮೆಸೇಜ್ ಮಾಡಿದರೂ ಪ್ರತಿಕ್ರಿಯೆ ನೀಡಿಲ್ಲ. ಕೇಂದ್ರ ಸಚಿವ ಪ್ರಲ್ಹಾದ ಜೋಶಿ ಅವರಿಗೂ ಮಗನನ್ನು ಸುರಕ್ಷಿತವಾಗಿ ಕರೆತರಲು ಮನವಿ ಕೊಟ್ಟಿದ್ದೇವೆ' ಎಂದರು.

ಸಂಸದ ಶಿವಕುಮಾರ ಉದಾಸಿ ಮತ್ತು ಶಾಸಕ ಅರುಣಕುಮಾರ ಪೂಜಾರ ಅವರು ನವೀನ್ ಅವರ ಮನೆಗೆ ಭೇಟಿ ನೀಡಿ 'ನಾವು ನಿರಂತರವಾಗಿ ನಿಮ್ಮ ಮಕ್ಕಳ ಜತೆ ಸಂಪರ್ಕದಲ್ಲಿದ್ದೇವೆ. ಅವರನ್ನು ಭಾರತಕ್ಕೆ ಕರೆತರಲು ಪ್ರಯತ್ನಿಸುತ್ತಿದ್ದೇವೆ. ಕೇಂದ್ರ ಸರ್ಕಾರ ಕೂಡ ಅಗತ್ಯ ಕ್ರಮ ಕೈಗೊಂಡಿದೆ. ನವೀನ್ ಪಾರ್ಥಿವ ಶರೀರವನ್ನು ಭಾರತಕ್ಕೆ ಶೀಘ್ರ ತರಲು ಕ್ರಮ ಕೈಗೊಳ್ಳಲಾಗುವುದು' ಎಂದು ಸಾಂತ್ವನದ ನುಡಿಗಳನ್ನಾಡಿದರು.

'ಮನಸು ಬದಲಿಸಿ ಪ್ರಾಣ ಕಳೆದುಕೊಂಡ ನವೀನ್'

ಪ್ರಜಾವಾಣಿ ವಾರ್ತೆ

ದಾವಣಗೆರೆ: 'ಹಾರ್ಕಿವ್‌ನಿಂದ ರೈಲು ಸಂಚಾರ ಆರಂಭವಾಗಿದೆ. ಹೇಗಾದರೂ ಸುರಕ್ಷಿತ ಗಡಿಭಾಗಕ್ಕೆ ಹೋಗಬೇಕು. ಅದಕ್ಕಾಗಿ ಮಂಗಳವಾರ ಬೆಳಿಗ್ಗೆ ಹೋಗಲು ಹಾರ್ಕಿವ್‌ನಲ್ಲಿರುವ ವಿದ್ಯಾರ್ಥಿಗಳಲ್ಲಿ ಕೆಲವರು ಸೋಮವಾರ ನಿರ್ಧರಿಸಿದ್ದರು. ಅದರಲ್ಲಿ ನವೀನ್ ಗ್ಯಾನಗೌಡರ್ ಕೂಡ ಸೇರಿದ್ದರು. ಆದರೆ ಮಂಗಳವಾರ ಬೆಳಿಗ್ಗೆ ನವೀನ್ ಮನಸ್ಸು ಬದಲಾಯಿಸಿ ಅಲ್ಲೇ ಉಳಿದಿದ್ದರು. ಅವರು ಮನಸ್ಸು ಬದಲಾಯಿಸದೇ ಇದ್ದಿದ್ದರೆ ಉಳಿಯುತ್ತಿದ್ದರು'.

ಹಾರ್ಕಿವ್‌ನಿಂದ ಮಂಗಳವಾರ ಬೆಳಿಗ್ಗೆ ಹೊರಟಿರುವ ತಂಡದಲ್ಲಿದ್ದ ವಿನಯ್ ಕಲ್ಲಿಹಾಳ್ ಎಂಬ ವಿದ್ಯಾರ್ಥಿ ತನ್ನ ತಂದೆ ದಾವಣಗೆರೆಯ ಪಾಲಿಟೆಕ್ನಿಕ್ ಉಪನ್ಯಾಸಕ ಕೆ.ಬಿ. ರುದ್ರೇಶ್ ಅವರಿಗೆ ನೀಡಿದ ಮಾಹಿತಿ ಇದು. 'ನೀವು ಹೋಗಿ. ಪರಿಸ್ಥಿತಿ ಬಗ್ಗೆ ಮಾಹಿತಿ ನೀಡಿ. ನಾವು ಕೆಲವರು ಆಮೇಲೆ ಬರುತ್ತೇವೆ ಎಂದು ನವೀನ್ ಹೇಳಿದ್ದ. ನಾವು ಹೊರಟ ಸ್ವಲ್ಪ ಹೊತ್ತಿನಲ್ಲೇ ರಷ್ಯನ್ನರ ಗುಂಡಿಗೆ ಬಲಿಯಾದ ಸಂಗತಿ ತಿಳಿಯಿತು' ಎಂದು ವಿನಯ್ ತಿಳಿಸಿರುವುದಾಗಿ ರುದ್ರೇಶ್ ವಿವರಿಸಿದರು.

'ನಮ್ಮ ಕಾಲೇಜಿನ ಪಕ್ಕದಲ್ಲೇ ಫ್ರೀಡಂ ಪಾರ್ಕ್ ಇದೆ. ಅಲ್ಲಿ ಮಂಗಳವಾರ ಬೆಳಿಗ್ಗೆ ಮೊದಲು ವ್ಯಾಕ್ಯುಂ ಬಾಂಬ್ ಸಿಡಿಸಿದರು. ಅದಾಗಿ ಸ್ವಲ್ಪ ಹೊತ್ತಿನಲ್ಲಿ ಫೈರಿಂಗ್ ಮಾಡಿ ನವೀನ್ ಅವರನ್ನು ಹತ್ಯೆ ಮಾಡಿದ್ದಾರೆ. ನಾವೂ ಇವತ್ತು ಹೊರಡಬೇಕಿತ್ತು. ಯಾವ ಹೊತ್ತಿನಲ್ಲಿ ಏನಾಗುತ್ತದೆ ಎಂಬುದೇ ಗೊತ್ತಾಗುತ್ತಿಲ್ಲ' ಎಂದು ಹಾರ್ಕಿವ್‌ನಲ್ಲಿರುವ ಇನ್ನೊಬ್ಬ ವಿದ್ಯಾರ್ಥಿ ಹರಿಹರ ಭಾನುವಳ್ಳಿಯ ಪ್ರವೀಣ್ ಬಾದಾಮಿ 'ಪ್ರಜಾವಾಣಿ'ಗೆ ತಿಳಿಸಿದರು.

ರೊಮೇನಿಯಾ ದೇಶದ ಗಡಿ ಪ್ರವೇಶಕ್ಕೆ ಸರದಿಯಲ್ಲಿ ಕಾದಿದ್ದು 26 ಗಂಟೆ!

'ಗಡಿ ದಾಟುವುದೇ ದುಸ್ತರ: ನೆರವಿಗೆ ಬರಲಿ ಸರ್ಕಾರ'

● ಸಿದ್ದಯ್ಯ ಹಿರೇಮಠ

ನವದೆಹಲಿ: ಯುದ್ಧಪೀಡಿತ ಉಕ್ರೇನ್‌ನ ಪಶ್ಚಿಮ ಭಾಗದಲ್ಲಿರುವ ಭಾರತೀಯ ಮೂಲದ ವಿದ್ಯಾರ್ಥಿಗಳು ಸ್ವದೇಶಕ್ಕೆ ಮರಳಲು ನೆರೆಯ ರೊಮೇನಿಯಾ ತಲುಪುವುದು ಅನಿವಾರ್ಯವಾಗಿದೆ. ಆದರೆ, ಯುವಕ– ಯುವತಿಯರು ರೊಮೇನಿಯಾ ಪ್ರವೇಶಿಸಲು ತೀವ್ರ ಸಂಕಷ್ಟ ಎದುರಿಸಬೇಕಾಗಿದೆ.

ಉಕ್ರೇನ್‌ನ ಪಶ್ಚಿಮದಲ್ಲಿರುವ ವಿನಿಟ್ಸಿಯಾ ನಗರದಿಂದ ಮಂಗಳವಾರ ನವದೆಹಲಿ ತಲುಪಿರುವ ಕರ್ನಾಟಕದ ಆರು ಜನ ವಿದ್ಯಾರ್ಥಿಗಳು ರೊಮೇನಿಯಾದ ಗಡಿಯಲ್ಲೇ ಸತತ 26 ಗಂಟೆ ಕಾದು, ಗಡಿಯನ್ನು ದಾಟಲು ಪಟ್ಟ ಪ್ರಯಾಸದ ಅನುಭವವನ್ನು 'ಪ್ರಜಾವಾಣಿ' ಎದುರು ಹಂಚಿಕೊಂಡಿದ್ದು, ಇನ್ನೂ ಅಲ್ಲೇ ಸಿಲುಕಿರುವ ವಿದ್ಯಾರ್ಥಿಗಳನ್ನು ಕರೆತರುವ ನಿಟ್ಟಿನಲ್ಲಿ ಕೇಂದ್ರ ಸರ್ಕಾರ ಆಸಕ್ತಿ ತಾಳಬೇಕು ಎಂದು ಕೋರಿದರು.

'ರೊಮೇನಿಯಾದ ಗಡಿಯವರೆಗೆ ಕಷ್ಟಪಟ್ಟು ಬಂದರೂ, ನಮ್ಮನ್ನು ಒಳಗೆ ಬಿಟ್ಟುಕೊಳ್ಳಲು ಸಾಕಷ್ಟು ಸತಾಯಿಸಲಾಗುತ್ತಿದೆ. ಉಕ್ರೇನ್ ನಾಗರಿಕರಿಗೇ ಅವರು ಮೊದಲ ಆದ್ಯತೆ ನೀಡುತ್ತಿದ್ದು, ಭಾರತ ಹಾಗೂ ಆಫ್ರಿಕಾದ ಕೆಲವು ದೇಶಗಳ ವಿದ್ಯಾರ್ಥಿಗಳಿಗೆ ಸುಲಭದ ಪ್ರವೇಶ ನೀಡುತ್ತಿಲ್ಲ' ಎಂದು ಬೆಂಗಳೂರಿನ ದೀಪಿಕಾ ನಾರಾಯಣ್ ಹೇಳಿದರು.

'ವಿನಿಟ್ಸಿಯಾದಿಂದ ಬಸ್ ಮೂಲಕ ಐದು ಗಂಟೆ ಪ್ರಯಾಣ ಮಾಡಿದರೂ, ಗಡಿಯ ಅಂಚು ತಲುಪಲು 15 ಕಿಲೋ ಮೀಟರ್ ನಡೆಯಬೇಕಾಯಿತು. ಕೊನೆಗೆ ಗಡಿ ತಲುಪಿದ ನಂತರವೂ ಮೈನಸ್ 15 ಡಿಗ್ರಿ ಸೆಲ್ಸಿಯಸ್ ತಾಪಮಾನದ ಚಳಿಯಲ್ಲಿ, ಹಿಮ ಸುರಿಯುತ್ತಿರುವುದರ ನಡುವೆಯೇ ಸತತ 26 ಗಂಟೆ ಕಾಲ, ಕಾದು ಪ್ರವೇಶಾವಕಾಶಕ್ಕೆ ಹಾತೊರೆದೆವು. ಸ್ವಲ್ಪ ಆಯಾಸ ಕಳೆದುಕೊಳ್ಳಲು ಅಲ್ಲಿ ಕುಳಿತುಕೊಳ್ಳಲೂ ಅಗತ್ಯ ಸೌಲಭ್ಯಗಳಿಲ್ಲದೇ ಪರದಾಡಿದ್ದಾಯಿತು. ನಿಜಕ್ಕೂ ಅದು ನರಕ ಯಾತನೆ' ಎಂದು ಅವರು ತಿಳಿಸಿದರು.

ನೈಜೀರಿಯಾ, ಕೀನ್ಯಾ, ತಾಂಜಾನಿಯಾ ಸೇರಿದಂತೆ ಆಫ್ರಿಕಾದ ಹಲವು ರಾಷ್ಟ್ರಗಳ ವಿದ್ಯಾರ್ಥಿಗಳ ಜೊತೆ ಭಾರತೀಯ ವಿದ್ಯಾರ್ಥಿಗಳೇ ಅಲ್ಲಿ ಅಧಿಕ ಸಂಖ್ಯೆಯಲ್ಲಿ ಸೇರಿದ್ದರು. ಉಕ್ರೇನ್‌ನವರಿಗೇ ಪ್ರತ್ಯೇಕ ಸಾಲು. ನಮಗೇ ಪ್ರತ್ಯೇಕ ಸಾಲು. ನಮ್ಮನ್ನೆಲ್ಲ ಗಡಿ ದಾಟಿ ಒಳಬಿಟ್ಟುಕೊಳ್ಳಲು ಅನಗತ್ಯ ವಿಳಂಬ ಮಾಡಲಾಗುತ್ತಿದೆ. ನಾವು ಒಳಬರುವಾಗ ಅಂದಾಜು 5,000ರಿಂದ 6,000ದಷ್ಟು ಭಾರತೀಯ ವಿದ್ಯಾರ್ಥಿಗಳು ತಮ್ಮ ಸರದಿಗಾಗಿ ಕಾಯುತ್ತಿದ್ದರು. ಅವರೆಲ್ಲರ ಸರಾಗ ಪ್ರವೇಶಕ್ಕಾಗಿ ಭಾರತ ಸರ್ಕಾರ ಅಗತ್ಯ ರಾಜತಾಂತ್ರಿಕ ಮಾತುಕತೆ ನಡೆಸಬೇಕು. ಅಧಿಕ ಸಂಖ್ಯೆಯ ಸಿಬ್ಬಂದಿ ನಿಯೋಜಿಸಿ, ತ್ವರಿತಗತಿಯ ತಪಾಸಣೆ ಕಾರ್ಯಕ್ಕೆ ಮನವಿ ಮಾಡಬೇಕು ಎಂದು ಅವರು ಮನವಿ ಮಾಡಿದರು.

'ನಾವು ನಮ್ಮ ಲಗ್ಗೇಜ್ ಹೊತ್ತು ಸಾಗುವುದೂ ಅನಿವಾರ್ಯ. ಮೊದಲೇ ತೀವ್ರ ಆಯಾಸದಿಂದ ಬಳಲಿದ ವಿದ್ಯಾರ್ಥಿಗಳನ್ನು ತಪಾಸಣೆ ಹೆಸರಲ್ಲೂ ಪೀಡಿಸಲಾಗುತ್ತಿದೆ. ಕೆಲವರನ್ನಂತೂ ವಾಪಸ್ ಕಳುಹಿಸಲಾಗುತ್ತಿದೆ. ಸಾಕಷ್ಟು ಮನವಿ ಮಾಡಿಕೊಂಡ ನಂತರ ಪ್ರವೇಶಕ್ಕೆ ಅವಕಾಶ ನೀಡಲಾಗುತ್ತಿದೆ. ಇದನ್ನು ತಪ್ಪಿಸುವ ನಿಟ್ಟಿನಲ್ಲಿ ಭಾರತ ಸರ್ಕಾರ ಮಾತುಕತೆ ನಡೆಸುವ ಅಗತ್ಯವಿದೆ' ಎಂದು ಅವರು ಆಗ್ರಹಿಸಿದರು.

'ಅದೃಷ್ಟವಶಾತ್ ನಾವು ಹೇಗೋ ಸ್ವದೇಶ ತಲುಪಿದ್ದಾಯಿತು. ಉಕ್ರೇನ್‌ನ ಪೂರ್ವ ಭಾಗದಲ್ಲಿರುವ ಕೀವ್ ಮತ್ತು ಹಾರ್ಕಿವ್ ನಗರಗಳಲ್ಲಿ ಸಿಲುಕಿಕೊಂಡಿರುವ ನಮ್ಮ ಸ್ನೇಹಿತರ ವಾಪಸಾತಿಗಾಗಿ ಪ್ರಧಾನಿಯವರೇ ವಿಶೇಷ ಮುತುವರ್ಜಿ ವಹಿಸಬೇಕು' ಎಂದೂ ಅವರು ಒತ್ತಾಯಿಸಿದರು.

ದೀಪಿಕಾ ಜತೆಗೆ ಬೆಂಗಳೂರಿನ ಸಾನ್ವಿಕಾ ಬಾಲಾಜಿ, ಬಿಂದೂ ಮೇಘನಾಥ್, ರಿತಿಕಾ ನಿಗಮ್, ಡಿ.ಎಸ್. ರೋಹನ್ ಗೌಡ, ಗೋಕುಲ ನಾಗರಾಜು ಅವರೂ ಸುರಕ್ಷಿತವಾಗಿ ಸ್ವದೇಶಕ್ಕೆ ವಾಪಸಾಗಿದ್ದು, ಸಂಜೆ ಬೆಂಗಳೂರಿನತ್ತ ಪ್ರಯಾಣ ಬೆಳೆಸಿದರು.

ಉಕ್ರೇನ್‌ನ ವಿನಿಟ್ಸಿಯಾ ನಗರದಿಂದ ನೆರೆಯ ರೊಮೇನಿಯಾ ತಲುಪಿ ಮಂಗಳವಾರ ನವದೆಹಲಿಗೆ ಮರಳಿದ ಕರ್ನಾಟಕದ ವಿದ್ಯಾರ್ಥಿಗಳ ತಂಡ

'ಕರ್ನಾಟಕದ ವಿದ್ಯಾರ್ಥಿ ಸಾವಿಗೆ ಮೋದಿಯೇ ಹೊಣೆ'

'ಸಕಾಲದಲ್ಲಿ ನೆರವಾಗದೆ ನಿರ್ಲಕ್ಷ್ಯ'

ಉಕ್ರೇನ್‌ನಲ್ಲಿ ರಷ್ಯಾ ದಾಳಿಗೆ ಹಾವೇರಿಯ ವೈದ್ಯಕೀಯ ವಿದ್ಯಾರ್ಥಿ ನವೀನ್ ಬಲಿಯಾಗಿರುವುದು ಅತ್ಯಂತ ದುರದೃಷ್ಟಕರ. ನವೀನ್ ಸಾವಿಗೆ ಯುದ್ಧದಾಹಿ ರಷ್ಯಾ ಸೇನೆ ಎಷ್ಟು ಹೊಣೆಯೋ, ಪರಿಸ್ಥಿತಿಯ ಗಂಭೀರತೆ ಅರ್ಥ ಮಾಡಿಕೊಂಡು ಸಕಾಲದಲ್ಲಿ ನೆರವಾಗದೆ ನಿರ್ಲಕ್ಷಿಸಿದ ಪ್ರಧಾನಿ ನರೇಂದ್ರ ಮೋದಿ ಮತ್ತು ಕೇಂದ್ರದ ಬಿಜೆಪಿ ಸರ್ಕಾರವೂ ಅಷ್ಟೇ ಹೊಣೆ. ಪ್ರಧಾನಿ ಮತ್ತು ಕೇಂದ್ರ ವಿದೇಶಾಂಗ ಸಚಿವಾಲಯ ಅಂತರರಾಷ್ಟ್ರೀಯ ಸಂಬಂಧಗಳನ್ನು ಬಳಸಿಕೊಂಡು ಯುದ್ಧದಲ್ಲಿ ಸಿಲುಕಿಕೊಂಡಿರುವ ಭಾರತೀಯರನ್ನು ಸುರಕ್ಷಿತವಾಗಿ ತಾಯ್ನಾಡಿಗೆ ಕರೆತರಲು ಪ್ರಯತ್ನಿಸಬೇಕು.

ಸಿದ್ದರಾಮಯ್ಯ, ವಿಧಾನಸಭೆ ವಿರೋಧ ಪಕ್ಷದ ನಾಯಕ

'ವಿದ್ಯಾರ್ಥಿಗಳ ರಕ್ಷಣೆ ವಿಚಾರದಲ್ಲಿ ಕೇಂದ್ರ ವಿಫಲ'

ಯುದ್ಧಪೀಡಿತ ಉಕ್ರೇನ್‌ನಿಂದ ವಿಶ್ವದ ಇತರೆ ದೇಶಗಳು ತಮ್ಮ ವಿದ್ಯಾರ್ಥಿಗಳನ್ನು ವಾಪಸ್ ಕರೆಸಿಕೊಂಡಿದ್ದರೆ, ನಮ್ಮ ದೇಶದ ಸರ್ಕಾರ ಇನ್ನೂ ಮೀನಮೇಷ ಎಣಿಸುತ್ತಿದೆ. ಕೇಂದ್ರ ಸರ್ಕಾರ ಸೋಮವಾರಷ್ಟೆ (ಫೆ. 28) ನಾಲ್ವರು ಸಚಿವರನ್ನು ವಿದ್ಯಾರ್ಥಿಗಳ ರಕ್ಷಣಾ ಕಾರ್ಯಕ್ಕೆ ನಿಯೋಜಿಸಿದೆ. ಕೇಂದ್ರ ಸರ್ಕಾರಕ್ಕೆ ಎಷ್ಟು ಬೇಜವಾಬ್ದಾರಿ ಇದೆ ಎಂಬುದನ್ನು ಇದು ತೋರುತ್ತದೆ. ರಾಜ್ಯ ಹಾಗೂ ಕೇಂದ್ರ ಸರ್ಕಾರಗಳು ವಿದ್ಯಾರ್ಥಿಗಳ ರಕ್ಷಣೆ ವಿಚಾರದಲ್ಲಿ ವಿಫಲವಾಗಿವೆ. ಇನ್ನಾದರೂ ತುರ್ತು ಕ್ರಮ ಕೈಗೊಂಡು ಭಾರತೀಯರನ್ನು ತಾಯ್ನಾಡಿಗೆ ವಾಪಸ್ ಕರೆಸಿಕೊಳ್ಳಬೇಕು. ಕೇವಲ ಬಾಯಿ ಮಾತಲ್ಲಿ ರಕ್ಷಣೆ ಮಾಡುತ್ತೇವೆ ಎಂದರೆ ಸಾಲದು, ಅದನ್ನು ಕಾರ್ಯರೂಪಕ್ಕೆ ತರಬೇಕು.

ಡಿ.ಕೆ. ಶಿವಕುಮಾರ್, ಕೆಪಿಸಿಸಿ ಅಧ್ಯಕ್ಷ

'ರಕ್ಷಣೆ ಕಾರ್ಯಾಚರಣೆ ಇನ್ನಷ್ಟು ತೀವ್ರಗೊಳಿಸಬೇಕು'

ಯುದ್ಧಪೀಡಿತ ಉಕ್ರೇನ್‌ನಲ್ಲಿ ಸಿಲುಕಿರುವ ವಿದ್ಯಾರ್ಥಿಗಳನ್ನು ರಕ್ಷಿಸುವ ಕಾರ್ಯಾಚರಣೆಯನ್ನು ಕೇಂದ್ರ ಸರ್ಕಾರ ಇನ್ನಷ್ಟು ತೀವ್ರಗೊಳಿಸಬೇಕು. ಕನ್ನಡಿಗರ ರಕ್ಷಣೆಗೆ ರಾಜ್ಯ ಸರ್ಕಾರ ಮತ್ತಷ್ಟು ಕ್ಷಿಪ್ರವಾಗಿ ಕೆಲಸ ಮಾಡಬೇಕು. ಇನ್ನೊಂದು ಜೀವ ಹೋಗಲೂ ಬಿಡಬಾರದು. ಉಕ್ರೇನ್ ಭಾರತೀಯ ರಾಯಭಾರ ಕಚೇರಿ ಸೂಕ್ತವಾಗಿ ಸ್ಪಂದಿಸುತ್ತಿಲ್ಲವೆಂಬ ಆರೋಪವೂ ಕೇಳಿಬರುತ್ತಿದೆ. ರಷ್ಯಾ ತೀವ್ರವಾಗಿ ದಾಳಿ ಮಾಡಿರುವ ಹಾರ್ಕಿವ್ ಪ್ರದೇಶದಲ್ಲಿ ಕನ್ನಡಿಗರು ಸಂಕಷ್ಟದಲ್ಲಿ ಸಿಲುಕಿದ್ದಾರೆ. ಅನ್ನ ನೀರಿಗೂ ಅವರು ಕಷ್ಟಪಡುತ್ತಿದ್ದಾರೆ. ಕೂಡಲೇ ಕೇಂದ್ರ– ರಾಜ್ಯ ಸರ್ಕಾರಗಳು ಅವರ ನೆರವಿಗೆ ಹೋಗಬೇಕು. ಉಕ್ರೇನ್ ಮೇಲೆ ರಷ್ಯಾ ನಡೆಸುತ್ತಿರುವ ದಾಳಿಯಲ್ಲಿ ಹಾವೇರಿಯ ನವೀನ್ ಗ್ಯಾನಗೌಡರ್ ಬಲಿ ಆಗಿರುವುದು ಆಘಾತ ಉಂಟು ಮಾಡಿದೆ.

ಎಚ್‌.ಡಿ. ಕುಮಾರಸ್ವಾಮಿ, ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ

'ನವೀನ್ ಸಾವು ದುರದೃಷ್ಟಕರ'

ರಷ್ಯಾ- ಉಕ್ರೇನ್ ಯುದ್ಧದಲ್ಲಿ ಬಾಂಬ್ ದಾಳಿಗೆ ತುತ್ತಾಗಿ ನವೀನ್ ಸಾವಿಗೀಡಾಗಿರುವುದು ಅತ್ಯಂತ ದುರಂತ ಘಟನೆ. ನವೀನ್ ಅವರನ್ನು ಕಳೆದುಕೊಂಡ ಕುಟುಂಬಕ್ಕೆ ಆ ನೋವು ಸಹಿಸಿಕೊಳ್ಳುವ ಶಕ್ತಿಯನ್ನು ದೇವರೇ ಕೊಡಬೇಕು. ಉಕ್ರೇನ್‌ನಿಂದ ನವೀನ್ ಮೃತದೇಹವನ್ನು ತೆಗೆದುಕೊಂಡು ಬರಲು ಸರ್ಕಾರ ಎಲ್ಲ ರೀತಿಯ ಪ್ರಯತ್ನಗಳನ್ನು ಮಾಡಲಿದೆ.

ಬಿ.ಎಸ್. ಯಡಿಯೂರಪ್ಪ, ಬಿಜೆಪಿ ಶಾಸಕ

ಉಕ್ರೇನ್‌ನಿಂದ ಪೋನ್ ಕರೆಗೆ ಸಿಗದ ಮಗ: ಪಾಲಕರ ಆತಂಕ

ಪ್ರಜಾವಾಣಿ ವಾರ್ತೆ

ತುರ್ವಿಹಾಳ (ರಾಯಚೂರು): ಐದು ದಿನಗಳಿಂದ ಉಕ್ರೇನ್ ದೇಶದ ಮೇಲೆ ರಷ್ಯಾ ಯುದ್ಧ ಮುಂದುವರೆಸಿದ ಪರಿಣಾಮ, ವೈದ್ಯಕೀಯ ಪದವಿಗಾಗಿ ಉಕ್ರೇನ್ ದೇಶದಲ್ಲಿರುವ ಮಗನಿಗೆ ಆಹಾರ ಮತ್ತು ನೀರಿನ ಕೊರತೆ ಉಂಟಾಗಿದೆ ಎಂದು ಪಾಲಕರು ಮಂಗಳವಾರ ಆತಂಕ ವ್ಯಕ್ತಪಡಿಸಿದ್ದಾರೆ.

ಮಸ್ಕಿ ಶಾಸಕ ಆರ್.ಬಸನಗೌಡ ತುರ್ವಿಹಾಳ ಅವರ ಸಹೋದರ ಆರ್. ಶಿವಪ್ಪ ಅವರು 'ಪ್ರಜಾವಾಣಿ' ಜೊತೆ ಮಾತನಾಡಿ, 'ನನ್ನ ಪುತ್ರ ಆರ್. ಸೋಮು ತುರ್ವಿಹಾಳ ಉಕ್ರೇನ್‌ನಲ್ಲಿ ಸಿಕ್ಕಿಹಾಕಿಕೊಂಡಿದ್ದಾನೆ. ನಿನ್ನೆ ರಾತ್ರಿ 7 ಗಂಟೆಗೆ ಮಾತನಾಡಿದ್ದ ಆತ, 'ನಾಲ್ಕು ದಿನದಿಂದ ಜಾಪ್ರೋಸಿಯಾ ವೈದ್ಯಕೀಯ ವಿಶ್ವವಿದ್ಯಾಲಯದಲ್ಲಿ ಉಳಿದುಕೊಂಡಿದ್ದೇವು. ನಾವೇ ಆಹಾರ ತಯಾರಿಸಿಕೊಳ್ಳುತ್ತಿದ್ದವು. ಈಗ ಆಹಾರ ಸಾಮಗ್ರಿ ಖಾಲಿಯಾಗುತ್ತಿವೆ, ಹೊರಗೆ ಹೋಗಲು ಕಷ್ಟವಾಗುತ್ತಿದೆ' ಎಂದಿದ್ದ ಎಂದರು.

ಆರ್‌.ಸೋಮು

ಉಕ್ರೇನ್‌ದಿಂದ ಮಂಗಳವಾರ ರೋಮೆನಿಯಾಕ್ಕೆ ರೈಲಿನಲ್ಲಿ ಕರೆದುಕೊಂಡು ಹೋಗುತ್ತಾರಂತೆ. ಅಲ್ಲಿಂದ ಭಾರತಕ್ಕೆ ಹೋಗಲು ವ್ಯವಸ್ಥೆ ಮಾಡಿದ್ದೇವೆ ಎಂದು ಆಡಳಿತ ಮಂಡಳಿಯವರು ತಿಳಿಸಿದ್ದಾರೆ ಎಂದಿದ್ದ. ಭಯವಾಗುತ್ತಿದೆ' ಎಂದು ತಿಳಿಸಿದ್ದಾರೆ.

ತಾಯ್ನಾಡಿಗೆ ಮರಳಿದ 12 ವಿದ್ಯಾರ್ಥಿಗಳು

ಪ್ರಜಾವಾಣಿ ವಾರ್ತೆ

ದೇವನಹಳ್ಳಿ: ಉಕ್ರೇನ್‌ನಿಂದ 'ಆಪರೇಷನ್ ಗಂಗಾ' ಕಾರ್ಯಾಚರಣೆಯಲ್ಲಿ ದೆಹಲಿಗೆ ಬಂದ ತಂಡದಲ್ಲಿದ್ದ ಕರ್ನಾಟಕದ 12 ವೈದ್ಯಕೀಯ ವಿದ್ಯಾರ್ಥಿಗಳು ಮಂಗಳವಾರ ಇಲ್ಲಿನ ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ಬಂದಿಳಿದಿದ್ದಾರೆ.

ಸೋಮವಾರ ದೆಹಲಿ ತಲುಪಿದ್ದ ಅವರು ರಾತ್ರಿ ಕರ್ನಾಟಕ ಭವನದಲ್ಲಿ ತಂಗಿದ್ದರು. ಎರಡು ವಿಮಾನಗಳಲ್ಲಿ ಬೆಂಗಳೂರು ತಲುಪಿದ್ದಾರೆ. ವಿಮಾನ ನಿಲ್ದಾಣದ ಆಗಮನ ದ್ವಾರದ ಬಳಿ ವಿದ್ಯಾರ್ಥಿಗಳನ್ನು ಸಂಸದ ತೇಜಸ್ವಿ ಸೂರ್ಯ ಸ್ವಾಗತಿಸಿದರು.

ವಿದ್ಯಾರ್ಥಿ ವಿಮನ್ ರಾಜ್ ಮಾತನಾಡಿ, 'ಉಕ್ರೇನ್‌ನಿಂದ ಹಂಗೆರಿವರೆಗೆ ಸತತ 15 ಗಂಟೆಗಳ ಕಾಲ ಬಸ್‌ನಲ್ಲಿ ಪ್ರಯಾಣಿಸಿದೆವು. ಹಂಗೆರಿ ತಲುಪಿದ ನಂತರ ವಿಮಾನದಲ್ಲಿ ಭಾರತಕ್ಕೆ ಬಂದಿದ್ದೇವೆ. ಪಶ್ಚಿಮ ಉಕ್ರೇನ್‌ನಲ್ಲಿ ಯುದ್ಧದ ಭೀತಿ ಇರಲಿಲ್ಲ. ಸುರಕ್ಷಿತವಾಗಿ ಕರೆತಂದ ಕೇಂದ್ರ ಸರ್ಕಾರಕ್ಕೆ ಧನ್ಯ' ಎಂದರು.

'ಉಕ್ರೇನ್ ಗಡಿ ದಾಡಲು ಬಹಳ ತೊಂದರೆಯಾಗಿತ್ತು. ಭಾರತೀಯ ರಾಜತಾಂತ್ರಿಕ ಅಧಿಕಾರಿಗಳ ಮಧ್ಯಪ್ರವೇಶದಿಂದ ಸುಗಮವಾಗಿ ಹಂಗೆರಿಗೆ ಬಂದೆವು. ಪಶ್ಚಿಮ ಉಕ್ರೇನ್ ಭಾಗಕ್ಕೆ ಇನ್ನೂ ರಷ್ಯಾ ಸೇನೆ ಬಂದಿಲ್ಲದ ಕಾರಣ ನಾವು ಸುರಕ್ಷಿತವಾಗಿದ್ದೇವು' ಎಂದು ವಿದ್ಯಾರ್ಥಿನಿ ಶಕ್ತಿಶ್ರೀ ತಿಳಿಸಿದರು.

ವಿದ್ಯಾರ್ಥಿನಿ ಮೈನಾ, 'ಉಕ್ರೇನ್ ಗಡಿ ದಾಟಲು ಕೊರೆಯುವ ಚಳಿಯಲ್ಲಿ 15 ಕಿ.ಮೀ ಕಾಲ್ನಡಿಗೆಯಲ್ಲಿ ಸಾಗಿದೆವು. ಊಟ ಇರಲಿಲ್ಲ. ಮೈಕೊರೆಯುವ ಚಳಿಯಿಂದ ನಿಶಕ್ತರಾಗಿದ್ದೇವು. ಭಾರತೀಯ ರಾಯಭಾರಿ ಕಚೇರಿ, ಉಕ್ರೇನ್ ಭಾರತೀಯ ವಿದ್ಯಾರ್ಥಿಗಳ ಒಕ್ಕೂಟದ ಸಹಾಯದಿಂದ ಮರಳಿ ಬಂದಿದ್ದೇವೆ' ಎಂದರು.

'ಭಾರತ ಬೆಂಬಲಿಸಲಿಲ್ಲವೆಂದು ಹಲ್ಲೆ'

ಹಿರಿಯೂರು: 'ಭಾರತೀಯ ವಿದ್ಯಾರ್ಥಿಗಳ ಮೇಲೆ ಉಕ್ರೇನ್‌ನ ಕೆಲವು ಸೈನಿಕರು ಹಲ್ಲೆ ಮಾಡಿದ್ದು ನಿಜ. ಅದಕ್ಕೆ ಕಾರಣ ಯುದ್ಧದಲ್ಲಿ ಭಾರತ ತನಗೆ ಬೆಂಬಲಿಸಿಲ್ಲ ಎಂಬುದಾಗಿತ್ತು' ಎಂದು ಉಕ್ರೇನ್‌ನಿಂದ ಹಿರಿಯೂರಿಗೆ ಮಂಗಳವಾರ ಮಧ್ಯರಾತ್ರಿ ಬಂದಿರುವ ವಿದ್ಯಾರ್ಥಿನಿ ಶಕ್ತಿ ಶ್ರೀ ತಿಳಿಸಿದ್ದಾರೆ.



ರೀಚಾರ್ಜ್ ಬ್ಯಾಟರಿಗಳು

ಸುಧೀರ ಎಚ್. ಎಸ್.

ಡೀಸೆಲ್-ಪೆಟ್ರೋಲ್‌ನಂತಹ ಪಳೆಯುಳಿಕೆ ಇಂಧನಗಳ ಬಳಕೆ ಜಾಗತಿಕ ತಾಪಮಾನ ಏರಿಕೆಗೆ ಕಾರಣವಾಗಿರುವುದರಿಂದ ಇದಕ್ಕೆ ಪರ್ಯಾಯವಾಗಿ ನವೀಕರಿಸಬಹುದಾದ ಇಂಧನಗಳು ಮಹತ್ವ ಪಡೆದಿದೆ. ಇದಕ್ಕೆ ಪೂರಕವಾಗಿ ಇತ್ತೀಚಿನ ದಿನಗಳಲ್ಲಿ ಎಲ್ಲಾ ಪ್ರಮುಖ ವಾಹನ ತಯಾರಿಕರು ಎಲೆಕ್ಟ್ರಿಕ್ ವಾಹನಗಳನ್ನು ಮಾರುಕಟ್ಟೆಗೆ ಪರಿಚಯಿಸುತ್ತಿದ್ದಾರೆ. ನಮ್ಮ ರಾಜ್ಯದಲ್ಲೇ ವಿನ್ಯಾಸಗೊಂಡ ರೇವಾ ಕಾರಿನಿಂದ ಹಿಡಿದು ಟಾಟಾ, ಮಹಿಂದ್ರಾ, ಮಿನಿ ಕೂಪರ್ ಕಂಪನಿಗಳ ಕಾರುಗಳು ಮತ್ತು ಏಥರ್, ಓಲಾ, ಟಿವಿಎಸ್ ಅವರ ದ್ವಿಚಕ್ರ ವಾಹನಗಳ ಎಲೆಕ್ಟ್ರಿಕ್ ಆವೃತ್ತಿಗಳು ಆಗಲೇ ರಸ್ತೆಗೆ ಇಳಿದಿವೆ.

ಹೊಸ ಎಲೆಕ್ಟ್ರಿಕ್ ವಾಹನಗಳ ಸಂಶೋಧನೆ ಮತ್ತು ಅವುಗಳ ಅಭಿವೃದ್ಧಿಯೊಂದಿಗೆ ಸಾರಿಗೆ ವ್ಯವಸ್ಥೆಯ ಭವಿಷ್ಯವು ಬದಲಾಗಲಿದೆ. ಇದರಲ್ಲಿ ಇಂಧನ (ಶಕ್ತಿ) ಶೇಖರಣಾ ಸಾಧನವಾಗಿರುವ ರೀಚಾರ್ಜ್ ಮಾಡಬಹುದಾದ ಬ್ಯಾಟರಿಯ ಪಾತ್ರ ಬಹಳ ಮಹತ್ವವಾದದ್ದು. ರೀಚಾರ್ಜ್ ಮಾಡಬಹುದಾದ ಬ್ಯಾಟರಿಗಳು ಹಲವಾರು ಸವಾಲುಗಳನ್ನು ಎದುರಿಸುತ್ತವೆ. ಅವುಗಳನ್ನು ಪರಿಹರಿಸಲು ಸಂಶೋಧಕರು ನಿರಂತರವಾಗಿ ತೊಡಗಿದ್ದಾರೆ. ಸಾರಿಗೆ ವಲಯದ ಹೊರತಾಗಿ, ಇತರೆ ಗೃಹ ಬಳಕೆ ಮತ್ತು ಕೈಗಾರಿಕಾ ಕ್ಷೇತ್ರಗಳಲ್ಲಿ ಬಳಸುವ ಶಕ್ತಿಗೆ ಸಮರ್ಥವಾದ ಶಕ್ತಿ ಶೇಖರಣಾ ಸಾಧನಗಳ ಅವಶ್ಯಕತೆ ತೀವ್ರವಾಗಿದೆ.

ಬ್ಯಾಟರಿಯ ಕಾರ್ಯವೈಖರಿಗೆ ಅದರ ಒಳಗೆ ನಡೆಯುವ ಎಲೆಕ್ಟ್ರೋಕೆಮಿಕಲ್ ಪ್ರತಿಕ್ರಿಯೆಗಳು ಪ್ರಮುಖ ಪಾತ್ರವನ್ನು ವಹಿಸುತ್ತವೆ. ಬ್ಯಾಟರಿಯು ಮುಖ್ಯವಾಗಿ ಮೂರು ಘಟಕಗಳಿಂದ ಕೂಡಿರುತ್ತದೆ: ಕ್ಯಾಥೋಡ್, ಆನೋಡ್ ಮತ್ತು ಎಲೆಕ್ಟ್ರೋಲೈಟ್. ಕ್ಯಾಥೋಡ್, ಎಲೆಕ್ಟ್ರಾನ್‌ಗಳನ್ನು ಆಕರ್ಷಿಸುವ ಪಾಸಿಟಿವ್ ಪೋಲ್. ಆನೋಡ್, ಬಾಹ್ಯ ಸರ್ಕ್ಯೂಟ್‌ಗೆ ಎಲೆಕ್ಟ್ರಾನ್‌ಗಳನ್ನು ಬಿಡುಗಡೆ ಮಾಡುವ ನೆಗೆಟಿವ್ ಪೋಲ್ (ಎಲೆಕ್ಟ್ರೋಡ್). ಇದರಿಂದ ಎಲೆಕ್ಟ್ರೋಕೆಮಿಕಲ್ ಕ್ರಿಯೆಯ ಸಮಯದಲ್ಲಿ ಇದು ಆಕ್ಸಿಡೀಕರಣಗೊಳ್ಳುತ್ತದೆ. ಎಲೆಟ್ರೋಲೈಟ್ ಕೋಶದ ಕ್ಯಾಥೋಡ್ ಮತ್ತು ಆನೋಡ್ ನಡುವಿನ ಅಯಾನು ಸಾಗಣೆ ಕಾರ್ಯವಿಧಾನವನ್ನು ಒದಗಿಸುವ ಮಾಧ್ಯಮವಾಗಿದೆ.

ಲಿಥಿಯಂ ಕೋಬಾಲ್ಟ್ ಆಕ್ಸೈಡ್ (LCO), ಲಿಥಿಯಂ ನಿಕಲ್ ಮ್ಯಾಂಗನೀಸ್ ಕೋಬಾಲ್ಟ್ ಆಕ್ಸೈಡ್ (NMC), ಅಲ್ಯೂಮಿನಾ ಜೊತೆಗೆ ಡೋಪ್ ಮಾಡಿದ ಲಿಥಿಯಂ ನಿಕಲ್ ಕೋಬಾಲ್ಟ್ ಆಕ್ಸೈಡ್ (NCA), ಲಿಥಿಯಂ ಮ್ಯಾಂಗನೀಸ್ ಆಕ್ಸೈಡ್ (LMO) ಮತ್ತು ಲಿಥಿಯಂ ಐರನ್ ಫಾಸ್ಫೇಟ್(LFP)ನಂತಹ ವಿವಿಧ ವಸ್ತುಗಳನ್ನು ಕ್ಯಾಥೋಡ್ ಆಗಿ ಬಳಸಲಾಗುತ್ತದೆ. ಆನೋಡ್ ಅನ್ನು ಸಾಮಾನ್ಯವಾಗಿ ಗ್ರಾಫೈಟ್‌ನಿಂದ ತಯಾರಿಸಲಾಗುತ್ತದೆ. ಆದರೆ ಇದು ಸಂಪೂರ್ಣ ಚಾರ್ಜ್ ಮಾಡಿದ ನಂತರ ಬೆಂಕಿ ಹಿಡಿಯಬಹುದಾದ ಅತ್ಯಂತ ಅಪಾಯಕಾರಿ ವಸ್ತು. ಅತಿಯಾದ ಚಾರ್ಜ್-ಡಿಸ್ಚಾರ್ಜ್ ಸಮಯದಲ್ಲಿ ಆನೋಡ್ ಅಲ್ಲಿ ಡೆಂಡ್ರೈಟ್ ರಚನೆ ಉಂಟಾಗುತ್ತದೆ. ಇದರಿಂದ ಅದರ ಸಾಮರ್ಥ್ಯ ಕುಂಠಿತವಾಗುತ್ತದೆ. ಈ ನಿಟ್ಟಿನಲ್ಲಿ ವಿಜ್ಞಾನಿಗಳು ಬ್ಯಾಟರಿಗಳನ್ನು ಸುರಕ್ಷಿತವಾಗಿಸುವ ಕೆಲಸದಲ್ಲಿ ತೊಡಗಿದ್ದಾರೆ. ಹೆಚ್ಚಿನ ಶಕ್ತಿ ಮತ್ತು ಸುರಕ್ಷಿತ ಬ್ಯಾಟರಿಯನ್ನು ಸಾಧಿಸಲು ಅವರು ಅಸುರಕ್ಷಿತ ಘಟಕಗಳನ್ನು (ಗ್ರಾಫೈಟ್‌ನಂತಹ) ಸುರಕ್ಷಿತ ಮತ್ತು ಕಡಿಮೆ-ವೆಚ್ಚದ ವಸ್ತುಗಳಾದ ಫೆರಸ್ ಆಕ್ಸೈಡ್, ಸಿಲಿಕಾನ್ ಮತ್ತು ಟಿನ್ ಸಲ್ಫೈಡ್‌ನೊಂದಿಗೆ ಬದಲಾಯಿಸಿದ್ದಾರೆ.

ಲಿಥಿಯಂ-ಐಯಾನ್ ಬ್ಯಾಟರಿ (LIB) ವ್ಯಾಪಕವಾಗಿ ಬಳಸಲಾಗುವ ಶಕ್ತಿಸಂಗ್ರಹದ ತಂತ್ರಜ್ಞಾನ. ಏಕೆಂದರೆ ಇದು ಪ್ರತಿ ಪರಿಮಾಣ ಮತ್ತು ದ್ರವ್ಯರಾಶಿಗೆ (ಅಥವಾ ಗ್ರಾವಿಮೆಟ್ರಿಕ್ ಶಕ್ತಿಸಾಂದ್ರತೆ) ಅನುಗುಣವಾಗಿ ಹೆಚ್ಚಿನ ಶಕ್ತಿಯನ್ನು ಸಂಗ್ರಹಿಸಬಹುದು. ಈ ಬ್ಯಾಟರಿಗಳನ್ನು ಪೋರ್ಟಬಲ್ ಎಲೆಕ್ಟ್ರಾನಿಕ್ಸ್, ಎಲೆಕ್ಟ್ರಿಕ್ ವಾಹನಗಳು ಮತ್ತು ವಿದ್ಯುತ್ ಕೇಂದ್ರಗಳಲ್ಲಿ ನಿರಂತರ ವಿದ್ಯುತ್ ಪೂರೈಕೆಯನ್ನು ಒದಗಿಸಲು ಬಳಸಲಾಗುತ್ತದೆ. ಈ ಬ್ಯಾಟರಿಗಳು ಸಣ್ಣ ಮೆಮೊರಿ ಪರಿಣಾಮವನ್ನು ಹೊಂದಿವೆ (ಕಡಿಮೆ ಚಾರ್ಜ್ ಅನ್ನು ಹಿಡಿದಿಟ್ಟುಕೊಳ್ಳುವ ಸ್ಥಿತಿ), ಕಡಿಮೆ ಒಳ-ಡಿಸ್ಚಾರ್ಜ್ ಮತ್ತು ತೀವ್ರವಾದ ವಿಸರ್ಜನೆಯಿಂದ ಹಿಂಪಡೆಯಬಹುದು. ಇದರ ಜೊತೆಗೆ, ಇದರ ಹೆಚ್ಚಿನ ಭಾಗಗಳನ್ನು ಮರುಬಳಕೆ ಮಾಡಬಹುದಾಗಿದೆ.

ಲಿಥಿಯಂ-ಐಯಾನ್ ಬ್ಯಾಟರಿಯನ್ನು ವ್ಯಾಪಕವಾಗಿ ಬಳಸಲಾಗಿದ್ದರೂ, ಲಭ್ಯವಿರುವ ಲಿಥಿಯಂ ಸಂಪನ್ಮೂಲಗಳು ಸೀಮಿತವಾಗಿವೆ; ಪ್ರಪಂಚದಾದ್ಯಂತ ದೊರೆಯುವುದೂ ಇಲ್ಲ. ಆದ್ದರಿಂದ, LIBಗೆ ಸರಿಸಾಟಿಯಾಗಿ ಮುಕ್ತವಾಗಿ ಲಭ್ಯವಿರುವ ಮತ್ತು ಕಡಿಮೆ ಬೆಲೆಯಲ್ಲಿ ನಮ್ಮ ಶಕ್ತಿ/ವಿದ್ಯುತ್ ಬೇಡಿಕೆಯನ್ನು ಪೂರೈಸಲು ಒಂದು ಪರ್ಯಾಯ ಶಕ್ತಿ ಶೇಖರಣಾ ವ್ಯವಸ್ಥೆಯ ಅಗತ್ಯವಿದೆ.

ಇದಕ್ಕೆ ಪ್ರತಿಯಾಗಿ ಸೋಡಿಯಂ-ಐಯಾನ್ ಬ್ಯಾಟರಿ (SIB) ತಂತ್ರಜ್ಞಾನ ನಮ್ಮ ಮುಂದಿದೆ. ಇದಕ್ಕೆ ಕಡಿಮೆ ವೆಚ್ಚ ತಗಲುವುದರಿಂದ ವಿಜ್ಞಾನಿಗಳು ಇದರ ಬಗ್ಗೆ ಹೆಚ್ಚಿನ ಆಸಕ್ತಿಯನ್ನು ತೋರಿಸುತ್ತಿದ್ದಾರೆ. ಇದಲ್ಲದೆ ಸೋಡಿಯಂ ಭೂಮಿಯ ಹೊರಪದರದಲ್ಲಿ ಹೇರಳವಾಗಿ ಲಭ್ಯವಿದೆ; ಜಗತ್ತಿನೆಲ್ಲೆಡೆಯೂ ದೊರೆಯುತ್ತದೆ. ಈಗಾಗಲೆ ವಿಜ್ಞಾನಿಗಳು SIB ಬ್ಯಾಟರಿ ಸೆಲ್ ಮೂಲಮಾದರಿಯನ್ನು ನಿರ್ಮಿಸಲು ಕ್ಯಾಥೋಡ್, ಆನೋಡ್ ಮತ್ತು ಎಲೆಕ್ಟ್ರೋಲೈಟ್‌ನಂತಹ SIBನಲ್ಲಿರುವ ಎಲ್ಲಾ ಮೂರು ಮೂಲ ಘಟಕಗಳನ್ನು ಅಭಿವೃದ್ಧಿಪಡಿಸುತ್ತಿದ್ದಾರೆ. ಸೋಡಿಯಂ-ಐಯಾನ್ ಬ್ಯಾಟರಿಯಲ್ಲಿ 3000 ಚಾರ್ಜ್-ಡಿಸ್ಚಾರ್ಜ್ ಸೈಕಲ್, 120 Wh/kg ಶಕ್ತಿಯ ಸಾಂದ್ರತೆಯೊಂದಿಗೆ 7 Ah ಸೆಲ್‌ಗಳನ್ನು ತಯಾರಿಸಲು ವಿಜ್ಞಾನಿಗಳು ತೊಡಗಿದ್ದಾರೆ. ಮುಂಬರುವ ದಿನಗಳಲ್ಲಿ LIBಯನ್ನು SIB ಬದಲಿಸಿದರೆ ಆಶ್ಚರ್ಯವಿಲ್ಲ.

ವಿಮಾನಯಾನದಲ್ಲಿ 'ಡಿಜಿ ಯಾತ್ರಾ'

ಉದಯ ಶಂಕರ ಪುರಾಣಿಕ

ಭಾರತದಲ್ಲಿ ಉಡಾನ್ ಯೋಜನೆಯಿಂದಾಗಿ ವಿಮಾನ ನಿಲ್ದಾಣಗಳ ಸಂಖ್ಯೆ ಹೆಚ್ಚಾಗುತ್ತಿದೆ. ಹೀಗಾಗಿ, ವಿಮಾನಯಾನ ಮಾಡುವ ಪ್ರಯಾಣಿಕರ ಸಂಖ್ಯೆ ಕೂಡ ಹೆಚ್ಚಾಗುತ್ತಿದೆ. ಉದಾಹರಣೆಗೆ, ಪ್ರತಿದಿನ ಸರಾಸರಿ ಮೂವತ್ತು ಸಾವಿರ ಪ್ರಯಾಣಿಕರು ಬೆಂಗಳೂರಿನ ನಾಡಪ್ರಭು ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣವನ್ನು ಬಳಸುತ್ತಿದ್ದಾರೆ. ಕೋವಿಡ್-19ರಿಂದ ಸ್ಥಗಿತವಾಗಿರುವ ಅಂತರರಾಷ್ಟ್ರೀಯ ವಿಮಾನಯಾನ ಪೂರ್ಣ ಪ್ರಮಾಣದಲ್ಲಿ ಮತ್ತೆ ಪ್ರಾರಂಭವಾದರೆ, ಪ್ರತಿದಿನ ಬೆಂಗಳೂರಿನ ವಿಮಾನ ನಿಲ್ದಾಣವನ್ನು ಬಳಸುವ ಪ್ರಯಾಣಿಕರ ಸಂಖ್ಯೆ ಮತ್ತಷ್ಟು ಹೆಚ್ಚಾಗಲಿದೆ.

ವಿಮಾನ ಹೊರಡುವ ಸಮಯಕ್ಕಿಂತ ಕೆಲವು ಗಂಟೆಗಳ ಕಾಲ ಮೊದಲು ವಿಮಾನ ನಿಲ್ದಾಣವನ್ನು ತಲುಪಬೇಕು. ವಿಮಾನ ನಿಲ್ದಾಣ ಪ್ರವೇಶಿಸಲು, ಸರತಿಸಾಲಿನಲ್ಲಿ ನಿಂತು ಸುರಕ್ಷತಾ ಸಿಬ್ಬಂದಿಗೆ ಐಡಿ, ಟಿಕೆಟ್ ಅಥವಾ ಬೋರ್ಡಿಂಗ್ ಪಾಸ್ ತೋರಿಸಬೇಕು. ಲಗೇಜ್ ಚೆಕ್ ಇನ್ ಮಾಡಲು, ಬೋರ್ಡಿಂಗ್ ಪಾಸ್ ಪಡೆಯಲು ಮತ್ತೊಮ್ಮೆ ಸರತಿಸಾಲಿನಲ್ಲಿ ನಿಲ್ಲಬೇಕು. ಇದಾದ ನಂತರ ಬೋರ್ಡಿಂಗ್ ಏರಿಯಾ ಪ್ರವೇಶಿಸುವ ಮೊದಲು ಸೆಕ್ಯೂರಿಟಿ ತಪಾಸಣೆಗಾಗಿ ಸರತಿಸಾಲಿನಲ್ಲಿ ನಿಲ್ಲಬೇಕು. ವಿಮಾನ ಹೊರಡಲು ಸಿದ್ಧವಾದಾಗ, ಬೋರ್ಡಿಂಗ್ ಏರಿಯಾದಿಂದ ವಿಮಾನದ ಹತ್ತಿರ ಹೋಗಲು ಸರತಿಸಾಲಿನಲ್ಲಿ ನಿಂತು ವಿಮಾನಯಾನ ಸಿಬ್ಬಂದಿಗೆ ಬೋರ್ಡಿಂಗ್ ಪಾಸ್ ತೋರಿಸಬೇಕು. ವಿಮಾನ ಪ್ರವೇಶಿಸುವ ಮೊದಲು ಮತ್ತೊಮ್ಮೆ ಸರತಿಸಾಲಿನಲ್ಲಿ ನಿಂತು ಬೋರ್ಡಿಂಗ್ ಪಾಸ್ ತೋರಿಸಿ, ಸೆಕ್ಯುರಿಟಿ ಚೆಕ್‌ಗೆ ಒಳಪಡಬೇಕು. ಇಷ್ಟೊಂದು ಸರತಿಸಾಲಿನಲ್ಲಿ ನಿಲ್ಲುವುದು ಮತ್ತು ಇಷ್ಟೊಂದು ಹಂತದಲ್ಲಿ ಸೆಕ್ಯುರಿಟಿ ತಪಾಸಣೆಗಾಗಿ ಪ್ರಯಾಣಿಕರ ಸಾಕಷ್ಟು ಸಮಯ ವ್ಯಯವಾಗುತ್ತಿದೆ. ಮತ್ತೊಂದು ಕಡೆ, ವಿವಿಧ ಹಂತದಲ್ಲಿ ಪ್ರಯಾಣಿಕರಿಗೆ ನೆರವಾಗಲು ಸಾಕಷ್ಟು ಸಿಬ್ಬಂದಿಯನ್ನು ವಿಮಾನ ನಿಲ್ದಾಣದ ಅಧಿಕಾರಿಗಳು ಹಾಗೂ ವಿಮಾನಯಾನ ಸಂಸ್ಥೆ ನಿಯೋಜಿಸಬೇಕಾಗುತ್ತದೆ.

ಪ್ರಯಾಣಿಕರಿಗೆ ಸುಲಭವಾಗಿ ವಿಮಾನಯಾನ ಮಾಡಲು ಸಾಧ್ಯವಾಗಲು, ಭಾರತ ಸರ್ಕಾರ ಕಂಪ್ಯೂಟರ್ ವಿಷನ್ ತಂತ್ರಜ್ಞಾನ ಆಧಾರಿತ 'ಡಿಜಿ ಯಾತ್ರಾ' ಸೌಲಭ್ಯವನ್ನು ಹಂತಹಂತವಾಗಿ ಭಾರತದ ಎಲ್ಲ ವಿಮಾನ ನಿಲ್ದಾಣದಲ್ಲಿ ಜಾರಿಗೊಳಿಸುತ್ತಿದೆ.

- ಈ ಸೌಲಭ್ಯವನ್ನು ಪಡೆಯುವ ಇಚ್ಛಿಸುವ ಪ್ರಯಾಣಿಕರು, ಈ ಉದ್ದೇಶಕ್ಕಾಗಿ ಲಭ್ಯವಾಗುವ ಜಾಲತಾಣದಲ್ಲಿ ತಮ್ಮ ಹೆಸರು, ಇ-ಮೇಲ್ ವಿಳಾಸ, ಮೊಬೈಲ್ ಫೋನ್ ಸಂಖ್ಯೆ ಹಾಗೂ ಐಡಿ ಮಾಹಿತಿ (ಆಧಾರ್, ವೋಟರ್ ಐಡಿ, ಡ್ರೈವಿಂಗ್ ಲೈಸೆನ್ಸ್ ಇತ್ಯಾದಿ) ನೀಡಿದರೆ ಅವರಿಗೊಂದು ಡಿಜಿಯಾತ್ರಾ ಐಡಿ ದೊರೆಯುತ್ತದೆ.



> ಹಲವು ಬಾರಿ ಸರತಿಸಾಲಿನಲ್ಲಿ ನಿಲ್ಲುವುದು ಡಿಜಿ ಯಾತ್ರಾ ಸೌಲಭ್ಯದಿಂದ ತಪ್ಪುತ್ತದೆ; ಐಡಿ ಮತ್ತು ಬೋರ್ಡಿಂಗ್ ಪಾಸ್ ತೋರಿಸುವುದೂ ತಪ್ಪುತ್ತದೆ.

- ವಿಮಾನಯಾನಕ್ಕಾಗಿ ಟಿಕೆಟ್ ಖರೀದಿಸುವಾಗ ಈ ಡಿಜಿ ಯಾತ್ರಾ ಐಡಿಯನ್ನು ಪ್ರಯಾಣಿಕರು ನೀಡಬೇಕು. ಅವರು ವಿಮಾನಯಾನ ಪ್ರಾರಂಭಿಸುವ ವಿಮಾನ ನಿಲ್ದಾಣಕ್ಕೆ ಡಿಜಿ ಯಾತ್ರಾ ಐಡಿಯನ್ನು ಹಾಗೂ ಟಿಕೆಟ್ ಮಾಹಿತಿಯನ್ನು ವಿಮಾನಯಾನ ಸಂಸ್ಥೆ ತಲುಪಿಸುತ್ತದೆ.
- ಮೊದಲ ಸಲ ಡಿಜಿ ಯಾತ್ರಾ ಐಡಿ ಪ್ರಯಾಣ ಮಾಡುವಾಗ ಮಾತ್ರ ವಿಮಾನ ನಿಲ್ದಾಣದಲ್ಲಿರುವ ನೊಂದಣಿ ಕಿಯೋಸ್ಕ್‌ನಲ್ಲಿ ಪ್ರಯಾಣಿಕರ ಐಡಿಯನ್ನು ಪರಿಶೀಲಿಸಲಾಗುತ್ತದೆ. ಪರಿಶೀಲನೆ ಯಶಸ್ವಿಯಾದರೆ, ಪ್ರಯಾಣಿಕರ ಫೋಟೊವನ್ನು ಅವರ ಡಿಜಿ ಯಾತ್ರಾ ಐಡಿಯಲ್ಲಿ ಸೇರಿಸಲಾಗುತ್ತದೆ.
- ಇಷ್ಟು ಮಾಡಿದ ನಂತರ, ಎಷ್ಟು ಬಾರಿ ವಿಮಾನಯಾನ ಮಾಡಿದರೂ, ಪ್ರಯಾಣಿಕರನ್ನು 'ಐಡಿ ತೋರಿಸಿ' ಎಂದು ವಿಮಾನ ನಿಲ್ದಾಣದ ಸಿಬ್ಬಂದಿ ಅಥವಾ ಸುರಕ್ಷತಾ ಸಿಬ್ಬಂದಿ ಕೇಳುವುದಿಲ್ಲ.
- ಡಿಜಿ ಯಾತ್ರಾ ಐಡಿ ಹೊಂದಿರುವ ಪ್ರಯಾಣಿಕರು ವಿಮಾನಯಾನ ಮಾಡಲು ವಿಮಾನ ನಿಲ್ದಾಣಕ್ಕೆ ಬಂದಾಗ, ಸ್ವಯಂಚಾಲಿತ ದ್ವಾರದಲ್ಲಿ ತಮ್ಮ ಟಿಕೆಟ್ ಅಥವಾ ಬೋರ್ಡಿಂಗ್ ಪಾಸ್ ಸ್ಕ್ಯಾನ್ ಮಾಡಬೇಕು. ಕೆಲವೇ ಕ್ಷಣಗಳಲ್ಲಿ ಪ್ರಯಾಣಿಕರ ಟಿಕೆಟ್ ಅಥವಾ ಬೋರ್ಡಿಂಗ್ ಪಾಸ್ ಮಾಹಿತಿಯನ್ನು ಹಾಗೂ ಡಿಜಿ ಯಾತ್ರಾ ಐಡಿಯಲ್ಲಿರುವ ಫೋಟೊದ ಜೊತೆಗೆ ಪ್ರಯಾಣಿಕರ ಹೋಲಿಕೆಯನ್ನು ಮಾಡಿ ಪರಿಶೀಲಿಸಲಾಗುತ್ತದೆ. ಮಾಹಿತಿ ಮತ್ತು ಫೋಟೊ ಹೋಲಿಕೆಯಾದರೆ, ಸ್ವಯಂಚಾಲಿತ ದ್ವಾರ ತೆರೆದುಕೊಳ್ಳುತ್ತದೆ ಮತ್ತು ಪ್ರಯಾಣಿಕರು ವಿಮಾನ ನಿಲ್ದಾಣವನ್ನು ಪ್ರವೇಶಿಸಬಹುದು.
- ಅಲ್ಲಿಂದ ಪ್ರಯಾಣಿಕರು ನೇರವಾಗಿ ಸೆಕ್ಯೂರಿಟಿ ತಪಾಸಣ ವಲಯಕ್ಕೆ ಹೋಗಬಹುದು; ಅಲ್ಲಿ ತಪಾಸಣೆಯ ನಂತರ ಬೋರ್ಡಿಂಗ್ ಏರಿಯಾವನ್ನು ಪ್ರವೇಶಿಸಬಹುದು.
- ಪ್ರಯಾಣಿಕರಿಗೆ ಹಲವು ಬಾರಿ ಸರತಿಸಾಲಿನಲ್ಲಿ ನಿಲ್ಲುವುದು ಡಿಜಿ ಯಾತ್ರಾ ಸೌಲಭ್ಯದಿಂದ ತಪ್ಪುತ್ತದೆ; ಐಡಿ ಮತ್ತು ಬೋರ್ಡಿಂಗ್ ಪಾಸ್ ತೋರಿಸುವುದೂ ತಪ್ಪುತ್ತದೆ. ಅಧಿಕೃತ ಪ್ರಯಾಣಿಕರು ಮತ್ತು ಸಿಬ್ಬಂದಿಯ ಹೊರತಾಗಿ ಬೇರೆ ಯಾರಿಗೂ ವಿಮಾನ ನಿಲ್ದಾಣ ಪ್ರವೇಶಿಸುವ ಅವಕಾಶ ಇರುವುದಿಲ್ಲವಾದ ಕಾರಣ ವಿಮಾನ ನಿಲ್ದಾಣ ಮತ್ತು ವಿಮಾನಯಾನದ ಸುರಕ್ಷತೆಯೂ ಹೆಚ್ಚಾಗುತ್ತದೆ.

ಡಿಜಿ ಯಾತ್ರಾ ಸೌಲಭ್ಯವನ್ನು ಮೊದಲು ಪ್ರಾಯೋಗಿಕವಾಗಿ ಬೆಂಗಳೂರು ಮತ್ತು ಹೈದರಾಬಾದಿನ ವಿಮಾನ ನಿಲ್ದಾಣಗಳಲ್ಲಿ ಬಳಸಲಾಗಿತ್ತು. ಈಗ ಮೊದಲ ಹಂತವಾಗಿ ಪುಣೆ, ವಿಜಯವಾಡ, ಕೋಲ್ಕತ್ತಾ ಮತ್ತು ವಾರಾಣಸಿ ವಿಮಾನ ನಿಲ್ದಾಣಗಳಲ್ಲಿ ಅನುಷ್ಠಾನಗೊಳಿಸಲಾಗುತ್ತಿದೆ. ಮುಂಬರುವ ದಿನಗಳಲ್ಲಿ ದೇಶದ ಎಲ್ಲಾ ವಿಮಾನ ನಿಲ್ದಾಣಗಳಲ್ಲಿ ಈ ಸೌಲಭ್ಯವನ್ನು ಅನುಷ್ಠಾನಗೊಳಿಸಲಾಗುತ್ತದೆ.

ಎಸ್ಸೆಸ್ಸೆಲ್ಸಿ- ಪಿಯುಸಿ ಪರೀಕ್ಷೆ ದಿಕ್ಸೂಚಿ

ಅಧ್ಯಾಯ 10 ವರ್ಗ ಸಮೀಕರಣಗಳು

ಗಣಿತಶಾಸ್ತ್ರ

ಎಸ್ಸೆಸ್ಸೆಲ್ಸಿ

ಪ್ರಮುಖಾಂಶಗಳು

- $p(x)$ ಎಂಬುದು ಮಹತ್ತಮ ಘಾತ 2 ಆಗಿರುವ ಬಹುಪದೋಕ್ತಿ ಆಗಿರುವ $p(x)=0$ ರೂಪದ ಯಾವುದೇ ಸಮೀಕರಣವನ್ನು ವರ್ಗಸಮೀಕರಣ ಎನ್ನುತ್ತೇವೆ.
- ವರ್ಗ ಸಮೀಕರಣದ ಆದರ್ಶರೂಪ : $ax^2+bx+c=0$
- ದತ್ತ ಸಮೀಕರಣವು ವರ್ಗ ಸಮೀಕರಣವೇ ಅಥವಾ ಅಲ್ಲವೇ ಎಂಬುದನ್ನು ತೀರ್ಮಾನಿಸುವ ಮೊದಲು ಯಾವಾಗಲೂ ಅದನ್ನು ಸಂಕ್ಷೇಪಿಸಬೇಕು.
- ಯಾವುದೇ ವರ್ಗ ಸಮೀಕರಣವು ಗರಿಷ್ಠ ಎರಡು ಮೂಲಗಲನ್ನು ಹೊಂದಿರುತ್ತದೆ.
- ax^2+bx+c ವರ್ಗ ಬಹುಪದೋಕ್ತಿಯ ಶೂನ್ಯತೆಗಳು ಮತ್ತು $ax^2+bx+c=0$ ವರ್ಗ ಸಮೀಕರಣದ ಮೂಲಗಳು ಒಂದೇ ಆಗಿರುತ್ತವೆ
- ಯಾವುದೇ ವರ್ಗ ಸಮೀಕರಣವನ್ನು $(x+a)^2-b^2=0$ ರೂಪಕ್ಕೆ ಪರಿವರ್ತಿಸಬಹುದು.
- ವರ್ಗವನ್ನು ಪೂರ್ಣಗೊಳಿಸುವ ಪ್ರಕ್ರಿಯೆಯಿಂದ $ax^2+bx+c=0$ ಯನ್ನು $(x+a)^2-b^2=0$ ಎಂದು ಬರೆಯುವ ವಿಧಾನವನ್ನು 'ವರ್ಗ ಪೂರ್ಣಗೊಳಿಸುವ ವಿಧಾನ' ಎನ್ನುತ್ತೇವೆ.
- ವರ್ಗ ಸಮೀಕರಣದ ಮೂಲಗಳನ್ನು ಕಂಡುಹಿಡಿಯುವ ಸೂತ್ರ: $X=\frac{-b\pm\sqrt{b^2-4ac}}{2a}$
- $ax^2+bx+c=0$ ವರ್ಗ ಸಮೀಕರಣದ ಮೂಲಗಳು $X=\frac{-b+\sqrt{b^2-4ac}}{2a}$ ಮತ್ತು $X=\frac{-b-\sqrt{b^2-4ac}}{2a}$
- **ಮೂಲಗಳ ಸ್ವಭಾವ:**

$ax^2+bx+c=0$ ವರ್ಗಸಮೀಕರಣವು

1) $b^2-4ac>0$ ಆದರೆ ಎರಡು ಭಿನ್ನವಾದ ವಾಸ್ತವ ಮೂಲಗಳನ್ನು ಹೊಂದಿರುತ್ತವೆ.

2) $b^2-4ac=0$ ಆದರೆ ಎರಡು ಸಮನಾದ ವಾಸ್ತವ ಮೂಲಗಳನ್ನು ಹೊಂದಿರುತ್ತವೆ.

3) $b^2-4ac<0$ ಆದರೆ ಯಾವುದೇ ವಾಸ್ತವ ಮೂಲಗಳನ್ನು ಹೊಂದಿರುವುದಿಲ್ಲ.

ಪ್ರಶ್ನೋತ್ತರಗಳು:

1. $(x-3)(2x+1)=x(x+5)$ **ಇದು ವರ್ಗ ಸಮೀಕರಣವೇ? ಪರೀಕ್ಷಿಸಿ.**

ಪರಿಹಾರ: $(x-3)(2x+1)=x(x+5)$

$x(2x+1)-3(2x+1)=x^2+5x$

$2x^2+x-6x-3-x^2-5x=0$

$x^2-10x-3=0$ ಇದು $ax^2+bx+c=0$ ರೂಪದಲ್ಲಿದೆ.

ಆದ್ದರಿಂದ ದತ್ತ ಸಮೀಕರಣವು ವರ್ಗ ಸಮೀಕರಣವಾಗಿದೆ.

2. $(x+4)(x+3)=0$ **ಸಮೀಕರಣದಲ್ಲಿ ಒಂದು ಮೂಲವು –4 ಆದರೆ, ಆ ಸಮೀಕರಣದ ಇನ್ನೊಂದು ಮೂಲವನ್ನು ಕಂಡುಹಿಡಿಯಿರಿ.**

ಪರಿಹಾರ: $(x+4)(x+3)=0$

$(x+4)=0$ ಅಥವಾ $(x+3)=0$

$x=-4$ ಅಥವಾ $x=-3$

ಆದ್ದರಿಂದ, ಇನ್ನೊಂದು ಮೂಲ –3

3. $x^2-4x+2=0$ **ವರ್ಗ ಸಮೀಕರಣವನ್ನು ಸೂತ್ರ ವಿಧಾನದಿಂದ ಬಿಡಿಸಿ.**

ಪರಿಹಾರ: $x^2-4x+2=0$ ಅನ್ನು $ax^2+bx+c=0$ ಗೆ ಹೋಲಿಸಿದಾಗ

$a=1, b=-4, c=2$ ಆಗುವುದು.

$X=\frac{-b\pm\sqrt{b^2-4ac}}{2a}$

$X=\frac{-(-4)\pm\sqrt{(-4)^2-4(1)(2)}}{2(1)}$

$X=\frac{4\pm\sqrt{16-8}}{2}$

$X=\frac{4\pm\sqrt{8}}{2}$

$X=\frac{4\pm\sqrt{4x2}}{2}$

$X=\frac{4\pm2\sqrt{2}}{2}$

$X=\frac{2(2\pm\sqrt{2})}{2}$

$X=2\pm\sqrt{2}$

ಪ್ರಜಾವಾಣಿ ನೋಡಿಯೊ

ಹತ್ತನೇ ತರಗತಿ ಗಣಿತಶಾಸ್ತ್ರದ 'ಕ್ವಾಡ್ರ್ಯಾಟಿಕ್ ಈಕ್ವೇಷನ್' ಅಧ್ಯಾಯದ ಓದಿಗಾಗಿ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ.

4. $2x^2-5x-1=0$ **ವರ್ಗ ಸಮೀಕರಣದ ಶೋಧಕವನ್ನು ಕಂಡುಹಿಡಿಯಿರಿ ಮತ್ತು ಇದರಿಂದ ಮೂಲಗಳ ಸ್ವಭಾವವನ್ನು ನಿರ್ಧರಿಸಿ ಬರೆಯಿರಿ.**

ಪರಿಹಾರ: $2x^2-5x-1=0$ ಅನ್ನು $ax^2+bx+c=0$ ಗೆ ಹೋಲಿಸಿದಾಗ

$a=2, b=-5, c=-1$

ಶೋಧಕ $\Delta=b^2-4ac$

$\Delta=(-5)^2-4(2)(-1)$

$\Delta=25+8$

$\Delta=33$

$\therefore\Delta>0$ **ಸಮೀಕರಣವು ಎರಡು ಭಿನ್ನವಾದ ವಾಸ್ತವ ಮೂಲ ಹೊಂದಿದೆ.**

ಶ್ರೀನಿವಾಸ ಡಿ. ಶೆಟ್ಟಿ, ಶಿಕ್ಷಣ ಸಂಯೋಜಕರು, ಬಿಇಓ ಕಚೇರಿ, ಅರಕಲಗೂಡು

ಮಾದರಿ ಪ್ರಶ್ನೆಗಳು ಗಣಿತದ ಹೇಳಿಕೆಗಳ ಸಾಧನೆ

ಗಣಿತಶಾಸ್ತ್ರ

ಪಿಯುಸಿ

11) ಯಾವುದೇ ತ್ರಿಭುಜ ABCಯಲ್ಲಿ a = b cos C + c cos ಎಂದು ತೋರಿಸಿ.

ಪರಿಹಾರ: ಉಕ್ತಿ p : ABC ಒಂದು ತ್ರಿಭುಜ ಹಾಗೂ ಉಕ್ತಿ q:a = b cos C + c cos B ಆಗಿರಲಿ. ತ್ರಿಭುಜ ABC ಯಲ್ಲಿ ಶೃಂಗ A ದಿಂದ BCಯ ಮೇಲೆ ADಯನ್ನು ಲಂಬವಾಗಿ ಎಳೆಯಿರಿ.(ಅವಶ್ಯವಿದ್ದಲ್ಲಿ BC ಯನ್ನು ವೃದ್ಧಿಸಿ) ಯಾವುದೇ ಒಂದು ತ್ರಿಭುಜವು ಲಘುಕೋನ ತ್ರಿಭುಜ, ವಿಶಾಲಕೋನ ತ್ರಿಭುಜ ಅಥವಾ ಲಂಬಕೋನ ತ್ರಿಭುಜ ಆಗಿರುವುದು ನಮಗೆ ತಿಳಿದ ವಿಷಯ. ಆದುದರಿಂದ p ಉಕ್ತಿಯನ್ನು ನಾವು ಮೂರು ಉಕ್ತಿಗಳಾದ r, s ಮತ್ತು t ಗಳಾಗಿ ವಿಂಗಡಿಸಬಹುದಾಗಿದೆ. ಇಲ್ಲಿ.

r : ABC ಯು ವಿಶಾಲಕೋನ ತ್ರಿಭುಜವಾಗಿದ್ದು ಇದರಲ್ಲಿ C ಯು ಲಘುಕೋನವಾಗಿದೆ.

s : ABC ಯು ವಿಶಾಲಕೋನ ತ್ರಿಭುಜವಾಗಿದ್ದು ಇದರಲ್ಲಿ C ಯು ವಿಶಾಲಕೋನವಾಗಿದೆ.

t: ABC ಯು ಲಂಬಕೋನ ತ್ರಿಭುಜವಾಗಿದ್ದು ಇದರಲ್ಲಿ C ಯು ಲಂಬಕೋನವಾಗಿದೆ.

ಆದುದರಿಂದ ಪ್ರಮೇಯವನ್ನು ನಾವು ಮೂರು ಸಂಭವನೀಯ ಪ್ರಕರಣಗಳಿಗೆ ಪ್ರತ್ಯೇಕವಾಗಿ ಸಾಧಿಸುತ್ತೇವೆ.

ಪ್ರಕರಣ (i): ತ್ರಿಭುಜ ABC ಲಘುಕೋನ ತ್ರಿಭುಜ ಇರಲಿ (ಚಿತ್ರ) ಲಂಬಕೋನ ತ್ರಿಭುಜ ABC



ಯಿಂದ. $\frac{BD}{AB}=\cos B$

ಅಂದರೆ $BD=AB\cos B$

$=C\cos B$

ಲಂಬಕೋನ ತ್ರಿಭುಜ ADC ಯಿಂದ

$\frac{CD}{AC}=\cos C$

ಅಂದರೆ $CD=AC\cos C$

$DC=b\cos C$

ಈಗ $BC=a=BD+DC$

$a=c\cos B+b\cos C$ .... (1)

ಪ್ರಕರಣ (ii): $\angle c$ ವಿಶಾಲ ಕೋನ ಇರಲಿ (ಕೆಳಗಿನ ಚಿತ್ರದಲ್ಲಿರುವಂತೆ) ಲಂಬಕೋನ ತ್ರಿಭುಜ ABC



ಯಿಂದ. $\frac{BD}{AB}=\cos B$

ಅಂದರೆ $BD=AB\cos B$

$=c\cos B$

ಲಂಬಕೋನ ತ್ರಿಭುಜ ADC ಯಿಂದ

$\frac{CD}{AC}=\cos \angle ACD=\cos(180^\circ-C)=-\cos C$

ಅಂದರೆ $CD=AC\cos C$

$DC=-b\cos C$

ಈಗ $a=BC=BD-CD$

ಅಂದರೆ $a=c\cos B-(-b\cos C)$

$=a\cos B+b\cos C$ .... (2)

ಪ್ರಕರಣ (iii): $\angle c$ ಲಂಬಕೋನ ಇರಲಿ (ಕೆಳಗಿನ ಚಿತ್ರದಲ್ಲಿರುವಂತೆ) ಲಂಬಕೋನ ತ್ರಿಭುಜ ABC ಯಿಂದ

$\frac{BC}{AB}=\cos B$

ಅಂದರೆ $BC=AB\cos B$

$a=c\cos B$

ಹಾಗೂ $b\cos=b\cos 90^\circ=0$



ಹೀಗಾಗಿ $a=0+c\cos B$ ಎಂದು ನಾವು ಬರೆಯಬಹುದು

$a=b\cos c+c\cos B$ .... (3)

(1), (2) ಮತ್ತು (3) ರಿಂದ ನಾವು ಯಾವುದೇ ತ್ರಿಭುಜ ABC ಯಲ್ಲಿ

$a=b\cos C+c\cos B$ ಎಂದು ಪ್ರತಿಪಾದಿಸಿದೆ.

ಪ್ರಕರಣ (i)ರಲ್ಲಿ $r\Rightarrow q$ ಎಂದು ಸಾಧಿಸಿದೆ

ಪ್ರಕರಣ (ii)ರಲ್ಲಿ $s\Rightarrow q$ ಎಂದು ಸಾಧಿಸಿದೆ.

ಹಾಗೂ ಪ್ರಕರಣ (iii)ರಲ್ಲಿ $t\Rightarrow q$ ಎಂದು ಸಾಧಿಸಿದೆ ಇದರಿಂದ

$(r\vee s\vee t)\Rightarrow q$ ಎಂದು ಸಾಧಿಸಿದಂತಾಯಿತು ಅಂದರೆ $p\Rightarrow q$ ಸಾಧಿಸಲ್ಪಟ್ಟಿತು.

12) $\vec{a}=2\hat{i}+3\hat{j}+\hat{k}$ **ಆದರೆ $\vec{a}$ ಸದಿಶದ ದಿಕ್ಕಿನಲ್ಲಿರುವ ಏಕಸದಿಶವನ್ನು ಕಂಡುಹಿಡಿಯಿರಿ.**

ಉತ್ತರ:– ಸದಿಶ $\vec{a}$ ದಿಕ್ಕಿನಲ್ಲಿರುವ ಏಕಸದಿಶ $\hat{a}$

$\hat{a}=\frac{\vec{a}}{|\vec{a}|}$

$|\vec{a}|=\sqrt{2^2+3^2+1^2}=\sqrt{14}$

ಹಾಗಾಗಿ $\hat{a}=\frac{1}{\sqrt{14}}(2\hat{i}+3\hat{j}+\hat{k})=\frac{2}{\sqrt{14}}\hat{i}+\frac{3}{\sqrt{14}}\hat{j}+\frac{1}{\sqrt{14}}\hat{k}$

ಸಹಕಾರ: ಜ್ಞಾನಭಾರತಿ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರ ಬೆಂಗಳೂರು

ಪ್ರಜಾವಾಣಿ ನೋಡಿಯೊ

ದ್ವಿತೀಯ ಪಿಯುಸಿ ಗಣಿತಶಾಸ್ತ್ರದ ಮಾದರಿ ಪ್ರಶ್ನೋತ್ತರಕ್ಕಾಗಿ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಸುಭಾಷಿತ

ನೀವು ಎಷ್ಟೇ ಪ್ರತಿಭಾವಂತರಾಗಿದ್ದರೂ ಎಲ್ಲರೂ ನಿಮ್ಮನ್ನು ಇಷ್ಟಪಡುವುದಿಲ್ಲ. ಆದರೆ, ಅದೇ ಜೀವನ. ಧೈರ್ಯವಾಗಿ ಇರಿ.

–ಜಸ್ಟಿನ್ ಬೈಬರ್

ಬಿಬಿಎಂಪಿ: ಟೆಂಡರ್ ಪ್ರಕ್ರಿಯೆಯಿಂದ ನುಣುಚಿಕೊಳ್ಳುವ ಪರಿಪಾಟ ಸಲ್ಲದು

ಸರ್ಕಾರದ ಕಾಮಗಾರಿಗಳ ಗುತ್ತಿಗೆ ನೀಡುವ ಪ್ರಕ್ರಿಯೆ ಪೈಪೋಟಿದಾಯಕವಾಗಿರಬೇಕು ಹಾಗೂ ಆಡಳಿತ ವ್ಯವಸ್ಥೆಯಲ್ಲಿ ಪಾರದರ್ಶಕತೆ ಕಾಯ್ದುಕೊಳ್ಳಬೇಕು ಎಂಬ ಉದ್ದೇಶದಿಂದ ‘ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆ ಕಾಯ್ದೆ-1999’ (ಕೆಟಿಪಿಪಿ ಕಾಯ್ದೆ) ಅನ್ನು ರಾಜ್ಯದಲ್ಲಿ ಜಾರಿಗೆ ತರಲಾಗಿದೆ. ಈ ಕಾಯ್ದೆ ಜಾರಿಗೆ ಬಂದ ದಿನದಿಂದ ಟೆಂಡರ್ ಕರೆಯದೆ ಯಾವುದೇ ಕಾಮಗಾರಿ ನಡೆಸುವಂತಿಲ್ಲ. ಆದರೆ, ತುರ್ತು ಹಾಗೂ ವಿಪತ್ತಿನ ಸಂದರ್ಭಕ್ಕೆ ಮಾತ್ರ ಅನ್ವಯವಾಗುವಂತೆ ಈ ಕಾಯ್ದೆಯ ಸೆಕ್ಷನ್ 4ರ ಅಡಿ ಕೆಲವೊಂದು ವಿನಾಯಿತಿಗಳನ್ನು ನೀಡಲಾಗಿದೆ. ಪ್ರಕೃತಿ ವಿಕೋಪದ ಸಂದರ್ಭದಲ್ಲಿ ಅಥವಾ ಸರ್ಕಾರ ತುರ್ತು ಪರಿಸ್ಥಿತಿಯನ್ನು ಘೋಷಿಸಿದಾಗ ಟೆಂಡರ್ ಕರೆಯದೇ ಕಾಮಗಾರಿ ನಡೆಸಲು ಈ ಕಾಯ್ದೆಯ ಸೆಕ್ಷನ್ 4 (ಎ) ಅವಕಾಶ ಕಲ್ಪಿಸುತ್ತದೆ. ಸರ್ಕಾರವು ಕಾಲಕಾಲಕ್ಕೆ ಪ್ರಕಟಿಸುವ ಅಧಿಸೂಚನೆಗೆ ಅನ್ವಯವಾಗಿ ನಿರ್ದಿಷ್ಟ ಕಾಮಗಾರಿಗೆ ಅಥವಾ ಖರೀದಿಗೆ ಟೆಂಡರ್ ಕರೆಯುವ ಪ್ರಕ್ರಿಯೆಯಿಂದ ವಿನಾಯಿತಿ ಪಡೆಯಲು ಈ ಕಾಯ್ದೆಯ ಸೆಕ್ಷನ್ 4 (ಜಿ) ಅಡಿ ಅವಕಾಶ ಕಲ್ಪಿಸಲಾಗಿದೆ. ಈ ವಿನಾಯಿತಿಗಳನ್ನೇ ದುರ್ಬಳಕೆ ಮಾಡಿಕೊಂಡು ಟೆಂಡರ್ ಕರೆಯದೇ ಕಾಮಗಾರಿ ನಡೆಸುವ ಪ್ರಯತ್ನಗಳು ಪದೇ ಪದೇ ನಡೆಯುತ್ತಿವೆ. ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ (ಬಿಬಿಎಂಪಿ) ವ್ಯಾಪ್ತಿಯಲ್ಲಿ ವಿಪತ್ತು ಪರಿಹಾರ ನಿಧಿ ಅಡಿಯಲ್ಲಿ ಒಟ್ಟು ₹ 1,171 ಕೋಟಿ ಮೊತ್ತದ ಕಾಮಗಾರಿಗಳ ಅನುಷ್ಠಾನಕ್ಕೆ ಟೆಂಡರ್ ಪ್ರಕ್ರಿಯೆಯಿಂದ ವಿನಾಯಿತಿ ಪಡೆಯುವ ಪ್ರಯತ್ನವು ಇದಕ್ಕೆ ಇತ್ತೀಚಿನ ಸೇರ್ಪಡೆ. ಬಿಬಿಎಂಪಿಯು ವಿಪತ್ತು ಪರಿಹಾರ ನಿಧಿ ಅಡಿಯಲ್ಲಿ ಕೈಗೊಳ್ಳಲು ಉದ್ದೇಶಿಸಿರುವ ಕಾಮಗಾರಿಗಳು ತುರ್ತಾಗಿ ಕೈಗೊಳ್ಳುವ ಕಾಮಗಾರಿಗಳ ವ್ಯಾಪ್ತಿಯಲ್ಲಿ ಬರುವುದಿಲ್ಲ ಎಂಬ ಕಾರಣಕ್ಕೆ ಹಣಕಾಸು ಇಲಾಖೆಯು ಈ ಪ್ರಸ್ತಾವಕ್ಕೆ ಅನುಮೋದನೆ ನೀಡಲು ನಿರಾಕರಿಸಿರುವುದು ಸಮಂಜಸವಾಗಿಯೇ ಇದೆ. ಟೆಂಡರ್ ಕರೆಯದೇ ಕಾಮಗಾರಿ ನಡೆಸಲು ಬಿಬಿಎಂಪಿ ಪ್ರಯತ್ನಿಸುತ್ತಿರುವುದು ಇದೇ ಮೊದಲಲ್ಲ. ಈ ಹಿಂದೆ, ನವ ನಗರೋತ್ಥಾನ ಯೋಜನೆಯ ಕಾಮಗಾರಿಗಳು, ಪಾಲಿಕೆಗೆ ಹೊಸದಾಗಿ ಸೇರ್ಪಡೆಯಾಗಿರುವ 110 ಹಳ್ಳಿಗಳ ಅಭಿವೃದ್ಧಿ ಕಾಮಗಾರಿಗಳು, ಕಸ ನಿರ್ವಹಣೆಗೆ ಸಂಬಂಧಿಸಿದ ಕಾಮಗಾರಿಗಳು ಹಾಗೂ ಪಶ್ಚಿಮ ಕಾರ್ಡ್ ರಸ್ತೆ ಮೇಲ್ಸೇತುವೆ ಕಾಮಗಾರಿಗೆ ಸಂಬಂಧಿಸಿದಂತೆಯೂ ಟೆಂಡರ್ ಪ್ರಕ್ರಿಯೆಯಿಂದ ನುಣುಚಿಕೊಳ್ಳಲು ಬಿಬಿಎಂಪಿ ಯತ್ನಿಸಿತ್ತು. ಈ ಎಲ್ಲ ಪ್ರಯತ್ನಗಳಿಗೂ ಹಣಕಾಸು ಇಲಾಖೆ ಸೊಪ್ಪು ಹಾಕಿಲ್ಲ ಎಂಬುದು ಸಮಾಧಾನದ ಸಂಗತಿ. ಟೆಂಡರ್ ಪ್ರಕ್ರಿಯೆಯಿಂದ ಪದೇ ಪದೇ ನುಣುಚಿಕೊಳ್ಳಲು ಪ್ರಯತ್ನಿಸುವ ಪರಿಪಾಟವನ್ನು ಬಿಬಿಎಂಪಿ ಇನ್ನಾದರೂ ಕೈಬಿಡಬೇಕು.

ಟೆಂಡರ್ ಕರೆಯಬೇಕೇ ಬೇಡವೇ ಎನ್ನುವುದನ್ನು ಸರ್ಕಾರದ ವಿವೇಚನೆಗೆ ಬಿಡುವ 4 ಜಿ ಸೆಕ್ಷನ್ ಅನ್ನು ರದ್ದುಪಡಿಸುವುದೇ ಸೂಕ್ತ

ಈ ಹಿಂದೆ ಪೂರ್ಣಾವಧಿ ಟೆಂಡರ್‌ಗೆ ಅರ್ಜಿ ಸಲ್ಲಿಸುವುದಕ್ಕೆ ಕನಿಷ್ಠ 60 ದಿನಗಳ ಕಾಲಾವಕಾಶ ನೀಡಲಾಗುತ್ತಿತ್ತು. ಕೆಟಿಪಿಪಿ ಕಾಯ್ದೆಗೆ ತಿದ್ದುಪಡಿ ತಂದು ಅದನ್ನು 30 ದಿನಗಳಿಗೆ ಇಳಿಸಲಾಗಿದೆ. ಟೆಂಡರ್ ಪ್ರಕ್ರಿಯೆಯನ್ನು ಸಮರ್ಪಕವಾಗಿ ನಿರ್ವಹಿಸಲೆಂದೇ ಪ್ರತ್ಯೇಕ ಪೋರ್ಟಲ್ ಅನ್ನು ಕೂಡ ಸರ್ಕಾರ ನಿರ್ವಹಿಸುತ್ತಿದೆ. ತುರ್ತು ಸಂದರ್ಭಗಳಲ್ಲಿ ಅನಿವಾರ್ಯ ಇದ್ದರೆ ಅಲ್ಪಾವಧಿ ಟೆಂಡರ್ ಕರೆಯುವುದಕ್ಕೂ ಕೆಟಿಪಿಪಿ ಕಾಯ್ದೆಯಲ್ಲಿ ಅವಕಾಶ ಕಲ್ಪಿಸಲಾಗಿದೆ. ಅಲ್ಪಾವಧಿ ಟೆಂಡರ್‌ನಲ್ಲಿ ಭಾಗವಹಿಸುವವರು ಅರ್ಜಿ ಸಲ್ಲಿಸಲು ಬರೀ ಏಳು ದಿನಗಳ ಕಾಲಾವಕಾಶ ನೀಡಿದರೂ ಸಾಕು. ಕೆಟಿಪಿಪಿ ಕಾಯ್ದೆಯ 4 ಜಿ ಸೆಕ್ಷನ್ ಅಡಿ ಟೆಂಡರ್ ಪ್ರಕ್ರಿಯೆಯಿಂದ ವಿನಾಯಿತಿ ಪಡೆಯಬೇಕಾದರೆ, ಸರ್ಕಾರಕ್ಕೆ ಪ್ರಸ್ತಾವ ಸಲ್ಲಿಸಿ ಅನುಮೋದನೆ ಪಡೆಯಬೇಕು. ಈ ಪ್ರಕ್ರಿಯೆಗೆ ಏನಿಲ್ಲವೆಂದರೂ ನಾಲ್ಕು ವಾರಗಳು ಬೇಕಾಗುತ್ತವೆ. ಅಲ್ಪಾವಧಿ ಟೆಂಡರ್ ಕರೆದು ಕಾಮಗಾರಿ ನಿರ್ವಹಿಸಲು ಕಾಯ್ದೆಯಲ್ಲೇ ಅವಕಾಶ ಕಲ್ಪಿಸಿದ ಬಳಿಕವೂ ಕಾಮಗಾರಿಗಳ ನಿರ್ವಹಣೆಗೆ 4 ಜಿ ಸೆಕ್ಷನ್ ಅಡಿ ವಿನಾಯಿತಿ ಪಡೆಯುವ ಪ್ರಯತ್ನ ಮತ್ತಷ್ಟು ಕಾಲಹರಣಕ್ಕೆ ದಾರಿಯಾಗುತ್ತದೆಯೇ ವಿನಾ ಅದರಿಂದ ಕಾಮಗಾರಿಯನ್ನು ತ್ವರಿತವಾಗಿ ನಿರ್ವಹಿಸುವ ಉದ್ದೇಶ ಈಡೇರದು.

ಕೆಟಿಪಿಪಿ ಕಾಯ್ದೆಯ ಸೆಕ್ಷನ್ 4ಜಿ ಅಡಿ ಕಲ್ಪಿಸಲಾದ ಅವಕಾಶವು ಸದುದ್ದೇಶಕ್ಕೆ ಬಳಕೆ ಆಗುವ ಬದಲು, ದುರುದ್ದೇಶಕ್ಕೆ ಬಳಕೆಯಾಗುತ್ತಿರುವುದೇ ಜಾಸ್ತಿ. ಈ ಸೆಕ್ಷನ್ ಅಡಿ ಟೆಂಡರ್ ಪ್ರಕ್ರಿಯೆಯಿಂದ ವಿನಾಯಿತಿ ನೀಡುವುದಕ್ಕೆ ನಿರ್ದಿಷ್ಟ ಮಾನದಂಡಗಳನ್ನೂ ನಿಗದಿಪಡಿಸಿಲ್ಲ. ಸರ್ಕಾರದ ವಿವೇಚನೆಯಡಿ ಕೈಗೊಳ್ಳುವ ಇಂತಹ ತೀರ್ಮಾನ ಸಾರ್ವಜನಿಕ ಹಿತಾಸಕ್ತಿಯಿಂದ ಕೂಡಿರುವುದೇ ಅಪರೂಪ. ಹೆಚ್ಚಿನ ಸಂದರ್ಭಗಳಲ್ಲಿ ರಾಜಕಾರಣಿಗಳು ಅಥವಾ ಅಧಿಕಾರಿಗಳು ಸರ್ಕಾರದ ಮೇಲೆ ಒತ್ತಡ ಹೇರಿ ತಮಗೆ ಬೇಕಾದ ಗುತ್ತಿಗೆದಾರರಿಗೆ ಕಾಮಗಾರಿಯನ್ನು ವಹಿಸುವುದಕ್ಕೆ ಈ ಅವಕಾಶವನ್ನು ದುರುಪಯೋಗಪಡಿಸಿಕೊಳ್ಳುತ್ತಿರುವುದು ಗುಟ್ಟಾಗಿ ಉಳಿದಿಲ್ಲ. ಚುನಾವಣೆ ಸಮೀಪಿಸಿದಾಗ ರಾಜಕಾರಣಿಗಳು ತಮ್ಮ ಬೆಂಬಲಿಗರಿಗೆ ಅನುಕೂಲ ಮಾಡಿಕೊಡಲು ಈ ಅವಕಾಶವನ್ನು ದುರ್ಬಳಕೆ ಮಾಡಿಕೊಳ್ಳುವ ಪರಿಪಾಟವೂ ಹೆಚ್ಚುತ್ತಿದೆ. ಈ ಕಾಯ್ದೆಯ ಮೂಲ ಆಶಯಗಳಿಗೆ ಸೆಕ್ಷನ್ 4ಜಿಯು ವಿರುದ್ಧವಾಗಿದೆ. ಟೆಂಡರ್ ಕರೆಯದೇ ಕಾಮಗಾರಿ ನಿರ್ವಹಿಸಲು ಅವಕಾಶ ಕಲ್ಪಿಸುವ ಈ ಸೆಕ್ಷನ್ ಇದ್ದಷ್ಟು ದಿನವೂ ಅದನ್ನು ದುರ್ಬಳಕೆ ಮಾಡುವ ಪ್ರಯತ್ನಗಳು ನಿಲ್ಲುವುದಿಲ್ಲ. ಟೆಂಡರ್ ಕರೆಯಬೇಕೇ ಬೇಡವೇ ಎನ್ನುವುದನ್ನು ಸರ್ಕಾರದ ವಿವೇಚನೆಗೆ ಬಿಡುವ 4 ಜಿ ಸೆಕ್ಷನ್ ಅನ್ನು ರದ್ದುಪಡಿಸುವುದೇ ಸೂಕ್ತ. ಸರ್ಕಾರ ದಿಟ್ಟ ನಿರ್ಧಾರ ಕೈಗೊಂಡು ಪಾರದರ್ಶಕ ಆಡಳಿತದ ಆಶಯಗಳನ್ನು ಎತ್ತಿಹಿಡಿಯಬೇಕು.

ದಿನದ ಟ್ವೀಟ್

ದುಬಾರಿ ಪ್ರಯಾಣ ದರ

ಉಕ್ರೇನ್ ತೊರೆಯುವಂತೆ ಭಾರತೀಯ ರಾಯಭಾರ ಕಚೇರಿಯು ಆರಂಭದಲ್ಲಿ ನೀಡಿದ ಸಲಹೆಗೆ ಅನೇಕ ವಿದ್ಯಾರ್ಥಿಗಳು ಓಗೊಡದೇ ಇದ್ದುದಕ್ಕೆ ಇರುವ ಪ್ರಮುಖ ಕಾರಣಗಳಲ್ಲಿ, ಒಂದು ಕಡೆಯ ಪ್ರಯಾಣಕ್ಕೆ ಏರ್ ಇಂಡಿಯಾದ ದುಬಾರಿ ದರವೂ ಸೇರಿದೆ. ಅಷ್ಟೊಂದು ಬೃಹತ್ ಮೊತ್ತ ಪಾವತಿಸಬೇಕಾಗುತ್ತದೆ ಎಂಬ ಕಲ್ಪನೆ ಹೆಚ್ಚಿನ ವಿದ್ಯಾರ್ಥಿಗಳು ಅಥವಾ ಅವರ ಕುಟುಂಬಗಳಿಗೆ ಇರಲಿಲ್ಲ. ಈ ವಾಸ್ತವ ಸಂಗತಿಯು ನಿರ್ಲಕ್ಷ್ಯಕ್ಕೆ ಒಳಗಾಗಿರುವುದು ವಿಷಾದದ ಸಂಗತಿ.

ಸಂಜಯ್ ಕಪೂರ್, ಪತ್ರಕರ್ತ

ಕಿಡಿನುಡಿ



ಕಾಂಗ್ರೆಸ್‌ನವರು ಈಗಾಗಲೇ ಅಧಿಕಾರಕ್ಕೆ ಬಂದಂತೆ ಹೊರಗಡೆ ಪೋಸ್ ಕೊಡುತ್ತಿದ್ದಾರೆ. ಆದರೆ ಒಳಗಡೆ ಪೊಳ್ಳುತನ ಇದೆ. ಅವರು ಏನೇ ಮಾಡಿದರೂ ಕಾಂಗ್ರೆಸ್ ಪಕ್ಷದ ಸರ್ವಾಧಿಕಾರಿ ಧೋರಣೆಯನ್ನು ಕರ್ನಾಟಕದ ಜನ ಒಪ್ಪಿಕೊಳ್ಳುವುದಿಲ್ಲ.

ಬಸವರಾಜ ಬೊಮ್ಮಾಯಿ, ಮುಖ್ಯಮಂತ್ರಿ

25 ವರ್ಷಗಳ ಹಿಂದೆ

ಭಾನುವಾರ, 2-3-1997

- **ಗೈರುಹಾಜರಿ: 21 ಎಂಜಿನಿಯರ್‌ಗಳ ಸಸ್ಪೆಂಡ್**

ಬೆಂಗಳೂರು, ಮಾ. 1– ವರ್ಗಾವಣೆ ಆದ ಸ್ಥಳಗಳಲ್ಲಿ ಕರ್ತವ್ಯಕ್ಕೆ ಹಾಜರಾಗದ ನೀರಾವರಿ ಇಲಾಖೆಯ ಇಬ್ಬರು ಕಾರ್ಯನಿರ್ವಾಹಕ ಎಂಜಿನಿಯರುಗಳು ಸೇರಿದಂತೆ ಇಪ್ಪತ್ತೊಂದು ಎಂಜಿನಿಯರುಗಳನ್ನು ಅಮಾನತು ಮಾಡಿ ಸರ್ಕಾರ ಆದೇಶ ಹೊರಡಿಸಿದೆ.

ಈ ಎಂಜಿನಿಯರುಗಳು ವರ್ಗಾವಣೆಯಾದ ಸ್ಥಳಗಳಲ್ಲಿ ಸೇವೆಗೆ ಹಾಜರಾಗದಿರುವುದರಿಂದ, ನೀರಾವರಿ ಯೋಜನೆಗಳ ಕಾಮಗಾರಿ ಹಾಗೂ ಕಚೇರಿಗಳ ದೈನಂದಿನ ಕೆಲಸ ಕಾರ್ಯಗಳಿಗೆ ತೊಂದರೆಯಾಗುತ್ತಿದೆ ಎಂದು ನೋಟಿಸ್ ನೀಡಿದರೂ ಹಾಜರಾಗದಿದ್ದರಿಂದ ಶಿಸ್ತಿನ ಕ್ರಮವಾಗಿ ಅವರನ್ನು ಅಮಾನತು ಮಾಡಲಾಗಿದೆ ಎಂದು ಭಾರಿ ನೀರಾವರಿ ಸಚಿವ ಕೆ.ಎನ್. ನಾಗೇಗೌಡ ಅವರು ‘ಪ್ರಜಾವಾಣಿ’ಗೆ ತಿಳಿಸಿದರು.

- **ಇರಾನ್ ಭೂಕಂಪ– 500 ಬಲಿ**

ಟೆಹರಾನ್, ಮಾ. 1– ಇರಾನ್‌ನ ವಾಯವ್ಯ ಭಾಗಗಳಲ್ಲಿ ಶುಕ್ರವಾರ ಸಂಭವಿಸಿದ ಭೀಕರ ಭೂಕಂಪದಲ್ಲಿ ಸುಮಾರು 500 ಮಂದಿ ಸತ್ತಿದ್ದಾರೆ. 2,000 ಮಂದಿಗೆ ಗಾಯಗಳಾಗಿವೆ. 52 ಹಳ್ಳಿಗಳಿಗೆ ತೀವ್ರ ಹಾನಿಯಾಗಿದೆ.

50 ವರ್ಷಗಳ ಹಿಂದೆ

ಗುರುವಾರ, 2-3-1972

- **ಕಲ್ಬುರ್ಗಿಯಲ್ಲಿ ಪ್ರಕ್ಷುಬ್ಧ ಪರಿಸ್ಥಿತಿ: ಸೇನೆಗೆ ಕರೆ, ಕರ್ಫ್ಯೂ ವಿಸ್ತರಣೆ**

ಕಲ್ಬುರ್ಗಿ, ಮಾ. 1– ಕಲ್ಬುರ್ಗಿಯಲ್ಲಿ ಗಲಭೆಗಳು ಪ್ರಾರಂಭವಾದ ಎರಡನೆಯ ದಿನವಾದ ಇಂದು ಸಹ ಬೆಂಕಿ ಹಚ್ಚುವ ಪ್ರಕರಣಗಳು ಮತ್ತು ಘರ್ಷಣೆಗಳು ನಡೆದು ತೀವ್ರ ಪ್ರಕ್ಷುಬ್ಧ ಪರಿಸ್ಥಿತಿ ತಲೆದೋರಿ ಪರಿಸ್ಥಿತಿಯನ್ನೆದುರಿಸಲು ಸಜ್ಜಾಗಿರುವಂತೆ ಕೂಡಲೇ ಸೇನೆಯನ್ನು ಕಳುಹಿಸಲು ರಾಜ್ಯ ಸರ್ಕಾರ ಮನವಿ ಮಾಡಿದೆ.

ಬೆಳಗಾವಿ ಮತ್ತು ಹೈದರಾಬಾದ್‌ನಲ್ಲಿರುವ ಸೈನ್ಯದ ತುಕಡಿಗಳು ಈಗಾಗಲೇ ಅಲ್ಲಿಂದ ಕಲ್ಬುರ್ಗಿ ನಗರ ತಲುಪಲು ಹೊರಟಿವೆ.

- **‘ದ್ವಿಪಕ್ಷೀಯ ಮಾತುಕತೆಗೆ ಭಾರತದ ಷರತ್ತು’– ಭುಟ್ಟೊ ಹೇಳಿಕೆ ಸತ್ಯಕ್ಕೆ ದೂರ**

ನವದೆಹಲಿ, ಮಾ. 1– ಭಾರತ– ಪಾಕಿಸ್ತಾನ ನಡುವಣ ದ್ವಿಪಕ್ಷೀಯ ಮಾತುಕತೆಗೆ ಭಾರತ ಷರತ್ತುಗಳನ್ನು ಒಡ್ಡಿದೆಯೆಂಬ ಅಧ್ಯಕ್ಷ ಭುಟ್ಟೊ ಅವರ ಹೇಳಿಕೆ ಸುಳ್ಳು ಎಂದು ಅಧಿಕೃತ ವಕ್ತಾರರು ಇಂದು ಇಲ್ಲಿ ತಿಳಿಸಿದರು.

ಭಾರತ ಮಾತುಕತೆಗೆ ಪೂರ್ವಭಾವಿ ಷರತ್ತುಗಳನ್ನು ಹೇರುತ್ತಿದೆ ಎಂದು ಪಾಕಿಸ್ತಾನದ ಅಧ್ಯಕ್ಷ ಭುಟ್ಟೊ ಆಪಾದಿಸಿದ್ದಾರೆಂಬ ವರದಿಗಳಿಗೆ ಪ್ರತಿಕ್ರಿಯೆ ವ್ಯಕ್ತಪಡಿಸಿದ ಅಧಿಕೃತ ವಕ್ತಾರರು, ಭಾರತ ಮಾತುಕತೆ ಹಾದಿಯಲ್ಲಿ ಯಾವುದೇ ಅಡಚಣೆಗಳನ್ನೂ ಒಡ್ಡಿಲ್ಲವೆಂದು ಹೇಳಿದರು.

ಪಕ್ಷಬದ್ಧ ರಾಜಕೀಯವು ಶಿಕ್ಷಣ ಕ್ಷೇತ್ರವನ್ನು ಪ್ರಭಾವಿಸುವುದರಿಂದ ಸಮಸ್ಯೆ ಸೃಷ್ಟಿಯಾಗುತ್ತದೆ

ಎಸ್‌ಡಿಎಂಸಿ ಮತ್ತು ಪರಿಣತಿಯ ಅಗತ್ಯ

ವಿಶ್ಲೇಷಣೆ

ಅರವಿಂದ ಚೊಕ್ಕಾಡಿ

ಶಾಲಾ ಕಾಲೇಜುಗಳನ್ನು ಸ್ಥಳೀಯವಾಗಿ ನಿರ್ವಹಿಸಲು ಶಾಲಾಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿಗಳು (ಎಸ್‌ಡಿಎಂಸಿ), ಕಾಲೇಜಿನಲ್ಲಾದರೆ ಕಾಲೇಜು ಅಭಿವೃದ್ಧಿ ಸಮಿತಿಯಂತಹ ಸಮಿತಿಗಳು ಇರುವುದು ಎಲ್ಲರಿಗೂ ಗೊತ್ತಿರುವ ವಿಷಯ. ಆಡಳಿತ ವಿಕೇಂದ್ರೀಕರಣದ ನೆಲೆಯಲ್ಲಿ ಈ ಸಮಿತಿಗಳಿಗೆ ಮಹತ್ವ ಜಾಸ್ತಿ ಇದೆ. ಶಾಲಾ ಸನ್ನಿವೇಶದ ಅಗತ್ಯಗಳಲ್ಲಿ ಸ್ಥಳೀಯ ವಿಷಯಗಳು ಜಾಸ್ತಿ ಇರುತ್ತವೆ. ಅವುಗಳಿಗೆ ತಕ್ಷಣ ಸ್ಪಂದನೆ ಸಿಗಲು ಈ ರೀತಿಯ ಸಮಿತಿಗಳಿಂದ ಸಹಾಯವಾಗುತ್ತದೆ. ಅಲ್ಲದೆ ಶಿಕ್ಷಕರ ನೇಮಕಾತಿ ರಾಜ್ಯವ್ಯಾಪ್ತಿಯದ್ದಾದಾಗ ಸ್ಥಳೀಯ ಪರಿಸರದ ಶಿಕ್ಷಕರ ಕೊರತೆ ಇರುತ್ತದೆ ಎಂಬ ನೆಲೆಯಲ್ಲಿ ಇಂತಹ ಸಮಿತಿಗಳಿಗೆ ಮಹತ್ವವಿದೆ.

ಆದರೆ ಸಮಿತಿಗಳಿಂದ ಶಿಕ್ಷಕರ ಕಾರ್ಯನಿರ್ವಹಣೆಗೆ ತೊಂದರೆಯಾಗುವ ಆರೋಪಗಳು ಬಹು ಹಿಂದಿನಿಂದಲೂ ಇವೆ. ಇತ್ತೀಚೆಗೆ ವಿದ್ಯಾರ್ಥಿಗಳಿಗೆ ತೊಂದರೆಯಾಗಿದೆ ಎಂಬ ವಾದವೂ ಬಂದಿದೆ. ಹೀಗಾಗಿ, ಸಮಿತಿಗಳ ಉತ್ತಮೀಕರಣದ ಚರ್ಚೆ ಅಗತ್ಯವಾಗಿದೆ.

ಸರ್ವಶಿಕ್ಷಣ ಅಭಿಯಾನ ಆರಂಭವಾಗುವುದಕ್ಕೆ ಮೊದಲು ‘ಶಿಕ್ಷಕ-ಪೋಷಕ ಸಂಘ’ಗಳ ಮಾದರಿಯ ಸಂಘಗಳು ಇದ್ದವು. ಅವು ಶಾಸನಾತ್ಮಕವಾಗಿ ಸಶಕ್ತವಾಗಿರಲಿಲ್ಲ ಮತ್ತು ಶಾಲೆಗಳಿಗೆ ಹಣಕಾಸು ಒದಗಣೆ, ಸೌಕರ್ಯಗಳೆಲ್ಲ ತೀರಾ ಅಲ್ಪವಿದ್ದಾಗ ಬಹಳ ಬಲಿಷ್ಠವಾದ ಸ್ಥಳೀಯ ಸಮಿತಿಗಳ ಅಗತ್ಯವೂ ಇರಲಿಲ್ಲ. ಆದರೆ ಬೃಹತ್ ಅನುದಾನವುಳ್ಳ ಸರ್ವಶಿಕ್ಷಣ ಅಭಿಯಾನವು ಶಾಲೆಗಳಿಗೆ ಅನುದಾನ ಹೆಚ್ಚಿಸಿದ್ದಲ್ಲದೆ, ಬಿಸಿಯೂಟ ಯೋಜನೆಯಂಥ ಕೊಡುಗೆಗಳನ್ನೂ ಹೆಚ್ಚಿಸಿ ಶಾಲೆಗಳಲ್ಲಿ ಕಾರ್ಯ ಒತ್ತಡಗಳನ್ನು ಜಾಸ್ತಿ ಮಾಡಿತು. ಆದರೆ ಹೆಚ್ಚಾದ ಕೆಲಸದ ನಿರ್ವಹಣೆಗಾಗಿ ಶಿಕ್ಷಕೇತರ ಕಾಯಂ ಸಿಬ್ಬಂದಿಯ ನೇಮಕ ಮಾಡಲಿಲ್ಲ. ಆಗ ಸ್ಥಳೀಯವಾಗಿ ಸಶಕ್ತ ಸಮಿತಿಗಳ ಅಗತ್ಯ ಉಂಟಾಯಿತು. ಶಾಲೆಯು ಸಮುದಾಯದ ಆಸ್ತಿ. ಆಗ ಶಾಲಾ ನಿರ್ವಹಣೆಗೆ ಸಮುದಾಯವನ್ನು ಪ್ರತಿನಿಧಿಸಬಲ್ಲವರು ಬೇಕಾಗುತ್ತಾರೆ. ಸಮುದಾಯದ ಪ್ರಾತಿನಿಧ್ಯ ಎಂದಾಗ ಸ್ವಾಭಾವಿಕವಾಗಿ ವಿದ್ಯಾರ್ಥಿಗಳ ಪಾಲಕರ ಪ್ರತಿನಿಧಿಗಳು ಮತ್ತು ಜನಪ್ರತಿನಿಧಿಗಳು ಒಂದಲ್ಲ ಒಂದು ರೀತಿಯಲ್ಲಿ ಈ ಸಮಿತಿಗಳಲ್ಲಿ ಸೇರುತ್ತಾರೆ.

ಜನಪ್ರತಿನಿಧಿಗಳಲ್ಲಿ ಎರಡು ವಿಧ. ಕೇಂದ್ರ ಮತ್ತು ರಾಜ್ಯ ಶಾಸನಸಭೆಯ ಚುನಾಯಿತ ಸದಸ್ಯರು ಶಾಸನವನ್ನು ರಚಿಸುವವರು ಮತ್ತು ಸರ್ಕಾರವನ್ನು ನಿಯಂತ್ರಿಸುವವರು. ಜಿಲ್ಲಾ ಪಂಚಾಯಿತಿ, ತಾಲ್ಲೂಕು ಪಂಚಾಯಿತಿ, ಗ್ರಾಮ ಪಂಚಾಯಿತಿಗಳ ಚುನಾಯಿತ ಸದಸ್ಯರು ಸರ್ಕಾರದಿಂದ ಕೊಡಮಾಡಿದ ಅಧಿಕಾರವನ್ನು ಚಲಾಯಿಸುವವರು. ಈ ಎರಡೂ ನೆಲೆಯ ಜನಪ್ರತಿನಿಧಿಗಳು ಶಾಲಾ ಸಮಿತಿಗಳಲ್ಲಿ ಇರುತ್ತಾರೆ ಅಥವಾ ಅವರ ಅನುಯಾಯಿಗಳು ಇರುತ್ತಾರೆ. ಸ್ವಾಭಾವಿಕವಾಗಿ ಶಾಸಕರು ಇದ್ದಾಗ ಶಾಸಕರಿಗೆ ಜಾಸ್ತಿ ಮಹತ್ವ ಇರುತ್ತದೆ. ನಿಜವಾಗಿ ಇಂತಹ ಸಮಿತಿಗಳಲ್ಲಿ ಶಾಸಕರು ನಿರ್ವಹಿಸುವುದು ಶಾಸನಾತ್ಮಕವಾದ ಕಾರ್ಯಗಳನ್ನಲ್ಲ. ಕಾರ್ಯಾಂಗೀಯ ಜವಾಬ್ದಾರಿಗಳನ್ನು.

ಶಾಸಕರ ಕಾರ್ಯ ಶಾಸನಾತ್ಮಕವೇ ಇದ್ದರೂ ಅವರಿಗೆ ಕಾರ್ಯಾಂಗೀಯ ಜವಾಬ್ದಾರಿಗಳನ್ನು ವಹಿಸಬಾರದೆಂದು ಸಂವಿಧಾನವು ಹೇಳುವುದಿಲ್ಲ. ಆದ್ದರಿಂದ ಶಾಸಕರನ್ನು ಕಾರ್ಯಾಂಗೀಯ ಜವಾಬ್ದಾರಿಗೆ ನಿಯೋಜಿಸುವ ಕಾರ್ಯವು ಸ್ವಾತಂತ್ರ್ಯ ಬಂದ ಲಾಗಾಯ್ತಿನಿಂದಲೂ ನಡೆಯುತ್ತಾ ಬಂದಿದೆ. ಬಹಳಷ್ಟು ಸಂದರ್ಭಗಳಲ್ಲಿ ಸರ್ಕಾರದಿಂದ ಶಾಲೆಗಳಿಗೆ ಬೇಕಾದ್ದನ್ನು ಮಂಜೂರು ಮಾಡಿಸುವುದರಲ್ಲಿ, ಸ್ಥಳೀಯವಾಗಿ ಸಮಸ್ಯೆಗಳು ಬಂದಾಗ ಬಗೆಹರಿಸುವುದರಲ್ಲಿ ಶಾಸಕರ ಪಾತ್ರ ಗಣನೀಯವಾಗಿ ಕೆಲಸ ಮಾಡಿದೆ.

ಆದರೆ ಸಮಿತಿಯಲ್ಲಿ ಜನಪ್ರತಿನಿಧಿಗಳಿದ್ದಾಗ ಶಾಲಾ ನಿರ್ವಹಣಾ ನಿರ್ಧಾರಗಳ ಮೇಲೆ ರಾಜಕೀಯ ದೃಷ್ಟಿಕೋನಗಳು ಪ್ರಭಾವವನ್ನು ಬೀರುತ್ತವೆ ಎನ್ನುವುದು ಆರೋಪಕ್ಕೆ ಪ್ರಮುಖ ಕಾರಣವಾಗಿದೆ. ಸರ್ಕಾರವನ್ನು ರಚಿಸುವವರು ಮತ್ತು ಸರ್ಕಾರ ಏನು ಮಾಡಬೇಕೆಂದು ಶಾಸನಾತ್ಮಕ ನಿರ್ದೇಶನವನ್ನು ನೀಡುವ ಶಾಸಕರು ಸರ್ಕಾರದಿಂದ ಸಿಕ್ಕಿದ ಅಧಿಕಾರವನ್ನು ಚಲಾಯಿಸಬಾರದು ಎಂಬುದು ಮಹತ್ವ ಪಡೆಯುವ ವಿಷಯವಲ್ಲ. ಆದರೆ ಶೈಕ್ಷಣಿಕ ನಿರ್ವಹಣೆಯಲ್ಲಿ ರಾಜಕೀಯ ದೃಷ್ಟಿಕೋನ ಪ್ರಭಾವಿಸುತ್ತದೆ ಎನ್ನುವುದು ಸಮಂಜಸವಾದ ತರ್ಕವಾಗಿದೆ. ತಾಂತ್ರಿಕವಾಗಿ ರಾಜಕಾರಣಿಗಳು ಸಮಿತಿಗಳಲ್ಲಿ ಇಲ್ಲದೆ ಇದ್ದಾಗಲೂ ಪರೋಕ್ಷವಾಗಿ ಸಮಿತಿಗಳಲ್ಲಿ ರಾಜಕೀಯ ದೃಷ್ಟಿಕೋನದ ಪ್ರಭಾವ ಇದ್ದೇ ಇರುತ್ತದೆ.

ಶೈಕ್ಷಣಿಕ ಆಡಳಿತದಲ್ಲಿ ರಾಜಕೀಯ ದೃಷ್ಟಿಕೋನದ ಪ್ರಭಾವದ ಕುರಿತಾಗಿ ಎರಡು ವಾದಗಳಿಗೂ ಪ್ರಾಮುಖ್ಯ ಇದೆ. ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ರಾಜಕೀಯ ತೀರಾ ಸಹಜ, ಎಲ್ಲ ಕಡೆಯೂ ರಾಜಕೀಯವಿಲ್ಲದೆ ಪ್ರಜಾಪ್ರಭುತ್ವ ಇಲ್ಲ ಎನ್ನುವುದು ಸರಿಯಾದ ವಾದವೇ ಆಗಿದೆ. ಶಿಕ್ಷಣದ ಮೇಲೆ ರಾಜಕೀಯ ಪ್ರಭಾವ ಇರಬಾರದು ಎನ್ನುವುದೂ ಸರಿಯಾದ ವಾದವೇ. ಇಲ್ಲಿ ಸಮಸ್ಯೆಯಾಗುತ್ತಿರುವುದು ರಾಜಕೀಯ ಅಲ್ಲ. ರಾಜಕೀಯದ ಅರಿವು ಶಿಕ್ಷಣದ ಮೂಲಕ ಬೆಳೆಯಬೇಕು. ಸಮಸ್ಯೆಯ ಸೃಷ್ಟಿಯು ಶಿಕ್ಷಣ ಕ್ಷೇತ್ರವನ್ನು ಪಕ್ಷಬದ್ಧ ರಾಜಕೀಯವು ಪ್ರಭಾವಿಸುವುದರಿಂದ ಆಗುತ್ತದೆ. ಆದ್ದರಿಂದ ಇಡೀ ದೇಶವೇ ರಾಜಕೀಯದ ಮೂಲಕ ನಡೆಯುವಾಗ ಶಾಲಾ ಸಮಿತಿಗಳಲ್ಲಿ ಜನಪ್ರತಿನಿಧಿಗಳು ಇರಬಾರದು ಎನ್ನುವುದು ಸಮಂಜಸವಲ್ಲ. ಬದಲು ಜನಪ್ರತಿನಿಧಿಗಳು ಪಕ್ಷಬದ್ಧವಲ್ಲದ ರೀತಿಯಲ್ಲಿ ಶಾಲಾ ಸಮಿತಿಗಳಲ್ಲಿ ತೊಡಗಿಕೊಳ್ಳಬೇಕು. ಇದು ಆಗಬೇಕಾದರೆ ಸಮಿತಿಗಳಲ್ಲಿ ಜಾತಿ, ಲಿಂಗ, ಧರ್ಮ, ಸ್ಥಳೀಯ ಸಂಸ್ಥೆಗಳನ್ನು ಆಧರಿಸಿದ ಪ್ರತಿನಿಧಿತ್ವ ಸಾಲುವುದಿಲ್ಲ. ತಜ್ಞ ಪ್ರತಿನಿಧಿತ್ವ ಬೇಕಾಗುತ್ತದೆ.

ಮೊದಲು ಶಿಕ್ಷಕರದ್ದು ಉದ್ಯೋಗವಲ್ಲ, ವೃತ್ತಿ ಎಂಬುದನ್ನು ಅರಿತುಕೊಳ್ಳಬೇಕು. ಅವರು ಶೈಕ್ಷಣಿಕ ಶಾಸ್ತ್ರದಲ್ಲಿ ತರಬೇತಿ ಪಡೆದ ಪರಿಣತರಾಗಿರುತ್ತಾರೆ. ಹಾಗಿರುವಾಗ ಶಿಕ್ಷಕರು ಸಮಿತಿ ಹೇಳಿದ ಕೆಲಸವನ್ನು ಮಾಡಲು ಮಾತ್ರ ಇರುವವರು ಎಂಬಂತೆ ಸಮಿತಿಯ ಸದಸ್ಯರು ಭಾವಿಸಬಾರದು. ಶಿಕ್ಷಕರು ಶೈಕ್ಷಣಿಕ ಸಂದರ್ಭಕ್ಕೆ ಸಲಹೆಯನ್ನು ನೀಡಲು ಇರುವ ಪರಿಣತರೂ ಹೌದು. ಸದ್ಯಕ್ಕೆ ಇಂತಹ ಸಮಿತಿಗಳಲ್ಲಿ ಮುಖ್ಯೋಪಾಧ್ಯಾಯರನ್ನು ಬಿಟ್ಟರೆ ಉಳಿದ ಶಿಕ್ಷಕರಿಗೆ ಗಮನಾರ್ಹ ಪಾತ್ರವಿಲ್ಲ. ಅಂದರೆ ಪಾಠ ಬೋಧನೆಯೇ ಜವಾಬ್ದಾರಿಯಾಗಿರುವವರ ಅನುಭವಕ್ಕೆ ಮಹತ್ವವಿಲ್ಲ. ಶಿಕ್ಷಕರ ಅನುಭವಕ್ಕೆ ಈ ಸಮಿತಿಯಲ್ಲಿ ಮಹತ್ವ ಸಿಗಬೇಕು.

ಸ್ಥಳೀಯ ನಿವೃತ್ತ ಶಿಕ್ಷಕರನ್ನು ತಜ್ಞರು ಎಂದು ಪರಿಗಣಿಸಿ ಎಸ್‌ಡಿಎಂಸಿಗೆ ಸೇರಿಸಲಾಗುತ್ತದೆ. ಆದರೆ ತಜ್ಞರು, ಅಂಗನವಾಡಿ ಕಾರ್ಯಕರ್ತೆಯರು, ಎನ್‌ಜಿಒ ಪ್ರತಿನಿಧಿಗಳು ಎಂದೆಲ್ಲ ಹೇಳಲಾಗಿದ್ದರೂ ಇವರದ್ದೆಲ್ಲ ಸಾಂಕೇತಿಕ ಅಸ್ತಿತ್ವವಾಗಿ ಇರುತ್ತದೆ. ನಿರ್ವಹಣೆಯಲ್ಲಿ ಇವರು ಸಶಕ್ತರಲ್ಲ. ಶೈಕ್ಷಣಿಕ ಅನುಭವ ಇರುವವರಿಗೆ, ಶೈಕ್ಷಣಿಕ ಮನಃಶಾಸ್ತ್ರವನ್ನು ಬಲ್ಲವರಿಗೆ, ಶಾಲೆಗಳಲ್ಲಿ ಮಕ್ಕಳ ತಜ್ಞರಿಗೆ, ಪ್ರೌಢಶಾಲೆ ಮತ್ತು ಕಾಲೇಜುಗಳಲ್ಲಿ ಹದಿಹರೆಯದ ತಜ್ಞರಿಗೆ ಸಮಿತಿಗಳಲ್ಲಿ ಸ್ಥಾನವನ್ನು ಕಲ್ಪಿಸಬೇಕು. ಇವರಿಂದ ಬರುವ ತಿಳಿವಳಿಕೆಗಳು ಸಮಿತಿಗಳ ಮೇಲೆ ಪ್ರಭಾವವನ್ನು ಉಂಟು ಮಾಡುತ್ತಾ ಹೋದ ಹಾಗೆ ರಾಜಕೀಯವೊಂದೇ ನಿರ್ಧಾರಕ ವಾಗುವುದು ಕಡಿಮೆಯಾಗುತ್ತದೆ.

ಎರಡನೆಯದಾಗಿ, ಶಾಲಾ ಸನ್ನಿವೇಶದಲ್ಲಿ ಶೈಕ್ಷಣಿಕ ಗಾಂಭೀರ್ಯ ಹೊರಟು ಹೋಗಿರುವುದೂ ಅನಗತ್ಯ ಕಿರುಕುಳ ಮತ್ತು ಆಡಳಿತಾತ್ಮಕ ಸಮಿತಿಗೆ ಅತಿಯಾದ ಮಹತ್ವಕ್ಕೆ ಕಾರಣವಾಗಿದೆ. ಶಾಲೆಗಳಲ್ಲಿನ ಕೆಲಸ ಕಾರ್ಯಗಳು ಜಾಸ್ತಿಯಾಗಿರುವುದರಿಂದ ಶೈಕ್ಷಣಿಕ ಮತ್ತು ಆಡಳಿತಾತ್ಮಕ ವಿಭಾಗಗಳನ್ನು ಪ್ರತ್ಯೇಕ ಮಾಡಿ, ಅಗತ್ಯವಿರುವ ಬೋಧಕೇತರ ಸಿಬ್ಬಂದಿಯನ್ನು ಕಾಯಂ ನೆಲೆಯಲ್ಲಿ ನೇಮಿಸಬೇಕು. ಕಾಯಂ ಸಿಬ್ಬಂದಿಯಾದಾಗ ಇಲಾಖೆಗೆ ಅವರ ಮೇಲೆ ನಿಯಂತ್ರಣ ಜಾಸ್ತಿ ಇರುತ್ತದೆ. ತಾತ್ಕಾಲಿಕ ಸಿಬ್ಬಂದಿಯಾದಾಗ ಅವರನ್ನು ನಿರ್ವಹಿಸಲು ಸ್ಥಳೀಯ ಸಮಿತಿಗಳ ಪಾಲುದಾರಿಕೆ ಜಾಸ್ತಿಯಾಗುತ್ತದೆ.

ವ್ಯಾವಹಾರಿಕವಾಗಿ ಇಲಾಖೆಗೆ ತಾತ್ಕಾಲಿಕ ಸಿಬ್ಬಂದಿಯ ಮೇಲೆ ನಿಯಂತ್ರಣ ಕಡಿಮೆಯಾಗಿ ಸ್ಥಳೀಯ ಸಮಿತಿಗಳಲ್ಲಿ ಸಶಕ್ತರಾಗಿರುವವರ ಬೆಂಬಲ, ವಿರೋಧಗಳಂತಹವು ಆ ನೌಕರರ ಕಾರ್ಯದ ಮೇಲೆ ಪ್ರಭಾವ ಉಂಟು ಮಾಡುತ್ತವೆ. ಅಲ್ಲದೆ ಶೈಕ್ಷಣಿಕ ಮತ್ತು ಆಡಳಿತ ವಿಭಾಗಗಳು ಬೇರೆಬೇರೆಯಾದಾಗ ಕಾರ್ಯ ಒತ್ತಡ ಕಡಿಮೆಯಾಗಿ ಕಲಿಕಾ ಪ್ರಕ್ರಿಯೆಗೆ ಮಹತ್ವ ಬರುತ್ತದೆ.

ಕಲಿಕೆ, ಕಲಿಕಾ ತಂತ್ರ, ಬೋಧನಾ ಸ್ವರೂಪಗಳಿಗೆಲ್ಲ ಪ್ರಾಮುಖ್ಯ ಬಂದ ಹಾಗೆ ಆಡಳಿತಾತ್ಮಕ ಕಿರುಕುಳಗಳು ಕಡಿಮೆಯಾಗುತ್ತವೆ. ಅದರಿಂದಾಗಿ ಆಡಳಿತಾತ್ಮಕ ಸಮಿತಿಗಳೂ ಶೈಕ್ಷಣಿಕ ನೆಲೆಗಳಲ್ಲಿ ಹೆಚ್ಚು ಯೋಚಿಸುತ್ತವೆ. ಸಮಿತಿಯ ಚಿಂತನಾ ಸಾಮರ್ಥ್ಯದ ಉನ್ನತೀಕರಣವು ಶಾಲಾ ಕಾಲೇಜುಗಳನ್ನು ಪಕ್ಷಬದ್ಧ ರಾಜಕೀಯದಿಂದ ಹೊರತರಬಲ್ಲದು.

ಚುರುಮುರಿ

ಬೇಕೊಂದು ಹಾಸ್ಯ ವಿ.ವಿ!

• ಚಂದ್ರಕಾಂತ ವಡ್ಡು

ತೆಪರೇಸಿ, ಗುಡ್ಡೆ, ಕೊಟ್ರೇಶಿ, ದುಬ್ಬೀರ, ಬೆಕ್ಕಣ್ಣ, ಶಂಕ್ರಿ, ಸುಮಿ, ಪರ್ಮೇಶಿ, ತುರೇಮಣೆ, ಶ್ರೀಮತಿ, ಯಂಕಪ್ಪಣ್ಣ... ಎಲ್ಲರೂ ಒಟ್ಟಿಗೇ ಫ್ರೀಡಂ ಪಾರ್ಕಿನಲ್ಲಿ ಕರೆದ ವಿಶೇಷ ಸಭೆಯಲ್ಲಿ ಭಾಗಿಯಾಗಿದ್ದರು. ಪರಸ್ಪರರ ಸ್ಟೇಟಸ್ಸುಗಳಿಗೆ ಲವ್ವು, ಥಮ್ಸಪ್ಪು, ಕಣ್ಣೀರು, ಕೋಪ, ಗಹಗಹಿಕೆ ಒತ್ತಿಕೊಳ್ಳುವ ಫೇಸ್ಬುಕ್ಕಿನ ಪುರಾತನ ಗೆಳೆಯರಂತಿದ್ದರೂ ಇವರೆಲ್ಲಾ ಮುಖತಃ ಭೇಟಿಯಾಗಿದ್ದು ಇದೇ ಮೊದಲು.

ಈ ಅಭೂತಪೂರ್ವ ಸಮಾಗಮಕ್ಕೆ ಕಾರಣನಾದ ತಿಂಗಳೇಶ ಮಾತು ಆರಂಭಿಸಿದ: ‘ಸಮಾನ ಮನಸ್ಕ ಸಂಗಾತಿಗಳೇ...’

‘ಇದೇನು ಟೌನ್‌ಹಾಲ್ ಭಾಷಣ ಅಲ್ಲ, ಗೆಳ್ಯಾರು ಅನ್ನಲೇ ಸಾಕು...’ ದುಬ್ಬೀರ ಕೂಗಿದ.

‘ಜಂಟಿ ಅಧಿವೇಶನದ ಬರೆದುಕೊಟ್ಟ ಭಾಷಣ ಬೇಡ, ವಿರೋಧಿಗಳು ಬಾವಿಗಿಳಿದಾಗ ಪಾಸಾಗುವ ಮಸೂದೆಯಂತೆ ತುರ್ತಾಗಿ ಮುಗಿಸಿ’ ತುರೇಮಣೆ ಸಲಹೆ.

‘ಮಸೂದೆಗಳ ಅಂಗೀಕಾರಕ್ಕೆ ವಿರೋಧಪಕ್ಷಗಳಿಂದ ಸಿಗುವ ಸಭಾತ್ಯಾಗ ಸಹಕಾರವೂ ನಮ್ಮ ಸದಸ್ಯರಿಂದ ದೊರಕದಿದ್ದರೆ ಹೇಗೆ...?’ ತಿಂಗಳೇಶ ಅಸಮಾಧಾನ ಹೊರಹಾಕಿದ.

‘ಹೌದು, ಸಮಯವಿಲ್ಲ. ಈ ವಾರವೇ ಬಜೆಟ್ ಮಂಡನೆಯಾಗಲಿದೆ. ಮುಖ್ಯಮಂತ್ರಿಗಳು ಬಜೆಟ್ ಸಿದ್ಧತೆಯಲ್ಲಿ ತೊಡಗಿದ್ದಾರೆ. ನಾವು ಈಗಲೇ ಅವರನ್ನು ಕಂಡು ಬೇಡಿಕೆ ಸಲ್ಲಿಸಬೇಕು’ ಯಂಕಪ್ಪಣ್ಣನ ವಿವೇಕಯುತ ಮಾತು.

‘ಹಾಸ್ಯ ವಿಶ್ವವಿದ್ಯಾಲಯ ಈ ಸಾಲಿನಲ್ಲಿಯೇ ಸ್ಥಾಪನೆಯಾಗಬೇಕು’ ಒಂದೇ ಸಾಲಿನ ಠರಾವು ಮಂಡಿಸಿದ ಬೆಕ್ಕಣ್ಣ.

‘ಈ ಬಜೆಟ್ಟಿನಲ್ಲಿಯೇ ಹಣ ತೆಗೆದಿರಿಸಬೇಕು’, ‘ಹಾಸ್ಯ ವಿಶ್ವವಿದ್ಯಾಲಯ ನೇಮಕಾತಿಯಲ್ಲಿ ನಮ್ಮ ಸಂಘದ ಸದಸ್ಯರಿಗೆ ಮೀಸಲಾತಿ ಕಲ್ಪಿಸಬೇಕು’, ‘ಕುಲಪತಿ ಹುದ್ದೆಗೆ ನಮ್ಮ ಸೃಷ್ಟಿಕರ್ತ ಯಜಮಾನರಲ್ಲಿ ಒಬ್ಬರನ್ನು ಪರಿಗಣಿಸಬೇಕು’, ‘ಹಾಸ್ಯ ಭಾಷಣ, ಹಾಸ್ಯ ಸಾಹಿತ್ಯ, ಹಾಸ್ಯ ಬದುಕು, ಹಾಸ್ಯ ರಾಜಕಾರಣಕ್ಕೆ ಪ್ರತ್ಯೇಕ ವಿಭಾಗಗಳಿರಲಿ’, ‘ವಿ.ವಿಗೆ ಗಂಗಾವತಿಯೇ ಸೂಕ್ತ’... ಇನ್ನಷ್ಟು ಸೇರಿಸಿದರು ಸಭಾಸದಸ್ಯರು.

ಬೇಡಿಕೆಗಳ ಪಟ್ಟಿಯನ್ನು ಮುಖ್ಯಮಂತ್ರಿ ಎದುರು ಬಿಚ್ಚಿಟ್ಟ ನಂತರ ಹಾಸ್ಯಪಾತ್ರಗಳೆಲ್ಲಾ ತಮಗಿಷ್ಟದ ಚುರುಮುರಿ, ಮಂಡಾಳೊಗ್ಗರಣೆ, ನರ್ಗೀಸ್, ಸೂಸಲ, ತೋಯಿಸಿದ ಮಂಡಕ್ಕಿ ತಿನ್ನುತ್ತ ಜಾಗ ಖಾಲಿ ಮಾಡಿದವು!

ಸಂಗತ

ಹಂಚುವುದಾದರೆ ಹಂಚೋಣ ಒಲವ

ದ್ವೇಷ, ಹಿಂಸೆ, ಕ್ರೌರ್ಯಗಳ ವಿಜೃಂಭಣೆಯಲ್ಲಿ ತಲ್ಲಣಿಸುತ್ತಿರುವ ಜಗತ್ತು, ಕೊರೊನಾ ವೈರಾಣು ಮೊನ್ನೆತಾನೆ ಕಲಿಸಿದ್ದ ಮಾನವೀಯತೆಯ ಪಾಠವನ್ನೂ ಮರೆತಂತಿದೆ

• ಸತೀಶ್ ಜಿ.ಕೆ. ತೀರ್ಥಹಳ್ಳಿ

‘ಮೊದಲ ಜಾಗತಿಕ ಮಹಾಯುದ್ಧದಲ್ಲಿ ಮದ್ದುಗುಂಡುಗಳನ್ನೂ ಎರಡನೇ ಮಹಾಯುದ್ಧದಲ್ಲಿ ಅಣುಬಾಂಬನ್ನೂ ಪ್ರಯೋಗಿಸಿರುವ ನಾವು, ಮೂರನೆಯ ಮಹಾಯುದ್ಧವಾದಲ್ಲಿ ಯಾವ ಶಸ್ತ್ರಾಸ್ತ್ರಗಳನ್ನು ಪ್ರಯೋಗಿಸಬಹುದು?!’ ಶತಮಾನದ ವಿಜ್ಞಾನಿ ಐನ್‌ಸ್ಟೀನ್ ಅವರನ್ನು ಒಮ್ಮೆ ಸಭೆಯೊಂದರಲ್ಲಿ ತಬ್ಬಿಬ್ಬುಗೊಳಿಸಿದ ಪ್ರಶ್ನೆಯಿದು.

‘ಮೂರನೇ ಮಹಾಯುದ್ಧದ ಕುರಿತು ಸದ್ಯ ಏನನ್ನೂ ಹೇಳಲಾರೆ. ಆದರೆ ನಾಲ್ಕನೆಯ ಯುದ್ಧದಲ್ಲಿ ಮಾತ್ರ ಮನುಷ್ಯ ಬಿಲ್ಲುಬಾಣಗಳನ್ನು ಬಳಸುವುದು ಖಾತರಿ’! ಎಂದ ಐನ್‌ಸ್ಟೀನ್‌ರ ಆ ಮಾರ್ಮಿಕ ನುಡಿಗಳು ಯುದ್ಧಗಳು ತಂದೊಡ್ಡಬಹುದಾದ ಭೀಕರತೆಯನ್ನೂ ವಿನಾಶದ ಪ್ರಮಾಣವನ್ನೂ ಧ್ವನಿಸಿದಂತಿದ್ದವು.

ಯುದ್ಧವೆಂದರೆ ಹಾಗೆಯೇ, ಅಲ್ಲಿ ‘ಗೆದ್ದವನು ಸೋತ, ಸೋತವನು ಸತ್ತ’ ಅನ್ನುವ ಮಾತು ಅಕ್ಷರಶಃ ಸತ್ಯ. ಕೇವಲ ವೈಯಕ್ತಿಕ ಪ್ರತಿಷ್ಠೆ, ತಿಕ್ಕಲುತನ, ಅಹಂಕಾರದ ಕಾರಣಕ್ಕೆ ಜಗತ್ತು ಈಗಾಗಲೇ ಎರಡು ಮಹಾಯುದ್ಧಗಳನ್ನು ಕಂಡಾಗಿದೆ. ಹಿಂಸಾವಿನೋದಿ, ಜೀವವಿರೋಧಿ ಯುದ್ಧದಾಹಿ ಮನಸುಗಳು ಮತ್ತೊಂದು ಮಹಾಯುದ್ಧಕ್ಕಾಗಿ ಬಹುಕಾಲದಿಂದ ಕಾತರಿಸುತ್ತಲೇ ಕನವರಿಸುತ್ತಲೇ ಇವೆ. ರಾಗದ್ವೇಷಗಳಲ್ಲಿ ಮಿಂದೇಳುತ್ತಿರುವ ಮನುಷ್ಯಜೀವಿ ಎಂದಿಗೂ ಚರಿತ್ರೆಯಿಂದ ಪಾಠ ಕಲಿಯುವುದಿಲ್ಲ.

ಇಂಕಾ ನಾಗರಿಕತೆ ಮಂಕಾಗಿದ್ದು, ರೋಮ್ ಸಾಮ್ರಾಜ್ಯ ಕುಸಿದಿದ್ದು, ಮಾಯಾ ನಾಗರಿಕತೆ ಮಾಯವಾಗಿಹೋಗಿದ್ದರ ಕಾರಣವನ್ನು ಅರಿಯುವ ವಿವೇಕವಾಗಲೀ ವ್ಯವಧಾನವಾಗಲೀ ಅವನಿಗಿಲ್ಲ. ಕೊರೊನಾ ಕರಾಳತೆಯ ಕಾರ್ಮೋಡ ಅಷ್ಟಿಷ್ಟು ಸರಿಯಿತೆಂದು ಜಗತ್ತು ಈಗಷ್ಟೇ ನಿಟ್ಟುಸಿರು ಬಿಡುವ ಹೊತ್ತಿನಲ್ಲಿ ಅದಕ್ಕಿಂತಲೂ ಭೀಕರ ಸನ್ನಿವೇಶವನ್ನು ಆಹ್ವಾನಿಸಿದಂತೆ ಪರಸ್ಪರ ಯುದ್ಧಕಾಯಲು ಅಲ್ಲಿ ರಷ್ಯಾ- ಉಕ್ರೇನ್ ಮುಖಾಮುಖಿಯಾಗಿವೆ. ಅದೆಷ್ಟೋ ಹೆತ್ತವರನ್ನು ಪುತ್ರಶೋಕಕ್ಕೂ, ಹಸುಳೆಗಳನ್ನು ಅನಾಥ ಸ್ಥಿತಿಗೂ ನೂಕುತ್ತಿರುವ, ಪರಿಸರವನ್ನು ಗಾಸಿಗೊಳಿಸುತ್ತಿರುವ ಈ ಸಂದರ್ಭ ಏನನ್ನು ಸಾಧಿಸಲು ಹೊರಟಿದೆ ಎಂದು ಆಳುವವರು ಅವಲೋಕಿಸಬೇಕಿದೆ.

‘ಯುದ್ಧಗಳು ಕೊಲೆಯನ್ನು ಕಲೆಯಾಗಿಸುವ ಅಖಾಡ’ ಎಂದಿದ್ದರು ಕುವೆಂಪು. ಯುದ್ಧಭೂಮಿಗಳೆಂಬ ವಿಸ್ತಾರವಾದ ಸ್ಮಶಾನಗಳಲ್ಲಿ ಬಿತ್ತಿ ಬೆಳೆಯಬಹುದಾದ ಬೆಳೆಯಾದರೂ ಯಾವುದಿದೆ? ಜಗತ್ತಿನೆಲ್ಲೆಡೆ ನಡೆಯುವ ಬಹುತೇಕ ಯುದ್ಧ, ಹಿಂಸೆ, ಕ್ರೌರ್ಯಗಳು ಪೂರ್ವ ಪ್ರಾಯೋಜಿತವಾಗಿದ್ದು ಕೆಲವೇ ಮಂದಿಯ ಅಹಂಕಾರಕ್ಕೋ ಅಧಿಕಾರದಾಹಕ್ಕೋ ಅಮಾಯಕರ ಬಲಿ ಕೇಳುತ್ತವೆ ಮಾತ್ರವಲ್ಲ ಶಸ್ತ್ರಾಸ್ತ್ರ ಮಾರುವ ಮಾರುಕಟ್ಟೆಗಳಾಗಿ, ಹರಿಯುವ ನೆತ್ತರಲ್ಲಿ ಚುನಾವಣಾ ನೆಲವನ್ನು ಹದಗೊಳಿಸಿ ‘ಮತ’ ಫಸಲಿಗೆ ನಡೆಸುವ ತಯಾರಿಯಾಗಿರುತ್ತವೆ.

ಎರಡನೇ ಮಹಾಯುದ್ಧದ ಹೊಸ್ತಿಲಲ್ಲಿ ಯುದ್ಧೋನ್ಮಾದದಲ್ಲಿದ್ದ ಹಿಟ್ಲರ್‌ಗೆ ಮಹಾತ್ಮ ಗಾಂಧಿ ಕೋರಿಕೊಂಡಿದ್ದು ಹೀಗೆ... ‘ಮಾನವೀಯತೆಯ ಉಳಿವಿಗಾಗಿ ಈ ಪತ್ರ ಬರೆಯಬೇಕಾದ್ದು ಅವಶ್ಯಕವೆಂದು ಭಾವಿಸುವೆ, ಎಂತಹ ಅನಿವಾರ್ಯದಲ್ಲೂ ಹಿಂಸೆಯನ್ನು ಪ್ರಜ್ಞಾಪೂರ್ವಕವಾಗಿ ನಿರಾಕರಿಸಿ ಬಹಳಷ್ಟು ಯಶಸ್ಸುಗಳಿಸಿದ ಮನುಷ್ಯನ ವಿನಂತಿಯನ್ನು ನೀವು ಆಲಿಸದಿರಲಾರಿರೇ? ಈ ಹೊತ್ತಿನ ಸಂಭಾವ್ಯ ಯುದ್ಧವನ್ನು ತಡೆಯಬಲ್ಲ ವ್ಯಕ್ತಿಯೊಬ್ಬ ಜಗತ್ತಿನಲ್ಲಿದ್ದರೆ ಅದು ನೀವೆ! ಯುದ್ಧವು ಮನುಷ್ಯನನ್ನು ಮೃಗಗಳ ಸಾಲಿನಲ್ಲಿ ನಿಲ್ಲಿಸಬಲ್ಲದು. ಎಷ್ಟೇ ದೊಡ್ಡ ಕಾರಣವಿದ್ದರೂ ಯುದ್ಧಕ್ಕಾಗಿ ನೀವು ದೊಡ್ಡ ಬೆಲೆಯನ್ನು ತೆರಲೇಬೇಕಾಗುತ್ತದೆ...’

ಜಗತ್ತು ಮತ್ತೆಮತ್ತೆ ಸೂಕ್ಷ್ಮತೆ ಮತ್ತು ಸಂವೇದನೆಗಳನ್ನು ಕಳೆದುಕೊಳ್ಳುತ್ತಲೇ ಸಾಗುತ್ತಿದೆ. ದ್ವೇಷ, ಹಿಂಸೆ- ಕ್ರೌರ್ಯಗಳ ವಿಜೃಂಭಣೆಯಲ್ಲಿ ತಲ್ಲಣಿಸುತ್ತಿರುವ ಅದು ಕೊರೊನಾ ವೈರಾಣುವೊಂದು ಮೊನ್ನೆತಾನೆ ಕಲಿಸಿಹೋಗಿದ್ದ ಮಾನವೀಯತೆಯ ಪಾಠವನ್ನೂ ಮರೆತಂತಿದೆ. ಮನುಷ್ಯ ತನ್ನ ಆರೋಗ್ಯ- ಆಯುಷ್ಯದ ಅನಿಶ್ಚಿತತೆಯನ್ನೂ ಧುತ್ತನೆ ಬಂದೆರಗುವ ಪ್ರಾಕೃತಿಕ ಅವಘಡಗಳನ್ನೂ ಪ್ರೀತಿ, ಕರುಣೆ, ಸಹಕಾರ ತತ್ವದಲ್ಲಿ ಮೀರಲು ಪ್ರಯತ್ನಿಸಬೇಕಿತ್ತು. ಎಲ್ಲಾ ತಾಯಂದಿರೂ ತಮ್ಮ ಮಕ್ಕಳಿಗೆ ಹಾಲೂಡಿಸಿ ಬೆಳೆಸುತ್ತಾರೆಯೇ ವಿನಾ ವಿಷವುಣಿಸಿ ಬೆಳೆಸುವುದಿಲ್ಲ. ಹಾಗಿದ್ದರೆ ಇಷ್ಟು ದೊಡ್ಡ ಪ್ರಮಾಣದಲ್ಲಿ ಜನರೇಕೆ ಪರಸ್ಪರ ವಿಷ ಕಾರಿಕೊಳ್ಳುತ್ತಾರೆ? ಹಗೆ-ದ್ವೇಷವನ್ನು ಉಸಿರಾಡುತ್ತಾರೆ? ಕ್ರೌರ್ಯವನ್ನು ಶೌರ್ಯವೆಂಬಂತೆ ಆರಾಧಿಸುತ್ತಾರೆ? ಮತ್ತೊಬ್ಬ ಮನುಷ್ಯನ ದಯನೀಯ ಸ್ಥಿತಿಯನ್ನೂ ಸಾವು-ನೋವುಗಳನ್ನೂ ಹೀಗೆಲ್ಲಾ ಸಂಭ್ರಮಿಸುತ್ತಾರೆ?! ಇದಕ್ಕೆ ಉತ್ತರ ಸರಳ. ಕೇವಲ ಮನುಷ್ಯನಾಗಿ ಉಳಿಯುವುದು, ಅಷ್ಟೆ.

ಹಿರಿಯರು ಹೇಳಿದ್ದು ನಿಜ, ಜಾಗತಿಕವಾಗಿ ಜನಜಾಗೃತಿ ಮೂಡಬೇಕು. ಎಲ್ಲಾ ತರಹದ ಯುದ್ಧ-ಹಿಂಸೆಗಳನ್ನು ಒಕ್ಕೊರಲಿನಿಂದ ಪ್ರತಿಭಟಿಸಬೇಕು. ಮನುಷ್ಯನೀಗ ವಿಕೃತಿ, ಸಂಕುಚಿತತೆಗಳನ್ನು ಮರೆತು ಸೌಹಾರ್ದವನ್ನು ಅಪ್ಪಿಕೊಳ್ಳಬೇಕು. ಎಲ್ಲೋ ಕುಡಿಯೊಡೆದ ಹಸಿರು ನಮ್ಮನಿಲ್ಲಿ ಪೊರೆಯುತ್ತದೆ, ಎಲ್ಲೋ ಹುಟ್ಟಿದ ನದಿ ನಮ್ಮನಿಲ್ಲಿ ಪೊರೆಯುತ್ತದೆ. ಎಲ್ಲೋ ಮೂಡಿದ ಬೆಳಕು ನಮ್ಮನೆಲ್ಲ ಬೆಳಗುತ್ತದೆ. ಎಲ್ಲಿಯದೋ ನೋವು, ನಂಜು, ಯುದ್ಧ, ರೋಗಗಳು ಇಷ್ಟು ದೂರಕ್ಕೂ ಹಬ್ಬುತ್ತವೆ.

ಜಗದೊಳಗೆ ಅಲ್ಲಿ-ಇಲ್ಲಿ ಎಂಬುದಕ್ಕಿಲ್ಲ ಅರ್ಥ, ನಾನು-ನೀನು ಎಂಬುವುದೆಲ್ಲ ವ್ಯರ್ಥ. ಹಂಚುವುದಾದರೆ ಒಲವ ಹಂಚೋಣ, ಅಂಚಿಲ್ಲದ, ಸಂಚಿಲ್ಲದ ಭುವಿಯೊಂದನ್ನು ಕಟ್ಟಿ ನಿಲ್ಲಿಸೋಣ, ಎಳೆಯ ಕುಡಿಗಳಿಗಾಗಿ ತಣ್ಣನೆಯ ನಾಳೆಗಳ ಉಳಿಸಿ ಹೋಗೋಣ...

ವಾಚಕರ ವಾಣಿ

‘ನಾಗರಹಾವು’ ನೆನಪಿಸಿದ ವಸ್ತ್ರಸಂಹಿತೆ

ಕರ್ನಾಟಕ ಪರೀಕ್ಷಾ ಪ್ರಾಧಿಕಾರವು ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳ ಸಹಾಯಕ ಪ್ರಾಧ್ಯಾಪಕರ ಹುದ್ದೆಗಳ ಪರೀಕ್ಷೆಗೆ ವಿಪರೀತದ ವಸ್ತ್ರಸಂಹಿತೆ ನಿಗದಿಪಡಿಸಿರುವುದು ನಿಜಕ್ಕೂ ಹಾಸ್ಯಾಸ್ಪದ. ಪರೀಕ್ಷೆ ನಡೆಸುವವರಿಗೆ ತಮ್ಮ ಮೇಲಾಗಲಿ ಅಥವಾ ಪರೀಕ್ಷೆಗೆ ಹಾಜರಾಗುವ ಅಭ್ಯರ್ಥಿಗಳ ಮೇಲಾಗಲಿ ಯಾವುದೇ ನಂಬಿಕೆ ಇದ್ದಂತಿಲ್ಲ. ಇದನ್ನೆಲ್ಲ ನೋಡಿದರೆ ಎಪ್ಪತ್ತರ ದಶಕದ ‘ನಾಗರಹಾವು’ ಚಲನಚಿತ್ರ ನೆನಪಿಗೆ ಬರುತ್ತದೆ. ಅದರಲ್ಲಿ ಪ್ರಾಂಶುಪಾಲರು ಪರೀಕ್ಷೆ ಬರೆಯುತ್ತಿದ್ದ ರಾಮಾಚಾರಿಯನ್ನು ಕರೆದು, ಅವನ ಪೈಜಾಮ ಬಿಚ್ಚಿಸುತ್ತಾರೆ. ಆಗ ಅವನ ಮೈತುಂಬಾ ಚೀಟಿಗಳನ್ನು ಅಂಟಿಸಿರುವುದು ಗೊತ್ತಾಗುತ್ತದೆ. ಅದನ್ನು ನೋಡಿ ಅವನನ್ನು ಹೊರಗೆ ಕಳುಹಿಸುತ್ತಾರೆ. ಈ ಚಲನಚಿತ್ರವನ್ನು ಕರ್ನಾಟಕ ಪರೀಕ್ಷಾ ಪ್ರಾಧಿಕಾರದವರು ನೋಡಿದರೆ ಅಭ್ಯರ್ಥಿಗಳಿಗೆ ಯಾವ ರೀತಿಯ ಬಟ್ಟೆ ಹಾಕಿಕೊಂಡು ಬರಲು ಸೂಚಿಸಬಹುದು?!

ಟಿ.ವಿ.ಬಿ.ರಾಜನ್, ಬೆಂಗಳೂರು

ಮಹಿಳೆಯರಿಗೆ ಸಿಗಲಿ ಪ್ರಾಶಸ್ತ್ಯ

ಭಾರತೀಯ ಷೇರುಪೇಟೆ ನಿಯಂತ್ರಣ ಮಂಡಳಿಗೆ (ಸೆಬಿ) ಮೊದಲ ಅಧ್ಯಕ್ಷೆಯಾಗಿ ಮಾಧವಿ ಪುರಿ ಬುಚ್ ಅವರು ನೇಮಕಗೊಂಡಿರುವುದು ಸಮಾಜಕ್ಕೆ ಆದರ್ಶವಾಗಬೇಕು. ಹೆಣ್ಣಿನ ಬಗೆಗಿರುವ ಕೀಳರಿಮೆ ಇನ್ನೂ ನಮ್ಮ ಸಮಾಜದಿಂದ ಪೂರ್ತಿ ತೊಲಗಿಲ್ಲ. ಹೆಣ್ಣು ಮನಸ್ಸು ಮಾಡಿದರೆ ಪುರುಷನಿಗೆ ಸಮಾನವಾಗಿ ಉನ್ನತ ಸ್ಥಾನಕ್ಕೆ ಏರಬಹುದು ಎಂಬುದಕ್ಕೆ ಇದೊಂದು ಉದಾಹರಣೆ.

ಹೀಗೆ ಪ್ರತೀ ರಂಗದಲ್ಲೂ ಮಹಿಳೆಯರಿಗೆ ಪ್ರಾಶಸ್ತ್ಯ ನೀಡಬೇಕು. ಈ ಮೂಲಕ ಅಸಮಾನತೆ ಪಿಡುಗನ್ನು ತೊಡೆಯಬೇಕು. ಯುವತಿಯರು ಇದರಿಂದ ಪ್ರೇರಣೆ ಪಡೆದು ಎಲ್ಲಾ ರಂಗಗಳಲ್ಲಿ ಸಾಮರ್ಥ್ಯ ಪ್ರದರ್ಶಿಸಿ, ತಾವು ಯಾವುದರಲ್ಲೂ ಕಡಿಮೆ ಇಲ್ಲ ಎಂದು ಸಾಬೀತುಪಡಿಸಬೇಕು.

ಅಂಬಿಕಾ ಜಿ.ಕೆ., ತರೀಕೆರೆ

ಪ್ರಾಧ್ಯಾಪಕರ ಆಯ್ಕೆ ಪಾರದರ್ಶಕವಾಗಿರಲಿ

ಸಹಾಯಕ ಪ್ರಾಧ್ಯಾಪಕರ ಹುದ್ದೆಗಳಿಗೆ ನಡೆಯಲಿರುವ ಸ್ಪರ್ಧಾತ್ಮಕ ಪರೀಕ್ಷೆಯನ್ನು ಪಾರದರ್ಶಕವಾಗಿ ನಡೆಸಲು ಕರ್ನಾಟಕ ಪರೀಕ್ಷಾ ಪ್ರಾಧಿಕಾರ ಮುಂದಾಗಿದೆ. ವಿವಿಧ ಇಲಾಖೆಗಳ ಹುದ್ದೆಗಳಿಗೆ ಅಭ್ಯರ್ಥಿಗಳನ್ನು ಆಯ್ಕೆ ಮಾಡಿರುವ ಮಾನದಂಡದ ಬಗ್ಗೆ ಈಗ ನ್ಯಾಯಾಲಯದಲ್ಲಿರುವ ಪ್ರಕರಣಗಳು ಪರೀಕ್ಷಾ ಪಾರದರ್ಶಕತೆ ಕುರಿತು ಅನೇಕ ಸಂಶಯಗಳಿಗೆ ಎಡೆಮಾಡಿವೆ.

ಲಕ್ಷಾಂತರ ರೂಪಾಯಿ ಸುರಿದು ವಾಮಮಾರ್ಗದ ಮೂಲಕ ಆಯ್ಕೆಯಾಗಲು ಹುನ್ನಾರ ಮಾಡುತ್ತಿರುವ ನಯವಂಚಕರ ಬಗ್ಗೆ ಪ್ರಾಧಿಕಾರ ಹೆಚ್ಚು ನಿಗಾ ವಹಿಸಿ, ನಿಷ್ಠಾವಂತರಿಗೆ ನ್ಯಾಯ ಒದಗಿಸಬೇಕಾಗಿದೆ. ಯಾವುದೇ ಆಮಿಷ, ಒತ್ತಡಕ್ಕೆ ಮಣಿಯದೆ ಪರೀಕ್ಷೆ ಹಾಗೂ ಮೌಲ್ಯಮಾಪನದಲ್ಲಿ ಅಕ್ರಮಕ್ಕೆ ಆಸ್ಪದವಾಗದಂತೆ ಎಚ್ಚರಿಕೆ ವಹಿಸಬೇಕಾಗಿದೆ.

ತೂಬಿನಕೆರೆ ಲಿಂಗರಾಜು, ಮಂಡ್ಯ

ಇಲ್ಲದ ಬದ್ಧತೆ, ಕಡೆಗಣನೆಯ ಬಿಸಿ

ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಟಿ.ಎಸ್.ನಾಗಾಭರಣ ಅವರು ರಾಜ್ಯ ಸರ್ಕಾರದ ಒಂದೊಂದು ಇಲಾಖೆಗೆ ಸದಸ್ಯರೊಂದಿಗೆ ಭೇಟಿ ಕೊಟ್ಟು, ಅಲ್ಲಿ ಕನ್ನಡದ ಬಳಕೆ ಎಷ್ಟರಮಟ್ಟಿಗೆ ಆಗುತ್ತಿದೆ ಎಂದು ಪರಿಶೀಲನೆ ನಡೆಸಿ ಪತ್ರಿಕೆಗಳಿಗೆ ಹೇಳಿಕೆ ಕೊಡುತ್ತಿದ್ದಾರೆ. ಈವರೆಗೆ ಭೇಟಿ ನೀಡಿರುವ ಎಲ್ಲ ಇಲಾಖೆಗಳಲ್ಲಿ ಕನ್ನಡವನ್ನು ಕಡೆಗಣಿಸಲಾಗಿದೆ, ಬಹುಮಟ್ಟಿನ ವ್ಯವಹಾರ ಇಂಗ್ಲಿಷಿನಲ್ಲೇ ನಡೆಯುತ್ತಿದೆ, ಮೊಹರುಗಳೂ ಇಂಗ್ಲಿಷ್‌ನಲ್ಲಿವೆ, ವೆಬ್ ಪೋರ್ಟಲ್, ಕಡತಗಳಲ್ಲೂ ಇಂಗ್ಲಿಷ್ ರಾರಾಜಿಸುತ್ತಿದೆ ಎಂದು ಅಸಮಾಧಾನ ವ್ಯಕ್ತಪಡಿಸಿದ್ದಾರೆ.

ಕನ್ನಡ ಆಡಳಿತ ಭಾಷೆಯಾಗಿ ಹಲವು ದಶಕಗಳು ಕಳೆದಿದ್ದರೂ ಜನಸಾಮಾನ್ಯರಿಗೆ ಅರ್ಥವಾಗುವ ಕನ್ನಡದಲ್ಲಿ ವ್ಯವಹಾರ ನಡೆಯುತ್ತಿಲ್ಲ ಎಂದರೆ ರಾಜ್ಯ ಸರ್ಕಾರಕ್ಕೆ ಕನ್ನಡದ ಬಗೆಗೆ ಕಾಳಜಿಯಾಗಲೀ ಬದ್ಧತೆಯಾಗಲೀ ಇಲ್ಲವೆಂದೇ ಅರ್ಥವಲ್ಲವೇ? ಹಿಜಾಬ್– ಕೇಸರಿ ಶಾಲಿನ ಬಗ್ಗೆ ಅತ್ಯುತ್ಸಾಹದಿಂದಲೂ ಆವೇಶದಿಂದಲೂ ಮಾತನಾಡುವ ಮಂತ್ರಿಮಹೋದಯರು, ಪ್ರತಿಪಕ್ಷಗಳ ಮುಖಂಡರು ಕನ್ನಡದ ಕಡೆಗಣನೆಯ ಬಗೆಗೆ ಯಾಕೆ ಧ್ವನಿ ಎತ್ತುತ್ತಿಲ್ಲ?

ಬೈರಮಂಗಲ ರಾಮೇಗೌಡ, ಬೆಂಗಳೂರು

ಅಮಾಯಕರ ಮೇಲೆ ದಾಳಿ: ಸಾಧಿಸುವುದೇನು?

ಶಿವಮೊಗ್ಗದಲ್ಲಿ ಇತ್ತೀಚೆಗೆ ಕೋಮು ಗಲಭೆ ಆಯಿತು. ಮೃತನ ಅಂತ್ಯಕ್ರಿಯೆ ಸಂದರ್ಭದಲ್ಲಿ ಹಲವಾರು ಬಡ ಕುಟುಂಬಗಳ ಗುಡಿಸಲುಗಳ ಮೇಲೆ ಉದ್ರಿಕ್ತರು ದಾಳಿ ಮಾಡಿ, ನೀರು ಸಂಗ್ರಹಿಸುವ ಬ್ಯಾರೆಲ್ ಅನ್ನು, ಬಾಗಿಲನ್ನು ಒಡೆದುಹಾಕಿದರು. ಅವರ ದಿನಬಳಕೆಯ ವಸ್ತುಗಳನ್ನು ನಾಶಪಡಿಸಲಾಯಿತು. ಅವರೆಲ್ಲ ಮಾಧ್ಯಮದವರ ಮುಂದೆ ಹೇಳಿದ್ದು ‘ನಾವು ಬಡವರು, ಕೂಲಿ ಮಾಡಿ ಬದುಕುವವರು, ಒಂದು ಬ್ಯಾರೆಲ್ ಖರೀದಿಗೆ ಕನಿಷ್ಠ ಒಂದು ವರ್ಷವಾದರೂ ದುಡಿಯಬೇಕು. ನಮಗೆ ಈ ದೇವರು-ಧರ್ಮ-ಜಾತಿ ಯಾವ ಗೊಂದಲವೂ ಬೇಕಿಲ್ಲ. ನಮಗೆ ಹೊಟ್ಟೆ ತುಂಬಿಸಿಕೊಳ್ಳುವುದೇ ಕಷ್ಟವಾಗಿದೆ’. ಇಂಥ ಅಮಾಯಕರ ಮೇಲೆ ದಾಳಿ ಮಾಡಿ ಸಾಧಿಸುವುದೇನಿದೆ? ಇಂಥ ದಾಳಿಗಳಿಂದ ಆರೋಪಿಗಳಿಗೆ ಶಿಕ್ಷೆಯೂ ಆಗುವುದಿಲ್ಲ. ಕೊಲೆಯಾದವರ ಪ್ರಾಣ ಮರಳಿ ಬರುವುದೂ ಇಲ್ಲ. ಕೇವಲ ಸಮುದಾಯಗಳ ಮಧ್ಯೆ ದ್ವೇಷ ಹೆಪ್ಪುಗಟ್ಟುತ್ತದೆ. ಸಂಬಂಧವಿಲ್ಲದ ಯಾರ್‍ಯಾರೋ ಸಂಕಷ್ಟಕ್ಕೀಡಾಗಿ ನರಳುತ್ತಾರೆ, ಅಸಹಾಯಕತೆಯಿಂದ ಶಪಿಸುತ್ತಾರೆ.

ಏಳು ವರ್ಷಗಳ ಹಿಂದೆ ಇದೇ ರೀತಿ ಕೊಲೆಯಾಗಿದ್ದ ವಿಶ್ವನಾಥ ಶೆಟ್ಟಿ ಅವರ ತಾಯಿ ಮುರುಕಲು ಗುಡಿಸಲಿನಲ್ಲಿ, ಕಾಲಿಗೆ ಚಪ್ಪಲಿ ಇಲ್ಲದೆ ಬದುಕು ಸವೆಸುತ್ತಿರುವ ಸುದ್ದಿ ಅರಿತು, ಮುಸ್ಲಿಂ ಸಮುದಾಯದ ಯುವಕರು ಆ ತಾಯಿಯ ಮನೆಯನ್ನು ಸ್ವಚ್ಛಗೊಳಿಸಿದ ವರದಿ (ಪ್ರ.ವಾ., ಮಾರ್ಚ್ 1) ಮನಸ್ಸಿಗೆ ತುಸು ನೆಮ್ಮದಿ ನೀಡುವಂತಿದೆ. ಸಾವು ಕೂಡ ರಾಜಕೀಯಕ್ಕೆ ಬಳಕೆಯಾಗುವ ದುಃಸ್ಥಿತಿ ನಮ್ಮ ದೇಶಕ್ಕೆ ಬರಬಾರದಿತ್ತು. ಮಾನವೀಯತೆಯನ್ನೇ ಮರೆಯುತ್ತಿರುವ ಕೋಮು ಗಲಭೆಗಳಿಗೆ ಯಾರು ಕಡಿವಾಣ ಹಾಕಬೇಕು?

ಚನ್ನು ಅ. ಹಿರೇಮಠ, ರಾಣೆಬೆನ್ನೂರು

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor: Sudesha Doddapalya (Responsible for selection of news under the PRB Act). Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080 - 45557333, Editorial: 080 - 45557251, Circ: 1800-425-8009, Advt: 1800-425-8008. Also printed at Hubballi-Dharwad, Mangaluru, Kalaburagi, Davanagere, Mysuru and Hosapete. © All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ರಷ್ಯಾ ಮೇಲೆ ನಿರ್ಬಂಧ ಪರೋಕ್ಷ ಸಮರ

ಉಕ್ರೇನ್ ದೇಶವನ್ನು ಆಕ್ರಮಿಸಿ ಯುದ್ಧ ನಡೆಸುತ್ತಿರುವ ರಷ್ಯಾದ ವಿರುದ್ಧ ಹಲವು ದೇಶಗಳು ವಿವಿಧ ರೀತಿಯ ನಿರ್ಬಂಧಗಳನ್ನು ಹೇರಿವೆ. ಜತೆಗೆ ಮತ್ತಷ್ಟು ನಿರ್ಬಂಧಗಳನ್ನು ಹೇರುವ ಎಚ್ಚರಿಕೆ ನೀಡಿವೆ. ಈ ಎಚ್ಚರಿಕೆಗಳಿಗೆ ಸೊಪ್ಪು ಹಾಕದ ರಷ್ಯಾ ತನ್ನ ಅತಿಕ್ರಮಣವನ್ನು ಮುಂದುವರಿಸಿದೆ. ಈ ಸಂದರ್ಭದಲ್ಲಿ ಇಂತಹ ನಿರ್ಬಂಧಗಳು ಎಂದರೆ ಏನು? ಅವುಗಳ ಪರಿಣಾಮಗಳೇನು ಎಂಬುದರ ಬಗ್ಗೆ ವ್ಯಾಪಕ ಚರ್ಚೆ ನಡೆಯುತ್ತಿದೆ

ನಿರ್ಬಂಧ ಎಂದರೇನು?

ಒಂದು ದೇಶದ ಜತೆಗಿನ ಆರ್ಥಿಕ, ರಾಜತಾಂತ್ರಿಕ ಮತ್ತು ಸಾಂಸ್ಕೃತಿಕ ಸಂಬಂಧಗಳನ್ನು ತಾತ್ಕಾಲಿಕವಾಗಿ ಅಥವಾ ಭಾಗಶಃ ಕಡಿದುಕೊಳ್ಳುವುದನ್ನು ನಿರ್ಬಂಧಗಳು (ಸ್ಯಾಂಕ್ಷನ್ಸ್) ಎನ್ನಲಾಗುತ್ತದೆ.

ಸೇನಾ ಕಾರ್ಯಾಚರಣೆ ಮತ್ತು ಯುದ್ಧಕ್ಕೆ ಬದಲಾಗಿ ಈ ನಿರ್ಬಂಧಗಳನ್ನು ಹೇರಲಾಗುತ್ತದೆ. ಅಂದರೆ ದೇಶವೊಂದರ ಕೃತ್ಯ ಅಥವಾ ನೀತಿಯ ವಿರುದ್ಧ ಬೇರೆ ದೇಶಗಳು ಯುದ್ಧ ನಡೆಸಲು ಸಾಧ್ಯವಿಲ್ಲದೇ ಇದ್ದಾಗ ಅಥವಾ ಯುದ್ಧ/ಸೇನಾ ಕಾರ್ಯಾಚರಣೆ ನಡೆಸಲು ಬಯಸದೇ ಇದ್ದಾಗ ಇಂತಹ ನಿರ್ಬಂಧಗಳ ಮೊರೆ ಹೋಗಲಾಗುತ್ತದೆ. ಈ ನಿರ್ಬಂಧಗಳು ಬಹುತೇಕ ಸಂದರ್ಭಗಳಲ್ಲಿ ಏಕಪಕ್ಷೀಯವಾಗಿರುತ್ತವೆ. ರಷ್ಯಾದ ಸಂದರ್ಭದಲ್ಲಿ ಅಮೆರಿಕ, ಬ್ರಿಟನ್, ಐರೋಪ್ಯ ಒಕ್ಕೂಟವು ಏಕಪಕ್ಷೀಯವಾಗಿ ನಿರ್ಬಂಧ ಹೇರಿವೆ.

ವಿಶ್ವಸಂಸ್ಥೆಯ ಭದ್ರತಾ ಮಂಡಳಿ ಮೂಲಕ ರಷ್ಯಾ ಮೇಲೆ ನಿರ್ಬಂಧ ಹೇರುವ ಯತ್ನ ಸಫಲವಾಗಿಲ್ಲ. ಭದ್ರತಾ ಮಂಡಳಿಯ ಶಾಶ್ವತ ಸದಸ್ಯನಾಗಿರುವ ರಷ್ಯಾ, ಈ ಯತ್ನವನ್ನು ತನ್ನ ವಿಟೋ ಅಧಿಕಾರ ಬಳಸಿ ತಡೆದಿದೆ.

ದೇಶವೊಂದನ್ನು ಆರ್ಥಿಕ ನಿರ್ಬಂಧಕ್ಕೆ ಗುರಿ ಮಾಡಿದಾಗ, ಬೇರೆಲ್ಲಾ ದೇಶಗಳು ಆ ದೇಶದೊಂದಿಗೆ ಆರ್ಥಿಕ ಸಂಬಂಧವನ್ನು ಕಡಿದುಕೊಳ್ಳಬೇಕಾಗುತ್ತದೆ. ಆ ದೇಶದೊಂದಿಗಿನ ವಾಣಿಜ್ಯ ವಹಿವಾಟುಗಳನ್ನು ಸ್ಥಗಿತಗೊಳಿಸಬೇಕಾಗುತ್ತದೆ. ಇದನ್ನು ಮೀರುವ ಇತರ ದೇಶಗಳನ್ನೂ ಈ ನಿರ್ಬಂಧಕ್ಕೆ ಗುರಿಪಡಿಸುವ ಸಾಧ್ಯತೆ ಇದೆ.

ಇದು ಏಕಪಕ್ಷೀಯ ನಿರ್ಬಂಧವಾಗಿದ್ದರೂ, ನಿರ್ಬಂಧಕ್ಕೆ ಗುರಿಯಾದ ದೇಶದ ಜತೆಗೆ ಬೇರೆ ದೇಶಗಳೂ ಅದರ ಪರಿಣಾಮ ಎದುರಿಸಬೇಕಾಗುತ್ತದೆ. ನಿರ್ಬಂಧಕ್ಕೆ ಗುರಿಯಾದ ದೇಶದಿಂದ ಸರಕು ಮತ್ತು ಸೇವೆಗಳನ್ನು ಪಡೆದುಕೊಳ್ಳುವುದನ್ನು ಇತರ ದೇಶಗಳು ನಿಲ್ಲಿಸಬೇಕಾಗುತ್ತದೆ. ಹೀಗೆ ನಿಲ್ಲಿಸುವ ದೇಶಗಳು ಆ ಸರಕುಗಳಿಗಾಗಿ ಬೇರೆ ದೇಶಗಳನ್ನು ಅವಲಂಬಿಸಬೇಕಾಗುತ್ತದೆ. ಬಹುತೇಕ ಸಂದರ್ಭಗಳಲ್ಲಿ ಇದು ಆ ದೇಶದ ಆರ್ಥಿಕ ಹೊರೆಯನ್ನು ಹೆಚ್ಚಿಸುತ್ತದೆ. ಹೀಗಾಗಿ ಹಲವು ಸಂದರ್ಭಗಳಲ್ಲಿ ಇಂತಹ ನಿರ್ಬಂಧಗಳಲ್ಲಿ ವಿನಾಯಿತಿ ನೀಡಿದ ಉದಾಹರಣೆ ಇದೆ.

ಇದರ ಜತೆಯಲ್ಲಿಯೇ ನಿರ್ಬಂಧಕ್ಕೆ ಗುರಿಯಾದ ದೇಶದ ಮತ್ತು ಆ ದೇಶದ ಪ್ರಜೆಗಳಿಗೆ ಸಂಬಂಧಿಸಿದ ಸ್ವತ್ತುಗಳು ತಮ್ಮಲ್ಲಿದ್ದರೆ, ಇತರ ದೇಶಗಳು ಅವುಗಳನ್ನು ಸ್ಥಗಿತಗೊಳಿಸುತ್ತವೆ ಅಥವಾ ಮುಟ್ಟುಗೋಲು ಹಾಕಿಕೊಳ್ಳುತ್ತವೆ.

ರಾಜತಾಂತ್ರಿಕ ನಿರ್ಬಂಧವೂ ಒಂದು ಪರಿಣಾಮಕಾರಿ ಕ್ರಮವಾಗಿದೆ. ನಿರ್ಬಂಧಕ್ಕೆ ಗುರಿಯಾದ ದೇಶಗಳೊಂದಿಗೆ ನಿರ್ಬಂಧ ಹೇರಿದ ದೇಶ, ಒಕ್ಕೂಟ ಮತ್ತು ಇತರ ದೇಶಗಳು ರಾಜತಾಂತ್ರಿಕ ಸಂಬಂಧ ಕಡಿದುಕೊಳ್ಳುತ್ತವೆ. ಪರಸ್ಪರರಲ್ಲಿ ಇರುವ ರಾಯಭಾರ ಕಚೇರಿಗಳನ್ನು ಸ್ಥಗಿತಗೊಳಿಸಲಾಗುತ್ತದೆ. ರಾಜತಾಂತ್ರಿಕ ಅಧಿಕಾರಿಗಳನ್ನು ವಾಪಸ್ ಕರೆಸಿಕೊಳ್ಳಲಾಗುತ್ತದೆ.

ನಿರ್ಬಂಧಗಳು ಏನೇ ಆಗಿದ್ದರೂ, ಅದು ಆ ದೇಶದ ಯಾವುದೋ ಒಂದು ನಡೆ/ಕ್ರಮ/ನಿಲುವನ್ನು ಖಂಡಿಸುವ ಪ್ರತಿಭಟನಾ ಮಾರ್ಗವಾಗಿರುತ್ತದೆ. ಆ ನೀತಿ/ನಡೆ/ನಿಲುವಿನಿಂದ ಆ ದೇಶವು ವಾಪಸ್ ಸರಿಯುವಂತೆ ಮಾಡುವುದೇ ಇಂತಹ ನಿರ್ಬಂಧಗಳ ಪ್ರಧಾನ ಗುರಿಯಾಗಿರುತ್ತದೆ.

ಎರಡು ಅಲಗಿನ ಕತ್ತಿ

ನಿರ್ಬಂಧಗಳಲ್ಲಿ ಆರ್ಥಿಕ ನಿರ್ಬಂಧವು ಪ್ರಮುಖವಾದುದು. ಹೀಗಾಗಿ ಬಹುತೇಕ ದೇಶಗಳು ಆರ್ಥಿಕ ನಿರ್ಬಂಧಗಳನ್ನು ಹೇರಲು ಮುಂದಾಗುತ್ತವೆ. ಈ ಹಿಂದೆ ಇರಾನ್, ರಷ್ಯಾ ಮೇಲೆ ಹಲವು ಬಾರಿ ಆರ್ಥಿಕ ನಿರ್ಬಂಧಗಳನ್ನು ಹೇರಲಾಗಿದೆ. ಇಂತಹ ನಿರ್ಬಂಧಗಳು ನಿಜಕ್ಕೂ ಪರಿಣಾಮಕಾರಿಯೇ ಎಂಬ ಪ್ರಶ್ನೆ ಹೆಚ್ಚು ಚರ್ಚೆಯಾಗುತ್ತಿದೆ.

ಆರ್ಥಿಕ ನಿರ್ಬಂಧಗಳನ್ನು ಹೇರಿದಾಗ, ನಿರ್ಬಂಧಕ್ಕೆ ಗುರಿಯಾಗುವ ದೇಶಗಳ ಜಾಗತಿಕ ವ್ಯಾಪಾರ ಸ್ಥಗಿತವಾಗುತ್ತದೆ. ಆ ವ್ಯಾಪಾರದ ಸ್ವರೂಪ ಎಂಥದ್ದು ಎಂಬುದರ ಮೇಲೆ ನಿರ್ಬಂಧದ ಪರಿಣಾಮದ ತೀವ್ರತೆ ಗೊತ್ತಾಗುತ್ತದೆ. ನಿರ್ಬಂಧಕ್ಕೆ ಗುರಿಯಾದ ದೇಶವು ತೈಲ, ಔಷಧಗಳು, ಆಹಾರ ಪದಾರ್ಥಗಳನ್ನು ಹೆಚ್ಚಿನ ಪ್ರಮಾಣದಲ್ಲಿ ರಫ್ತು ಮಾಡುತ್ತಿದ್ದರೆ, ಅದನ್ನು ಆಮದು ಮಾಡಿಕೊಳ್ಳುತ್ತಿದ್ದ ದೇಶಗಳ ಮೇಲೆ ನಿರ್ಬಂಧವು ಪರಿಣಾಮ ಬೀರುತ್ತದೆ. ಈ ಸಂಪನ್ಮೂಲಗಳಿಗಾಗಿ ಆ ದೇಶಗಳು ಬೇರೆ ದೇಶಗಳತ್ತ ಮುಖ ಮಾಡಬೇಕಾಗುತ್ತದೆ. ಇದು ಆ ಸರಕಿನ ಬೆಲೆ, ಆಮದು ವೆಚ್ಚ ಎಲ್ಲವೂ ಏರಿಕೆಯಾಗಲು ಕಾರಣವಾಗುತ್ತದೆ.

ಉದಾಹರಣೆಗೆ, ಈಗ ರಷ್ಯಾದ ಮೇಲೆ ನಿರ್ಬಂಧ ಹೇರಿರುವ ಕಾರಣ, ಅದರೊಂದಿಗಿನ ವ್ಯಾಪಾರ ವಹಿವಾಟುಗಳನ್ನು ಬೇರೆ ದೇಶಗಳು ಕಡಿದುಕೊಳ್ಳಬೇಕಾಗುತ್ತದೆ. ರಷ್ಯಾವು ಅತಿಹೆಚ್ಚು ಕಚ್ಚಾತೈಲ ಉತ್ಪಾದಿಸುವ ಒಪೆಕ್‌ಯೇತರ ಎರಡನೇ ದೊಡ್ಡ ರಾಷ್ಟ್ರವಾಗಿದೆ. ರಷ್ಯಾದಿಂದ ಕಚ್ಚಾತೈಲ ಮತ್ತು ನೈಸರ್ಗಿಕ ಅನಿಲ ಪೂರೈಕೆಯನ್ನು ನಿರ್ಬಂಧಿಸಿದರೆ, ಅದರ ಪರಿಣಾಮಗಳನ್ನು ಎಲ್ಲಾ ದೇಶಗಳು ಎದುರಿಸಬೇಕಾಗುತ್ತದೆ. ಇದರ ಪರಿಣಾಮ ಈಗಾಗಲೇ ಕಾಣುತ್ತಿದೆ. ಜಾಗತಿಕ ಮಾರುಕಟ್ಟೆಯಲ್ಲಿ ಕಚ್ಚಾತೈಲದ ಬೆಲೆ ಏರಿಕೆಯಾಗುತ್ತಿದೆ. ಇದರ ಜತೆಯಲ್ಲಿಯೇ ಇದು ರಷ್ಯಾದ ಆದಾಯವನ್ನು ಕಡಿತ ಮಾಡುತ್ತದೆ ಎಂಬುದೂ ಪ್ರಮುಖವಾದ ಅಂಶ.

ಈಚಿನ ವರ್ಷಗಳಲ್ಲಿ ದಕ್ಷಿಣ-ಚೀನಾ ಸಮುದ್ರದಲ್ಲಿ ಚೀನಾದ ಕಾರ್ಯಚಟುವಟಿಕೆಗಳನ್ನು ಗುರಿ ಮಾಡಿಕೊಂಡು ಅಮೆರಿಕವು ಹಲವು ನಿರ್ಬಂಧಗಳನ್ನು ಏಕಪಕ್ಷೀಯವಾಗಿ ಜಾರಿಗೆ ತಂದಿತ್ತು. ಇದು ಅಮೆರಿಕ-ಚೀನಾ ವಾಣಿಜ್ಯ ಸಮರ ಎಂದೇ ಸುದ್ದಿಯಾಗಿತ್ತು. ಚೀನಾದ ಹಲವು ಉತ್ಪನ್ನಗಳು, ತಂತ್ರಜ್ಞಾನಗಳನ್ನು ಅಮೆರಿಕವು ನಿಷೇಧಿಸಿತು. ಪರಿಣಾಮವಾಗಿ ಚೀನಾ ಅಭಿವೃದ್ಧಿಪಡಿಸಿದ್ದ 5ಜಿ ತಂತ್ರಜ್ಞಾನವು ಅಮೆರಿಕದಲ್ಲಿ ಬಳಕೆಗೆ ಬರಲಿಲ್ಲ. ಅಮೆರಿಕದಲ್ಲಿ ಬೇರೆ 5ಜಿ ತಂತ್ರಜ್ಞಾನ ಬಳಕೆಗೆ ಬರುವುದು ತಡವಾಯಿತು. ಚೀನಾಕ್ಕೆ ಆರ್ಥಿಕ ನಷ್ಟವೂ ಆಯಿತು. ನಂತರದ ದಿನಗಳಲ್ಲಿ ಎರಡೂ ದೇಶಗಳು ಈ ಸಮರವನ್ನು ಸಡಿಲಗೊಳಿಸಿದವು. ಅಮೆರಿಕವೇ ಈ ಸಮರವನ್ನು ಆರಂಭಿಸಿದ್ದರೂ, ಅಮೆರಿಕ ಮತ್ತು ಚೀನಾ ಎರಡೂ ಅದರ ಪರಿಣಾಮಗಳನ್ನು ಎದುರಿಸಬೇಕಾಯಿತು. ಹೀಗಾಗಿ ನಿರ್ಬಂಧ ಎಂಬುವುದು ಎರಡು ಅಲಗಿನ ಕತ್ತಿಯೇ ಸರಿ.

ರಷ್ಯಾ ಮೇಲೆ ಪರಿಣಾಮ ಏನು?

ಜಾಗತಿಕ ಮಟ್ಟದಲ್ಲಿ ರಷ್ಯಾ ಮೇಲೆ ವಿಧಿಸಲಾಗಿರುವ ಹಲವು ನಿರ್ಬಂಧಗಳ ಪರಿಣಾಮ ಈಗಾಗಲೇ ಗೋಚರವಾಗುತ್ತಿದೆ. ಫೆ. 22ರಂದು ಅಮೆರಿಕದ ಡಾಲರ್ ಎದುರು 72 ರೂಬೆಲ್ ಇದ್ದ ರಷ್ಯಾದ ಕರೆನ್ಸಿ ಮೌಲ್ಯವು, ಸೋಮವಾರ 117 ರೂಬೆಲ್‌ಗೆ ಏರಿಕೆಯಾಗಿದೆ. ಅಂದರೆ ಕರೆನ್ಸಿ ಮೌಲ್ಯವು ಶೇ 30ರಷ್ಟು ಕುಸಿತ ಕಂಡಿದೆ. ಬ್ಯಾಂಕ್ ಆಫ್ ರಷ್ಯಾವು ಬಡ್ಡಿದರಗಳನ್ನು ದ್ವಿಗುಣಗೊಳಿಸಿದೆ. ಸಂಭಾವ್ಯ ಬೆಲೆ ಏರಿಕೆ ಎದುರಿಸಲು ರಷ್ಯಾ ಜನರು ಸಜ್ಜಾಗುತ್ತಿದ್ದು, ಎಟಿಎಂಗಳ ಎದುರು ಸಾಲುಗಟ್ಟಿ ನಿಂತಿದ್ದಾರೆ.

ಈ ಎಲ್ಲ ನಿರ್ಬಂಧಗಳಿಂದ ಆಗುವ ಒಟ್ಟಾರೆ ಪರಿಣಾಮ ಏನು ಎಂದು ತಕ್ಷಣಕ್ಕೆ ಹೇಳಲಾಗದು. ಪಾಶ್ಚಿಮಾತ್ಯ ದೇಶಗಳು ಏಕಪಕ್ಷೀಯವಾಗಿ ಹಾಗೂ ಸಂಘಟಿತವಾಗಿ ತೆಗೆದುಕೊಂಡ ಕ್ರಮಗಳು ಸಮಗ್ರವಾಗಿವೆ. ಇವೆಲ್ಲವನ್ನೂ ತಕ್ಷಣದಿಂದ ಜಾರಿಗೆ ಬರುವಂತೆ ಕಾರ್ಯರೂಪಕ್ಕೆ ತರಲಾಗಿದೆ. ಪುಟಿನ್ ಹಾಗೂ ಲಾವ್ರೋವ್ ಅವರನ್ನು ಗುರಿಯಾಗಿಸಿಯೇ ಕೆಲವೊಂದು ಕ್ರಮಗಳನ್ನು ಘೋಷಿಸಿರುವುದು ವಿಶೇಷ.

ನಿರ್ಬಂಧಗಳ ಜಾರಿಯಲ್ಲಿ ಕೆಲವು ಸಮಸ್ಯೆಗಳು ಇವೆ. ಉದಾಹರಣೆಗೆ ಸ್ವಿಟ್ಜರ್ಲೆಂಡ್ ದೇಶವು ಐರೋಪ್ಯ ಒಕ್ಕೂಟದ ನಿರ್ಧಾರವನ್ನು ಬೆಂಬಲಿಸಿದೆ. ಆದರೆ, ರಷ್ಯಾಗೆ ಸಂಬಂಧಿಸಿದ ಆಸ್ತಿಗಳನ್ನು ಸ್ಥಗಿತಗೊಳಿಸುವುದನ್ನು ವಿಳಂಬ ಮಾಡುತ್ತಿದೆ. ನಿರ್ಬಂಧ ಹೇರಲಾಗಿದ್ದರೂ, ರಷ್ಯಾ ಕಂಪನಿಗಳು ಕ್ರಿಪ್ಟೊಕರೆನ್ಸಿ ಮೂಲಕ ಯಾವುದೇ ಅಡ್ಡಿಯಿಲ್ಲದಂತೆ ವಹಿವಾಟು ನಡೆಸುವ ಸಾಧ್ಯತೆಯ ಬಗ್ಗೆ ಅಮೆರಿಕ ಹಾಗೂ ಐರೋಪ್ಯ ಒಕ್ಕೂಟ ಕಳವಳ ವ್ಯಕ್ತಪಡಿಸಿವೆ.

ರಷ್ಯಾ ಕೈಕಟ್ಟಿ ಹಾಕಿದ ಪಾಶ್ಚಿಮಾತ್ಯ ದೇಶಗಳು

ಉಕ್ರೇನ್ ಮೇಲೆ ಯುದ್ಧ ಸಾರಿರುವ ರಷ್ಯಾ ವಿರುದ್ಧ ಪ್ರತೀಕಾರದ ಕ್ರಮವಾಗಿ ಆರ್ಥಿಕ ನಿರ್ಬಂಧ ವಿಧಿಸುವ ಕ್ರಮಗಳನ್ನು ಅಮೆರಿಕ ಹಾಗೂ ಐರೋಪ್ಯ ಒಕ್ಕೂಟ ತೆಗೆದುಕೊಂಡಿವೆ. ಅಂತರರಾಷ್ಟ್ರೀಯ ಪಾವತಿ ವ್ಯವಸ್ಥೆ 'ಸ್ವಿಫ್ಟ್'ನಿಂದ ರಷ್ಯಾವನ್ನು ಹೊರಗಿಡಲಾಗಿದೆ. ರಷ್ಯಾದ ಪ್ರಮುಖ ಬ್ಯಾಂಕ್‌ಗಳು ಸ್ವಿಫ್ಟ್ ಪದ್ಧತಿ ಮೂಲಕ ವ್ಯವಹಾರ ಮಾಡುವುದುನ್ನು ತಡೆ ಹಿಡಿಯಲಾಗಿದೆ.

ರಷ್ಯಾದ ಕೇಂದ್ರೀಯ ಬ್ಯಾಂಕ್‌ನ ಸುಮಾರು ₹45 ಲಕ್ಷ ಕೋಟಿ (60,000 ಕೋಟಿ ಡಾಲರ್) ಮೀಸಲು ನಿಧಿಯನ್ನು ಪಾಶ್ಚಿಮಾತ್ಯ ದೇಶಗಳು ನಿರ್ಬಂಧಿಸಿವೆ. ಹಣದುಬ್ಬರ ಹೆಚ್ಚಾಗಿ ರಷ್ಯಾದ ಕರೆನ್ಸಿ 'ರೂಬೆಲ್' ಮೌಲ್ಯ ಕುಸಿಯುವಂತೆ ಮಾಡುವುದು ಈ ನಿರ್ಧಾರದ ಹಿಂದಿನ ಪ್ರಮುಖ ಉದ್ದೇಶ. ಇದು ಆಧುನಿಕ ಕಾಲಘಟ್ಟದಲ್ಲಿ ಪ್ರಬಲ ದೇಶವೊಂದರ ವಿರುದ್ಧ ತೆಗೆದುಕೊಂಡ ಅತ್ಯಂತ ಕಠಿಣ ನಿರ್ಧಾರ ಎಂದು ವಿಶ್ಲೇಷಿಸಲಾಗಿದೆ. ಯುದ್ಧ ಸಾರುವಂತಹ ನಿರ್ಧಾರ ತೆಗೆದುಕೊಂಡ ರಷ್ಯಾ ಅಧ್ಯಕ್ಷ ವ್ಲಾಡಿಮಿರ್ ಪುಟಿನ್ ಅವರನ್ನು ಈ ನಿರ್ಧಾರಕ್ಕೆ ಹೊಣೆಗಾರರನ್ನಾಗಿ ಮಾಡುವುದು ಪಾಶ್ಚಿಮಾತ್ಯ ದೇಶಗಳ ಉದ್ದೇಶ. ಈ ಹಿಂದೆ 2014ರಲ್ಲಿ, ಉಕ್ರೇನ್‌ನ ಕ್ರಿಮಿಯಾವನ್ನು ಅತಿಕ್ರಮಿಸಿದ್ದ ರಷ್ಯಾ ವಿರುದ್ಧ ಸ್ವಿಫ್ಟ್ ಅಸ್ತ್ರವನ್ನು ಪ್ರಯೋಗಿಸಲಾಗಿತ್ತು.

ರಷ್ಯಾದ ಎರಡು ಅತಿದೊಡ್ಡ ಬ್ಯಾಂಕ್‌ಗಳಾದ ಸ್ಬೆರ್‌ಬ್ಯಾಂಕ್ ಹಾಗೂ ವಿಟಿಬಿಗಳ ಮೇಲೆ ಅಮೆರಿಕ ಹಾಗೂ ಬ್ರಿಟನ್ ಪ್ರತ್ಯೇಕ ನಿರ್ಬಂಧಗಳನ್ನು ವಿಧಿಸಿವೆ. ರಾಜಕೀಯ ಬೆಂಬಲವಿರುವ ದೊಡ್ಡ ಉದ್ಯಮಿಗಳಿಗೆ ಸೇರಿದ ಆಸ್ತಿ ಸಂಬಂಧಿತ ಚಟುವಟಿಕೆಗಳನ್ನು ಸ್ಥಗಿತಗೊಳಿಸಲಾಗಿದೆ. ಇದರ ಜೊತೆ ಅವರ ಪ್ರಯಾಣದ ಮೇಲೆ ನಿರ್ಬಂಧ ವಿಧಿಸಲಾಗಿದೆ. ಕೆನಡಾ ಮತ್ತು ಆಸ್ಟ್ರೇಲಿಯಾ ದೇಶಗಳು ಅಮೆರಿಕ ಹಾಗೂ ಬ್ರಿಟನ್ ತೆಗೆದುಕೊಂಡ ಕ್ರಮಗಳನ್ನೇ ಅನುಸರಿಸಿವೆ.

ರಷ್ಯಾ ಜೊತೆಗಿನ ಮಹತ್ವಾಕಾಂಕ್ಷಿ ನಾರ್ಡ್ ಸ್ಟ್ರೀಮ್ 2 ಬಾಲ್ಟಿಕ್ ಸಮುದ್ರ ಅನಿಲ ಪೈಪ್‌ಲೈನ್ ಯೋಜನೆಯನ್ನು ಜರ್ಮನಿ ಕೈಬಿಡುವ ಸೂಚನೆ ನೀಡಿದೆ. ಈಗ ಪೂರೈಕೆಯಾಗುವುದಕ್ಕಿಂತ ದುಪ್ಪಟ್ಟು ಪ್ರಮಾಣದ ಅನಿಲವನ್ನು ರಷ್ಯಾದಿಂದ ನೇರವಾಗಿ ಜರ್ಮನಿಗೆ ಪೂರೈಸುವುದು ಈ ಯೋಜನೆಯ ಉದ್ದೇಶವಾಗಿದೆ. ಪೋಲೆಂಡ್, ಜೆಕ್ ರಿಪಬ್ಲಿಕ್, ಬಲ್ಗೇರಿಯಾ, ಎಸ್ಟೋನಿಯಾ ದೇಶಗಳು ರಷ್ಯಾದ ವಿಮಾನಗಳಿಗೆ ತಮ್ಮ ದೇಶದ ವಾಯು ವಾರ್ಗವನ್ನು ನಿರ್ಬಂಧಿಸಿವೆ.

ರಷ್ಯಾಕ್ಕೆ ಸಂಬಂಧಿಸಿದ ಹಲವರ ಆಸ್ತಿಗಳನ್ನು ಐರೋಪ್ಯ ಒಕ್ಕೂಟ ಸ್ಥಗಿತಗೊಳಿಸಿದೆ. ಇಂತಹ ವ್ಯಕ್ತಿಗಳ ಪಟ್ಟಿ ಮಾಡಿಕೊಂಡಿದ್ದು, ಅವರು ಐರೋಪ್ಯ ಒಕ್ಕೂಟವನ್ನು ಪ್ರವೇಶಿಸುವುದನ್ನು ನಿರ್ಬಂಧಿಸಿದೆ. ಪುಟಿನ್ ಹಾಗೂ ವಿದೇಶಾಂಗ ಸಚಿವ ಲಾವ್ರೋವ್ ಅವರನ್ನು ಗುರಿಯಾಗಿಸಿ ಇನ್ನಷ್ಟು ಕಠಿಣ ನಿರ್ಬಂಧಗಳನ್ನು ಹೇರುವ ಕುರಿತು ಚರ್ಚೆ ನಡೆಯುತ್ತಿದೆ. ಸ್ಟ್ರಾಸ್‌ಬರ್ಗ್‌ನಲ್ಲಿರುವ ಐರೋಪ್ಯ ಮಂಡಳಿಯು ಹಲವು ರಾಜತಾಂತ್ರಿಕ ನಿರ್ಬಂಧಗಳನ್ನು ಪ್ರಕಟಿಸಿದೆ. ಸಂಸದೀಯ ಸಮಿತಿ ಹಾಗೂ ಸಚಿವರ ಸಮಿತಿಯಲ್ಲಿ ರಷ್ಯಾದ ಪ್ರಾತಿನಿಧ್ಯದ ಹಕ್ಕನ್ನು ಐರೋಪ್ಯ ಮಂಡಳಿ ಅಮಾನತಿನಲ್ಲಿರಿಸಿದೆ.

ವಿಶ್ವಸಂಸ್ಥೆಯು ಎಲ್ಲ ದೇಶಗಳ ಪರವಾಗಿ ಸಮಗ್ರ ಕ್ರಮ ತೆಗೆದುಕೊಳ್ಳಲು, ಭದ್ರತಾ ಮಂಡಳಿಯಲ್ಲಿ ರಷ್ಯಾ ಹೊಂದಿರುವ ವಿಟೊ ಅಧಿಕಾರ ಅಡ್ಡಿಯಾಗಿದೆ. ಭದ್ರತಾ ಮಂಡಳಿಯಲ್ಲಿ ರಷ್ಯಾ ಕಾಯಂ ಸದಸ್ಯ ರಾಷ್ಟ್ರವಾಗಿದ್ದು, ವಿಶ್ವಸಂಸ್ಥೆ ಹೇರುವ ಯಾವುದೇ ನಿರ್ಬಂಧಗಳ ವಿರುದ್ಧ ಅದು ತನ್ನ ವಿಟೊ ಅಧಿಕಾರ ಚಲಾಯಿಸಿ, ನಿರ್ಬಂಧಗಳು ಜಾರಿಯಾಗದಂತೆ ತಡೆಯುವ ಅಧಿಕಾರ ಹೊಂದಿದೆ. ವಿಟೊ ಅಧಿಕಾರವನ್ನು ಬಳಸಿಕೊಂಡೇ, ಉಕ್ರೇನ್ ಮೇಲೆ ಪುಟಿನ್ ನಡೆಸಿದ ದಾಳಿಯನ್ನು ಖಂಡಿಸಿ ಭದ್ರತಾ ಮಂಡಳಿಯು ತೆಗೆದುಕೊಂಡಿದ್ದ ನಿರ್ಣಯವನ್ನು ರಷ್ಯಾ ತಿರಸ್ಕರಿಸಿತ್ತು.

ಆಧಾರ: ರಾಯಿಟರ್ಸ್, ಪಿಟಿಐ, ದಿ ನ್ಯೂಯಾರ್ಕ್ ಟೈಮ್ಸ್, ವಾಷಿಂಗ್ಟನ್ ಪೋಸ್ಟ್



ವೇದವ್ಯಾಸರ ಶಿವಪುರಾಣಸಾರ

ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿ | 58

ಲಿಂಗಗಳಲ್ಲಿ ಪಾರ್ಥಿವಲಿಂಗವೇ ಶ್ರೇಷ್ಠ

ಈಗ ಸೂತಮುನಿಯು ಶಿವನ ಪಾರ್ಥಿವಲಿಂಗದ ಮಹಿಮೆಯನ್ನು ವಿವರಿಸುತ್ತಾನೆ. 'ಲಿಂಗಗಳಲ್ಲೆಲ್ಲಾ ಪಾರ್ಥಿವಲಿಂಗವೇ ಶ್ರೇಷ್ಠ. ಅದನ್ನು ಪೂಜಿಸಿ ಅನೇಕರು ಸಿದ್ಧಿಯನ್ನು ಪಡೆದಿರುವರು' ಎಂದು ತಿಳಿಸುತ್ತಾನೆ.

ಬ್ರಹ್ಮ, ವಿಷ್ಣು, ಋಷಿಗಳು ಮತ್ತು ದಕ್ಷ ಮುಂತಾದವರೆಲ್ಲರೂ ಪಾರ್ಥಿವ ಲಿಂಗಗಳನ್ನು ಪೂಜಿಸಿ ಇಷ್ಟಸಿದ್ಧಿಯನ್ನು ಪಡೆದಿದ್ದಾರೆ. ಇನ್ನೂ ಅನೇಕ ದೇವತೆಗಳು, ರಾಕ್ಷಸರು, ಮನುಷ್ಯರು, ನಾಗರು, ಅಸುರರು ಮುಂತಾದವರು ಪಾರ್ಥಿವಲಿಂಗವನ್ನು ಪೂಜಿಸಿ ಇಷ್ಟಸಿದ್ಧಿಯನ್ನು ಪಡೆದಿದ್ದಾರೆ. ಕೃತಯುಗದಲ್ಲಿ ರತ್ನಮಯವಾದ ಲಿಂಗ ಉತ್ತಮವಾದುದಾಗಿತ್ತು. ತ್ರೇತಾಯುಗದಲ್ಲಿ ಸುವರ್ಣಲಿಂಗವು ಉತ್ತಮ ಎನಿಸಿದರೆ, ದ್ವಾಪರಯುಗದಲ್ಲಿ ಪಾದರಸದ ಲಿಂಗವು ಶ್ರೇಷ್ಠ ಎನಿಸಿತ್ತು. ಕಲಿಯುಗದಲ್ಲಿ ಪಾರ್ಥಿವಲಿಂಗವು ಪೂಜೆಗೆ ಶ್ರೇಷ್ಠವಾಗಿದೆ.

ಈಶ್ವರನ ಎಂಟು ಮೂರ್ತಿಗಳಲ್ಲಿ ಪೃಥ್ವೀರೂಪವಾದ ಮೂರ್ತಿಯು ಶ್ರೇಷ್ಠವಾದುದು. ಇನ್ನಾವುದನ್ನೂ ಅಪೇಕ್ಷಿಸದೆ ಆ ಪಾರ್ಥಿವಮೂರ್ತಿಯನ್ನೆ ಕುರಿತು ತಪಸ್ಸು ಮಾಡಿದರೆ ಮಹತ್ತಾದ ಫಲ ಲಭಿಸುತ್ತದೆ. ದೇವರುಗಳಲ್ಲಿ ಮಹೇಶ್ವರನು ಮೊದಲನೆಯವನೂ ಶ್ರೇಷ್ಠನೂ ಆಗಿರುವಂತೆ, ಲಿಂಗಗಳಲ್ಲೆಲ್ಲಾ ಪಾರ್ಥಿವಲಿಂಗವು ಶ್ರೇಷ್ಠವಾದುದಾಗಿದೆ. ನದಿಗಳಲ್ಲಿ ಗಂಗೆಯಂತೆ, ಮಂತ್ರ ಗಳಲ್ಲಿ ಪ್ರಣವಮಂತ್ರದಂತೆ, ಪಟ್ಟಣಗಳಲ್ಲಿ ಕಾಶೀಪಟ್ಟಣದಂತೆ, ವ್ರತಗಳಲ್ಲಿ ಶಿವರಾತ್ರಿ-ವ್ರತದಂತೆ, ಶಕ್ತಿದೇವತೆಯಲ್ಲಿ ಶಿವಶಕ್ತಿ ಶ್ರೇಷ್ಠವಾಗಿರುವಂತೆ ಪಾರ್ಥಿವ ಲಿಂಗವು ಶಿವಲಿಂಗಗಳಲ್ಲೆ ಅತ್ಯಂತ ಶ್ರೇಷ್ಠ; ಮತ್ತು ಶಿವನನ್ನು ಆರಾಧಿಸಲು ಯೋಗ್ಯವೂ ಆಗಿದೆ.

ಪ್ರಾರ್ಥಿವಲಿಂಗದಲ್ಲಿ ಶಿವನನ್ನು ಬಿಟ್ಟು ಮಿಕ್ಕದೇವತೆಗಳನ್ನು ಪೂಜಿಸಿದರೆ, ಆ ಪೂಜೆ ವ್ಯರ್ಥವಾಗುವುದು. ಪಾರ್ಥಿವಲಿಂಗದ ಪೂಜೆಯು ಪುಣ್ಯಪ್ರದವಾದುದು. ಧನ ಮತ್ತು ಆಯುಸ್ಸುಗಳನ್ನು ಹೆಚ್ಚಿಸುವುದು. ಸಂತೋಷ ಮತ್ತು ಪುಷ್ಟಿಗಳನ್ನು ನೀಡುವುದು. ಇಂತಹ ಪಾರ್ಥಿವಲಿಂಗದ ಪೂಜೆಯನ್ನು ಸಾಧಕ ಶ್ರೇಷ್ಠರು ಭಕ್ತಿಯಿಂದ ಆಚರಿಸಬೇಕು. ಯೋಗ್ಯವಾಗಿ ಸಂಗ್ರಹಿಸಿದ ಸಾಮಾಗ್ರಿಗಳಿಂದ, ಉಪಚಾರಗಳಿಂದ, ಭಕ್ತಿಶ್ರದ್ಧಾ ಪೂರ್ವಕವಾಗಿ ಪಾರ್ಥಿವಲಿಂಗವನ್ನು ಪೂಜಿಸಬೇಕು. ಇದರಿಂದ ಸಕಲ ಇಷ್ಟಾರ್ಥಗಳೂ ನೆರವೇರುವುದು.

ಪಾರ್ಥಿವ(ಮಣ್ಣಿನ)ಲಿಂಗವನ್ನು ನಿರ್ಮಿಸಿ, ಶುಭ ವೇದಿಕೆಯಲ್ಲಿ ಯಾರು ಪೂಜಿಸುವರೋ ಅವರು ಇಹಲೋಕದಲ್ಲಿ ಶ್ರೀಮಂತನಾಗಿದ್ದು ಮರಣಾನಂತರ ರುದ್ರಸ್ವರೂಪವನ್ನು ಪಡೆಯುವರು. ಮೂರು ಸಂಧ್ಯಾಕಾಲಗಳಲ್ಲಿಯೂ ಹನ್ನೊಂದು ಪಾರ್ಥಿವಲಿಂಗಗಳನ್ನು ಮಾಡಿ ಬಿಲ್ವಪತ್ರೆಗಳಿಂದ ಯಾರು ಪೂಜಿಸುವರೋ, ಅವರು ಸಶರೀರವಾಗಿ ರುದ್ರಲೋಕಕ್ಕೆ ಹೋಗುವರು.

ಪಾರ್ಥಿವಲಿಂಗವನ್ನು ನಿರ್ಮಿಸಿ ಅದರಲ್ಲಿ ಶಿವನನ್ನು ನಿತ್ಯವೂ ಜೀವಿಸಿರುವವರೆಗೆ ಪೂಜಿಸುವವನು ಶಿವಲೋಕವನ್ನು ಸೇರುವನು. ಶಿವಲೋಕದಲ್ಲಿ ಶಿವನೊಡನೆ ಅನೇಕ ವರ್ಷಗಳು ಇದ್ದು, ಸಕಾಮನಾಗಿದ್ದರೆ ಅವನು ತಿರುಗಿ ಪವಿತ್ರವಾದ ಭರತಭೂಮಿಯಲ್ಲಿ ಚಕ್ರವರ್ತಿಯಾಗಿ ಜನಿಸುವನು. ಆದುದರಿಂದ ಫಲೇಚ್ಛೆಯಿಲ್ಲದವನಾಗಿ, ಅಂದರೆ ನಿಷ್ಕಾಮನಾಗಿ ನಿತ್ಯವೂ ಪಾರ್ಥಿವಲಿಂಗವನ್ನು ಅರ್ಚಿಸಬೇಕು. ಹಾಗೆ ಅರ್ಚಿಸಿದವನು ಬಹಳಕಾಲ ಶಿವಲೋಕದಲ್ಲಿದ್ದು, ಕೊನೆಗೆ ಮುಕ್ತಿಯನ್ನು ಪಡೆಯುವನು. ಶಿವನೊಡನೆ ಐಕ್ಯವನ್ನು ಸಹ ಹೊಂದುವನು.

ಚರಲಿಂಗವು ಅಖಂಡವಾಗಿರಬೇಕು. ಚರಪಾರ್ಥಿವಲಿಂಗವನ್ನು ವಿಖಂಡ ಮಾಡಬಾರದು. ಅಂದರೆ ಪೀಠ ಮತ್ತು ಲಿಂಗಗಳು ಬೇರೆಯಾಗಿರುವಂತೆ ಮಾಡಬಾರದು. ಅಖಂಡ(ಒಟ್ಟಾಗಿ)ವಾಗಿಯೇ ನಿರ್ಮಿಸಬೇಕು. ವಿಖಂಡವಾಗಿ ಮಾಡಿದರೆ ಪೂಜೆಯ ಫಲವು ಲಭಿಸಲಾರದು. ರತ್ನಮಯವಾದ ಮತ್ತು ಸುವರ್ಣಲಿಂಗಗಳು, ಪಾದರಸಲಿಂಗ, ಸ್ಫಟಿಕಲಿಂಗ, ಪಾರ್ಥಿವಲಿಂಗ, ಪುಷ್ಪ-ರಾಗದಲಿಂಗಗಳನ್ನು ಅಖಂಡವಾಗಿ (ಪೀಠ ಮತ್ತು ಲಿಂಗಗಳು ಸೇರಿರು ವಂತೆ) ನಿರ್ಮಿಸಬೇಕು. ಇದನ್ನು ವಿಧಿವತ್ತಾಗಿ ಮತ್ತು ಮನೋಹರವಾಗಿ ನಿರ್ಮಿಸಬೇಕು. ಪಂಚಯಜ್ಞವಿಧಿಯನ್ನು ಸಹ ಆ ಪಾರ್ಥಿವಲಿಂಗದೊಡನೆ ಆಚರಿಸಬೇಕು.

ಸ್ಥಿರವಾಗಿ ಪ್ರತಿಷ್ಠಾಪಿಸುವ ಲಿಂಗವು ವಿಖಂಡವಾಗಿರಬೇಕು. ಅಂದರೆ ಪೀಠ ಮತ್ತು ಲಿಂಗಗಳು ಬೇರೆಯಾಗಿರಬೇಕು. ಶುಭಮುಹೂರ್ತದಲ್ಲಿ ಪೀಠದಲ್ಲಿ ಲಿಂಗವನ್ನು ಪ್ರತಿಷ್ಠಾಪಿಸಬೇಕು. ಹೀಗೆ ಅಖಂಡ ಮತ್ತು ವಿಖಂಡ ವಿಚಾರವು ಚರಲಿಂಗ ಮತ್ತು ಅಚರಲಿಂಗಗಳಿಗೆ ಸಂಬಂಧಪಟ್ಟಿದ್ದು. ಪೀಠವು ಶಿವಶಕ್ತಿ ಸ್ವರೂಪವಾದರೆ, ಲಿಂಗವು ಮಹಾದೇವಸ್ವರೂಪ. ಆದುದರಿಂದ ಸ್ಥಿರವಾದ ಲಿಂಗಗಳಲ್ಲಿ ಲಿಂಗವು ದ್ವಿಖಂಡವಾಗಿ (ಪೀಠ ಮತ್ತು ಲಿಂಗಗಳು ಬೇರೆಯಾಗಿ) ಇರಬೇಕು.

ಅಖಂಡವಾದ ಚರಲಿಂಗದಲ್ಲಿ ಶಿವನನ್ನು ಪೂಜಿಸಿದರೆ ಸಂಪೂರ್ಣ ಫಲವು ಲಭಿಸುವುದು. ದ್ವಿಖಂಡವಾದ ಚರಲಿಂಗದಲ್ಲಿ ಪೂಜಿಸಿದರೆ ಮಹಾ ಅನಿಷ್ಟವು ಪ್ರಾಪ್ತವಾಗುವುದು ಎಂದು ಸೂತಮುನಿ ವಿವಿಧ ಲಿಂಗಗಳ ಪೂಜೆ ಮತ್ತದರ ಫಲಗಳನ್ನು ಪ್ರಯಾಗದ ಋಷಿಸಮೂಹಕ್ಕೆ ಹೇಳುವುದರೊಂದಿಗೆ ಶ್ರೀ ಶಿವಮಹಾಪುರಾಣದಲ್ಲಿನ ಮೊದಲನೆ ಸಂಹಿತೆಯಾದ ವಿದ್ಯೇಶ್ವರಸಂಹಿತೆಯ ಹತ್ತೊಂಬತ್ತನೆ ಅಧ್ಯಾಯ ಮುಗಿಯುತ್ತದೆ.

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ **9606038256**

ಉಕ್ರೇನ್‌ನಲ್ಲಿ ಸಿಲುಕಿರುವ ಭಾರತೀಯರನ್ನು ಉಕ್ರೇನ್‌ನ ಸುರಕ್ಷಿತ ಸ್ಥಳಕ್ಕೆ ರವಾನಿಸುವುದಾಗಿ ಭಾರತಕ್ಕೆ ರಷ್ಯಾ ಭರವಸೆ ನೀಡಿದೆ ಎಂಬ ಮಾಹಿತಿ ಇರುವ ಪೋಸ್ಟ್ ವೈರಲ್ ಆಗಿದೆ. ರಷ್ಯಾದ ರಕ್ಷಣಾ ಸಚಿವ ಜನರಲ್ ಸೆರ್ಗೇಯ್ ಶೋಯ್ಗು ಅವರು ಈ ಭರವಸೆ ನೀಡಿದ್ದಾರೆ. ಭಾರತೀಯರು ತಮ್ಮ ಮನೆ ಅಥವಾ ವಾಹನದ ಮೇಲೆ ಭಾರತದ ಧ್ವಜ ಹಾರಿಸಬೇಕು. ಅದನ್ನು ನೋಡಿ ರಷ್ಯಾ ಸಶಸ್ತ್ರ ಪಡೆಯು ಭಾರತೀಯರ ಬಳಿಗೆ ಧಾವಿಸಿ ಅವರನ್ನು ರಕ್ಷಿಸುತ್ತದೆ ಎಂದು ಈ ಪೋಸ್ಟ್‌ನಲ್ಲಿ ಹೇಳಲಾಗಿದೆ. ಇದನ್ನು ಹಲವರು ವಿವಿಧ ಸಾಮಾಜಿಕ ಜಾಲತಾಣ ವೇದಿಕೆಗಳಲ್ಲಿ ಹಂಚಿಕೊಂಡಿದ್ದಾರೆ.

ಇದು ಆಧಾರರಹಿತ ಎಂದು 'ದಿ ಕ್ವಿಂಟ್' ವರದಿ ಮಾಡಿದೆ. ರಷ್ಯಾ ನೀಡಿದೆ ಎನ್ನಲಾದ ಹೇಳಿಕೆ ಕುರಿತು ಸರ್ಕಾರದ ಅಧಿಕೃತ ಟ್ವಿಟರ್ ಖಾತೆಯಲ್ಲಿ ಯಾವುದೇ ಮಾಹಿತಿ ಇಲ್ಲ. ಉಕ್ರೇನ್‌ನಲ್ಲಿ ಸಿಲುಕಿರುವ ಭಾರತೀಯರನ್ನು ರಕ್ಷಿಸುವ ಕುರಿತು ಮಾಹಿತಿ ನೀಡುತ್ತಿರುವ ಸರ್ಕಾರದ ಅಧಿಕೃತ ಟ್ವಿಟರ್ ಖಾತೆ 'ಆಪರೇಷನ್ ಗಂಗಾ'ದಲ್ಲೂ ಮಾಹಿತಿ ಇಲ್ಲ. 'ರಕ್ಷಣೆ ವೇಳೆ ಭಾರತದ ಧ್ವಜ ತೋರಿಸಿ' ಎಂದು ಕೇಂದ್ರ ಸಚಿವ ಜಿ. ಕೃಷ್ಣ ರೆಡ್ಡಿ ಅವರು ಉಕ್ರೇನ್‌ನಲ್ಲಿ ಸಿಲುಕಿರುವ ಭಾರತೀಯರಿಗೆ ಸಲಹೆ ನೀಡಿರುವುದು ಮಾತ್ರ ಪತ್ರಿಕೆಗಳಲ್ಲಿ ವರದಿ ಆಗಿದೆ.

ಗುಂಡಣ್ಣ

ಬೆರಗಿನ ಬೆಳಕು

ಗುರುರಾಜ ಕರಜಗಿ

ಬದುಕಿಗೆ ಮಾದರಿಗಳು

ಕಕ್ಷಿಗಾರನವೊಲೇ ಪೋರುತ್ತೆ ನ್ಯಾಯಕ್ಕೆ |
ಸಾಕ್ಷಿಯವೊಲಿರು ಕಡೆಗೆ ತೀರ್ಪಾಗುವಂದು ||
ಭಿಕ್ಷುವೊಲು ಕಾಲ ಸವೆಯಿಸಿ ಲೋಕಯಾತ್ರೆಯಲಿ |
ಪಕ್ಷಿವೊಲು ಮನದೊಳಿರು – ಮಂಕುತಿಮ್ಮ ||
575 ||

ಪದ-ಅರ್ಥ: ಕಕ್ಷಿಗಾರನವೊಲೇ = ಕಕ್ಷಿಗಾರನಂತೆ (ದಾವೆ ಮಾಡಿದವನಂತೆ), ಪೋರುತ್ತೆ = ಹೋರಾಡುತ್ತ, ಸಾಕ್ಷಿಯವೊಲು = ಸಾಕ್ಷಿಯಂತೆ, ಭಿಕ್ಷುವೊಲು = ಭಿಕ್ಷುವಿನಂತೆ, ಪಕ್ಷಿವೊಲು = ಪಕ್ಷಿಯಂತೆ, ಮನದೊಳಿರು = ಮನದೊಳು + ಇರು.

ವಾಚ್ಯಾರ್ಥ: ನ್ಯಾಯಕ್ಕಾಗಿ ದಾವೆದಾರನಂತೆ ಹೋರಾಡಬೇಕು, ತೀರ್ಪು ದೊರಕುವಾಗ ಸಾಕ್ಷಿಯಂತೆ ಪಕ್ಷಪಾತರಹಿತನಾಗಿರಬೇಕು, ಭಿಕ್ಷುವಿನಂತೆ ಯಾವುದಕ್ಕೂ ಅಂಟದೆ ಬಾಳು ಸವೆಯಿಸಬೇಕು, ಮನಸ್ಸಿನಲ್ಲಿ ಹಕ್ಕಿಯ ಹಾಗೆ ಹಗುರವಾಗಿರಬೇಕು.

ವಿವರಣೆ: ಬದುಕಿನ ಬೇರೆ ಬೇರೆ ಹಂತಗಳಲ್ಲಿ ಹೇಗೆ ಬದುಕಬೇಕೆಂಬುದನ್ನು ಡಿವಿಜಿ ಈ ಕಗ್ಗದಲ್ಲಿ ತಿಳಿಸುತ್ತಾರೆ. ನ್ಯಾಯಕ್ಕಾಗಿ ಹೋರಾಡುವಾಗ ಕಕ್ಷಿಗಾರನ ತರಹ ಇರಬೇಕು. ಕಕ್ಷಿದಾರ ಕೋರ್ಟಿನಲ್ಲಿ ದಾವೆ ಹೂಡಿದ್ದಾನೆ. ಒಳ್ಳೆಯ ವಕೀಲರನ್ನು ಗೊತ್ತು ಮಾಡಿಕೊಂಡಿದ್ದಾನೆ, ದಾಖಲೆಗಳನ್ನು ಹುಡುಕಿ ತಂದು ಕೊಡುತ್ತಾನೆ. ಸಾಕ್ಷಿಗಳನ್ನು ಸಿದ್ಧ ಮಾಡುತ್ತಾನೆ. ಹೀಗೆ ಒಂದೇ ಸಮನೆ ವಿಷಯ ತೀರ್ಮಾನವಾಗುವವರೆಗೆ ಅವನ ಹೋರಾಟ ನಡೆದೇ ಇರುತ್ತದೆ. ತನಗೆ ನ್ಯಾಯ ದೊರಕಲಿ ಎಂದು ಸಕಲ ಪ್ರಯತ್ನಗಳನ್ನು ಮಾಡುತ್ತಾನೆ. ಹೀಗೆ ಜಗತ್ತಿನ ಒಳಿತಿಗೆ, ಧರ್ಮದ ರಕ್ಷಣೆಗೆ ಅನೇಕ ಮಹಾನುಭಾವರು ಜೀವನದುದ್ದಕ್ಕೂ ಶ್ರಮಿಸಿದರು. ಬಸವಣ್ಣನವರು, ಸಿದ್ಧರಾಮಣ್ಣನವರು ಲೋಕಹಿತಕ್ಕಾಗಿ ಸತತ ಕರ್ಮಗಳನ್ನು ಆಚರಿಸಿದರು. ದಾಸೋಹ ನಡೆಸಿದರು, ಧಾರ್ಮಿಕ ಸಾಮಾಜಿಕ ಪ್ರಜ್ಞೆಯನ್ನು ಜಾಗೃತಗೊಳಿಸಿದರು. ಶಂಕರರು ದೇಶದ ನಾಲ್ಕು ದಿಕ್ಕುಗಳಲ್ಲಿಯೂ ಸಂಚರಿಸಿದರು, ಕಷ್ಟಗಳ ಸಹಿಸಿದರು, ಅದ್ವೈತ ಜ್ಞಾನವನ್ನು ಹರಡಿದರು. ಸಂತ ಜ್ಞಾನೇಶ್ವರರು ಬಡತನದ ಬೆಂಕಿಯಲ್ಲಿ ಅರಳಿದ ಹೂವು ಆದರೆ ಸಾವಿರಾರು ಜನರ ಬದುಕಿನಲ್ಲಿ ಆಧ್ಯಾತ್ಮದ ರಸ ಸುರಿದರು.

ಹೀಗೆ ಅವಿರತವಾಗಿ ಹೋರಾಡುತ್ತಿದ್ದರೂ ಆ ಮಹಾನುಭಾವರು ತಮ್ಮ ಕರ್ಮಗಳಲ್ಲಿ ಒಂದು ಕ್ಷಣವೂ ಬಂಧಿಯಾಗಲಿಲ್ಲ. ಅವರದು ನಿರ್ಲಿಪ್ತ ಮನೋಭಾವ. ಯಾವ ಫಲಾಪೇಕ್ಷೆಯೂ ಇಲ್ಲ. ಅದನ್ನು ಸಾಕ್ಷಿಯ ಗುಣ ಎನ್ನುತ್ತದೆ ಕಗ್ಗ. ಸಾಕ್ಷಿಯಾದವನು ತಾನು ಕಂಡದ್ದನ್ನು, ತನ್ನ ಅರಿವಿಗೆ ಬಂದದ್ದನ್ನು ಹೇಳುತ್ತಾನೆ. ತನ್ನ ಹೇಳಿಕೆಯಿಂದ ಯಾರಿಗೆ ಲಾಭವಾದೀತು ಎಂದು ನೋಡುವುದಿಲ್ಲ. ಯಾಕೆಂದರೆ ಅವರು ಯಾರ ಪಕ್ಷದವನೂ ಅಲ್ಲ. ಅವನಿಗೆ ಸಾಕ್ಷಿಯ ಕೆಲಸ ಒಂದು ಕರ್ತವ್ಯ. ಫಲದ ಅಪೇಕ್ಷೆ ಇಲ್ಲ.

ಕೃಷ್ಣ ಅರ್ಜುನನಿಗೆ ಹೇಳುತ್ತಾನೆ, 'ಅರ್ಜುನ ನನಗೆ ಈ ಯುದ್ಧದಿಂದ ಏನಾಗಬೇಕಿದೆ? ನಾನು ಮೂರು ಲೋಕಗಳಲ್ಲಿ ಪಡೆಯಬೇಕಾದ ಅಥವಾ ಪಡೆಯದಿರುವ ವಸ್ತುವಿಲ್ಲ. ಆದರೂ ನಾನು ಕರ್ಮ-ಮಾಡುತ್ತೇನೆ, ಆದರೆ ಏನನ್ನೂ ಬಯಸುವುದಿಲ್ಲ'. ಇದು ಸಾಕ್ಷಿಪ್ರಜ್ಞೆ ಇದರೊಂದಿಗೆ ಬದುಕಿನಲ್ಲಿ ಭಿಕ್ಷುವಿನ ಹಾಗೆ ಬದುಕಬೇಕು ಎನ್ನುತ್ತದೆ ಕಗ್ಗ. ಹಾಗೆಂದರೆ ಯಾವುದಕ್ಕೂ ಅತಿಯಾಗಿ ಅಂಟಿಕೊಳ್ಳದೆ ಕರ್ಮ ಮಾಡುವುದು. ನಾವು ಯಾವುದಕ್ಕೂ ಆಸೆಪಡದ, ನಿರ್ಮೋಹಿಯಾದ, ಸಕಲ ಉಪಾಧಿಗಳಿಂದ ದೂರನಾದ ಭಿಕ್ಷುವಿನಂತೆ ಆಗದೆ ಹೋದರೂ ಕೆಲಪ್ರಮಾಣದಲ್ಲಾದರೂ ಆ ಗುಣ ಬರುವುದು ಒಳ್ಳೆಯದು. ಕೊನೆಯದಾಗಿ ಮನಸ್ಸಿನಲ್ಲಿ ಹಕ್ಕಿಯ ಹಾಗೆ ಹಗುರವಾಗಿರಬೇಕಂತೆ. ಎಲ್ಲಿ ಮನಸ್ಸು ಸದಾಕಾಲ ಅಪೇಕ್ಷೆಯಲ್ಲಿ, ನಿರೀಕ್ಷೆಯಲ್ಲಿರುತ್ತದೆಯೋ, ಆಗ ಅದು ಭಾರವಾಗುತ್ತದೆ. ಭಾರವಾದ ಮನಸ್ಸು ಸಂತೋಷದಲ್ಲಿ ಹಾರಲಾರದು, ಹೊಸದನ್ನು ಚಿಂತಿಸಲಾರದು. ಅದಕ್ಕೇ ಕಗ್ಗ ಕಕ್ಷಿಗಾರನ, ಸಾಕ್ಷಿಯ, ಭಿಕ್ಷುವಿನ ಮತ್ತು ಹಕ್ಕಿಯ ದೃಷ್ಟಾಂತಗಳನ್ನು ನೀಡಿ. ಅವುಗಳ ಕೆಲವು ಅಂಶಗಳಾದರೂ ನಮ್ಮ ಬದುಕಿನಲ್ಲಿ ಬರಲಿ ಎಂದು ಅಪೇಕ್ಷಿಸುತ್ತದೆ.

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ | ಬುಧವಾರ ಮಾರ್ಚ್ 2, 2022

ಶ್ರೀ ಪ್ಲವನಾಮ ಸಂವತ್ಸರ ಉತ್ತರಾಯಣ-ಶಿಶಿರ ಋತು ಕುಂಭ ಮಾಸದ 18 ನೇ ದಿನ ತಿಥಿ: (ಮಾಘ ಕೃಷ್ಣ) ಅಮಾವಾಸ್ಯೆ ಗಂ. 23-05 ನಕ್ಷತ್ರ: ಶತಭಿಷ ಗಂ. 26-37 ಯೋಗ: ಶಿವ ಗಂ. 08-20, ಸಿದ್ಧ ಗಂ 29-42 ಕರಣ: ಚತುಷ್ಪಾದ ಗಂ. 12-00. ರಾಹುಕಾಲ: ಮಧ್ಯಾಹ್ನ 12:00 –01:30 ಸೂರ್ಯೋದಯ : 06-49 ಸೂರ್ಯಾಸ್ತ : 06-36 ಮುಸ್ಲಿಂ ದಿನಾಂಕ : 28 ರಜಬ್ ದಿನ ವಿಶೇಷ : ಆಷ್ ಬುಧವಾರ (ಕ್ರಿಶ್ಚಿಯನ್) ಅದೃಷ್ಟ ಸಂಖ್ಯೆ: 4, 5

ಮೇಷ: ಕೆಲವೊಮ್ಮೆ ಕಾರ್ಯವೈಫಲ್ಯದ ಅನುಭವವನ್ನು ಅನುಭವಿಸಬೇಕಾದರೂ, ಪೂರ್ವ ನಿಯೋಜಿತ ಕಾರ್ಯದಿಂದ ಹಿಂಬರುವ ಯೋಚನೆ ಮಾಡದಿರಿ. ವೃತ್ತಿಯಲ್ಲಿ ನಿರಂತರದ ಆದಾಯವಿದ್ದರೂ ಋಣಬಾಧೆ ತಪ್ಪದು.

ವೃಷಭ: ದಿನಸಿ ವರ್ತಕರಿಗೆ ಉತ್ತಮ ಲಾಭ ಪ್ರಾಪ್ತಿಯಾಗುವುದರ ಜೊತೆಗೆ ಹೊಸ ವ್ಯಾಪಾರಿಗಳ ಬಳಕೆಯಾಗುವುದು. ಸಂಜೆಯ ಸಮಯದಲ್ಲಿ ಆಲಸ್ಯವಾಗಬಹುದು. ಆರೋಗ್ಯದಲ್ಲಿ ಸಣ್ಣಪುಟ್ಟ ವ್ಯತ್ಯಯಗಳು ಕಾಣಲಿದೆ.

ಮಿಥುನ: ಹೂಡಿಕೆಯ ವಿಚಾರದಲ್ಲಿ ಬಂಗಾರ ಖರೀದಿಯ ಬಗ್ಗೆ ಯೋಚಿಸಬಹುದು. ಪರಿಶ್ರಮದಿಂದ ಬಹುದಿನಗಳ ಅಥವಾ ನಿಮ್ಮ ಹಿರಿಯರ ಕನಸು ನನಸಾಗಿಸುವಿರಿ. ವೃತ್ತಿಯಲ್ಲಿ ಹೊಸ ಬದುಕು ಆರಂಭಿಸಲು ಅವಕಾಶ.

ಕರ್ಕಾಟಕ: ಕಾರ್ಖಾನೆ ಕೆಲಸಗಾರರಿಗೆ ಹೆಚ್ಚಿನ ಕೆಲಸದ ಕಾರಣ ಸಾಂಸಾರಿಕ ಜವಾಬ್ದಾರಿ ನೋಡಲು ಕಷ್ಟವಾಗುತ್ತದೆ. ದೊಡ್ಡ ಸಮಸ್ಯೆಗಳನ್ನು ಸೂಕ್ಷ್ಮವಾಗಿ ಯೋಚಿಸಿ ಪರಿಹರಿಸಿಕೊಳ್ಳುವ ಮಾರ್ಗವನ್ನು ಕಂಡುಕೊಳ್ಳಿರಿ.

ಸಿಂಹ: ರಾಜಕಾರಣಿಗಳಿಗೆ ಶುಭಸುದ್ದಿ ದೊರೆಯಲಿದೆ. ಆಗು-ಹೋಗುಗಳನ್ನು ಅರಿತು ವ್ಯವಹಾರದಲ್ಲಿ ಮುಂದುವರೆಯುವುದು ಉತ್ತಮ. ನಿಮ್ಮ ಪ್ರತಿಭೆ ಮತ್ತು ಕೌಶಲಯಗಳು ಬೆಳಕಿಗೆ ಬಂದು ಇತರರಿಗೆ ವಿಶೇಷ ವ್ಯಕ್ತಿ ಎನಿಸುವಿರಿ.

ಕನ್ಯಾ: ವಿದ್ಯಾರ್ಥಿಗಳಿಗೆ ಮಿತ್ರವರ್ಗದವರ ಸಹವಾಸ ಅನುಕೂಲ. ಆಹಾರ ಪದಾರ್ಥದ ವ್ಯಾಪಾರ ಮಾಡುವವರಿಗೆ ನಷ್ಟ. ಮನುಷ್ಯ ಪ್ರಯತ್ನದ ಜೊತೆ ಆಂಜನೇಯನ ಮೊರೆ ಹೋಗುವುದರಿಂದ ಕಾರ್ಯ ಸಿದ್ಧಿಯಾಗಲಿದೆ.

ತುಲಾ: ಅವಿವಾಹಿತರಿಗೆ ಅವರ ಮನಸ್ಸಿಗೆ ಇಷ್ಟವಾಗುವ ರೀತಿಯ ಸಂಬಂಧಗಳು ಈ ದಿನ ಪ್ರಾಪ್ತಿಯಾಗುತ್ತದೆ. ಉತ್ಸಾಹದಿಂದ ಕೆಲಸ ಆರಂಭಿಸಿದಲ್ಲಿ ಸಮಸ್ಯೆಗಳು ತಾನಾಗಿಯೇ ಪರಿಹಾರಗೊಳ್ಳಲಿವೆ.

ವೃಶ್ಚಿಕ: ಸಹೋದ್ಯೋಗಿಯೊಬ್ಬರ ಸಲಹೆ ಅತಿ ಸೂಕ್ತವಾದುದು ಎನಿಸಿ ಅದರಂತೆ ನಡೆದು ವ್ಯವಹಾರದಲ್ಲಿ ಲಾಭವನ್ನು ಹೊಂದುವಿರಿ. ಮಡದಿ ಮಕ್ಕಳ ಆರೋಗ್ಯದಲ್ಲಿ ಹೆಚ್ಚಿನ ಗಮನವಿರಲಿ. ಪ್ರವಾಸಾದಿಗಳು ಸಂತಸ ತರಲಿದೆ.

ಧನು: ಕೌಟುಂಬಿಕವಾಗಿ ಕೆಟ್ಟು ಹೋದ ಸಂಬಂಧಗಳು ಇಂದು ಮತ್ತೆ ಮರಳಿ ಸರಿಯಾಗಬಹುದು. ಸಹೋದರರಿಗೋಸ್ಕರವಾಗಿ ತ್ಯಾಗ ಮಾಡುವ ಮನೋಭಾವವನ್ನು ಬೆಳೆಸಿಕೊಳ್ಳಿ. ದೇಹಾರೋಗ್ಯ ಏರುಪೇರಾಗಬಹುದು.

ಮಕರ: ಇಂದು ವರಿಷ್ಠ ಅಧಿಕಾರಿಗಳಿಗೆ ವಿಶೇಷವಾದ ಸ್ಥಾನಮಾನ, ಅಧಿಕಾರಗಳು ಪ್ರಾಪ್ತವಾಗಲಿದೆ. ತಾಂತ್ರಿಕ ಕ್ಷೇತ್ರದಲ್ಲಿನ ಸಾಧನೆಗಾಗಿ ಕೆಲವರಿಗೆ ಪ್ರಶಸ್ತಿ ಲಭಿಸುವಂತೆ ಅಥವಾ ಆದಾಯ ಹೆಚ್ಚುವಂತೆ ಆಗುವುದು.

ಕುಂಭ: ನಿಮ್ಮ ಒಡನಾಡಿಗಳ ಪ್ರೀತಿ, ವಿಶ್ವಾಸ ಸಹಕಾರದಿಂದ ಕಾರ್ಯವನ್ನು ಸುಲಭದಲ್ಲಿ ಸಾಧಿಸುವಿರಿ. ಮನೆಕೊಳ್ಳುವ ವಿಷಯದ ಬಗ್ಗೆ ಮನೆಯವರಿಂದ ಮಾಹಿತಿ ಕೇಳಬೇಕಾಗುತ್ತದೆ. ಶಿಕ್ಷಕ ವೃತ್ತಿಯನ್ನು ಆರಂಭಿಸುವ ಬಗ್ಗೆ ಯೋಚಿಸಿ.

ಮೀನ: ಈ ದಿನದ ಪರಿಸ್ಥಿತಿಗಳು ಕೊಂಚ ಕಿರಿಕಿರಿ ಮೂಡಿಸಿದರೂ ಫಲಿತಾಂಶ ಸಕಾರಾತ್ಮಕವಾಗಿರುವುದು. ನಿರ್ಧಾರದಲ್ಲಿ ಆತುರ ಬೇಡ. ಹಣಕಾಸಿನ ವ್ಯಾಮೋಹ ಹೆಚ್ಚಾಗಿ ತೊಂದರೆಗಳಿಗೆ ಕಾರಣವಾಗದಂತೆ ನೋಡಿಕೊಳ್ಳಿ.

ಪದಬಂಧ 4885

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ

1. ದಾಯಾದಿಗಳಲ್ಲಿನ ಜಗಳ (5)
3. ಕೂಸಿನ ತಲೆಗೆ ಕಟ್ಟುವ ಟೊಪ್ಪಿಗೆ (3)
5. ನಿದ್ದೆಯಲ್ಲಿ ತನ್ನಷ್ಟಕ್ಕೆ ತಾನೇ ಮಾತಾಡಿಕೊಳ್ಳುವಿಕೆ (5)
7. ಹತ್ತು ನೂರು ಇಲ್ಲಿದೆ (3)
8. ಹುಚ್ಚನ್ನು ಹೀಗೂ ಹೇಳುವರು (5)
10. ಕೊನೆಗೆ ಬೆಲೆಯಿಟ್ಟಾಗಲೇ ಈ ಸಲಿಗೆ! (3)
11. ದಾರ ಹಿಡಿದಿಹನಲ್ಲಾ ಈ ಬಾಧ್ಯಸ್ಥ! (5)
14. ಕಮ್ಮಾರನ ಒಲೆ (3)
15. ತರ್ಜುಮೆ ಮಾಡುವವನು (5)

ಮೇಲಿಂದ ಕೆಳಕ್ಕೆ

1. ನೆನಪು ಹೀಗೆ ಬಂದಿದೆ (3)
2. ವ್ಯಾಪಾರಿಯಿಲ್ಲಿ ತಿರುಗಿ ನಿಂತಿದ್ದಾನೆ (3)
4. ಹೆಂಡತಿಯನ್ನು ಕಳೆದುಕೊಂಡವನು (3)
6. ಕುಂಬಾರನ ಚಕ್ರವಿಲ್ಲಿ ಉಲ್ಟಾ ಆಗಿಬಿಟ್ಟಿದೆ (3)
7. ನೆಲವನ್ನು ಗೋಮಯದಿಂದ ಸಾರಿಸುವುದು (3)
8. ಕನ್ನಡಿಗನ ಬಳಿಯಿರುವ ಲೆನ್ಸ್! (3)
9. ಹೊಟ್ಟೆಕಿಚ್ಚು ಹೀಗೆ ಬಂದಿದೆ (3)
10. ಸರಕ್ಕನೆ ಹೋಗಿ ತಂದಿರುವ ಸಾಮಾನು (3)
12. ತಿರುಗಿ ನಿಂತು ಈ ರೀತಿ ಚರ್ಚಿಸು (3)
13. ರಸಸ್ವಾದನೆ ಬಲ್ಲವನೀತ (3)



4884ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ: 2.ಜರಾಯು 4.ವಾಮನ 5.ಜಬರ್ದಸ್ತಿ 6.ನಾಮಧೇಯ 8.ಕರ 9.ರಿಪು 13.ದಾರಿಹೋಕ 14.ಉಪಕಾರಿ 15.ಕೀಚಕ 16.ಆರ್ಭಟ

ಮೇಲಿಂದ ಕೆಳಕ್ಕೆ: 1.ದವಾಖಾನೆ 2.ಜನನಾಯಕ 3.ಮರ್ದನ 5.ಜಯಭೇರಿ 8.ರಹದಾರಿ 10.ಪುಸ್ತಕಕೀಟ 11.ಆಶುಕವಿ 12.ಚೌಪದಿ

ಸುಡೊಕು 5271

2		6					5	9
		7	5		6	3		2
3	8						6	
	2							4
			2	4	7			6
	7					5		
7		9			8		4	
4				3			8	
	6		4		2	7		3

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5270 ಸುಡೊಕು

3	9	1	8	7	5	6	4	2
7	6	5	2	4	9	3	8	1
2	8	4	3	1	6	7	9	5
1	5	9	7	2	4	8	6	3
4	2	7	6	8	3	5	1	9
8	3	6	5	9	1	2	7	4
6	1	2	4	5	8	9	3	7
9	7	8	1	3	2	4	5	6
5	4	3	9	6	7	1	2	8

ಮಣಿಪುರ: ಪ್ರಧಾನಿ ಮೋದಿ, ಅಮಿತ್ ಶಾ ಪ್ರಚಾರ

‘ಕಾಂಗ್ರೆಸ್‌ನಿಂದ ಒಡಕು, ಬಿಜೆಪಿಯಿಂದ ಒಗ್ಗಟ್ಟು’

ಪ್ರಜಾವಾಣಿ ವಾರ್ತೆ

ಗುವಾಹಟಿ: ಕಾಂಗ್ರೆಸ್ ಪಕ್ಷವು ಮಣಿಪುರದಲ್ಲಿ ವಾಸಿಸುತ್ತಿರುವ ಜನರ ನಡುವೆ ಒಡಕು ಸೃಷ್ಟಿಸಲು ಯತ್ನಿಸುತ್ತಿದೆ ಎಂದು ಪ್ರಧಾನಿ ನರೇಂದ್ರ ಮೋದಿ ಹಾಗೂ ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರು ವಾಗ್ದಾಳಿ ನಡೆಸಿದ್ದಾರೆ. ರಾಜ್ಯದ ಬಂಡುಕೋರರ ಸಮಸ್ಯೆ, ಮಾದಕದ್ರವ್ಯ ಮಾರಾಟ ಸಮಸ್ಯೆಗಳು ಕೊನೆಗೊಳ್ಳಬೇಕಾದರೆ ಅಭಿವೃದ್ಧಿ ಕಾರ್ಯಸೂಚಿ ಹೊಂದಿರುವ ಬಿಜೆಪಿಯನ್ನು ಆಯ್ಕೆ ಮಾಡಿ ಎಂದು ಅವರು ಮತದಾರರಲ್ಲಿ ಮನವಿ ಮಾಡಿದ್ದಾರೆ.

ಕಾಂಗ್ರೆಸ್‌ಗೆ ಒಂದು ಮತ ಚಲಾವಣೆಯಾದರೂ, ಭಯೋತ್ಪಾದಕ ಚಟುವಟಿಕೆ, ನಕಲಿ ಎನ್‌ಕೌಂಟರ್‌ಗಳು ಮತ್ತೆ ರಾಜ್ಯಕ್ಕೆ ಕಾಲಿಡಲು ದಾರಿ ಮಾಡಿಕೊಟ್ಟಂತೆ ಆಗುತ್ತದೆ ಎಂದು ಶಾ ಎಚ್ಚರಿಕೆ ನೀಡಿದರು. ‘ಮಾರ್ಚ್ 5ರಂದು ಮತದಾನದ ವೇಳೆ ನಿಮ್ಮ ಮುಂದೆ ಎರಡು ಆಯ್ಕೆಗಳಿವೆ. ಕಾಂಗ್ರೆಸ್ ಅಥವಾ ಬಿಜೆಪಿ. ಒಂದು ವೇಳೆ ನೀವು ತಪ್ಪಾಗಿ ಕಾಂಗ್ರೆಸ್‌ಗೆ ಮತ ಹಾಕಿದರೆ, ರಾಜ್ಯದಲ್ಲಿ ಸಮಸ್ಯೆಗಳ ಸರಮಾಲೆಯೇ ಸೃಷ್ಟಿಯಾಗುತ್ತದೆ. ಬಿಜೆಪಿಗೆ ನೀವು ಹಾಕುವ ಮತವು ರಾಜ್ಯದಲ್ಲಿ ಅಭಿವೃದ್ಧಿ ಹಾಗೂ ಸ್ಥಿರತೆಯನ್ನು ತರುತ್ತದೆ. ಆಯ್ಕೆ ನಿಮಗೆ ಬಿಟ್ಟಿದ್ದು’ ಎಂದು ತೌಬಲ್ ಜಿಲ್ಲೆಯ ಹಿರೋಕ್ ವಿಧಾನಸಭಾ ಕ್ಷೇತ್ರದಲ್ಲಿ ನಡೆಸಿದ ಚುನಾವಣಾ ಸಭೆಯಲ್ಲಿ ಶಾ ಹೇಳಿದರು.

‘15 ವರ್ಷಗಳ ಕಾಂಗ್ರೆಸ್ ಆಡಳಿತದಲ್ಲಿ ನೆಹರೂ–ಗಾಂಧಿ ಕುಟುಂಬದ ಒಂದು ನವೋದ್ಯಮ ರಾಜ್ಯದಲ್ಲಿತ್ತು. ನಾವು 2017ರಲ್ಲಿ ಅಧಿಕಾರಕ್ಕೆ ಬಂದ ಬಳಿಕ ರಾಜ್ಯದಲ್ಲಿ 5,477 ನವೋದ್ಯಮಗಳನ್ನು ಪ್ರೋತ್ಸಾಹಿಸಿದ್ದೇವೆ’ ಎಂದು ಶಾ ಹೇಳಿದರು.

ಹಿರೋಕ್ ಸೇರಿದಂತೆ 21 ಕ್ಷೇತ್ರಗಳಿಗೆ ಮಾರ್ಚ್ 5ರಂದು ಕೊನೆಯ ಹಂತದ ಮತದಾನ ನಡೆಯಲಿದೆ.

ನಾಗಾಗಳು– ಕುಕಿಗಳು ಮತ್ತು ಮೀಟಿಗಳು– ನಾಗಾಗಳ ಮಧ್ಯೆ ಕಾಂಗ್ರೆಸ್ ಕಂದಕ ಸೃಷ್ಟಿಸುತ್ತಿದೆ. 2017ರಲ್ಲಿ ನಾವು ಅಧಿಕಾರಕ್ಕೆ ಬಂದ ಬಳಿಕ ಎಲ್ಲ ಸಮುದಾಯಗಳನ್ನು ಒಗ್ಗೂಡಿಸಿದ್ದೇವೆ

ಅಮಿತ್ ಶಾ, ಕೇಂದ್ರ ಗೃಹಸಚಿವ

‘ಮಣಿಪುರದ ಚಹರೆ ಬದಲು’

ಪ್ರಧಾನಿ ನರೇಂದ್ರ ಮೋದಿ ಅವರು ಮಣಿಪುರ ವಿಧಾನಸಭಾ ಚುನಾವಣಾ ಪ್ರಚಾರ ನಡೆಸಿ, ಕಾಂಗ್ರೆಸ್ ವಿರುದ್ಧ ವಾಗ್ದಾಳಿ ಮಾಡಿದರು.

‘ಮಣಿಪುರ ಎಂದರೆ ಬಂದ್, ಭಯೋತ್ಪಾದನೆ, ಮಾದಕವ್ಯಸನ ಎಂಬಂತೆ ಕಾಂಗ್ರೆಸ್ ಮಾಡಿತ್ತು. ಆದರೆ ಬಿಜೆಪಿಯು ರಾಜ್ಯವನ್ನು ರಫ್ತು ಉದ್ಯಮದ ರಹದಾರಿಯನ್ನಾಗಿ ಮಾರ್ಪಡಿಸಿತು. ಮಣಿಪುರ ಈಗ ನವೋದ್ಯಮ, ಕೌಶಲ ಮತ್ತು ಕ್ರೀಡೆಗೆ ಹೆಸರಾಗಿದೆ. ಕಾಂಗ್ರೆಸ್ ಜನರನ್ನು ಒಡೆಯಿತು. ಆದರೆ ನಾವು ಸಮುದಾಯಗಳನ್ನು ಒಗ್ಗೂಡಿಸಿದೆವು’ ಎಂದು ಮೋದಿ ಅವರು ವರ್ಚುವಲ್ ಭಾಷಣದಲ್ಲಿ ಹೇಳಿದ್ದಾರೆ.

ಪ್ರಜಾವಾಣಿ ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು

ನಿಮ್ಮ ಪ್ರೀತಿಪಾತ್ರರ ಅಗಲಿಕೆಯನ್ನು ಶ್ರದ್ಧಾಂಜಲಿ ಜಾಹೀರಾತು ಮೂಲಕ ಪ್ರಕಟಿಸಲು ಅಥವಾ ನಿಮ್ಮ ಪ್ರೀತಿಪಾತ್ರರ ಸವಿನೆನಪಿಗೆ ಸಂತಾಪ ಸೂಚನೆ ಪ್ರಕಟಿಸಲು ಬಯಸುವಿರಾದರೆ, ನಮ್ಮ

ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ

ಪತ್ರಿಕೆಗಳಲ್ಲಿ ನಿಮ್ಮ ಜಾಹೀರಾತುಗಳನ್ನು ಪ್ರಕಟಿಸಲು ಅಗತ್ಯವಿರುವ ಎಲ್ಲ ಮಾರ್ಗದರ್ಶನ ನೀಡುತ್ತೇವೆ.

ದಯವಿಟ್ಟು ಸಂಪರ್ಕಿಸಿ:

Santhosh Kumar : 9880856233
Jerry : 9731810277 | Ravichandra : 9901641752
Vishal : 9845114560 | Anitha R: 9900428036

ನಿಮ್ಮ ಮಾರ್ಗದರ್ಶನಕ್ಕಾಗಿ ಕೆಲವು ಅನುಕೂಲಕರ ಫಾರ್ಮಾಟ್ಸ್ ಹಾಗೂ ಟೆಕ್ಸ್ಟ್ ಆಯ್ಕೆಗಳನ್ನು ಹೊಂದಿರುವ ಒಂದು ವೆಬ್‌ಸೈಟ್‌ನ್ನು ಕೂಡ ನಾವು ಆರಂಭಿಸಿದ್ದೇವೆ. ದಯವಿಟ್ಟು ಲಾಗಾನ್ ಮಾಡಿರಿ
https://homages.deccanherald.com
ಅಥವಾ QR code ಸ್ಕ್ಯಾನ್ ಮಾಡಿ
ನಮ್ಮ ಆನ್‌ಲೈನ್ ಬುಕ್ಕಿಂಗ್ ಫಾರಂ ಪಡೆಯಿರಿ.

ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ಉದ್ಯೋಗಾವಕಾಶ

General

WORK FROM HOME ಮನೆಯಿಂದಲೆ ಬುಕ್ ಬರೆಯುವ ಮೂಲಕ ತಿಂಗಳಿಗೆ 12,000- 15,000ವರೆಗೆ ಸಂಪಾದಿಸಿ. ಕನ್ನಡ/ ಇಂಗ್ಲೀಷ್ ಓದಲು, ಬರೆಯಲು ಬರುವ ಎಲ್ಲರಿಗೂ ಅವಕಾಶ. ಕೊರಿಯರ್ ಸೌಲಭ್ಯವಿದೆ. 8139955155/ 8139988588

ಖಾಸಗಿ ಬ್ಯಾಂಕ್‌ಗಳಲ್ಲಿ ಕೆಲಸಮಾಡಲು ಯುವಕ, ಯುವತಿಯರು ಬೇಕಾಗಿದ್ದಾರೆ SSLC, PUC, Degree ಸಂಬಳ- 15000 to 28000 ಸಂಪರ್ಕಿಸಿರಿ 8904879948/ 8904879491

ಕಂಪನಿ ಕೆಲಸಕ್ಕೆ ಯುವಕ-ಯುವತಿಯರು ಬೇಕಾಗಿದ್ದಾರೆ. ಊಟ, ವಸತಿಯುಚಿತ. 10,000-15,000 ಸಂಬಳ. 8762235355 ಮಂಗಳೂರು

Drivers

ಉಬರ್ ಮತ್ತು ಓಲಾಗೆ ಚಾಲಕರು ಬೇಕಾಗಿದ್ದಾರೆ! ಪ್ರತಿ ತಿಂಗಳು ರೂ.30000/- ವರೆಗೆ ಗಳಿಸಬಹುದು. ಎವರೆಸ್ಟ್ ಫ್ಲೀಟ್: 080-47179009 ಅನ್ನು ಸಂಪರ್ಕಿಸಿ .

Part-Time Jobs

ಕನ್ನಡ ಮತ್ತು ಇಂಗ್ಲೀಷ್ ಓದಲು, ಬರೆಯಲು ಬರುವ ಯುವಕ/ಯುವತಿಯರಿಗೆ, ಗೃಹಿಣಿಯರಿಗೆ ವಯಸ್ಸಾದವರು ಮನೆಯಲ್ಲೇ ಕುಳಿತು ನಾವು ಕೊಡುವ ಬುಕ್ ಬರೆಯುವ ಮೂಲಕ ತಿಂಗಳಿಗೆ 12,000- 15,000 ವರೆಗೆ ಸಂಪಾದಿಸಿ.ಕೊರಿಯರ್ ಸೌಲಭ್ಯವಿದೆ.8884777502, 8884777503

ಕನ್ನಡ ಮತ್ತು ಇಂಗ್ಲೀಷ್ ಓದಲು,ಬರೆಯಲು ಬರುವ ಯುವಕ/ಯುವತಿಯರಿಗೆ,ಗೃಹಿಣಿಯರಿಗೆ, ಮನೆಯಲ್ಲೆ ಕುಳಿತು,ಬುಕ್ ಬರೆಯುವ ಮೂಲಕ ತಿಂಗಳಿಗೆ 12,000-15,000/- ವರೆಗೆ ಸಂಪಾದಿಸಿ.(ಕೊರಿಯರ್ ಯಿದೆ). 8884686861, 8884686860.

Wanted

ಶ್ರೀ ಶಕ್ತಿ ಹೆಲ್ತ್ ಕೇರ್ ಯುವಕ-ಯುವತಿಯರು Helper ಕೆಲಸಕ್ಕೆ ಬೇಕಾಗಿದ್ದಾರೆ. ತಿಂಗಳಿಗೆ ವೇತನ 10,000/- ರಿಂದ 12,000 ಊಟ ವಸತಿಯೊಂದಿಗೆ ಕೆಲಸ ಖಾಲಿ ಇದೆ.ಸ್ಥಳ: ಶೇಷಾದ್ರಿಪುರಂ, ಬೆಂಗಳೂರು- 90196 26612

ರೆಂಟಲ್ ಪ್ರಾಪರ್ಟೀಸ್

Accommodation Available

Flats

3BHK 1340 sqft semifurnished fanily Hosapalya ITI layout HSR 7 sect 9441124742

ವ್ಯಾಪಾರ

Business Offers

Machinery & Tools

START YOUR Own Business. Paper Plates, Paper Cups. Fully Automatic Machines Manufactured in Bangalore. 'Guru Enterprises': 9845049816

ಭವಿಷ್ಯ

Astrology

'ವಿಶ್ವಖ್ಯಾತಿಯ ದಕ್ಷಿಣಕನ್ನಡ' ಕೇರಳಿಯ ದೈವಸಂಭೂತ ಜ್ಯೋತಿಷ್ಯ,ವಾಸ್ತುಗುರು ಶ್ರೀದೇವಾನಂದನ್ ರವರಿಂದ ಜೀವನದ ಸರ್ವತೋಮುಖ ಅಭಿವೃದ್ಧಿ,ಸುಖಶಾಂತಿ, ನೆಮ್ಮದಿಗಾಗಿ,ಸರ್ವಮನಇಚ್ಛ, ಮಹಾವಶೀಕರಣ,ಆಕರ್ಷಣಾ, ಸಂಮೋಹನ ಮತ್ತು ಶತ್ರು ಸಂಬಂಧಿತ,ದುಷ್ಟಶಕ್ತಿ ಮಾಯಾವಿಗಳ ಇಂದೇ ಪರಿಹಾರಕ್ಕಾಗಿ.9845005009

ಬ್ರಹ್ಮ ಜ್ಞಾನ ಪಂಡಿತ ಶಂಕರ್ ಗುರೂಜಿ ಪ್ರಖ್ಯಾತ ವಾಸ್ತು ಜ್ಯೋತಿಷ್ಯರು ಪ್ರೀತಿಯಲ್ಲಿ ನಂಬಿ ಮೋಸ ಸ್ತ್ರೀ ಪುರುಷ ಗುಪ್ತ ಸಮಸ್ಯೆ ಶತ್ರುಕಾಟ ಆಸ್ತಿಯಲ್ಲಿ ಕಿರಿಕಿರಿ ಪ್ರಯೋಗ ನಿಮ್ಮ ಜೀವನದ ಯಾವುದೇ ಕಠಿಣ ಹಾಗೂ ಗುಪ್ತ ಸಮಸ್ಯೆಗಳಿಗೆ ಸಂಪರ್ಕಿಸಿ 9845167316

ಕೆಲಸದ ನಂತರ ಕಾಣಿಕೆ. ಸ್ತ್ರೀ ಪುರುಷ ವಶೀಕರಣ. ನಿಮ್ಮ ಯಾವುದೇ ಗುಪ್ತಸಮಸ್ಯೆಗಳಿಗೆ, ಇಷ್ಟಪಟ್ಟವರು. ನಿಮ್ಮಂತೆ ಆಗಲು, 2 ದಿನದಲ್ಲಿ ಪರಿಹಾರ: 9591580089.

||ಉಚಿತ ಭವಿಷ್ಯ||: *ವಶೀಕರಣ ಸ್ಪೆಷಲಿಸ್ಟ್* ಯಾವುದೇ ಕಠಿಣ ಸಮಸ್ಯೆಗಳಿಗೆ 20 ನಿಮಿಷಗಳಲ್ಲಿ 100% ಪರಿಹಾರ. ಪಂಡಿತ್. ಪವನ್‌ಭಟ್. 8095569819

ಪ್ರವಾಸ

Travel

18.04.2022, 11ದಿನಗಳ ಕಾಶಿಯಾತ್ರೆ. 07.04.2022, 11ದಿನಗಳ ನೇಪಾಳ. ಪೊಖ್ರಾ, ಮುಕ್ತಿನಾಥ್,ಕಾಶಿ. 21.04.2022, 12ದಿನಗಳ ವೈಷ್ಣೋದೇವಿ, ಕುಲುಮನಾಲಿ, ಪಂಚಶಕ್ತಿಪೀಠಗಳು. 04.05.2022,18.05.2022, 15ದಿನಗಳ ಚಾರ್‌ಧಾಮ್‌ಯಾತ್ರೆ. ಸಂಪರ್ಕಿಸಿ: ವಿಷ್ಣನ್ ಟೂರ್ಸ್ ಅಂಡ್ ಟ್ರಾವಲ್ಸ್, ತ್ಯಾಗರಾಜನಗರ, ಬೆಂಗಳೂರು-70. 9342287551, 8050629305

ಸುಸಜ್ಜಿತ ವ್ಯವಸ್ಥೆಗಳೊಂದಿಗೆ 15.03.2022 ರಿಂದ 8/10 ದಿನಗಳ ಗುಜರಾತ್, ರಾಜಸ್ಥಾನ್. 11.04.2022, 17.04.2022 ರಿಂದ 11ದಿನಗಳ ಕಾಶಿ, ನೇಪಾಳ. 17.04.2022, 22.04.2022 ರಿಂದ 13/7 ದಿನಗಳ ಕಾಶಿ,ಗಯಾ,ಅಲಹಾಬಾದ್. 12.04.2022,27.04.2022 ರಿಂದ 9/12 ದಿನಗಳ ಕಾಶ್ಮೀರ್, ವೈಷ್ಣೋದೇವಿ, ಅಮೃತ್-ಸರ್. 12.05.2022, 26.05.2022 ರಿಂದ 13/15 ದಿನಗಳ ಚಾರ್-ಧಾಮ್-ಯಾತ್ರೆ. 25.04.2022, 07.05.2022 ರಿಂದ 12ದಿನಗಳ ಶಿಮ್ಲಾ,ಕುಲುಮನಾಲಿ. ಪ್ರವಾಸಗಳಿಗೆ ಸಂಪರ್ಕಿಸಿ: ಆನಂದ್ ವಿಹಾರಿ ಬೆಂಗಳೂರು-23. 080-23385837, 8088887677

22-03-2022 ಕಾಶಿ, ಪ್ರಯಾಗ್ ರಾಜ್, ಗಯಾ, 21-04-2022 ದೆಹಲಿ, ಆಗ್ರಾ, ಅಮೃತ್‌ಸರ್, ವೈಷ್ಣೋದೇವಿ, ಹರಿದ್ವಾರ, ಕಾಶಿ, ಗಯಾ,8-5-2022 ಯಮುನೋತ್ರಿ, ಗಂಗೋತ್ರಿ, ಕೇದಾರ್‌ನಾಥ್, ಬದ್ರಿನಾಥ್. 26-6-2022 ಅಮರ್‌ನಾಥ್ ಯಾತ್ರೆ, ಕರ್ನಾಟಕ ಹೆರಿಟೇಜ್ ಟೂರ್ಸ (ಹನುಮಂತನಗರ) 9845035349, 9482435755

15 ದಿನಗಳ ಕಾಶಿ, ದೆಹಲಿ. 16 ದಿನಗಳ ಕಾಶಿ,ವೈಷ್ಣೋದೇವಿ, ದೆಹಲಿ,ಅಮೃತ್ಸರ್. 17 ದಿನಗಳ ಬದರಿನಾಥ್, ಕೇದಾರನಾಥ್, ಗಂಗೋತ್ರಿ, ಯಮುನೋತ್ರಿ, ಚಾರ್‌ಧಾಮ್ ಮತ್ತು ಜುಲೈ ತಿಂಗಳಲ್ಲಿ ಅಮರನಾಥ್ ಯಾತ್ರೆ ಸಂಪರ್ಕಿಸಿ: ನವಕರ್ನಾಟಕ ಕಿಸಾನ್ ಯಾತ್ರ ಸೇವಸಂಘ, ಗಿರಿನಗರ ಬೆಂಗಳೂರು-86. 9916473906, 8861111568

13.05.2022 12/16 ದಿನಗಳು ಸಿಮ್ಲಾ,ಕುಲುಮನಾಲಿ, ವೈಷ್ಣೋದೇವಿ,ಸಪ್ತಶಕ್ತಿಪೀಠಗಳು, 17.03.2022 3 ದಿನಗಳು ತಿರುನಲ್ಲಾರು,ನವಗ್ರಹ ದೇವಸ್ಥಾನ ಪ್ರವಾಸ. ಆರ್.ಗಾಂಧಿ ಟೂರ್ಸ್. 9945445809/ 9902433500

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

ಪ್ರಜಾವಾಣಿ
BOOK YOUR CLASSIFIEDS ADVERTISEMENT
PRAJAVANI ALL KARNATAKA CLASSIFIEDS PACKAGE RATES

Per word	Ordinary	Bold	Ordinary Semi Display	Bold Semi Display
	60	85	70	115

CD Per Sqcm	Single Col	Double Col	Multi Col
	430	450	475

SPECIAL OFFER

PAY	2	And	GET	1	Free
PAY	3	And	GET	2	Free
PAY	5	And	GET	5	Free

For More Details Contact:
Ph:080- 45557160 | 163 | 164 | M: 9880856233
9731810277 | 9901641752 | 9845114560 | 9886213331
condition apply*
dhclassifieds@deccanherald.co.in www.dhclassifieds.com

ಉತ್ತರ ಪ್ರದೇಶ ಚುನಾವಣೆ: ಬಿಜೆಪಿ ಭದ್ರಕೋಟೆಯಲ್ಲಿ ಮುಖ್ಯಮಂತ್ರಿ ಸ್ಪರ್ಧೆ

ಗೋರಖಪುರ: ಯೋಗಿಗಿಲ್ಲ ಸವಾಲು

● ಸಂಜಯ ಪಾಂಡೆ

ಯೋಗಿ ಆದಿತ್ಯನಾಥ ಅವರು ಗೋರಖಪುರದ ಸಿದ್ಧಾರ್ಥ ನಗರದಲ್ಲಿ ಮಂಗಳವಾರ ಪ್ರಚಾರ ನಡೆಸಿದರು. ಈ ಸಂದರ್ಭದಲ್ಲಿ ಅವರಿಗೆ ಭಾರಿ ಹೂಮಾಲೆ ಹಾಕಲಾಯಿತು ಪಿಟಿಐ ಚಿತ್ರ

ಗೋರಖಪುರ: ವಿಪರೀತ ವಾಹನ ದಟ್ಟಣೆ, ರಸ್ತೆಯ ಒತ್ತುವರಿ, ರೈಲು ನಿಲ್ದಾಣ ಮತ್ತು ಬಸ್ ನಿಲ್ದಾಣವನ್ನು ಸಂಪರ್ಕಿಸುವ ರಸ್ತೆಯಲ್ಲಿ ಎಲ್ಲೆಂದರಲ್ಲಿ ನಿಲ್ಲಿಸಿರುವ ಬಸ್‌ಗಳಿಂದಾಗಿ ತೆವಳುತ್ತಾ ಸಾಗುವ ವಾಹನಗಳು... ಉತ್ತರ ಪ್ರದೇಶ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ ಅವರ ಊರೇ ಇದು ಎಂಬ ಆಶ್ಚರ್ಯ ಗೋರಖಪುರಕ್ಕೆ ಬಂದ ಹೊರಗಿನವರಿಗೆ ಆಗಲೇಬೇಕು.

ಆದರೆ, ಪಟ್ಟಣದ ಹೃದಯ ಭಾಗದಲ್ಲಿ ಇರುವ ಗೋರಖನಾಥ ದೇವಾಲಯದತ್ತ ಸಾಗಿದರೆ ಪರಿಸ್ಥಿತಿ ಬದಲಾಗುತ್ತದೆ. ಇಲ್ಲಿ ರಸ್ತೆಗಳು ಅಗಲ ಇವೆ. ಸಂಚಾರಕ್ಕೆ ಯಾವುದೇ ತೊಂದರೆ ಆಗದಂತೆ ಪೊಲೀಸರು ನೋಡಿಕೊಳ್ಳುತ್ತಾರೆ.

ಗೋರಖಪುರ ನಗರ ಕ್ಷೇತ್ರದಿಂದ ಆದಿತ್ಯನಾಥ ಸ್ಪರ್ಧಿಸಿದ್ದಾರೆ. ಸಾಂಪ್ರದಾಯಿಕವಾಗಿ ಬಿಜೆಪಿಯ ‘ಭದ್ರಕೋಟೆ’ ಈ ಕ್ಷೇತ್ರ. ಆದಿತ್ಯನಾಥ ಅವರು ಗೋರಖನಾಥ ದೇವಾಲಯದ ಮುಖ್ಯಸ್ಥ. ಈ ದೇವಾಲಯವು ಹಿಂದೂಗಳ ಪ್ರಮುಖ ಧಾರ್ಮಿಕ ಕೇಂದ್ರ. ಈ ಪಟ್ಟಣ ಮತ್ತು ಸುತ್ತಲಿನ ಕೆಲವು ಜಿಲ್ಲೆಗಳ ಜನರ ಮೇಲೆ ದೇವಾಲಯವು ರಾಜಕೀಯವಾಗಿಯೂ ಪ್ರಭಾವ ಬೀರುತ್ತಿದೆ.

ಗೋರಖಪುರ ದೇವಾಲಯದ ಮುಖ್ಯಸ್ಥರು 1967ರಿಂದಲೇ ಗೋರಖಪುರ ಲೋಕಸಭಾ ಕ್ಷೇತ್ರದಿಂದ ಗೆಲ್ಲುತ್ತಲೇ ಬಂದಿದ್ದಾರೆ. ಇದು ದೇವಾಲಯದ ಪ್ರಭಾವ ಎಷ್ಟಿದೆ ಎಂಬುದನ್ನು ಸೂಚಿಸುತ್ತದೆ. ಆದಿತ್ಯನಾಥ ಅವರು 1998ರಿಂದ ಸತತ ಐದು ಬಾರಿ ಈ ಕ್ಷೇತ್ರವನ್ನು ಲೋಕಸಭೆಯಲ್ಲಿ ಪ್ರತಿನಿಧಿಸಿದ್ದಾರೆ.

ಮೊದಲ ಬಾರಿಗೆ ವಿಧಾನಸಭೆಗೆ ಸ್ಪರ್ಧಿಸಿರುವ ಆದಿತ್ಯನಾಥ ಅವರಿಗೆ ಇಲ್ಲಿ ದೊಡ್ಡ ಸವಾಲುಗಳೇನೂ ಇಲ್ಲ. ದೇಗುಲದ ಜತೆಗೆ ಭಾವನಾತ್ಮಕ ಸಂಬಂಧ ಹೊಂದಿರುವ ಇಲ್ಲಿನ ಜನರು, ದೇಗುಲಕ್ಕೆ ಸಂಬಂಧಿಸಿದ ಯಾರೇ ಸ್ಪರ್ಧಿಸಿದರೂ ಬೆಂಬಲಿಸುತ್ತಾರೆ. 1967ರ ಬಳಿಕ ಗೋರಖಪುರ ನಗರ ವಿಧಾನಸಭಾ ಕ್ಷೇತ್ರದಲ್ಲಿ ಜನಸಂಘ ಅಥವಾ ಬಿಜೆಪಿ ಸೋತದ್ದಿಲ್ಲ.

‘ಆದಿತ್ಯನಾಥ ಮುಖ್ಯಮಂತ್ರಿಯಾದ ಬಳಿಕ ಬಹಳಷ್ಟು ಅಭಿವೃದ್ಧಿ ಕೆಲಸಗಳು ಆಗಿವೆ’ ಎಂದು ಸುಜಿತ್ ಚೌರಾಸಿಯ ಎಂಬವರು ಹೇಳುತ್ತಾರೆ. ಏಮ್ಸ್, ರಸಗೊಬ್ಬರ ಕಾರ್ಖಾನೆ ಇತ್ಯಾದಿಗಳ ಉದಾಹರಣೆಯನ್ನು ಅವರು ನೀಡುತ್ತಾರೆ. ಆದಿತ್ಯನಾಥ ಗೆಲ್ಲುತ್ತಾರೆ ಎಂಬುದರಲ್ಲಿ ಅವರ ವಿರೋಧಿಗಳಿಗೂ ಅನುಮಾನ ಇಲ್ಲ.

ಆದಿತ್ಯನಾಥ ಅವರು ಸುಲಭದಲ್ಲಿ ಗೆಲ್ಲುತ್ತಾರೆ ಎಂದು ಒಂದು ಕಾಲದಲ್ಲಿ ಆದಿತ್ಯನಾಥ ಅವರ ಆಪ್ತರಾಗಿದ್ದು, ಭಿನ್ನಮತದಿಂದಾಗಿ ಅವರ ಸಖ್ಯ ಬಿಟ್ಟು ಎಸ್‌ಪಿ ಸೇರಿದ ಸುನಿಲ್ ಸಿಂಗ್ ಅವರೂ ಹೇಳುತ್ತಾರೆ.

ಜಾತಿ ಲೆಕ್ಕಾಚಾರವೂ ಬಿಜೆಪಿಗೆ ಅನುಕೂಲಕರವಾಗಿಯೇ ಇದೆ. ಬನಿಯಾ ಮತ್ತು ಕಾಯಸ್ತ ಸಮುದಾಯದ ಮತದಾರರ ಸಂಖ್ಯೆ ಸುಮಾರು 1.5 ಲಕ್ಷ. ಸಾಂಪ್ರದಾಯಿಕವಾಗಿ ಈ ಎರಡೂ ಸಮುದಾಯಗಳು ಬಿಜೆಪಿ ಪರ ನಿಲುವು ಹೊಂದಿವೆ. 30 ಸಾವಿರದಷ್ಟಿರುವ ಠಾಕೂರ್ ಮತ್ತು 15 ಸಾವಿರದಷ್ಟಿರುವ ನಿಷಾದ್ ಸಮುದಾಯ ಕೂಡ ಬಿಜೆಪಿಯನ್ನು ಬೆಂಬಲಿಸುವ ನಿರೀಕ್ಷೆ ಇದೆ.

ಸಮಾಜವಾದಿ ಪಕ್ಷವು ಶುಭವತಿ ಶುಕ್ಲಾ ಅವರನ್ನು ಕಣಕ್ಕೆ ಇಳಿಸಿದೆ. ಆದಿತ್ಯನಾಥ ಅವರು ಮುಖ್ಯಮಂತ್ರಿಯಾದ ಬಳಿಕ ಗೋರಖಪುರ ಲೋಕಸಭಾ ಕ್ಷೇತ್ರದಿಂದ ಸ್ಪರ್ಧಿಸಿದ್ದ ಉಪೇಂದ್ರ ಶುಕ್ಲಾ ಅವರ ಹೆಂಡತಿ ಶುಭವತಿ. ಉಪೇಂದ್ರ ಮತ್ತು ಆದಿತ್ಯನಾಥ ಒಂದೇ ಪಕ್ಷದಲ್ಲಿದ್ದರೂ ಅವರ ನಡುವಣ ಸಂಬಂಧ ಸೌಹಾರ್ದವಾಗಿರಲಿಲ್ಲ. ಉಪೇಂದ್ರ ಅವರು ಕಳೆದ ವರ್ಷ ಮೃತರಾದರು.

ಕ್ಷೇತ್ರದಲ್ಲಿ ಗಣನೀಯ ಸಂಖ್ಯೆಯಲ್ಲಿರುವ ಬ್ರಾಹ್ಮಣ ಮತ್ತು ಯಾದವ ಮತಗಳು ಶುಭವತಿ ಅವರಿಗೆ ದೊರೆಯಬಹುದು ಎಂಬ ಲೆಕ್ಕಾಚಾರ ಎಸ್‌ಪಿಯದ್ದಾಗಿದೆ. ತಮ್ಮ ಗಂಡನಿಗೆ ಬಿಜೆಪಿ ಅವಮಾನ ಮಾಡಿದೆ ಎಂದು ಶುಭವತಿ ಹೇಳುತ್ತಿದ್ದಾರೆ.

ಭೀಮ್ ಆರ್ಮಿಯ ಸ್ಥಾಪಕ ಮತ್ತು ದಲಿತ ನಾಯಕ ಚಂದ್ರಶೇಖರ ಅಲಿಯಾಸ್ ರಾವಣ ಅವರೂ ಇಲ್ಲಿ ಸ್ಪರ್ಧಿಸಿದ್ದಾರೆ. ಆದರೆ, ತಮ್ಮ ಗೆಲುವಿನ ಸಾಧ್ಯತೆ ಕಡಿಮೆ ಎಂದು ಅವರೇ ಹೇಳಿಕೊಂಡಿದ್ದಾರೆ.

ಜಿಲ್ಲೆಯಲ್ಲಿ ಬಿಜೆಪಿಗೆ ಹಲವು ತೊಡಕು

ಗೋರಖಪುರ ನಗರ ಕ್ಷೇತ್ರದಲ್ಲಿ ಯೋಗಿ ಗೆಲುವು ಖಚಿತ ಎಂದೇ ಹೇಳಲಾಗುತ್ತಿದೆ. ಆದರೆ, ಜಿಲ್ಲೆಯ ಇತರ ಎಂಟು ಕ್ಷೇತ್ರಗಳ ಸ್ಥಿತಿ ಹೀಗೆ ಇಲ್ಲ. 2017ರಲ್ಲಿ ಇಲ್ಲಿನ ಒಂಬತ್ತು ಕ್ಷೇತ್ರಗಳ ಪೈಕಿ ಎಂಟರಲ್ಲಿ ಬಿಜೆಪಿ ಗೆದ್ದಿತ್ತು.

ಕಳೆದ ಬಾರಿಯಷ್ಟು ಕ್ಷೇತ್ರಗಳನ್ನು ಗೆಲ್ಲುವುದು ಸಾಧ್ಯವಿಲ್ಲ ಎಂದು ಬಿಜೆಪಿ ಬೆಂಬಲಿಗರೇ ಹೇಳುತ್ತಿದ್ದಾರೆ. ‘ಹಲವು ಕ್ಷೇತ್ರಗಳಲ್ಲಿ ಸ್ಪರ್ಧೆ ಕಠಿಣವಿದೆ’ ಎಂದು ಬಿಜೆಪಿಯ ಸ್ಥಳೀಯ ಮುಖಂಡ ಒಬ್ಬರು ಹೇಳಿದ್ದಾರೆ. ಈ ಬಾರಿ ಜಿಲ್ಲೆಯಲ್ಲಿ 2–3ಕ್ಕಿಂತ ಹೆಚ್ಚು ಕ್ಷೇತ್ರಗಳಲ್ಲಿ ಬಿಜೆಪಿ ಗೆಲ್ಲುವುದು ಕಷ್ಟ ಎಂಬುದು ಅವರ ಅಭಿಪ್ರಾಯ.

ಬ್ರಾಹ್ಮಣ ಸಮುದಾಯದ ಪ್ರಭಾವಿ ನಾಯಕ ವಿನಯ ಶಂಕರ್ ತಿವಾರಿ ಅವರು ಎಸ್‌ಪಿಗೆ ಸೇರಿದ್ದಾರೆ. ಅವರು ಚಿಲ್ಲುಪುರ ಕ್ಷೇತ್ರದ ಅಭ್ಯರ್ಥಿ. ಹಾಗೆಯೇ, ನಿಷಾದ್ ಸಮುದಾಯದ ಕೆಲವು ಅಭ್ಯರ್ಥಿಗಳನ್ನು ಎಸ್‌ಪಿ ಕಣಕ್ಕೆ ಇಳಿಸಿದೆ. ಜಿಲ್ಲೆಯ ಗ್ರಾಮೀಣ ಭಾಗದಲ್ಲಿ ಈ ಸಮುದಾಯದ ಜನಸಂಖ್ಯೆಯ ಗಣನೀಯವಾಗಿ ಇದೆ. ಆದಿತ್ಯನಾಥ ಅವರು ಸ್ಪರ್ಧಿಸಿದ್ದರಿಂದಾಗಿ ಜಿಲ್ಲೆಯಲ್ಲಿ ಬಿಜೆಪಿ ಮತ್ತೊಮ್ಮೆ ಪ್ರಾಬಲ್ಯ ಮೆರೆಯಬಹುದೇ ಎಂಬುದನ್ನು ಕಾದು ನೋಡಬೇಕಿದೆ.

‘ಪಕ್ಷಾಂತರ ಮಾಡಿದರೆ ಮುತ್ತಿಗೆ ಹಾಕಿ’

ಪಣಜಿ (ಪಿಟಿಐ): ‘ಒಂದು ಪಕ್ಷದಿಂದ ಗೆದ್ದು ಶಾಸಕನಾದ ವ್ಯಕ್ತಿಯು ಬಳಿಕ ಮತ್ತೊಂದು ಪಕ್ಷಕ್ಕೆ ಹೋದರೆ ಅವರಿಗೆ ಮುತ್ತಿಗೆ ಹಾಕಿ’ ಎಂದು ಗೋವಾದ ಕ್ರೈಸ್ತ ಧರ್ಮಗುರು ಫಾದರ್ ಎರ್ಮಿಟೊ ರೆಬೆಲ್ಲೊ ಅವರು ಕರೆ ನೀಡಿದ್ದಾರೆ.

‘ಪಕ್ಷಾಂತರ ಮಾಡುವ ಶಾಸಕರ ಮನೆಯ ಮುಂದೆ ಧರಣಿ ಮಾಡಿ. ಅವರು ರಾಜೀನಾಮೆ ನೀಡುವಂತೆ ಮಾಡಿ’ ಎಂದು ರೆಬೆಲ್ಲೊ ಅವರು ಜನರಿಗೆ ಕರೆ ನೀಡಿದ್ದಾರೆ.

2017ರಲ್ಲಿ ಚಲಾವಣೆಯಾದ ಮತಗಳಷ್ಟೇ ಈ ಬಾರಿಯೂ ಚಲಾವಣೆ

ಉತ್ತರ ಪ್ರದೇಶ: ಬದಲಾಗದ ಮತಪ್ರಮಾಣ

ಉತ್ತರ ಪ್ರದೇಶದ ಮಿರ್ಜಾಪುರದಲ್ಲಿ ವಿದ್ಯಾರ್ಥಿಗಳು ಮತದಾನ ಜಾಗೃತಿ ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು–ಪಿಟಿಐ ಚಿತ್ರ

ಲಖನೌ(ಪಿಟಿಐ): ಉತ್ತರ ಪ್ರದೇಶ ವಿಧಾನಸಭೆಗೆ ಈವರೆಗೆ ಐದು ಹಂತಗಳಲ್ಲಿ ನಡೆದಿರುವ ಮತದಾನದಲ್ಲಿ ಚಲಾವಣೆಯಾಗಿರುವ ಮತ ಪ್ರಮಾಣವು 2017ರ ಚುನಾವಣೆಯಲ್ಲಿ ಚಲಾವಣೆಯಾಗಿದ್ದಷ್ಟೇ ಇದೆ. ಒಂದು ಅಥವಾ ಎರಡು ಅಂಕಿ ಆಚೀಚೆ ಆಗಿದ್ದನ್ನು ಬಿಟ್ಟರೆ, ದೊಡ್ಡ ವ್ಯತ್ಯಾಸ ಕಂಡುಬಂದಿಲ್ಲ. ಹೀಗಾಗಿ ಈ ವಿದ್ಯಮಾನವು ಆಡಳಿತ ವಿರೋಧಿ ಅಲೆಯ ಸೂಚನೆಯೇ ಅಥವಾ ಆಡಳಿತದ ಪರ ಜನರು ಇದ್ದಾರೆ ಎಂಬುದರ ಸುಳಿವೇ ಎಂಬುದು ತಿಳಿಯದೇ ರಾಜಕೀಯ ಪಕ್ಷಗಳು ಗೊಂದಲದಲ್ಲಿವೆ.

2019ರ ಸಾರ್ವತ್ರಿಕ ಚುನಾವಣೆಯಲ್ಲಿ ರಾಜ್ಯದಲ್ಲಿ ಚಲಾವಣೆಯಾದ ಮತ ಪ್ರಮಾಣವನ್ನು ಗಮನಿಸಿದರೆ, ಅಂತಹ ವ್ಯತ್ಯಾಸ ಕಂಡುಬಂದಿಲ್ಲ. ಮತ ಪ್ರಮಾಣ ಏರಿಕೆಯಾಗದ್ದಕ್ಕೆ ಕೋವಿಡ್ ಪ್ರಮುಖ ಕಾರಣ ಎಂದು ಕೆಲವರು ಅಭಿಪ್ರಾಯಟ್ಟಿದ್ದಾರೆ. ‘ಜನರು ಹಿಂದಿನ ಚುನಾವಣೆಗಳಲ್ಲಿ ಎಲ್ಲ ಪಕ್ಷಗಳನ್ನೂ ನೋಡಿದ್ದಾರೆ. ಹೀಗಾಗಿ ಈ ಬಾರಿ ಆ ಪಕ್ಷಗಳು ನೀಡಿರುವ ಭರವಸೆಗಳ ಬಗ್ಗೆ ಜನರಲ್ಲಿ ಅಂಥಾ ನಿರೀಕ್ಷೆಯೇನೂ ಇಲ್ಲ’ ಎಂದು ಇನ್ನೂ ಕೆಲವು ಅಭಿಪ್ರಾಯಪಟ್ಟಿದ್ದಾರೆ.

ರಾಜಕೀಯವಾಗಿ ಪ್ರಮುಖ ಎಂದು ಪರಿಗಣಿತವಾಗಿರುವ ಉತ್ತರ ಪ್ರದೇಶದಲ್ಲಿ ಈಗಾಗಲೇ ಐದು ಹಂತಗಳ ಮತದಾನ ಮುಕ್ತಾಯವಾಗಿದೆ. ಮಾರ್ಚ್ 3 ಹಾಗೂ ಮಾರ್ಚ್ 7ರಂದು ಉಳಿದ ಎರಡು ಹಂತಗಳ ಮತದಾನ ನಿಗದಿಯಾಗಿದೆ.

ರಾಜ್ಯದ ಪಶ್ಚಿಮ ಭಾಗದ 58 ಕ್ಷೇತ್ರಗಳಿಗೆ ಫೆ. 10ರಂದು ನಡೆದ ಮೊದಲ ಹಂತದ ಮತದಾನದಲ್ಲಿ ಶೇ 62.63ರಷ್ಟು ಜನರು ಮತ ಚಲಾಯಿಸಿದ್ದರು. 2017ರಲ್ಲಿ ಈ ಭಾಗದಲ್ಲಿ ಶೇ 63.47ರಷ್ಟು ಮತದಾನವಾಗಿತ್ತು. ಸಾರ್ವತ್ರಿಕ ಚುನಾವಣೆಯಲ್ಲಿ ಶೇ 61.84ರಷ್ಟು ಜನರು ಮತ ಹಾಕಿದ್ದರು. ಆದರೆ ವಲಸಿಗರ ವಿಚಾರದಿಂದ ಸುದ್ದಿಯಲ್ಲಿರುವ ಕೈರಾನಾದಲ್ಲಿ ಮತ ಪ್ರಮಾಣ ಶೇ 75.12ಕ್ಕೆ ಏರಿಕೆಯಾಗಿದೆ. ಕಳೆದ ಬಾರಿ ಇಲ್ಲಿ ಶೇ 69.56ರಷ್ಟು ಮತದಾನವಾಗಿತ್ತು.

ಎರಡನೇ ಹಂತದಲ್ಲಿ, 2017ಕ್ಕೆ ಹೋಲಿಸಿದರೆ (ಶೇ 65.53) ಶೇ 64.42ರಷ್ಟು ಮತದಾನವಾಗಿತ್ತು. ಲೋಕಸಭಾ ಚುನಾವಣೆಯಲ್ಲಿ ಶೇ 63.13ರಷ್ಟು ದಾಖಲಾಗಿತ್ತು. ಪ್ರಮುಖ ಕ್ಷೇತ್ರ ರಾಂಪುರದಲ್ಲಿ ಕಳೆದ ವರ್ಷದಷ್ಟೇ (ಶೇ 63.92) ಮತದಾನ ದಾಖಲಾಗಿದೆ.

2017ರಲ್ಲಿ ಶೇ 63.97ರಷ್ಟು ಮತ ಚಲಾವಣೆಯಾಗಿದ್ದವು. ಎಸ್‌ಪಿ ಅಧ್ಯಕ್ಷ ಅಖಿಲೇಶ್ ಯಾದವ್ ಅವರು ಸ್ಪರ್ಧಿಸಿರುವ ಕರ್ಹಾಲ್‌ನಲ್ಲಿ ಈ ಬಾರಿ ಶೇ 62.28ರಷ್ಟು ಜನರು (ಕಳೆದ ಬಾರಿ ಶೇ 62.21) ಮತ ಹಾಕಿದ್ದಾರೆ. ಮುಲಾಯಂ ಸಿಂಗ್ ಅವರ ಭದ್ರಕೋಟೆಯಲ್ಲಿ ಚಲಾವಣೆಯಾದ ಅತಿಹೆಚ್ಚಿನ ಮತ ಪ್ರಮಾಣ ಇದು ಎಂದು ಹೇಳಲಾಗಿದೆ.

ನಾಲ್ಕನೇ ಹಂತದಲ್ಲಿ ರಾಜಧಾನಿ ಲಖನೌ ಸೇರಿದಂತೆ 59 ಕ್ಷೇತ್ರಗಳಿಗೆ ನಡೆದ ಮತದಾನದಲ್ಲಿ ಶೇ 61.52ರಷ್ಟು ಜನರು ಹಕ್ಕು ಚಲಾಯಿಸಿದ್ದಾರೆ. ಕಳೆದ ಬಾರಿ ಇಲ್ಲಿ ಶೇ 62.55ರಷ್ಟು ಮತ ಚಲಾವಣೆಯಾಗಿದ್ದವು. ಲೋಕಸಭಾ ಚುನಾವಣೆಯಲ್ಲಿ ಮತ ಪ್ರಮಾಣ ಶೇ 60.3 ಮಾತ್ರ. ಐದನೇ ಹಂತದಲ್ಲಿ 61 ಕ್ಷೇತ್ರಗಳಿಗೆ ನಡೆದ ಚುನಾವಣೆಯಲ್ಲಿ ಶೇ 57.32ರಷ್ಟು ಜನ ಮತದಾನ ಮಾಡಿದ್ದರು. 2017ರಲ್ಲಿ ಶೇ 58.24, ಲೋಕಸಭಾ ಚುನಾವಣೆಯಲ್ಲಿ ಶೇ 55.31ರಷ್ಟು ಮತ ಚಲಾವಣೆ ಆಗಿದ್ದವು.

ಮುಖ್ಯಮಂತ್ರಿ ಯೋಗಿ ಆದಿತ್ಯನಾಥ ಅವರು ಸ್ಪರ್ಧಿಸಿರುವ ಗೋರಖಪುರ ನಗರ ಕ್ಷೇತ್ರದಲ್ಲಿ ಆರನೇ ಹಂತದಲ್ಲಿ ಮತದಾನ ನಡೆಯಲಿದೆ. ಕಳೆದ ಬಾರಿ ಇಲ್ಲಿ 56.52ರಷ್ಟು ಜನರು ಮತ ಹಾಕಿದ್ದರು. ಪ್ರಧಾನಿ ಮೋದಿ ಅವರ ವಾರಾಣಸಿ ಕ್ಷೇತ್ರದಲ್ಲಿ ಕೊನೆಯ ಹಂತದ ಮತದಾನ ನಡೆಯಲಿದೆ. ಇಲ್ಲಿ ಐದು ವರ್ಷಗಳ ಹಿಂದೆ ಶೇ 59.56ರಷ್ಟು ಮತದಾನ ಆಗಿತ್ತು. ಲೋಕಸಭೆ ಚುನಾವಣೆಯಲ್ಲಿ ಶೇ 57.48ರಷ್ಟು ಮತದಾನವಾಗಿತ್ತು.

ಈ ಬಾರಿ ಮತದಾನ ಪ್ರಮಾಣ ಏಕೆ ಏರಿಕೆಯಾಗಿಲ್ಲ ಎಂಬುದು ಅಚ್ಚರಿ ಮೂಡಿಸಿದೆ. ಮತದಾನ ಜಾಗೃತಿ ಕಾರ್ಯಕ್ರಮಗಳು ಕಡಿಮೆಯಾಗಿದ್ದು ಕಾರಣ ಆಗಿರಬಹುದು

ಎಸ್.ವೈ. ಖುರೇಷಿ, ಮಾಜಿ ಚುನಾವಣಾ ಆಯುಕ್ತ

ಕಳೆದ ಸಲದ ಚುಣಾವಣೆಯಲ್ಲಿ ಚಲಾವಣೆಯಾಗಿದ್ದಷ್ಟೇ ಮತಗಳು ಈ ಬಾರಿ ಚಲಾವಣೆ ಆಗಿರುವುದು ಎಲ್ಲವೂ ಸರಿಯಾದ ದಿಕ್ಕಿನಲ್ಲಿ ನಡೆಯುತ್ತಿದೆ ಎಂಬುದರ ಸೂಚನೆ

ಯೋಗಿ ಆದಿತ್ಯನಾಥ, ಉತ್ತರ ಪ್ರದೇಶ ಮುಖ್ಯಮಂತ್ರಿ

ವಾಯು ಮಾಲಿನ್ಯದಿಂದ ಸಾವಿನ ಪ್ರಮಾಣ 2.5 ಪಟ್ಟು ಹೆಚ್ಚಳ: ವರದಿ

ನವದೆಹಲಿ (ಪಿಟಿಐ): ಭಾರತದಲ್ಲಿ ವಾಯು ಮಾಲಿನ್ಯದಿಂದ ಉಂಟಾಗುವ ಸಾವಿನ ಪ್ರಮಾಣವು ಕಳೆದ ಎರಡು ದಶಕಗಳಲ್ಲಿ 2.5 ಪಟ್ಟು ಹೆಚ್ಚಾಗಿದೆ ಎಂದು ವಿಜ್ಞಾನ ಮತ್ತು ಪರಿಸರ ಕೇಂದ್ರದ (ಸಿಎಸ್‌ಇ) ಹೊಸ ಅಧ್ಯಯನ ವರದಿ ಹೇಳಿದೆ. ಕೇಂದ್ರ ಪರಿಸರ ಸಚಿವ ಭೂಪೇಂದರ್ ಯಾದವ್ ಅವರು ಸಿಎಸ್‌ಇ ಅಧ್ಯಯನ ನಡೆಸಿದ 2019ರ ಪರಿಸರ ವರದಿಯನ್ನು ಮಂಗಳವಾರ ಬಿಡುಗಡೆ ಮಾಡಿದರು.

ಜನರ ಆರೋಗ್ಯದ ಮೇಲೆ ಪ್ರತಿಕೂಲ ಪರಿಣಾಮ ಬೀರುವ ಮಾಲಿನ್ಯದ ಮಾಪನ ಪಿ.ಎಂ 2.5 ಇದ್ದು, ಇದು ಎರಡು ದಶಕಗಳಲ್ಲಿ ಎರಡೂವರೆ ಪಟ್ಟು ಹೆಚ್ಚಾಗಿದೆ. ಭಾರತದಲ್ಲಿ ಸಂಭವಿಸುವ ಪ್ರತಿ ನಾಲ್ಕು ಸಾವುಗಳಲ್ಲಿ ವಾಯುಮಾಲಿನ್ಯದಿಂದ ಒಂದು ಸಾವು ಸಂಭವಿಸುತ್ತಿದೆ ಎಂದು ವರದಿ ಹೇಳಿದೆ.

ಜಗತ್ತಿನಲ್ಲಿ ವಾಯು ಮಾಲಿನ್ಯದಿಂದ 66.70 ಲಕ್ಷ ಜನರು ಸಾವನ್ನಪ್ಪಿದ್ದು, ಅದರಲ್ಲಿ ಭಾರತದಲ್ಲಿ 16.7 ಲಕ್ಷ ಮತ್ತು ಚೀನಾದಲ್ಲಿ 18.5 ಲಕ್ಷ ಜನರು ಮೃತಪಟ್ಟಿದ್ದಾರೆ ಎಂದು ವರದಿಯಲ್ಲಿ ಹೇಳಲಾಗಿದೆ.

ವಾಯು ಮಾಲಿನ್ಯದಿಂದ ಜಗತ್ತಿನಲ್ಲಿ 2019ರಲ್ಲಿ 4.76 ಲಕ್ಷ ಶಿಶುಗಳು ಜನಿಸಿದ ಮೊದಲ ತಿಂಗಳಿನಲ್ಲಿಯೇ ಸಾವನ್ನಪ್ಪಿವೆ. ಇವುಗಳಲ್ಲಿ 1.16 ಸಾವು ಭಾರತದಲ್ಲಿ ಸಂಭವಿಸಿವೆ ಎಂದು ವರದಿ ತಿಳಿಸಿದೆ.

ಏಳು ತಿಂಗಳ ನಂತರ ಸಾಮೂಹಿಕ ಪ್ರಾರ್ಥನೆಗೆ ಅವಕಾಶ

ಶ್ರೀನಗರ: ಕೋವಿಡ್‌ನಿಂದಾಗಿ ಕಳೆದ ಏಳು ತಿಂಗಳಿಂದ ಮುಚ್ಚಲಾಗಿದ್ದ ಇಲ್ಲಿನ ಐತಿಹಾಸಿಕ ಜಾಮೀಯ ಮಸೀದಿಯಲ್ಲಿ ಶುಕ್ರವಾರದ ಸಾಮೂಹಿಕ ಪ್ರಾರ್ಥನೆಗೆ ಅವಕಾಶ ಕಲ್ಪಿಸಲು ಸ್ಥಳೀಯ ಆಡಳಿತ ನಿರ್ಧರಿಸಿದೆ. ಕಾಶ್ಮೀರದ ಪ್ರಮುಖ ಧಾರ್ಮಿಕ ಕ್ಷೇತ್ರಗಳಲ್ಲಿ ಒಂದಾದ 600 ವರ್ಷಗಳ ಇತಿಹಾಸವಿರುವ ಜಾಮೀಯ ಮಸೀದಿಯು ಕೋವಿಡ್‌ನಿಂದಾಗಿ ಕಳೆದ 30 ವಾರಗಳಿಂದ ಮುಚ್ಚಲಾಗಿತ್ತು.

ಕಾಶ್ಮೀರ ವಿಭಾಗೀಯ ಆಯುಕ್ತ ಪಾಂಡುರಂಗ ಕೆ.ಪೊಲೆ ಅವರೊಂದಿಗೆ ಶ್ರೀನಗರದ ಹಳೆ ಬಡಾವಣೆಯ ನೌಹಟ್ಟ ಪ್ರದೇಶದಲ್ಲಿನ ಜಾಮೀಯ ಮಸೀದಿಗೆ ಸೋಮವಾರ ಭೇಟಿ ನೀಡಿದ್ದ ಕಾಶ್ಮೀರ ವಲಯ ಐಜಿಪಿ ವಿಜಯಕುಮಾರ್, ಮಸೀದಿಯ ಕಾರ್ಯದರ್ಶಿಯೊಂದಿಗೆ ಚರ್ಚೆ ನಡೆಸಿದರು.

ನಂತರ ಮಾತನಾಡಿದ ವಿಜಯ ಕುಮಾರ್, ‘ಜಾಮೀಯ ಮಸೀದಿಯನ್ನು ಮುಂದಿನ ಶುಕ್ರವಾರದಿಂದ ಮತ್ತೆ ತೆರೆಯಲು ನಾವು ನಿರ್ಧರಿಸಿದ್ದೇವೆ’ ಎಂದರು. ಐತಿಹಾಸಿಕ ಮಸೀದಿಯು ಕಳೆದ ಎರಡೂವರೆ ವರ್ಷಗಳಲ್ಲಿ ಬಹುತೇಕ ದಿನಗಳು ಮುಚ್ಚಿದ್ದು, 2019ರ ಆಗಸ್ಟ್‌ನಲ್ಲಿ ಸಂವಿಧಾನ 370ನೇ ವಿಧಿ ರದ್ದುಗೊಳಿಸಿದ ನಂತರ ಸತತ ನಾಲ್ಕು ತಿಂಗಳು ಮುಚ್ಚಿತ್ತು.

ಸಂಕ್ಷಿಪ್ತ ಸುದ್ದಿ

‘ಅಶ್ಲೀಲ ವಿಷಯ ಬಿತ್ತರ ಬೇಡ’

ನವದೆಹಲಿ (ಪಿಟಿಐ): ಅಶ್ಲೀಲ ಹಾಗೂ ಆಕ್ಷೇಪಾರ್ಹ ವಿಷಯ ಬಿತ್ತರ ಮಾಡದಂತೆ ಎಫ್‌ಎಂ ರೇಡಿಯೊ ವಾಹಿನಿಗಳಿಗೆ ಕೇಂದ್ರ ಮಾಹಿತಿ ಮತ್ತು ಪ್ರಸಾರ ಸಚಿವಾಲಯ ನಿರ್ದೇಶನ ನೀಡಿದೆ.

ಇಂಥ ವಿಷಯಗಳನ್ನು ಬಿತ್ತರಿಸುವುದು ಪರವಾನಗಿ ಒಪ್ಪಂದದ (ಜಿಒಪಿಎ) ಉಲ್ಲಂಘನೆಯಾಗುವುದು. ಒಪ್ಪಂದ ಉಲ್ಲಂಘಿಸುವ ವಾಹಿನಿಗಳ ವಿರುದ್ಧ ಕಠಿಣ ಕ್ರಮ ಕೈಗೊಳ್ಳುವುದಾಗಿಯೂ ಸಚಿವಾಲಯ ಎಚ್ಚರಿಸಿದೆ.

‘ರೇಡಿಯೊ ಜಾಕಿಗಳ ಪೈಕಿ ಕೆಲವರು ಬಳಸುವ ಭಾಷೆ ಆಕ್ರಮಣಕಾರಿ, ಅಸಭ್ಯ ಅಥವಾ ದ್ವಂದ್ವಾರ್ಥದಿಂದ ಕೂಡಿದ ಭಾಷೆ ಬಳಸುತ್ತಾರೆ. ಅವಹೇಳನಕಾರಿ ಹಾಗೂ ಕೀಳು ಅಭಿರುಚಿಯ ಮಾತುಗಳನ್ನೂ ಬಳಸುತ್ತಿರುವುದು ಕಂಡುಬಂದಿದೆ’ ಎಂದು ಸಚಿವಾಲಯ ಇತ್ತೀಚೆಗೆ ಹೇಳಿತ್ತು.

ಮೈಕ್ರೋಸಾಫ್ಟ್ ಸಿಇಒ ಸತ್ಯಾ ನಾದೆಲ್ಲಾ ಮಗ ಝೈನ್ ನಿಧನ

ನವದೆಹಲಿ (ಪಿಟಿಐ): ಮೈಕ್ರೋಸಾಫ್ಟ್‌ನ ಸಿಇಒ, ಭಾರತೀಯ ಅಮೆರಿಕನ್ ಸತ್ಯ ನಾದೆಲ್ಲಾ ಅವರ ಮಗ, ಝೈನ್ ನಾದೆಲ್ಲಾ (26) ಅವರು ಅನಾರೋಗ್ಯದಿಂದ ಸೋಮವಾರ ಬೆಳಗ್ಗೆ ಮೃತರಾಗಿದ್ದಾರೆ ಎಂದು ಮೈಕ್ರೋಸಾಫ್ಟ್ ಕಂಪನಿ ವಕ್ತಾರ ತಿಳಿಸಿದ್ದಾರೆ.

ಝೈನ್ ಅವರು ಹುಟ್ಟುವಾಗಲೇ ಸೆರೆಬ್ರಲ್ ಪಾಲ್ಸಿಯಿಂದ ಬಳಲುತ್ತಿದ್ದರು.

‘ಝೈನ್ ಅವರ ಸಂಗೀತದ ಬಗೆಗಿನ ಅಭಿರುಚಿ, ಮನಸೆಳೆಯುವ ಮುಗುಳ್ನಗು ಸದಾ ನೆನಪಲ್ಲಿ ಉಳಿಯುತ್ತದೆ. ಕುಟುಂಬಸ್ಥರು ಸೇರಿ ತನ್ನನ್ನು ಪ್ರೀತಿಸುವ ಎಲ್ಲರಿಗೂ ಅಗಾಧ ಸಂತಸವನ್ನು ನೀಡುತ್ತಿದ್ದರು' ಎಂದು ಚಿಲ್ಡ್ರನ್ಸ್ ಹಾಸ್ಪಿಟಲ್‌ನ ಸಿಇಒ ಜೆಫ್ ಸ್ಪೆರಿಂಗ್ ಹೇಳಿದ್ದಾರೆ. ಮೈಕ್ರೋಸಾಫ್ಟ್‌ನ ಕಾರ್ಯನಿರ್ವಾಹಕ ಅಧಿಕಾರಿಗಳ ಜೊತೆ ತಮ್ಮ ಹೇಳಿಕೆಯನ್ನು ಜೆಫ್ ಹಂಚಿಕೊಂಡಿದ್ದಾರೆ.

ಕೇದಾರನಾಥ: ಮೇ 6 ರಿಂದ ಪ್ರವೇಶ

ಉಖಿಮಠ (ಪಿಟಿಐ): ಈ ವರ್ಷ ಕೇದಾರನಾಥ ದೇಗುಲದ ಬಾಗಿಲುಗಳನ್ನು ಭಕ್ತರಿಗಾಗಿ ಮೇ 6 ರಂದು ಬೆಳಿಗ್ಗೆ 6.25 ಕ್ಕೆ ತೆರೆಯಲಾಗುವುದು. ಮಹಾಶಿವರಾತ್ರಿಯ ಪ್ರಯುಕ್ತ ಮಂಗಳವಾರ ಓಂಕಾರೇಶ್ವರ ದೇವಸ್ಥಾನದಲ್ಲಿ ಜರುಗಿದ ಸಮಾರಂಭದ ಬಳಿಕ ಕೇದಾರನಾಥ ದೇವಾಲಯವನ್ನು ತೆರೆಯುವ ದಿನಾಂಕ ಮತ್ತು ಸಮಯ ಪ್ರಕಟಿಸಲಾಯಿತು.

ಎಸ್‌ಟಿಗೆ ಲೋಹಾರ್ ಜಾತಿ ಸೇರಿಸಿ: ಅಧಿಸೂಚನೆ ರದ್ದು

ನವದೆಹಲಿ: ಲೋಹಾರ್ ಜಾತಿಯನ್ನು ಪರಿಶಿಷ್ಟ ಪಂಗಡಕ್ಕೆ (ಎಸ್‌ಟಿ) ಸೇರಿಸಿ ಬಿಹಾರ ಸರ್ಕಾರ ಹೊರಡಿಸಿದ್ದ ಅಧಿಸೂಚನೆಯನ್ನು ಸುಪ್ರೀಂ ಕೋರ್ಟ್ ರದ್ದುಗೊಳಿಸಿದೆ.

ನ್ಯಾಯಮೂರ್ತಿಗಳಾದ ಕೆ.ಎಂ. ಜೋಸೆಫ್ ಮತ್ತು ಹೃಷಿಕೇಶ್ ರಾಯ್ ಅವರಿದ್ದ ನ್ಯಾಯಪೀಠವು, ಲೋಹಾರ್ ಜಾತಿಯನ್ನು ಪರಿಶಿಷ್ಟ ಪಂಗಡ ಎಂದು 2016ರಲ್ಲಿ ಘೋಷಿಸಲು ಬಿಹಾರ ಸರ್ಕಾರ ತೆಗೆದುಕೊಂಡ ನಿರ್ಧಾರವನ್ನು ಕಾನೂನುಬಾಹಿರ ಎಂದು ಹೇಳಿದೆ.

ಬಿಲಿಯನೇರ್‌ಗಳ ಪಟ್ಟಿಯಲ್ಲಿ ದೇಶಕ್ಕೆ 3ನೆಯ ಸ್ಥಾನ

ದೇಶದಲ್ಲಿ ಅತಿಶ್ರೀಮಂತರ ಸಂಖ್ಯೆ ಶೇ 11ರಷ್ಟು ಹೆಚ್ಚಳ

ನವದೆಹಲಿ (ಪಿಟಿಐ): ₹ 226 ಕೋಟಿಗಿಂತ ಹೆಚ್ಚು ಮೌಲ್ಯದ ಆಸ್ತಿ ಹೊಂದಿರುವ ಅತಿಶ್ರೀಮಂತ ವ್ಯಕ್ತಿಗಳ ಸಂಖ್ಯೆಯು 2021ರಲ್ಲಿ ದೇಶದಲ್ಲಿ ಶೇಕಡ 11ರಷ್ಟು ಹೆಚ್ಚಳ ಕಂಡಿದೆ ಎಂದು ನೈಟ್ ಫ್ರ್ಯಾಂಕ್ ವರದಿ ಹೇಳಿದೆ. ಷೇರು ಮಾರುಕಟ್ಟೆಗಳು ಕಂಡ ಭಾರಿ ಪ್ರಮಾಣದ ಏರಿಕೆ, ಡಿಜಿಟಲ್ ಕ್ರಾಂತಿ ಈ ಹೆಚ್ಚಳಕ್ಕೆ ಪ್ರಮುಖ ಕಾರಣ ಎಂದು ವರದಿ ಹೇಳಿದೆ.

ಜಾಗತಿಕವಾಗಿ ಬಿಲಿಯನೇರ್‌ಗಳು (₹ 7,570 ಕೋಟಿಗಿಂತ ಹೆಚ್ಚು ಸಂಪತ್ತು ಹೊಂದಿರುವವರು) ಹೆಚ್ಚು ಇರುವ ದೇಶಗಳ ಪಟ್ಟಿಯಲ್ಲಿ ಭಾರತವು ಮೂರನೆಯ ಸ್ಥಾನದಲ್ಲಿ ಇದೆ. ಅಮೆರಿಕ (748 ಮಂದಿ ಬಿಲಿಯನೇರ್‌ಗಳು) ಮತ್ತು ಚೀನಾ (554) ಮೊದಲ ಎರಡು ಸ್ಥಾನಗಳಲ್ಲಿ ಇವೆ. ಭಾರತದಲ್ಲಿ 145 ಮಂದಿ ಬಿಲಿಯನೇರ್‌ಗಳು ಇದ್ದಾರೆ.

₹ 226 ಕೋಟಿಗಿಂತ ಹೆಚ್ಚು ಮೌಲ್ಯದ ಸಂಪತ್ತು ಹೊಂದಿರುವ ಅತಿಶ್ರೀಮಂತರ ಸಂಖ್ಯೆಯು 2021ರಲ್ಲಿ ಜಾಗತಿಕ ಮಟ್ಟದಲ್ಲಿ ಶೇ 9.3ರಷ್ಟು ಏರಿಕೆ ಕಂಡಿದೆ. ಭಾರತದಲ್ಲಿ ಇಷ್ಟು ಸಂಪತ್ತು ಹೊಂದಿರುವ ವ್ಯಕ್ತಿಗಳ ಸಂಖ್ಯೆ ಈಗ 13,637. 2020ರಲ್ಲಿ ಇಂಥವರ ಸಂಖ್ಯೆ 12,287 ಆಗಿತ್ತು.

ಅತಿಶ್ರೀಮಂತ ವ್ಯಕ್ತಿಗಳ ಸಂಖ್ಯೆಯು 2026ಕ್ಕೆ ಮೊದಲು ಶೇ 39ರ ಪ್ರಮಾಣದಲ್ಲಿ ಏರಿಕೆ ಕಂಡು, 19,006ಕ್ಕೆ ತಲುಪಲಿದೆ. ‘ಅತಿಶ್ರೀಮಂತರ ಸಂಖ್ಯೆಯು ಹೆಚ್ಚಳ ಆಗಿರುವುದಕ್ಕೆ ಮುಖ್ಯ ಕಾರಣ ಷೇರು ಮಾರುಕಟ್ಟೆಗಳಲ್ಲಿ ಕಂಡುಬಂದ ಏರಿಕೆ ಹಾಗೂ ಡಿಜಿಟಲ್ ಜಗತ್ತಿನಲ್ಲಿ ಆಗಿರುವ ಕ್ರಾಂತಿ. ದೇಶದ ಯುವಕರು, ಸ್ವಸಾಮರ್ಥ್ಯದಿಂದ ಮೇಲೆ ಬಂದವರು ಈ ಮಟ್ಟದಲ್ಲಿ ಸಂಪತ್ತು ಹೊಂದುತ್ತಿರುವುದು ಅಸಾಮಾನ್ಯವಾದುದು’ ಎಂದು ನೈಟ್ ಫ್ರ್ಯಾಂಕ್ ಇಂಡಿಯಾದ ಅಧ್ಯಕ್ಷ ಹಾಗೂ ವ್ಯವಸ್ಥಾಪಕ ನಿರ್ದೇಶಕ ಶಿಶಿರ್ ಬೈಜಲ್ ಹೇಳಿದ್ದಾರೆ.

ಬೆಂಗಳೂರಿನಲ್ಲಿ ಏರಿಕೆ ಹೆಚ್ಚು

ದೇಶದ ವಿವಿಧ ನಗರಗಳ ಪೈಕಿ ಅತಿಶ್ರೀಮಂತರ ಸಂಖ್ಯೆ ಹೆಚ್ಚಿನ ಪ್ರಮಾಣದಲ್ಲಿ ಏರಿಕೆ ಕಂಡಿದ್ದು ಬೆಂಗಳೂರಿನಲ್ಲಿ. ಇಲ್ಲಿ 2021ರಲ್ಲಿ ಇಂಥವರ ಪ್ರಮಾಣವು ಶೇ 17.1ರಷ್ಟು ಏರಿಕೆ ಕಂಡು 352ಕ್ಕೆ ತಲುಪಿದೆ.

ಬೆಂಗಳೂರಿನಲ್ಲಿ ಮುಂದಿನ ಐದು ವರ್ಷಗಳಲ್ಲಿ ಅತಿಶ್ರೀಮಂತರ ಪ್ರಮಾಣವು ಶೇ 89ರಷ್ಟು ಹೆಚ್ಚಳ ಆಗಲಿದ್ದು, ಇಂಥವರ ಸಂಖ್ಯೆಯು 2026ರ ವೇಳೆಗೆ 665ಕ್ಕೆ ತಲುಪಲಿದೆ.

ಜಿಎಸ್‌ಟಿ ಸಂಗ್ರಹ: ಫೆಬ್ರುವರಿಯಲ್ಲಿ ಶೇ 18ರಷ್ಟು ಏರಿಕೆ

ನವದೆಹಲಿ (ಪಿಟಿಐ): ಸರಕು ಮತ್ತು ಸೇವಾ ತೆರಿಗೆ (ಜಿಎಸ್‌ಟಿ) ವ್ಯವಸ್ಥೆಯ ಅಡಿಯಲ್ಲಿ ಫೆಬ್ರುವರಿಯಲ್ಲಿ ₹ 1.33 ಲಕ್ಷ ಕೋಟಿ ವರಮಾನ ಸಂಗ್ರಹ ಆಗಿದೆ. ಹಿಂದಿನ ವರ್ಷದ ಫೆಬ್ರುವರಿಯಲ್ಲಿ ಆದ ವರಮಾನ ಸಂಗ್ರಹಕ್ಕೆ ಹೋಲಿಸಿದರೆ ಶೇಕಡ 18ರಷ್ಟು ಹೆಚ್ಚಳ ಆಗಿದೆ.

ಪ್ರಸಕ್ತ ಹಣಕಾಸು ವರ್ಷದಲ್ಲಿ ಜಿಎಸ್‌ಟಿ ವ್ಯವಸ್ಥೆಯ ಅಡಿ ಐದನೆಯ ಬಾರಿ ₹ 1.30 ಲಕ್ಷ ಕೋಟಿಗಿಂತ ಹೆಚ್ಚು ವರಮಾನ ಸಂಗ್ರಹ ಆದಂತಾಗಿದೆ. ಅಲ್ಲದೆ, ಇದೇ ಮೊದಲ ಬಾರಿಗೆ ಸೆಸ್ ಸಂಗ್ರಹವು ₹ 10 ಸಾವಿರ ಕೋಟಿಗಿಂತ ಹೆಚ್ಚಾಗಿದೆ. ಇದು ಆಟೊಮೊಬೈಲ್ ಸೇರಿದಂತೆ ಕೆಲವು ಪ್ರಮುಖ ವಲಯಗಳಲ್ಲಿ ಚೇತರಿಕೆ ಕಂಡುಬಂದಿರುವುದನ್ನು ಸೂಚಿಸುತ್ತಿದೆ ಎಂದು ಕೇಂದ್ರ ಹಣಕಾಸು ಸಚಿವಾಲಯ ಹೇಳಿದೆ.

ಜನವರಿಯಲ್ಲಿ ಜಿಎಸ್‌ಟಿ ಸಂಗ್ರಹವು ದಾಖಲೆಯ ₹ 1.40 ಲಕ್ಷ ಕೋಟಿ ತಲುಪಿತ್ತು.

ಫೆಬ್ರುವರಿಯಲ್ಲಿ ಸಂಗ್ರಹ ಆಗಿರುವ ಜಿಎಸ್‌ಟಿ ವರಮಾನದಲ್ಲಿ ಕೇಂದ್ರ ಜಿಎಸ್‌ಟಿ ಪಾಲು ₹ 24,435 ಕೋಟಿ, ರಾಜ್ಯ ಜಿಎಸ್‌ಟಿ ಪಾಲು ₹ 30,779 ಕೋಟಿ ಹಾಗೂ ಏಕೀಕೃತ ಜಿಎಸ್‌ಟಿ ಪಾಲು ₹ 67,471 ಕೋಟಿ (ಇದರಲ್ಲಿ ಆಮದು ವಸ್ತುಗಳ ಮೇಲಿನ ತೆರಿಗೆಯೂ ಸೇರಿದೆ).

ಫೆಬ್ರುವರಿಯಲ್ಲಿ 28 ದಿನಗಳು ಮಾತ್ರ ಇರುವ ಕಾರಣ ವರಮಾನ ಸಂಗ್ರಹವು ಜನವರಿಗೆ ಹೋಲಿಸಿದರೆ ಸಹಜವಾಗಿಯೇ ತುಸು ಕಡಿಮೆ ಇರುತ್ತದೆ ಎಂದು ಸಚಿವಾಲಯ ಹೇಳಿದೆ.

ಫೆಬ್ರುವರಿಯಲ್ಲಿ ಆಗಿರುವ ವರಮಾನ ಸಂಗ್ರಹವನ್ನು ಓಮೈಕ್ರಾನ್ ತಡೆಯಲು ವಿವಿಧ ರಾಜ್ಯಗಳು ಹೇರಿದ್ದ ಭಾಗಶಃ ಲಾಕ್‌ಡೌನ್, ವಾರಾಂತ್ಯದ ಕರ್ಫ್ಯೂ, ರಾತ್ರಿ ಕರ್ಫ್ಯೂ ಮತ್ತು ಇತರ ಹಲವು ನಿರ್ಬಂಧಗಳ ಹಿನ್ನೆಲೆಯಲ್ಲಿ ನೋಡಬೇಕು ಎಂದು ಸಚಿವಾಲಯ ಹೇಳಿದೆ.

ಪ್ರಶ್ನೋತ್ತರ

ಪ್ರಮೋದ ಶ್ರೀಕಾಂತ ದೈತೋಟ
ತೆರಿಗೆ ಮತ್ತು ವೈಯಕ್ತಿಕ ಹಣಕಾಸು ತಜ್ಞ

ಕೆ. ವೀರಣ್ಣ, ರಾಯಚೂರು

- **ಪ್ರಶ್ನೆ: ನಾನು 1990ರಲ್ಲಿ ಮನೆ ಕಟ್ಟಿಸಿದ್ದೇನೆ. ಈಗ ಅದನ್ನು ಮಾರಾಟ ಮಾಡಬೇಕು ಅಂದುಕೊಂಡಿದ್ದೇನೆ. ಅದು ಸುಮಾರು ₹ 25-30 ಲಕ್ಷಕ್ಕೆ ಮಾರಾಟವಾಗಬಹುದು. ಅದರಿಂದ ಬರುವ ಹಣದಿಂದ ₹ 10-15 ಲಕ್ಷದೊಳಗೆ ಒಂದು ಮನೆಯನ್ನು ಕಟ್ಟಿಸಿಕೊಳ್ಳಬೇಕೆಂದಿದ್ದೇನೆ. ಇದರಿಂದ ನನಗೆ ಬಂಡವಾಳ ವೃದ್ಧಿ ತೆರಿಗೆ ಬರುವುದೇ? ಹಣದುಬ್ಬರ ಸೂಚ್ಯಂಕ 1990ರಲ್ಲಿ 11.79 ಮತ್ತು 2022ರಲ್ಲಿ ಅಂದಾಜು 5.70 ಇದೆ. ಇದರ ಪ್ರಕಾರ ಮನೆಯ ಪ್ರಸ್ತುತ ಬೆಲೆ ಅಂದಾಜಿಸುವುದು ಹೇಗೆ?**

ಉತ್ತರ: ಯಾವುದೇ ಬಂಡವಾಳ ಆಸ್ತಿ ಮಾರಾಟ ಮಾಡಿದಾಗ ಆದಾಯ ತೆರಿಗೆ ಕಾನೂನಿನ ಅನ್ವಯ ಶೇಕಡ 20ರಷ್ಟು ಬಂಡವಾಳ ವೃದ್ಧಿ ತೆರಿಗೆ ಅನ್ವಯಿಸುತ್ತದೆ. ನೀವು ಮೇಲೆ ಉಲ್ಲೇಖಿಸಿರುವುದು ಹಣದುಬ್ಬರದ ಸೂಚ್ಯಂಕವಷ್ಟೇ? ಆದಾಯ ತೆರಿಗೆ ಲೆಕ್ಕಹಾಕಲು ಬೇರೆ ಸೂಚ್ಯಂಕವನ್ನು ಪ್ರತಿ ವರ್ಷ ಆದಾಯ ತೆರಿಗೆ ಇಲಾಖೆ ಬಿಡುಗಡೆ ಮಾಡುತ್ತದೆ. ಪ್ರಸ್ತುತ 2001-02ನೇ ಸಾಲಿನಿಂದ ಅನ್ವಯಿಸುವಂತೆ ಹಳೆಯ ಸೂಚ್ಯಂಕವನ್ನು (1981-2017) ಮರು ಹೊಂದಾಣಿಕೆ ಮಾಡಿ ಅದರ ಮೌಲ್ಯ 100 ಎಂದು ಪರಿಗಣಿಸಲಾಗಿದೆ. ಆದೇ ರೀತಿ ಆರ್ಥಿಕ ವರ್ಷ 2021-22ಕ್ಕೆ ಅನ್ವಯವಾಗುವ ಮೌಲ್ಯ 317 ಆಗಿದೆ. ನೀವು ಮುಂದಿನ ವರ್ಷ ಮನೆಯನ್ನು ಮಾರಾಟ ಮಾಡಿದಾಗ ಪರಿಗಣಿಸಬೇಕಾದ ಮೌಲ್ಯ ತುಸು ವೃದ್ಧಿಯಾಗಬಹುದು.



ನಿಮ್ಮ ಮನೆ 2001ರ ಏಪ್ರಿಲ್ 1ಕ್ಕಿಂತ ಹಿಂದೆಯೇ ಕಟ್ಟಿಸಿರುವ ಕಾರಣ, ಆ ದಿನದಂದು (2001ರ ಏಪ್ರಿಲ್ 1) ನಿಮ್ಮ ಆಸ್ತಿಯ ನ್ಯಾಯೋಚಿತ ಮೌಲ್ಯ (Fare Market Value) ಏನೆಂಬುದನ್ನು ತಿಳಿದುಕೊಳ್ಳಿ. ಈ ಮೌಲ್ಯವನ್ನು ಆಸ್ತಿ ಮಾರಾಟ ಮಾಡಲಾದ ವರ್ಷಕ್ಕೆ ಅನ್ವಯವಾಗುವ ಸೂಚ್ಯಂಕದಿಂದ (ಉದಾಹರಣೆಗೆ 317) ಗುಣಿಸಿ ಬಂದ ಮೊತ್ತವನ್ನು ಖರೀದಿಸಿದ ವರ್ಷಕ್ಕೆ ಅನ್ವಯಿಸುವ ಸೂಚ್ಯಂಕದಿಂದ ಭಾಗಿಸಿದಾಗ ಬರುವ ಸಂಖ್ಯೆಯೇ ನಿಮ್ಮ ಆಸ್ತಿಯ ಹಣದುಬ್ಬರ ಸೂಚ್ಯಂಕ ಸರಿದೂಗಿಸಿದ ಪ್ರಸ್ತುತ ಮೌಲ್ಯ. ನಿಮ್ಮ ಆಸ್ತಿ 2001ಕ್ಕಿಂತ ಮೊದಲೇ ಖರೀದಿಸಿರುವ ಕಾರಣ, ಮೇಲೆ ತಿಳಿಸಿರುವಂತೆ, ಈ ಮೌಲ್ಯಾಂಕ 100. ಮಾರಾಟದ ಮೌಲ್ಯ ಹಣದುಬ್ಬರ ಸರಿದೂಗಿಸಿದ ಮೊತ್ತಕ್ಕಿಂತ ಅಧಿಕವಿದ್ದರೆ ಲಾಭ, ಕಡಿಮೆ ಇದ್ದರೆ ನಷ್ಟ.

ಆದಾಯ ತೆರಿಗೆಯ ನಿಯಮ 54ರ ಪ್ರಕಾರ ಹೊಸ ಮನೆಯ ಖರೀದಿ ಅಥವಾ ನಿರ್ಮಾಣಕ್ಕೆ ಮನೆಯ ಮಾರಾಟದಿಂದ ಬರುವ ಬಂಡವಾಳ ವೃದ್ಧಿಯ ಮೊತ್ತಕ್ಕೆ ತೆರಿಗೆ ವಿನಾಯಿತಿ ಇದೆ. ಮೇಲಿನ ಲೆಕ್ಕದಂತೆ, ನಿಮ್ಮ ಹೊಸ ಮನೆಯ ಖರೀದಿ/ನಿರ್ಮಾಣ ವೆಚ್ಚ, ಲಾಭಕ್ಕಿಂತ ಅಧಿಕ ಇದ್ದರೆ, ಸಂಪೂರ್ಣ ತೆರಿಗೆ ವಿನಾಯಿತಿ ಸಿಗುತ್ತದೆ. ಒಂದು ವೇಳೆ, ಅದಕ್ಕಿಂತ ಕಡಿಮೆ ಇದ್ದರೆ, ವ್ಯತ್ಯಾಸದ ಮೊತ್ತದ ಮೇಲಷ್ಟೇ ತೆರಿಗೆ ಅನ್ವಯಿಸುತ್ತದೆ. ಒಟ್ಟಾರೆ ಮೌಲ್ಯ ನಷ್ಟವಾದರೆ, ಮುಂದಿನ ಎಂಟು ವರ್ಷ ಅದೇ ರೀತಿಯ ಆದಾಯವಿದ್ದ ಸನ್ನಿವೇಶದಲ್ಲಿ ಅದರೊಡನೆ ವಜಾ ಮಾಡುವ ಅವಕಾಶವಿದೆ.

ರಮೇಶ ಹೇಮರೆಡ್ಡಿ, ಕನಕಗಿರಿ, ಕೊಪ್ಪಳ

- **ಪ್ರಶ್ನೆ: ನಾನು 2020ರ ಡಿಸೆಂಬರ್ ತಿಂಗಳಿನಿಂದ ಉಪನ್ಯಾಸಕನಾಗಿ ಸರ್ಕಾರಿ ಪದವಿಪೂರ್ವ ಕಾಲೇಜಿನಲ್ಲಿ ಕಾರ್ಯ ನಿರ್ವಹಿಸುತ್ತಿದ್ದೇನೆ. ನನಗೆ ಅಂದಿನಿಂದ ಬರಬೇಕಾಗಿದ್ದ ವೇತನವು 2021ರ ಮೇ ತಿಂಗಳಲ್ಲಿ ಸಂದಾಯವಾಗಿದೆ. ಈಗ ನಾನು 2021-22ನೇ ಹಣಕಾಸು ವರ್ಷದಲ್ಲಿ ಈ ವೇತನ ಬಾಕಿ ಹಣವನ್ನು ಪ್ರಸ್ತುತ ವರ್ಷದ ಆದಾಯಕ್ಕೆ ಸೇರಿಸಿ ಆದಾಯ ತೆರಿಗೆ ಪಾವತಿಸಬೇಕೇ? ಈ ವೇತನ ಬಾಕಿ ಹಣ ಸೇರಿಸದಿದ್ದರೆ ನನ್ನ ಪ್ರಸ್ತುತ ವರ್ಷದ ತೆರಿಗೆಗೊಳಪಡುವ ಆದಾಯ ₹ 5 ಲಕ್ಷಕ್ಕಿಂತ ಕಡಿಮೆ ಇರುತ್ತದೆ. 2020-21ನೇ ಸಾಲಿನಲ್ಲಿ ನಾನು ಯಾವುದೇ ಕೆಲಸದಲ್ಲಿ ಇರಲಿಲ್ಲ. ಆದ್ದರಿಂದ ನನಗೆ ಯಾವುದೇ ಆದಾಯವಿರಲಿಲ್ಲ. ಈ ಬಗ್ಗೆ ನನಗೆ ಮಾರ್ಗದರ್ಶನ ನೀಡಿ. ತಮ್ಮ ಮಾರ್ಗದರ್ಶನದಿಂದ ನನ್ನ ಹಾಗೆ 2020ರ ಡಿಸೆಂಬರ್‌ನಲ್ಲಿ ಕೆಲಸಕ್ಕೆ ಸೇರಿ 2021ರ ಮೇ ತಿಂಗಳಲ್ಲಿ ವೇತನ ಬಾಕಿ ರೂಪದಲ್ಲಿ ಹಣ ಪಡೆದ ಅನೇಕರಿಗೆ ಅನುಕೂಲವಾಗುತ್ತದೆ.**

ಉತ್ತರ: ಪ್ರತಿ ವರ್ಷ ಮೇ ತಿಂಗಳೊಳಗೆ, ಉದ್ಯೋಗದಾತರು ತಮ್ಮ ಉದ್ಯೋಗಿಗಳಿಗೆ ಆದಾಯ ತೆರಿಗೆ ಕಾನೂನಿನನ್ವಯ ‘ಫಾರಂ 16’ ಕೊಡಬೇಕು. ಉದ್ಯೋಗಿಗಳ ವೇತನದಿಂದ ಯಾವುದೇ ತೆರಿಗೆ ಕಡಿತಗೊಳಿಸಿದ್ದರೆ ಅಥವಾ ಅವರ ವಾರ್ಷಿಕ ಆದಾಯ, ತೆರಿಗೆ ವಿನಾಯಿತಿಯ ಗರಿಷ್ಠ ಮೊತ್ತವಾದ ₹ 2.50 ಲಕ್ಷಕ್ಕಿಂತ ಅಧಿಕವಿದ್ದರೆ ಇದನ್ನು ಕೊಡಬೇಕು. ನಿಮ್ಮ ವೇತನ ಬಾಕಿ ಮೊತ್ತವನ್ನು ಹೊರತುಪಡಿಸಿದ ಆದಾಯ ₹ 5 ಲಕ್ಷಕ್ಕಿಂತ ಕಡಿಮೆ ಎಂದಿದ್ದೀರಿ. ಇದು ₹ 2.50 ಲಕ್ಷಕ್ಕಿಂತ ಅಧಿಕವೆಂದು ಭಾವಿಸೋಣ. ಹಾಗಾಗಿ ನೀವು ತೆರಿಗೆ ವಿವರ ಸಲ್ಲಿಸುವುದು ಅನಿವಾರ್ಯ. ನಿಮ್ಮಲ್ಲಿ ಆದಾಯ ತೆರಿಗೆ ವಿನಾಯಿತಿ ಕಲ್ಪಿಸುವ ಯಾವುದೇ ಹೂಡಿಕೆಗಳಿದ್ದಲ್ಲಿ ಅದನ್ನು ನಿಮ್ಮ ಒಟ್ಟು ಆದಾಯದಿಂದ ಕಡಿತಗೊಳಿಸಲಾಗುತ್ತದೆ. ಆ ಮಾಹಿತಿಯನ್ನು ನಿಮ್ಮ ಸಂಸ್ಥೆಗೆ ಕೊಡಿ. ಒಟ್ಟು ತೆರಿಗೆ ಲೆಕ್ಕ ಹಾಕುವಾಗ ನೀವು ತೆರಿಗೆ ಕಟ್ಟುವ ಪ್ರಮೇಯ ಬರದಿದ್ದರೂ, ನಿಯಮದ ಅನ್ವಯ ಆದಾಯ ಹಾಗೂ ಕಡಿತಗಳನ್ನು ತೋರಿಸಿ ವಿವರ ಸಲ್ಲಿಸಬೇಕಾಗುತ್ತದೆ.

ವೇತನ ಬಾಕಿ ಮೊತ್ತಕ್ಕೆ ಸಂಬಂಧಪಟ್ಟಂತೆ, ನಿಮ್ಮ ಸಂಸ್ಥೆ ಕಳೆದ ವರ್ಷದ ನಾಲ್ಕು ತಿಂಗಳ ಆದಾಯವನ್ನು 2021-22ನೇ ಹಣಕಾಸು ವರ್ಷದಲ್ಲಿ ಪಾವತಿಸಿರುವುದರಿಂದ ಆ ಮೊತ್ತವನ್ನು ಪ್ರಸ್ತುತ ವರ್ಷದ ‘ಫಾರಂ 16’ರಲ್ಲಿ ಸೇರ್ಪಡೆಗೊಳಿಸಬೇಕಾಗುತ್ತದೆ. ಆದರೆ ಆದಾಯವು 2020-21ಕ್ಕೆ ಸಂಬಂಧಿಸಿದ್ದಾಗಿರುವ ಕಾರಣ ನೀವು ತೆರಿಗೆ ವಿವರ ಸಲ್ಲಿಸುವಾಗ ಸೆಕ್ಷನ್ 89ರ ಅಡಿ ಯಾವುದೇ ಹಿಂದಿನ ವರ್ಷಗಳ ವೇತನ ಬಾಕಿಗೆ ಸಂಬಂಧಪಟ್ಟಂತೆ ತೆರಿಗೆ ರಿಯಾಯಿತಿ ಪಡೆಯಬಹುದು. ಇದಕ್ಕಾಗಿ ಆದಾಯ ತೆರಿಗೆಯ ‘ಫಾರಂ 10ಇ’ಯನ್ನು ಮೊದಲು ಸಲ್ಲಿಸಬೇಕು. ವಿವರ ಸಲ್ಲಿಸುವ ಮೊದಲು ಎಲ್ಲಾ ಮಾಹಿತಿಯೊಡನೆ ತೆರಿಗೆ ಸಲಹೆಗಾರರನ್ನು ಸಂಪರ್ಕಿಸಿ.

ಹಣಕಾಸು, ತೆರಿಗೆ ಸಮಸ್ಯೆಗೆ ಪರಿಹಾರ

ಹಣಕಾಸಿಗೆ ಸಂಬಂಧಿಸಿದ ಪ್ರಶ್ನೆಗಳನ್ನು ಪತ್ರದಲ್ಲಿ (ದೂರವಾಣಿ ಸಂಖ್ಯೆ ಸಹಿತ) ಬರೆದು ಕಳುಹಿಸಿ.
ವಿಳಾಸ: ಪ್ರಶ್ನೋತ್ತರ, ವಾಣಿಜ್ಯ ವಿಭಾಗ, ಪ್ರಜಾವಾಣಿ, ನಂ.75, ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು-560001.
ಇ-ಮೇಲ್: businessdesk@prajavani.co.in

ಉಕ್ರೇನ್ ರಾಜಧಾನಿ ಕೀವ್‌ನಿಂದ ಉತ್ತರಕ್ಕೆ ಸುಮಾರು 60 ಕಿ.ಮೀ.ನಷ್ಟು ದೂರದವರೆಗೆ ರಷ್ಯಾ ಪಡೆಗಳು ಬೀಡುಬಿಟ್ಟಿರುವುದನ್ನು ಅಮೆರಿಕದ ‘ಮ್ಯಾಕ್ಸರ್ ಟೆಕ್ನಾಲಜೀಸ್’ ಕಂಪನಿಯ ಉಪಗ್ರಹ ಚಿತ್ರ ಸೆರೆ ಹಿಡಿದೆ. ಶಸ್ತ್ರಸಜ್ಜಿತ ವಾಹನಗಳು, ಟ್ಯಾಂಕ್‌ಗಳು, ಫಿರಂಗಿ, ಬೆಂಗಾವಲು ವಾಹನಗಳು ಇದರಲ್ಲಿ ಸೇರಿವೆ. ದಕ್ಷಿಣ ಬೆಲರೂಸ್‌ನಲ್ಲಿ ಯುದ್ಧ ಹೆಲಿಕಾಪ್ಟರ್‌ಗಳನ್ನು ಮತ್ತು ಭೂಸೇನೆಯನ್ನು ನಿಯೋಜಿಸಿರುವುದೂ ಉಪಗ್ರಹ ಚಿತ್ರದಿಂದ ಗೊತ್ತಾಗಿದೆ –ಎಪಿ ಚಿತ್ರ

ಮುಂಬೈ ಧಾರಣೆ

ಶೇಂಗಾ

01-03-2022

ಜಾವಾ 70/80(ಹೊಸ)	10100-10200
ಜಾವಾ 80/90(ಹೊಸ)	9600-9700
ದಪ್ಪ ಮಧ್ಯಪ್ರದೇಶ(ಹೊಸ)	9600-9650
ದಪ್ಪ ಗುಜರಾತ್(ಹೊಸ)	8500-8600

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1550 (1495)
ಒಂದು ವಾರದ ಡೆಲಿವರಿ	1545 (1490)
ಸೋಯಾ ಕಚ್ಚಾ	1550 (1465)
ಪಾಮ್ ವಾರದ ಡೆಲಿವರಿ	1518 (1415)
ಸೂರ್ಯಕಾಂತಿ ಎಣ್ಣೆ ಕಚ್ಚಾ	--- (---)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ	51,500 (50,600)
ಬೆಳ್ಳಿ ಕೆ.ಜಿ	66,000 (65,400)

ಆವರಣದಲ್ಲಿ ಹಿಂದಿನ ದಿನದ ಧಾರಣೆ

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು

100 ಮೊಟ್ಟೆಗೆ	₹390
12 ಮೊಟ್ಟೆಗೆ	₹58

ಮೈಸೂರು

100 ಮೊಟ್ಟೆಗೆ	₹395

ರಾಮನಗರ ರೇಷ್ಮೆ

ಮಿಶ್ರತಳಿ	₹400-742
ದ್ವಿತಳಿ	₹370-900

ಖಾದ್ಯ ತೈಲ ಮುಂಬೈ

(10 ಕೆಜಿಗೆ)

ಶೇಂಗಾ (ರಿಫೈನ್ಡ್)	₹1540 (1485)
ಸೋಯಾ (ರಿಫೈನ್ಡ್)	₹1580 (1520)
ಸೂರ್ಯಕಾಂತಿ (ರಿಫೈನ್ಡ್)	--- (----)
ಪಾಮೋಲಿನ್	₹1520 (1417)

ನೆಲದಿಂದ ಆಕಾಶಕ್ಕೆ ಚಿಮ್ಮುವ ಉಕ್ರೇನ್ ಕ್ಷಿಪಣಿಗಳಿಗೆ ರಷ್ಯಾ ಪಡೆ ತತ್ತರ

ಉಕ್ರೇನ್ ಆಕ್ರಮಣ: ರಷ್ಯಾಕ್ಕೆ ಹಿನ್ನಡೆ?

ವಾಷಿಂಗ್ಟನ್ (ಎಪಿ): ಯುದ್ಧ ಜಯಿಸಲು ಯಾವಾಗಲೂ ವಾಯುಪ್ರದೇಶವನ್ನು ಕ್ಷಿಪ್ರಗತಿಯಲ್ಲಿ ನಿಯಂತ್ರಣಕ್ಕೆ ತೆಗೆದುಕೊಳ್ಳುವುದು ನಿರ್ಣಾಯಕವಾಗಿರುತ್ತದೆ. ಉಕ್ರೇನ್‌ನಲ್ಲಿ ರಷ್ಯಾದ ಆಕ್ರಮಣ ಆರನೇ ದಿನಕ್ಕೆ ಕಾಲಿಟ್ಟರೂ ಆ ದೇಶ ತೋರುತ್ತಿರುವ ಪ್ರತಿರೋಧ ಗಮನಿಸಿದರೆ ರಷ್ಯಾಕ್ಕೆ ಆರಂಭದಲ್ಲೇ ಹಿನ್ನಡೆ ಆಗಿದೆ ಎನ್ನುವ ವಿಶ್ಲೇಷಣೆ ಈಗ ಜಾಗತಿಕ ಮಟ್ಟದಲ್ಲಿ ಕೇಳಿಬರುತ್ತಿದೆ.

ರಷ್ಯಾದ ಅಪಾರ ಸೇನಾ ಬಲದ ನಡುವೆಯೂ ಪುಟ್ಟ ರಾಷ್ಟ್ರ ಉಕ್ರೇನ್ ಇನ್ನೂ ತಲೆಬಾಗದಿರುವುದನ್ನು ಜಗತ್ತಿನ ಹಲವು ರಾಷ್ಟ್ರಗಳು ಚಕಿತ ದೃಷ್ಟಿಯಲ್ಲಿ ನೋಡುತ್ತಿವೆ.

ಆಕ್ರಮಣಕ್ಕಿಳಿದ ದೇಶ, ತನ್ನ ಶತ್ರುಪಡೆಯ ವಾಯು ಮತ್ತು ಕ್ಷಿಪಣಿ ರಕ್ಷಣಾ ವ್ಯವಸ್ಥೆಯನ್ನು ನಾಶಪಡಿಸಲು ಅಥವಾ ಕನಿಷ್ಠ ಪಕ್ಷ ನಿಷ್ಕ್ರಿಯಗೊಳಿಸಲು ಆರಂಭದಲ್ಲೇ ಪ್ರಯತ್ನಿಸುತ್ತದೆ. ಏಕೆಂದರೆ ವಾಯುಪ್ರದೇಶದಲ್ಲಿ ಸಾಧಿಸುವ ಪ್ರಾಬಲ್ಯವು ಭೂಸೇನಾ ಪಡೆ ತ್ವರಿತವಾಗಿ ಮುನ್ನುಗ್ಗಲು ಮತ್ತು ಕಡಿಮೆ ಹಾನಿಯೊಂದಿಗೆ ಹೋರಾಡಲು ಅನುವು ಮಾಡಿಕೊಡುತ್ತದೆ. ಉಕ್ರೇನ್‌ನ ವಾಯು ರಕ್ಷಣಾ ಮತ್ತು ಮಿಲಿಟರಿ ಸಂವಹನಗಳನ್ನು ನಿಷ್ಕ್ರಿಯಗೊಳಿಸಲು ರಷ್ಯಾ ತನ್ನ ಎಲೆಕ್ಟ್ರಾನಿಕ್ ಯುದ್ಧಾಸ್ತ್ರಗಳು ಮತ್ತು ಸೈಬರ್ ಸಾಮರ್ಥ್ಯ ಬಳಸಬಹುದೆಂದು ಅಮೆರಿಕದ ಮಿಲಿಟರಿ ಅಧಿಕಾರಿಗಳು ಅಂದಾಜು ಮಾಡಿದ್ದರು.

> **ಉಕ್ರೇನ್‌ನ ವಾಯು ರಕ್ಷಣಾ ಸಾಮರ್ಥ್ಯ ಕುಗ್ಗುತ್ತಿದ್ದರೂ ಸಹ, ಅದು ಈವರೆಗೂ ಮಣಿಯದೆ ಹೋರಾಡುತ್ತಿರುವುದು ನನಗೆ ಅತೀವ ಆಶ್ಚರ್ಯ ತಂದಿದೆ**
> **ಫಿಲಿಪ್ ಬ್ರೀಡ್‌ಲೋವ್,** ವಾಯುಪಡೆ ನಿವೃತ್ತ ಜನರಲ್, ಯುರೋಪ್‌ನಲ್ಲಿ ನ್ಯಾಟೋ ಪಡೆಗಳಿಗೆ ಕಮಾಂಡರ್ ಆಗಿದ್ದವರು

ವಾಯು ದಾಳಿಯಲ್ಲಿ ಕ್ಷಿಪ್ರ ಪ್ರಾಬಲ್ಯ ಮೆರೆಯಲು ಸಾಧ್ಯವಾಗದಿರುವುದು ರಷ್ಯಾದ ಯುದ್ಧ ಕೌಶಲದ ನ್ಯೂನತೆಗಳಲ್ಲಿ ಒಂದಾಗಿದೆ. ಹಾಗಾಗಿಯೇ ಉಕ್ರೇನ್‌ನ ರಾಜಧಾನಿ ಕೀವ್ ಮತ್ತು ಅದರ ಎರಡನೇ ಅತಿದೊಡ್ಡ ನಗರ ಹಾರ್ಕಿವ್ ವಶಪಡಿಸಿಕೊಳ್ಳಲು ರಷ್ಯಾ ಸೇನೆ ತಿಣುಕಾಡುವಂತಾಗಿದೆ.

ರಷ್ಯಾ ಅಧ್ಯಕ್ಷ ವ್ಲಾಡಿಮಿರ್ ಪುಟಿನ್ ತಮ್ಮ ಪ್ರಬಲ ಸೇನಾ ಬಲದ ಎದುರು ಉಕ್ರೇನ್ ರಕ್ಷಣಾ ಪಡೆ ಸುಲಭ ತುತ್ತು ಎಂದೇ ಪರಿಗಣಿಸಿದ್ದರು. ಹಾಗಾಗಿಯೇ ವಾಯು ದಾಳಿಯ ಪ್ರಾಬಲ್ಯ ಬಿಟ್ಟು, ಕೀವ್ ನಗರವನ್ನು ಕ್ಷಿಪ್ರವಾಗಿ ವಶಪಡಿಸಿಕೊಂಡರೆ ಉಕ್ರೇನ್ ಪೂರ್ವ ಹಾಗೂ ಪಶ್ಚಿಮದ ಭಾಗದಲ್ಲಿ ಶತ್ರು ಸೇನೆಯನ್ನು ಸುಲಭವಾಗಿ ಸೆದೆ ಬಡಿಯಬಹುದೆಂಬ ಊಹೆಯ ಮೇಲೆ ಯುದ್ಧ ಕಾರ್ಯತಂತ್ರ ಹೆಣೆದಿದ್ದೇ ರಷ್ಯಾ ವೈಫಲ್ಯಕ್ಕೆ ಕಾರಣವಾಗಿರುವ ಸಂಭವನೀಯತೆ ಹೆಚ್ಚಿದೆ ಎನ್ನುವುದು ವಿಶ್ಲೇಷಕರ ಮಾತು.

‘ಇದೇ ಪುಟಿನ್ ಕಾರ್ಯತಂತ್ರವಾಗಿದ್ದರೆ ಅದರಲ್ಲಿ ಸದ್ಯ ರಷ್ಯ ಖಂಡಿತಾ ವಿಫಲವಾಗಿದೆ. ಏಕೆಂದರೆ, ಆಕ್ರಮಣ ಆರಂಭಿಸಿ ವಾರ ಕಳೆಯುತ್ತಾ ಬಂದಿದೆ. ಸದ್ಯದ ಸ್ಥಿತಿ ಗಮನಿಸಿದರೆ ಆಕ್ರಮಣಕ್ಕೆ ಇಳಿದಿರುವ ಪಡೆಗೆ ಸಂಘರ್ಷದ ಹಾದಿ ತುಂಬಾ ಕಠಿಣವಾಗುತ್ತಿದೆ. ರಷ್ಯಾ ಪಡೆಗಳಿಗೆ ಇನ್ನಷ್ಟು ಅತ್ಯುತ್ತಮ ಮತ್ತು ಶಕ್ತಿಶಾಲಿ ಶಸ್ತ್ರಾಸ್ತ್ರಗಳ ಅವಶ್ಯಕತೆ ಇರುವುದನ್ನು ಇದು ಎತ್ತಿ ತೋರಿಸುತ್ತಿದೆ. ಹಾಗೆ ನೋಡಿದರೆ, ರಷ್ಯಾ ಇನ್ನೂ ಗಡಿಯಲ್ಲಿ ಒಟ್ಟುಗೂಡಿದ ಸಂಪೂರ್ಣ ಬಲದೊಂದಿಗೆ ಯುದ್ಧಕ್ಕೆ ಸನ್ನದ್ಧವಾದಂತೆ ಕಾಣಿಸುತ್ತಿಲ್ಲ. ರಷ್ಯಾ ಪಡೆಯ ಕಾಲು ಭಾಗದಷ್ಟು ಯೋಧರಿಗೆ ಉಕ್ರೇನ್ ಗಡಿ ದಾಟಲು ಸಾಧ್ಯವಾಗಿಯೇ ಇಲ್ಲ’ ಎಂದು ಹೆಸರು ಬಹಿರಂಗಪಡಿಸದ ಷರತ್ತಿನೊಂದಿಗೆ ಅಮೆರಿಕದ ಹಿರಿಯ ಅಧಿಕಾರಿಯೊಬ್ಬರು ಸೋಮವಾರ ತಿಳಿಸಿದ್ದಾರೆ.

ಎರಡೂ ಕಡೆಯ ಸೇನಾ ಪಡೆಗಳ ಆಂತರಿಕ ಸಾಮರ್ಥ್ಯವನ್ನು ಹೊರೆಗಚ್ಚಿ ವಿಶ್ಲೇಷಿಸಿರುವ ಅಧಿಕಾರಿ, ‘ನೆಲದಿಂದ ಆಕಾಶಕ್ಕೆ ಚಿಮ್ಮುವ ಬಹಳಷ್ಟು ಕ್ಷಿಪಣಿಗಳನ್ನು ಉಕ್ರೇನ್ ಹೊಂದಿದೆ. ಈ ಕ್ಷಿಪಣಿಗಳು ಯುದ್ಧ ವಿಮಾನ ಮತ್ತು ಹೆಲಿಕಾಪ್ಟರ್‌ಗಳನ್ನು ಹೊಡೆದುರುಳಿಸಬಲ್ಲಂತಹವು. ಇದು ರಷ್ಯಾ ಪಡೆಯ ಯುದ್ಧ ವಿಮಾನಗಳು ಮತ್ತು ಹೆಲಿಕಾಪ್ಟರ್‌ಗಳ ಧ್ವಂಸಕ್ಕೆ ಕಾರಣಗಳಲ್ಲಿ ಒಂದಾಗಿದೆ. ಮತ್ತೊಂದು ಕಾರಣವೆಂದರೆ, ಉಕ್ರೇನ್‌ನ ವಾಯು ರಕ್ಷಣಾ ವ್ಯವಸ್ಥೆಯು ಕೇಂದ್ರೀಕೃತವಾಗಿಲ್ಲ. ಅದು ದೇಶದಾದ್ಯಂತ ಹರಡಿರಲೂಬಹುದು’ ಎಂದು ಹೇಳಿದ್ದಾರೆ.

ಉಕ್ರೇನ್ ರಣಾಂಗಣದಲ್ಲಿ ಈವರೆಗೆ ರಷ್ಯಾ ಭೂಸೇನೆ, ವಾಯುಪಡೆಗೆ ಪ್ರಾಬಲ್ಯ ಮೆರೆಯಲು ವಿಫಲವಾಗದಿರುವುದಕ್ಕೆ ರಷ್ಯಾ ಕಮಾಂಡರ್‌ಗಳು ಹತಾಶಗೊಂಡಿರುವಂತೆ ತೋರುತ್ತಿದೆ. ಇದಕ್ಕೆ ಪ್ರತಿಕ್ರಿಯೆಯಾಗಿ ರಷ್ಯಾ ಪಡೆ ಕೀವ್ ನಗರದ ಮೇಲೆ ಇನ್ನಷ್ಟು ಹೆಚ್ಚು ಆಕ್ರಮಣಕಾರಿ, ದೊಡ್ಡ ಪ್ರಮಾಣದ ದಾಳಿಗಳನ್ನು ನಡೆಸಬಹುದು. ಇದು ಗಣನೀಯ ಪ್ರಮಾಣದಲ್ಲಿ ಉಳಿದಿರುವ ಉಕ್ರೇನ್ ವಾಯು ರಕ್ಷಣೆಯನ್ನು ಕುಗ್ಗಿಸಬಹುದು ಎಂದು ಅವರು ಹೇಳಿದ್ದಾರೆ.

‘ರಷ್ಯಾ ಆರಂಭಿಕ ಹೆಜ್ಜೆಯಲ್ಲಿ ವಿಫಲವಾಗಿದೆ. ಅದು ಉಕ್ರೇನ್ ಕಡೆಗೆ ಮತ್ತಷ್ಟು ಸೇನಾಶಕ್ತಿಯನ್ನು ನುಗ್ಗಿಸಲಿದೆ’ ಎಂದು ‘ಇನ್‌ಸ್ಟಿಟ್ಯೂಟ್ ಫಾರ್ ದಿ ಸ್ಟಡಿ ಆಫ್ ವಾರ್’ ಕೂಡ ಅಂದಾಜು ಮಾಡಿದೆ.

ಟಿವಿಎಸ್: ರಫ್ತು ವಹಿವಾಟು ಹೆಚ್ಚಳ

ಪ್ರಜಾವಾಣಿ ಚಿತ್ರ

ಬೆಂಗಳೂರು: ಟಿವಿಎಸ್ ಮೋಟರ್ ಕಂಪನಿಯು ಫೆಬ್ರುವರಿಯಲ್ಲಿ ಒಟ್ಟು 2.81 ಲಕ್ಷ ವಾಹನಗಳನ್ನು ಮಾರಾಟ ಮಾಡಿದೆ. ಹಿಂದಿನ ವರ್ಷದ ಫೆಬ್ರುವರಿಯಲ್ಲಿ ಕಂಪನಿಯು 2.97 ಲಕ್ಷ ವಾಹನಗಳನ್ನು ಮಾರಾಟ ಮಾಡಿತ್ತು.

ಈ ವರ್ಷದ ಫೆಬ್ರುವರಿಯಲ್ಲಿ ಕಂಪನಿಯು ಒಟ್ಟು 2.67 ಲಕ್ಷ ದ್ವಿಚಕ್ರ ವಾಹನಗಳನ್ನು ಮಾರಾಟ ಮಾಡಿದೆ ಎಂದು ಪ್ರಕಟಣೆ ತಿಳಿಸಿದೆ. ಸೆಮಿಕಂಡಕ್ಟರ್‌ಗಳ ಕೊರತೆಯು ಪ್ರೀಮಿಯಂ ದ್ವಿಚಕ್ರ ವಾಹನಗಳ ತಯಾರಿಕೆಯ ಮೇಲೆ ದುಷ್ಪರಿಣಾಮ ಉಂಟುಮಾಡಿದೆ ಎಂದು ಕಂಪನಿ ಹೇಳಿದೆ.

ಫೆಬ್ರುವರಿಯಲ್ಲಿ ಕಂಪನಿಯ ರಫ್ತು ವಹಿವಾಟು ಶೇಕಡ 6ರಷ್ಟು ಹೆಚ್ಚಳ ಕಂಡಿದೆ.

ಭಾರತ್‌ಪೆ: ಅಶ್ನೀರ್ ಗ್ರೋವರ್ ರಾಜೀನಾಮೆ

ನವದೆಹಲಿ (ಪಿಟಿಐ): ಹಣಕಾಸು ತಂತ್ರಜ್ಞಾನ ಕಂಪನಿ ಭಾರತ್‌ಪೆ ವ್ಯವಸ್ಥಾಪಕ ನಿರ್ದೇಶಕ ಅಶ್ನೀರ್ ಗ್ರೋವರ್ ತಮ್ಮ ಹುದ್ದೆಗೆ ರಾಜೀನಾಮೆ ಸಲ್ಲಿಸಿದ್ದಾರೆ.

ಸಲಹಾ ಸಂಸ್ಥೆ ಪಿಡಬ್ಲ್ಯುಸಿ ಸಲ್ಲಿಸಿದ ವರದಿ ಆಧರಿಸಿ ಅಶ್ನೀರ್ ವಿರುದ್ಧ ಕ್ರಮ ಕೈಗೊಳ್ಳಬಹುದೇ ಎಂಬುದನ್ನು ಕಂಪನಿಯ ಆಡಳಿತ ಮಂಡಳಿಯು ಪರಿಶೀಲಿಸಬೇಕಿತ್ತು. ಈ ಕುರಿತ ಮಾಹಿತಿ ದೊರೆತ ಕೆಲವೇ ಕ್ಷಣಗಳಲ್ಲಿ ಅಶ್ನೀರ್ ಅವರು ತಮ್ಮ ಸ್ಥಾನಕ್ಕೆ ರಾಜೀನಾಮೆ ಸಲ್ಲಿಸಿದ್ದಾರೆ. ‘ಪಿಡಬ್ಲ್ಯುಸಿ ಸಲ್ಲಿಸಿರುವ ವರದಿಯ ಆಧಾರದಲ್ಲಿ ಕ್ರಮ ಕೈಗೊಳ್ಳುವ ಹಕ್ಕು ಆಡಳಿತ ಮಂಡಳಿಗೆ ಇದೆ’ ಎಂದು ಭಾರತ್‌ಪೆ ಕಂಪನಿಯು ಪ್ರಕಟಣೆಯಲ್ಲಿ ತಿಳಿಸಿದೆ. ಅಶ್ನೀರ್ ಅವರು ಹಣಕಾಸಿನ ಅವ್ಯವಹಾರದಲ್ಲಿ ಭಾಗಿಯಾಗಿದ್ದಾರೆ ಎಂಬ ಆರೋಪ ಇದೆ.

ತಾವೇ ಸ್ಥಾಪಿಸಿದ ಕಂಪನಿಯಿಂದ ಹೊರನಡೆಯಲು ಒತ್ತಡ ತರಲಾಗುತ್ತಿದೆ ಎಂದು ಅಶ್ನೀರ್ ಅವರು ರಾಜೀನಾಮೆ ಪತ್ರದಲ್ಲಿ ಹೇಳಿದ್ದಾರೆ ಎಂದು ಮೂಲಗಳು ತಿಳಿಸಿವೆ.

ಕಂಪನಿಯ ಹೆಸರನ್ನು ಕೂಡ ಹಾಳು ಮಾಡಲು ಸಿದ್ಧವಿರುವ ಕೆಲವರು ತಮ್ಮ ವಿರುದ್ಧ ಹಾಗೂ ತಮ್ಮ ಕುಟುಂಬದ ವಿರುದ್ಧ ಆಧಾರ ಇಲ್ಲದ ಆರೋಪಗಳನ್ನು ಹೊರಿಸುತ್ತಿದ್ದಾರೆ ಎಂದು ಅಶ್ನೀರ್ ಆರೋಪಿಸಿದ್ದಾರೆ.

ಏರ್ ಇಂಡಿಯಾ ಸಿಇಒ ಹುದ್ದೆ ನಿರಾಕರಿಸಿದ ಆಯ್ಚಿ

ನವದೆಹಲಿ (ಪಿಟಿಐ): ಏರ್ ಇಂಡಿಯಾ ಕಂಪನಿಯ ವ್ಯವಸ್ಥಾಪಕ ನಿರ್ದೇಶಕ ಹಾಗೂ ಮುಖ್ಯ ಕಾರ್ಯನಿರ್ವಹಣಾ ಅಧಿಕಾರಿ (ಸಿಇಒ) ಹುದ್ದೆ ವಹಿಸಿಕೊಳ್ಳಲು ಇಲ್ಕರ್ ಆಯ್ಚಿ ಅವರು ನಿರಾಕರಿಸಿದ್ದಾರೆ ಎಂದು ಮೂಲಗಳು ತಿಳಿಸಿವೆ.

ಆಯ್ಚಿ ಅವರನ್ನು ವ್ಯವಸ್ಥಾಪಕ ನಿರ್ದೇಶಕ ಮತ್ತು ಸಿಇಒ ಆಗಿ ನೇಮಕ ಮಾಡಲಾಗಿದೆ ಎಂದು ಏರ್ ಇಂಡಿಯಾದ ಮಾಲೀಕತ್ವ ಹೊಂದಿರುವ ಟಾಟಾ ಸಮೂಹವು ಫೆಬ್ರುವರಿ 14ರಂದು ತಿಳಿಸಿತ್ತು. ಆಯ್ಚಿ ಅವರು ಟರ್ಕಿಷ್ ಏರ್‌ಲೈನ್ಸ್‌ನ ಮಾಜಿ ಅಧ್ಯಕ್ಷ.

ಆದರೆ, ‘ರಾಷ್ಟ್ರದ ಭದ್ರತೆಯನ್ನು ಗಮನದಲ್ಲಿ ಇರಿಸಿಕೊಂಡು’ ಆಯ್ಚಿ ಅವರ ನೇಮಕಕ್ಕೆ ಕೇಂದ್ರ ಸರ್ಕಾರ ಒಪ್ಪಿಗೆ ನೀಡಬಾರದು ಎಂದು ಆರ್‌ಎಸ್‌ಎಸ್ ಜೊತೆ ನಂಟು ಹೊಂದಿರುವ ಸ್ವದೇಶಿ ಜಾಗರಣ ಮಂಚ್ ಈಚೆಗೆ ಆಗ್ರಹಿಸಿತ್ತು. ಈ ವಿಚಾರವನ್ನು ಸರ್ಕಾರವು ಬಹಳ ಗಂಭೀರವಾಗಿ ಪರಿಗಣಿಸಿದೆ ಎಂದು ಸ್ವದೇಶಿ ಜಾಗರಣ ಮಂಚ್‌ನ ಸಹ ಸಂಚಾಲಕ ಅಶ್ವನಿ ಮಹಾಜನ್ ಹೇಳಿದ್ದರು.

‘ಉಕ್ರೇನ್ ಮಂದಿಗಷ್ಟೇ ರೈಲು’

ಮಂಡ್ಯ: ‘ಪೋಲೆಂಡ್ ಗಡಿಗೆ ತಲುಪಲು ಖಾರ್ಕೀವ್ ಸಮೀಪದ ರೈಲು ನಿಲ್ದಾಣಕ್ಕೆ ತೆರಳಿದ್ದಾಗ ಅಧಿಕಾರಿಗಳು ಉಕ್ರೇನ್ ಜನರನ್ನಷ್ಟೇ ರೈಲು ಹತ್ತಿಸುತ್ತಿದ್ದರು. ಅದರ ವಿಡಿಯೊ ಮಾಡಲು ಹೋದಾಗ ಬೆದರಿಕೆ ಹಾಕಿದರು’ ಎಂದು ಶ್ರೀರಂಗಪಟ್ಟಣ ತಾಲ್ಲೂಕು ಹೊಂಗಹಳ್ಳಿಯ ಮನೋಜ್‌ಗೌಡ ಮಂಗಳವಾರ ಪೋಷಕರಿಗೆ ವಾಯ್ಸ್ ಮೆಸೇಜ್ ಕಳಿಸಿದ್ದಾರೆ.

‘ರೈಲು ಸಿಗದಿದ್ದರೆ ಬಂಕರ್‌ಗೇ ವಾಪಸ್ ಹೋಗಬೇಕು. ಮೈಕೊರೆಯುವ ಚಳಿಯಲ್ಲೇ ರೈಲು ನಿಲ್ದಾಣದಲ್ಲೇ ನಿಂತಿದ್ದೇವೆ’ ಎಂಬ ಅವರ ಮಾತನ್ನು ತಂದೆ ಜಯರಾಮೇಗೌಡ ಅಧಿಕಾರಿಗಳ ಗಮನಕ್ಕೆ ತಂದಿದ್ದಾರೆ. ‘ಮಗ ಸುರಕ್ಷಿತವಾಗಿದ್ದಾನೆ. ಆದರೆ ರೈಲು ಹತ್ತಲು ಬಿಡದ ಕಾರಣ ಆತಂಕವಾಗಿದೆ’ ಎಂದು ಅವರು ತಿಳಿಸಿದರು.

ಮುದ್ದಿನ ನಾಯಿಯನ್ನು ಕರೆತಂದ ಕೇರಳದ ವಿದ್ಯಾರ್ಥಿನಿ

ತಿರುವನಂತಪುರ: ಯುದ್ಧಪೀಡಿತ ಉಕ್ರೇನ್‌ನ ರಾಜಧಾನಿ ಕೀವ್‌ನಿಂದ ರೊಮೇನಿಯಾಕ್ಕೆ ಬಸ್‌ನಲ್ಲಿ ಬಂದಿರುವ ಕೇರಳ ಇಡುಕ್ಕಿ ಜಿಲ್ಲೆಯ ವಿದ್ಯಾರ್ಥಿನಿ ಆರ್ಯ ಆಲ್ಡ್ರಿನ್, ತನ್ನ ಸಾಕು ನಾಯಿ ಸೈರಾವನ್ನೂ ಜತೆಗೆ ಕರೆ ತಂದು ಸುದ್ದಿಯಾಗಿದ್ದಾರೆ.

ಯುದ್ಧದ ಪರಿಸ್ಥಿತಿ ಮುದ್ದಿನ ನಾಯಿಗೆ ಅಪಾಯ ತರಬಹುದು ಎಂದು ಭಾವಿಸಿದ ಅವರು, ಐದು ತಿಂಗಳ ಸೈಬೀರಿಯನ್ ಹಸ್ಕಿ ನಾಯಿಯನ್ನು ಬಸ್‌ನಲ್ಲಿ ರೊಮೇನಿಯಾ ತಲುಪಿಸಿದ್ದಾರೆ. ಈ ಚಿತ್ರ ಭಾರಿ ಪ್ರಶಂಸೆಗೆ ಪಾತ್ರವಾಗಿದೆ.

‘ಆರ್ಯ, ನಾಯಿಯನ್ನು ಹಿಡಿದುಕೊಂಡು 600 ಕಿ.ಮಿ. ಬಸ್‌ನಲ್ಲಿ ಹಾಗೂ 30 ಕಿ..ಮಿ. ಕಾಲ್ನಡಿಗೆಯಲ್ಲಿ ಸಾಗಿ ಬಂದಿದ್ದಾರೆ. ಅದಕ್ಕೆ ಪಾಸ್‌ಪೋರ್ಟ್ ಕೂಡ ಮಾಡಿಸಿದ್ದಾರೆ. ಅದನ್ನು ಭಾರತಕ್ಕೆ ತರುತ್ತಾರೆಯೇ ಎಂಬುದು ಇನ್ನೂ ಖಚಿತವಾಗಿಲ್ಲ. ಈಗ ಅವರು ವಿಮಾನ ನಿಲ್ದಾಣ ತಲುಪಿ ವಿಮಾನಕ್ಕಾಗಿ ಕಾಯುತ್ತಿದ್ದಾರೆ. ರಾಯಭಾರ ಕಚೇರಿ ಮತ್ತು ನಿಲ್ದಾಣದ ಅಧಿಕಾರಿಗಳು ಕರುಣೆ ತೋರಿಸಿ ನಾಯಿಯನ್ನು ಕರೆದ್ಯೊಯಲು ಅವಕಾಶ ನೀಡುತ್ತಾರೆಯೇ ಎಂಬುದನ್ನು ಕಾದು ನೋಡಬೇಕು’ ಎಂದು ಆರ್ಯ ಕುಟುಂಬದ ಆಪ್ತರೊಬ್ಬರು ಹೇಳಿದರು.

ತನ್ನ ಮುದ್ದಿನ ನಾಯಿಯೊಂದಿಗೆ ಆರ್ಯ ಆಲ್ಡ್ರಿನ್

ಆರ್ಯಳ ಸಾಮಾಜಿಕ ಜಾಲತಾಣದ ಪೋಸ್ಟ್ ಗಮನಿಸಿ ಇನ್ನಷ್ಟು ಭಾರತೀಯರು ತಮ್ಮ ಸಾಕು ಪ್ರಾಣಿಗಳನ್ನು ಕರೆತರುವ ಯೋಚನೆ ಮಾಡುತ್ತಿದ್ದಾರೆ ಎಂದು ಹೇಳಲಾಗಿದೆ.

‘17 ದಿನಗಳ ಹಿಂದಷ್ಟೇ ಉಕ್ರೇನ್‌ಗೆ ತೆರಳಿದ್ದಾನೆ...’

ತಾಳಿಕೋಟೆ (ವಿಜಯಪುರ ಜಿಲ್ಲೆ): ‘ಉಕ್ರೇನ್‌ಗೆ ಮಗ ಹೋಗುವಾಗ ಯುದ್ಧದ ಛಾಯೆ ಇರಲಿಲ್ಲ. ಕೇವಲ 17 ದಿನಗಳ ಹಿಂದಷ್ಟೇ ಮಗ ಎಂಬಿಬಿಎಸ್ ಓದಲು ಅಲ್ಲಿಗೆ ಹೋಗಿದ್ದಾನೆ’ ಎಂದು ತಾಳಿಕೋಟೆ ಪಟ್ಟಣದ ಮಹಿಬೂಬನಗರದ ಮೊಹಮ್ಮದ ಇಸಾಕ್ ನಾಗೂರ ಆತಂಕ ವ್ಯಕ್ತಪಡಿಸಿದರು.

ಮೊಹಮ್ಮದ್ ಇಸ್ಮಾಯಿಲ್

ಅವರು ಬಾಗಲಕೋಟೆಯಲ್ಲಿ ಸಹಾಯಕ ಕೃಷಿ ನಿರ್ದೇಶಕರಾಗಿದ್ದು, ಅವರ ಪುತ್ರ ಮೊಹಮ್ಮದ ಇಸ್ಮಾಯಿಲ್ ಫೆ.12ರಂದು ವೈದ್ಯಕೀಯ ಶಿಕ್ಷಣಕ್ಕೆ ಅಲ್ಲಿಗೆ ತೆರಳಿದ್ದಾರೆ.

‘ಸದ್ಯ ಯುದ್ಧ ಪ್ರಾರಂಭವಾದ ನಂತರ ಹಾರ್ಕಿವ್‌ನ ಬಂಕರ್‌ನಲ್ಲಿದ್ದಾನೆ. ಅಲ್ಲಿರುವವರಿಗೆ ಊಟ, ನೀರು ಸಿಗುತ್ತಿಲ್ಲ. ವಿದ್ಯುತ್ ಕೂಡ ಇಲ್ಲ, ಉಷ್ಣತೆ ಮೈನಸ್ ಏಳು ಡಿಗ್ರಿ ಇದೆ. ವಿದ್ಯಾರ್ಥಿಗಳು ಅಡಗಿರುವ ಬಂಕರ್ ಪಕ್ಕದಲ್ಲಿಯೇ ಬಾಂಬ್ ಸ್ಫೋಟದ ಸದ್ದು ಕೇಳಿ ಬರುತ್ತಿದೆ ಎಂದು ಮಂಗಳವಾರ ಮಗನೊಂದಿಗೆ ಮಾತಾಡಿದಾಗ ತಿಳಿಸಿದ್ದಾನೆ’ ಎಂದು ನಾಗೂರ ಆತಂಕಪಟ್ಟರು.

‘ನಾವಿಲ್ಲಿ ತುಂಬಾ ತೊಂದರೆಯಲ್ಲಿದ್ದೇವೆ’

ಪ್ರಜಾವಾಣಿ ವಾರ್ತೆ

ರಬಕವಿ ಬನಹಟ್ಟಿ (ಬಾಗಲಕೋಟೆ ಜಿಲ್ಲೆ): ‘ನಾವಿಲ್ಲಿ ತೊಂದರೆಯಲ್ಲಿದ್ದೇವೆ. ಸೋಮವಾರದಿಂದ ಯಾವುದೇ ಆಹಾರ ದೊರೆತಿಲ್ಲ. ಬಂಕರ್‌ನ ಸಿಂಕ್‌ನಲ್ಲಿ ಬರುವ ನೀರನ್ನಷ್ಟೇ ಕುಡಿಯುತ್ತಿದ್ದೇವೆ. ಇಲ್ಲಿರುವ ಬಹಳಷ್ಟು ಜನರಿಗೆ ಆರೋಗ್ಯದಲ್ಲಿ ಏರುಪೇರಾಗುತ್ತಿದೆ. ನಮ್ಮ ಸಹಾಯಕ್ಕೆ ಯಾರು ಬರುತ್ತಿಲ್ಲ. ಭಾರತೀಯ ರಾಯಭಾರಿಗಳು ನಮ್ಮನ್ನು ಸಂಪರ್ಕಿಸುತ್ತಿಲ್ಲ’ ಎಂದು ಉಕ್ರೇನ್ ನ ಓಲೆಸ್ಕೆವಿಸ್ಕಾ ನಗರದಲ್ಲಿರುವ ರಬಕವಿ–ಬನಹಟ್ಟಿ ತಾಲ್ಲೂಕಿನ ನಾವಗಲಿ ಗ್ರಾಮದ ಕಿರಣ ಸವದಿ ಆತಂಕದಿಂದ ಹೇಳಿಕೊಂಡರು.

ಅವರು ಮಂಗಳವಾರ ‘ಪ್ರಜಾವಾಣಿ‘ಯೊಂದಿಗೆ ಮಾತನಾಡಿ, ‘ನಾವು ಬೆಳಗ್ಗೆ ರೈಲು ನಿಲ್ದಾಣಕ್ಕೆ ಹೋಗುವ ಪ್ರಯತ್ನ ಮಾಡಿದೆವು. ನಾವು ಇರುವ ಸ್ಥಳದಿಂದ 15 ಕಿ.ಮೀ ದೂರದಲ್ಲಿ ರೈಲು ನಿಲ್ದಾಣವಿದೆ. ಆದರೆ ಬಾಂಬ್ ದಾಳಿ ನಡೆಯುತ್ತಿತ್ತು. ಹೊರಗೆ ಹೋಗಲು ಧೈರ್ಯವಾಗಲಿಲ್ಲ. ನಮ್ಮ ಜೊತೆಗಿದ್ದ ಕೆಲವರು ಇಲ್ಲಿಂದ ಹೋಗಿದ್ದಾರೆ. ನಾವು ಇರುವ ಸ್ಥಳದಿಂದ ಪೋಲೆಂಡ್ ಗಡಿ ಅಂದಾಜು 1,500 ಕಿ.ಮೀ ದೂರದಲ್ಲಿದೆ. ಅಲ್ಲಿ ತಲುಪುವುದು ಕಷ್ಟಸಾಧ್ಯ. ನಮ್ಮ ರಾಜ್ಯದ ವಿದ್ಯಾರ್ಥಿ ನಿಧನರಾದ ಸುದ್ದಿ ಕೇಳಿ ಇಲ್ಲಿರುವ ಬಹಳಷ್ಟು ಜನರು ಗಾಬರಿಗೊಂಡಿದ್ದಾರೆ ಎಂದು ಅವರು ಅಭಿಪ್ರಾಯ ವ್ಯಕ್ತಪಡಿಸಿದರು.

ಅವರೊಂದಿಗೆ ಎಂಬಿಬಿಎಸ್ ಓದುತ್ತಿರುವ ತುಮಕೂರಿನ ಗಗನ್, ಯಶಸ್ವಿನಿ, ನಂದಿನಿ ಮತ್ತು ಬೆಂಗಳೂರಿನ ಲಿಖಿತಾ ಇದ್ದಾರೆ. ‘ಇನ್ನೂ ಇಲ್ಲಿ 150ಕ್ಕೂ ಹೆಚ್ಚು ಜನರು ಇದ್ದಾರೆ’ ಎಂದು ಅವರು ತಿಳಿಸಿದರು.

ಪೊಲೀಸರಿಗೆ ಲಂಚ ಕೊಟ್ಟು ರೈಲು ಹತ್ತಿದೆವು!

ತೆಲಸಂಗ (ಬೆಳಗಾವಿ ಜಿಲ್ಲೆ): ಉಕ್ರೇನ್‌ನ ಹಾರ್ಕಿವ್‌ನಲ್ಲಿದ್ದ ಗ್ರಾಮದ ವೈದ್ಯಕೀಯ ವಿದ್ಯಾರ್ಥಿ ಸಹೋದರರಾದ ನಾಗೇಶ ಪೂಜಾರಿ ಮತ್ತು ರಾಕೇಶ ಪೂಜಾರಿ ಮಂಗಳವಾರ ಅಲ್ಲಿಂದ ರೈಲಿನಲ್ಲಿ ರಾಕೀವ್‌ನತ್ತ ಪ್ರಯಾಣ ಬೆಳೆಸಿರುವುದಾಗಿ ತಿಳಿಸಿದ್ದಾರೆ.

ಮಂಗಳವಾರ ಸಂಜೆ ವಿಡಿಯೊ ಕರೆ ಮೂಲಕ ‘ಪ್ರಜಾವಾಣಿ’ಯೊಂದಿಗೆ ಮಾತನಾಡಿದ ನಾಗೇಶ ಪೂಜಾರಿ, ‘4 ದಿನಗಳಿಂದ ಹಾರ್ಕಿವ್‌ನಲ್ಲಿ ರಕ್ಷಣೆಗಾಗಿ ನೆಲಮಾಳಿಗೆಯಲ್ಲಿದ್ದೆವು. ದಿನದಿಂದ ದಿನಕ್ಕೆ ಆಹಾರ ಮತ್ತು ನೀರಿನ ಸಮಸ್ಯೆ ಉಂಟಾಗಿತ್ತು. 2 ದಿನಗಳಲ್ಲಿ ಪರಿಸ್ಥಿತಿ ತೀವ್ರ ಗಂಭೀರವಾಗಿತ್ತು. ಹಾರ್ಕಿವ್ ಜನ ಸ್ವತಃ ಬಂದೂಕು ಕೈಗೆತ್ತಿಕೊಂಡು ಯುದ್ಧಕ್ಕೆ ನಿಂತಾಗ ಹೊರ ಹೋಗಲು ಆತಂಕವಾಗಿತ್ತು. ಪ್ರಯಾಣಕ್ಕೆ ಸೂಕ್ತ ರಕ್ಷಣೆ ಇಲ್ಲದ್ದಕ್ಕೆ ಅಲ್ಲೇ ಇದ್ದೆವು. ಪರಿಸ್ಥಿತಿ ತಿಳಿಯಾಗುವ ಯಾವ ಲಕ್ಷಣವೂ ಕಾಣಿಸಲಿಲ್ಲ. ಈ ನಡುವೆ, ನಮ್ಮ ಜೊತೆಗಿದ್ದ ಸ್ನೇಹಿತ ನವೀನ್ ಮೃತಪಟ್ಟ ಸುದ್ದಿ ಕೇಳಿ ನೋವಾಯಿತು. ಪರಿಸ್ಥಿತಿ ಮತ್ತಷ್ಟು ಗಂಭೀರ ಸ್ವರೂಪ ತಾಳಿದ್ದು, ಹೇಗಾದರೂ ಮಾಡಿ ಹಾರ್ಕಿವ್ ತೊರೆಯಲು ನಿರ್ಧರಿಸಿ, ಆತಂಕದ ನಡುವೆಯೂ ರೈಲು ಹತ್ತಿದ್ದೇವೆ. ರಾಖೀವ್ ತಲುಪಲು 700 ಕಿ.ಮೀ. ಪ್ರಯಾಣಿಸಬೇಕಾಗಿದೆ’ ಎಂದರು.

ವಿದ್ಯಾರ್ಥಿಗಳು ರೈಲಿನಲ್ಲಿ ಹೊರಟಿರುವುದನ್ನು ತೆಲಸಂಗ ಗ್ರಾಮದ ನಾಗೇಶ ಫೋಟೊ ತೆಗೆದು ನೀಡಿದ್ದಾರೆ

ರಬಕವಿ–ಬನಹಟ್ಟಿ ತಾಲ್ಲೂಕಿನ ನಾವಲಗಿ ಗ್ರಾಮದ ಕಿರಣ ಸವದಿ ಉಕ್ರೇನ್‌ನ ಓಲೆಸ್ಕೆವಿಸ್ಕಾ ಹಾಸ್ಟೆಲ್ ಬಂಕರ್‌ನಲ್ಲಿ ರಾಜ್ಯದ ಇತರ ವಿದ್ಯಾರ್ಥಿಗಳೊಂದಿಗೆ ಇರುವ ಫೋಟೊವನ್ನು ಹಂಚಿಕೊಂಡಿದ್ದಾರೆ

ಮತ್ತೆ ಒಗ್ಗೂಡಿದ ನ್ಯಾಟೊ ರಾಷ್ಟ್ರಗಳು

ಬ್ರಸೆಲ್ಸ್ (ಎಪಿ): ನ್ಯಾಟೊ ರಾಷ್ಟ್ರಗಳ ನಡುವೆ ಇದುವರೆಗೆ ಭಿನ್ನಾಭಿಪ್ರಾಯ ಇರುವಂತೆ ನೋಡಿಕೊಂಡು ಬಂದಿದ್ದ ರಷ್ಯಾದ ಅಧ್ಯಕ್ಷ ವ್ಲಾಡಿಮೀರ್ ಪುಟಿನ್ ಅವರ ಒಂದೇ ಒಂದು ತಪ್ಪು ನಿರ್ಧಾರ ರಾತ್ರೋರಾತ್ರಿಯೇ ಪಾಶ್ಚಿಮಾತ್ಯ ರಾಷ್ಟ್ರಗಳ ಬಂಧವನ್ನು ಬಿಗಿಗೊಳಿಸುವಂತೆ ಮಾಡಿಬಿಟ್ಟಿದೆ.

ಪಾಶ್ಚಿಮಾತ್ಯ ರಾಷ್ಟ್ರಗಳಲ್ಲಿ ಸದಾ ಒಡಕು ಇರಬೇಕು ಎಂಬುದು ರಷ್ಯಾದ ಬಯಕೆಯಾಗಿತ್ತು. 2016ರಲ್ಲಿ ಐರೋಪ್ಯ ಒಕ್ಕೂಟದಿಂದ ಹೊರಬರುವ ಬ್ರಿಟನ್‌ನ ‘ಬ್ರೆಕ್ಸಿಟ್’ ನಡೆ, ಐರೋಪ್ಯ ಒಕ್ಕೂಟದ ಪ್ರಧಾನ ಕಚೇರಿ ಕುರಿತಂತೆ ಹಂಗೇರಿಯ ದೀರ್ಘ ಸಮಯದ ತಗಾದೆ, ಅಮೆರಿಕದ ಮಾಜಿ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರು ಸೃಷ್ಟಿಸಿದ ಬಿಕ್ಕಟ್ಟುಗಳೆಲ್ಲ ಇದರಲ್ಲಿ ಸೇರಿದ್ದವು. ನ್ಯಾಟೊದಲ್ಲಿ ಮೂಡಿದ ಬಿರುಕನ್ನು ಇನ್ನಷ್ಟು ಹಿಗ್ಗಿಸಬೇಕು ಎಂಬ ಕಾರಣಕ್ಕೆ ರಷ್ಯಾ ಇದೀಗ ಸಮಯ ಸಾಧಿಸಿ ಉಕ್ರೇನ್ ಮೇಲೆ ದಾಳಿ ನಡೆಸಿತ್ತು. ಇದೇ ವಿಚಾರ ನ್ಯಾಟೋ ಬಂಧವನ್ನು ಬಿಗಿಗೊಳಿಸುವಂತೆ ಮಾಡಿದೆ ಎಂದು ಹಲವು ನಾಯಕರು ಹೇಳಿದ್ದಾರೆ.

ಐಎಸ್‌ಎಸ್‌ಎಫ್ ವಿಶ್ವಕಪ್ ಶೂಟಿಂಗ್: ಬೆಳ್ಳಿ ಪದಕ ಜಯಿಸಿದ ಇಶಾ ಸಿಂಗ್

ಚಿನ್ನಕ್ಕೆ ಗುರಿಯಿಟ್ಟ ಸೌರಭ್

ಕೈರೊ (ಪಿಟಿಐ): ಯುವ ಶೂಟರ್ ಸೌರಭ್ ಚೌಧರಿ ಅವರು ಭಾರತಕ್ಕೆ ಐಎಸ್‌ಎಸ್‌ಎಫ್ ವಿಶ್ವಕಪ್ ಟೂರ್ನಿಯಲ್ಲಿ ಈ ವರ್ಷದ ಮೊದಲ ಚಿನ್ನದ ಪದಕ ಗೆದ್ದುಕೊಟ್ಟಿದ್ದಾರೆ. ಇಲ್ಲಿ ನಡೆದ ಟೂರ್ನಿಯ 10 ಮೀಟರ್ಸ್ ಏರ್ ಪಿಸ್ತೂಲ್ ವಿಭಾಗದಲ್ಲಿ ಅವರಿಗೆ ಮಂಗಳವಾರ ಅಗ್ರಸ್ಥಾನ ಒಲಿಯಿತು.

ಏಷ್ಯನ್ ಗೇಮ್ಸ್ ಚಿನ್ನದ ಪದಕ ವಿಜೇತ, 19 ವರ್ಷದ ಸೌರಭ್ ಫೈನಲ್ ಹಣಾಹಣಿಯಲ್ಲಿ 16 ಸ್ಕೋರ್ ದಾಖಲಿಸಿದರು. ಇದರೊಂದಿಗೆ ಜರ್ಮನಿಯ ಮೈಕೆಲ್ ಶ್ವಾಲ್ಡ್ (6) ಸವಾಲು ಮೀರಿದರು.

ಒಲಿಂಪಿಯನ್ ಹಾಗೂ ಯೂತ್ ಒಲಿಂಪಿಕ್ಸ್ ಚಿನ್ನದ ಪದಕ ವಿಜೇತ ಸೌರಭ್, 10 ಮೀ. ಏರ್ ಪಿಸ್ತೂಲ್‌ನ ಅರ್ಹತಾ ಸುತ್ತನ್ನು 584 ಪಾಯಿಂಟ್ಸ್‌ನೊಂದಿಗೆ ಮೂರನೆಯವರಾಗಿ ಕೊನೆಗೊಳಿಸಿದ್ದರು. ಅಗ್ರ ಎಂಟು ಮಂದಿಯೊಂದಿಗೆ ಫೈನಲ್ಸ್‌ಗೆ ಅರ್ಹತೆ ಗಳಿಸಿದ್ದರು.

ಬೆಳ್ಳಿ ಗೆದ್ದ ಇಶಾ: ಮಹಿಳೆಯರ 10 ಮೀ. ಏರ್ ಪಿಸ್ತೂಲ್ ವಿಭಾಗದಲ್ಲಿ ಭಾರತದ ಇಶಾ ಸಿಂಗ್ ಅವರಿಗೆ ಬೆಳ್ಳಿ ಪದಕ ಒಲಿಯಿತು. ಚಿನ್ನದ ಪದಕದ ಸುತ್ತಿನಲ್ಲಿ ಅವರು 4–16ರಿಂದ ಹಾಲಿ ವಿಶ್ವ ಚಾಂಪಿಯನ್, ಗ್ರೀಸ್‌ನ ಅನ್ನಾ ಕೊರಕಾಕಿ ಎದುರು ಸೋತರು.

ಚಿನ್ನದ ಪದಕ ಜಯಿಸಿದ ಭಾರತದ ಸೌರಭ್ ಚೌಧರಿ (ಮಧ್ಯ) ಅವರು ಬೆಳ್ಳಿ ಜಯಿಸಿದ ಜರ್ಮನಿಯ ಮೈಕೆಲ್ ಶ್ವಾಲ್ಡ್ (ಎಡ) ಹಾಗೂ ಕಂಚು ಗೆದ್ದ ರಷ್ಯಾದ ಆರ್ಟೆಮ್ ಚೆರ್ನೊಸೊವ್ ಅವರೊಂದಿಗೆ ಸಂಭ್ರಮಿಸಿದರು– ಸಾಯ್ ಮೀಡಿಯಾ ಚಿತ್ರ

ಬಲ್ಗೇರಿಯಾದ ಅಂತೊನೆಟಾ ಕೊಸ್ತಾದಿನೊವಾ ಅವರು ಕಂಚಿನ ಪದಕ ಗಳಿಸಿದರು.

20 ವಿಭಾಗಗಳಲ್ಲಿ ಶೂಟರ್‌ಗಳು ಪದಕಗಳಿಗೆ ಪೈಪೋಟಿ ನಡೆಸುತ್ತಿದ್ದಾರೆ.

ಪುರುಷರ ವಿಭಾಗದಲ್ಲಿ ರಷ್ಯಾದ ಆರ್ಟೆಮ್ ಚೆರ್ನೊಸೊವ್ ಕಂಚಿನ ಪದಕ ಗೆದ್ದುಕೊಂಡರು. ಆದರೆ ಉಕ್ರೇನ್‌ನೊಂದಿಗಿನ ಸಂಘರ್ಷದಿಂದಾಗಿ ರಷ್ಯಾದ ಶೂಟರ್‌ಗಳಿಗೆ ತಮ್ಮ ದೇಶದ ಧ್ವಜದಡಿ ಸ್ಪರ್ಧಿಸಲು ಅವಕಾಶ ನೀಡಿಲ್ಲ.

ದೀಪಾ ಅಮಾನತು: ರಾಷ್ಟ್ರೀಯ ಜಿಮ್ನಾಸ್ಟಿಕ್ ಸಂಸ್ಥೆ ತಬ್ಬಿಬ್ಬು!

ನವದೆಹಲಿ (ಪಿಟಿಐ): ಭಾರತದ ಜಿಮ್ನಾಸ್ಟ್ ದೀಪಾ ಕರ್ಮಾಕರ್ ಅವರನ್ನು ಅಂತರರಾಷ್ಟ್ರೀಯ ಜಿಮ್ನಾಸ್ಟಿಕ್ಸ್ ಫೆಡರೇಷನ್ (ಎಫ್‌ಐಜಿ) ಅಮಾನತಿನಲ್ಲಿಟ್ಟಿದೆ. ಈ ವಿಷಯದ ಕುರಿತು ಭಾರತ ಜಿಮ್ನಾಸ್ಟಿಕ್ಸ್ ಫೆಡರೇಷನ್ ಅಚ್ಚರಿ ವ್ಯಕ್ತಪಡಿಸಿದೆ. ಈ ಕುರಿತು ತನಗೆ ಮಾಹಿತಿಯೇ ಇಲ್ಲ ಎಂದೂ ಹೇಳಿದೆ.

ಎಫ್‌ಐಜಿಯ ವೆಬ್‌ಸೈಟ್‌ನಲ್ಲಿ ದೀಪಾ ಅವರ ಹೆಸರು ಅಮಾನತು ಪಟ್ಟಿಯಲ್ಲಿದೆ. ಭಾರತದ ಜಿಮ್ನಾಸ್ಟ್‌ಗಳೆಲ್ಲರ ಹೆಸರುಗಳೆಲ್ಲವೂ ಈ ವೆಬ್‌ಸೈಟ್‌ನಲ್ಲಿವೆ. ಆದರೆ, ದೀಪಾ ಅವರ ಹೆಸರಿನ ಮುಂದೆ ಅಮಾನತು ಎಂದು ಗುರುತಿಸಲಾಗಿದೆ. ಉಳಿದವರೆಲ್ಲರನ್ನೂ ಸಕ್ರಿಯ ಎಂದು ಗುರುತಿಸಲಾಗಿದೆ.

2016ರ ರಿಯೊ ಒಲಿಂಪಿಕ್ಸ್‌ನ ವಾಲ್ಟ್‌ನಲ್ಲಿ ದೀಪಾ ನಾಲ್ಕನೇ ಸ್ಥಾನ ಗಳಿಸಿ ಗಮನ ಸೆಳೆದಿದ್ದರು. ಆದರೆ, ಗಾಯದ ಸಮಸ್ಯೆಯಿಂದಾಗಿ ಅವರು 2019ರಿಂದ ಯಾವುದೇ ಸ್ಪರ್ಧೆಯಲ್ಲಿಯೂ ಭಾಗವಹಿಸಿಲ್ಲ.

‘ಎಫ್‌ಐಜಿಯಿಂದ ಈ ಕುರಿತು ನಮಗೆ ಯಾವುದೇ ಸಂದೇಶ ಬಂದಿಲ್ಲ. ಅವರನ್ನು ಅಮಾನತಿನಲ್ಲಿಡಲು ಕಾರಣವೇನು ಎಂಬುದೂ ಗೊತ್ತಿಲ್ಲ. ಇದು ಸತ್ಯವೋ ಅಥವಾ ಅಚಾತುರ್ಯದಿಂದ ನಡೆದಿರುವುದೋ ಗೊತ್ತಿಲ್ಲ. ಎಫ್‌ಐಜಿಯೊಂದಿಗಿನ ಮಾತುಕತೆಯಿಂದಷ್ಟೇ ಇದು ತಿಳಿಯಬೇಕಿದೆ’ ಎಂದು ಜಿಎಫ್‌ಐ ಅಧ್ಯಕ್ಷ ಸುಧೀರ್ ಮಿತ್ತಲ್ ತಿಳಿಸಿದ್ದಾರೆ.

ದೀಪಾ ಕರ್ಮಾಕರ್

ಅಗರ್ತಲಾದಲ್ಲಿರುವ ದೀಪಾ ಮತ್ತು ಅವರ ಕೋಚ್ ವಿಶ್ವೇಶ್ವರ್ ನಂದಿ ಅವರಿಂದ ಮಾಹಿತಿ ಪಡೆಯಲು ಮಾಡಿದ ಪ್ರಯತ್ನಗಳು ಫಲಿಸಲಿಲ್ಲ. ಅವರು ಫೋನ್ ಕರೆಗಳನ್ನು ಸ್ವೀಕರಿಸುತ್ತಿಲ್ಲ.

‘ಅಶಿಸ್ತು ಅಥವಾ ನಿಯಮ ಉಲ್ಲಂಘನೆಗಾಗಿ ಎಫ್‌ಐಜಿ ಇಂತಹ ಕ್ರಮ ತೆಗೆದುಕೊಂಡಿರಬೇಕು. ಆದರೆ, ಉದ್ದೀಪನ ಮದ್ದು ಸೇವನೆಯ ಪ್ರಕರಣಕ್ಕೆ ಸಂಬಂಧಿಸಿದ ಯಾವುದೇ ಆರೋಪ ಅವರ ಮೇಲಿಲ್ಲ. ಆ ಕಾರಣಕ್ಕೂ ಅವರ ಮೇಲೆ ಅಮಾನತು ಹಾಕಿರುವ ಸಾಧ್ಯತೆಗಳಿಲ್ಲ’ ಎಂದು ಅಧಿಕಾರಿಯೊಬ್ಬರು ಹೇಳಿದ್ದಾರೆ.

2017ರಲ್ಲಿ ಅವರು ಗಾಯ ಗೊಂಡಿದ್ದರು. ಶಸ್ತ್ರಚಿಕಿತ್ಸೆ ಪಡೆದು ವಿಶ್ರಾಂತಿಗೆ ತೆರಳಿದ್ದರು. 2019ರಲ್ಲಿ ಬಾಕುನಲ್ಲಿ ನಡೆದಿದ್ದ ವಿಶ್ವಕಪ್‌ನಲ್ಲಿ ಭಾಗವಹಿಸಿದ್ದರು. ಅದರ ನಂತರ ಯಾವುದೇ ಸ್ಪರ್ಧೆಯಲ್ಲಿಯೂ ಕಣಕ್ಕಿಳಿದಿಲ್ಲ.

ಸುದ್ದಿ 2 ನಿಮಿಷ

ವಿಶ್ವಕಪ್ ಜಯದೊಂದಿಗೆ ವಿದಾಯ: ಮಿಥಾಲಿ ಇಂಗಿತ

ರಂಗಿಯೊರಾ, ನ್ಯೂಜಿಲೆಂಡ್ (ಪಿಟಿಐ): ಭಾರತ ಮಹಿಳಾ ಕ್ರಿಕೆಟ್ ತಂಡದ ನಾಯಕಿ ಮಿಥಾಲಿ ರಾಜ್ ಅವರು ತಮ್ಮ 22 ವರ್ಷಗಳ ಸುದೀರ್ಘ ವೃತ್ತಿಜೀವನಕ್ಕೆ ಪೂರ್ಣವಿರಾಮ ನೀಡುವತ್ತ ಚಿತ್ತ ನೆಟ್ಟಿದ್ದಾರೆ.

ನ್ಯೂಜಿಲೆಂಡ್‌ನಲ್ಲಿ ನಡೆಯಲಿರುವ ವಿಶ್ವಕಪ್ ಟೂರ್ನಿಯಲ್ಲಿ ಪ್ರಶಸ್ತಿ ಜಯದೊಂದಿಗೆ ಕ್ರಿಕೆಟ್‌ಗೆ ವಿದಾಯ ಹೇಳುವ ಯೋಚನೆಯಲ್ಲಿದ್ದಾರೆ.

‘2000ನೇ ಇಸವಿಯ ವಿಶ್ವಕಪ್ ಟೂರ್ನಿಯು ನ್ಯೂಜಿಲೆಂಡ್‌ನಲ್ಲಿ ನಡೆದಿತ್ತು. ಅಲ್ಲಿಂದ ನನ್ನ ವೃತ್ತಿಜೀವನವೂ ಆರಂಭವಾಗಿತ್ತು. ಆದರೆ ಆ ಟೂರ್ನಿಯಲ್ಲಿ ನನಗೆ ಟೈಫಾಯ್ಡ್ ಆಗಿದ್ದರಿಂದ ಪಂದ್ಯಗಳಲ್ಲಿ ಆಡುವುದನ್ನು ತಪ್ಪಿಸಿಕೊಂಡೆ. ಈಗ ಮತ್ತೆ ನ್ಯೂಜಿಲೆಂಡ್‌ನಲ್ಲಿ ವಿಶ್ವಕಪ್ ಟೂರ್ನಿಯಲ್ಲಿ ಆಡಲಿದ್ದೇನೆ. ಜೀವನ ಒಂದು ಸುತ್ತು ಸಂಪೂರ್ಣವಾಗಿದೆ. ಈ ಬಾರಿ ಪ್ರಶಸ್ತಿ ಜಯದ ಕನಸು ನನಸು ಮಾಡಿಕೊಂಡು ನಿರ್ಗಮಿಸುವ ಆಸೆ’ ಎಂದು ಮಿಥಾಲಿ ಐಸಿಸಿಯು ಸಾಮಾಜಿಕ ಜಾಲತಾಣದಲ್ಲಿ ಹಾಕಿರುವ ವಿಡಿಯೊದಲ್ಲಿ ಹೇಳಿದ್ದಾರೆ.

ಈಚೆಗೆ ಆತಿಥೇಯ ಕಿವೀಸ್ ಎದುರಿನ ಏಕದಿನ ಸರಣಿಯಲ್ಲಿ ಭಾರತವು 1–4ರಿಂದ ಸೋತಿದೆ. ಮಾರ್ಚ್ 4ರಿಂದ ಏಪ್ರಿಲ್ 3ರವರೆಗೆ ನಡೆಯಲಿರುವ ವಿಶ್ವಕಪ್ ಟೂರ್ನಿಯಲ್ಲಿ ತಂಡವು ಆಡಲಿದೆ.

72 ಗಂಟೆ ಬ್ಯಾಟಿಂಗ್ ಅಭ್ಯಾಸ: ಸಿದ್ಧಾರ್ಥ್ ಮೋಹಿತೆ ದಾಖಲೆ

ಮುಂಬೈ (ಪಿಟಿಐ): ಮುಂಬೈನ ಉದಯೋನ್ಮುಖ ಕ್ರಿಕೆಟಿಗ ಸಿದ್ಧಾರ್ಥ್ ಮೋಹಿತೆ 72 ತಾಸುಗಳಿಗೂ ಹೆಚ್ಚು ಕಾಲ ನೆಟ್ಸ್‌ನಲ್ಲಿ ಬ್ಯಾಟಿಂಗ್ ಮಾಡುವ ಮೂಲಕ ದಾಖಲೆ ನಿರ್ಮಿಸಿದ್ದಾರೆ. ಅವರು ಗಿನ್ನೆಸ್ ವಿಶ್ವದಾಖಲೆ ಪುಸ್ತಕದಲ್ಲಿ ಸೇರ್ಪಡೆಯಾಗುವ ನಿರೀಕ್ಷೆ ಇದೆ.

19 ವರ್ಷದ ಸಿದ್ಧಾರ್ಥ್ ಒಟ್ಟು 72 ತಾಸು ಮತ್ತು ಐದು ನಿಮಿಷಗಳ ಬ್ಯಾಟಿಂಗ್ ಅಭ್ಯಾಸ ನಡೆಸಿದರು 2015ರಲ್ಲಿ ಸಿದ್ಧಾರ್ಥ್ ಅವರ ಸಹಪಾಠಿ ವಿರಾಗ್ ಮಾನೆ 50 ಗಂಟೆಗಳ ಕಾಲ ಬ್ಯಾಟಿಂಗ್ ಮಾಡಿ ದಾಖಲೆ ಮಾಡಿದ್ದರು.

‘ಈ ದಾಖಲೆ ಮಾಡಲು ಸಂತವಾಗುತ್ತಿದೆ. ಬಹಳ ದಿನಗಳಿಂದ ಇದಕ್ಕಾಗಿ ಪ್ರಯತ್ನ ನಡೆಸಿದ್ದೆ. ಕೋವಿಡ್ ಲಾಕ್‌ಡೌನ್ ನಿಂದಾಗಿ ನನ್ನ ಜೀವನದ ಎರಡು ಮಹತ್ವದ ವರ್ಷಗಳು ಕಳೆದುಹೋದವು. ಆದರೆ ವಿಶೇಷ ಸಾಧನೆ ಮಾಡುವ ಛಲದೊಂದಿಗೆ ಹಲವು ಅಕಾಡೆಮಿಗಳು ಮತ್ತು ಕೋಚ್‌ಗಳೊಂದಿಗೆ ಸಂವಾದ ನಡೆಸಿದೆ. ಅವರೆಲ್ಲರ ಸಹಯೋಗದಿಂದ ಇದು ಸಾಧ್ಯವಾಗಿದೆ’ ಎಂದು ಮೋಹಿತೆ ಹೇಳಿದರು. ಯುವ ಕ್ರಿಕೆಟಿಗ ಯಶಸ್ವಿ ಜೈಸ್ವಾಲ್ ಅವರಿಗೆ ತರಬೇತಿ ನೀಡಿರುವ ಜ್ವಾಲಾ ಸಿಂಗ್ ಅವರೇ ಮೋಹಿತೆಗೂ ಕೋಚ್ ಆಗಿದ್ದಾರೆ.

ಉಕ್ರೇನ್ ವಿರುದ್ಧದ ಸಮರ: ವಿಶ್ವ ಅಥ್ಲೆಟಿಕ್ಸ್‌ನಿಂದಲೂ ಕ್ರಮ; ಸಂಕಟದಲ್ಲಿ ಕ್ರೀಡಾಪಟುಗಳು

ರಷ್ಯಾ ಅಥ್ಲೀಟ್‌ಗಳ ಮೇಲೆ ಹೆಚ್ಚಿದ ನಿರ್ಬಂಧ

ಪ್ಯಾರಿಸ್ (ಎಎಫ್‌ಪಿ/ ರಾಯಿಟರ್ಸ್/ ಪಿಟಿಐ): ಉಕ್ರೇನ್‌ನ ಮೇಲಿನ ಆಕ್ರಮಣಕ್ಕಾಗಿ ಕ್ರೀಡಾಕ್ಷೇತ್ರದಲ್ಲಿ ರಷ್ಯಾ ಬೆಲೆ ತೆರುತ್ತಿರುವುದು ಹೆಚ್ಚಿದೆ. ಹಲವು ಕ್ರೀಡೆಗಳಿಂದ ಆ ದೇಶದ ಅಥ್ಲೀಟ್‌ಗಳು ಅಮಾನತು ಅಥವಾ ನಿರ್ಬಂಧ ಶಿಕ್ಷೆ ಎದುರಿಸುವಂತಾಗಿದೆ.

ಐಸ್ ಸ್ಕೇಟಿಂಗ್‌ನಲ್ಲಿ ರಷ್ಯಾ ಕ್ರೀಡಾಪಟುಗಳು ಸಾಂಪ್ರದಾಯಿಕ ‘ಶಕ್ತಿ ಕೇಂದ್ರ’ ಆಗಿದ್ದಾರೆ. ಇತ್ತೀಚೆಗೆ ಕೊನೆಗೊಂಡ ಬೀಜಿಂಗ್ ಚಳಿಗಾಲದ ಒಲಿಂಪಿಕ್ಸ್‌ನಲ್ಲಿ ಎರಡು ಚಿನ್ನ ಸೇರಿದಂತೆ ಆರು ಪದಕಗಳು ಅವರಿಗೆ ಒಲಿದಿದ್ದವು. ಸದ್ಯ ಎಲ್ಲ ಮಾದರಿಯ ಸ್ಕೇಟಿಂಗ್ ಸ್ಪರ್ಧೆಗಳಿಂದ ನಿರ್ಬಂಧ ಹೇರಲಾಗಿದೆ. ಇದರೊಂದಿಗೆ ಮಾರ್ಚ್‌ನಲ್ಲಿ ಫ್ರಾನ್ಸ್‌ನಲ್ಲಿ ನಡೆಯಲಿರುವ ವಿಶ್ವ ಚಾಂಪಿಯನ್‌ಷಿಪ್‌ನಲ್ಲಿ ಆ ದೇಶದ ಅಥ್ಲೀಟ್‌ಗಳು ಆಡುವಂತಿಲ್ಲ.

ಪುಟಿನ್

ಅಥ್ಲೆಟಿಕ್ಸ್‌ನ ಎಲ್ಲ ಸ್ಪರ್ಧೆಗಳಿಂದಲೂ ರಷ್ಯಾ ಕ್ರೀಡಾಪಟುಗಳಿಗೆ ವಿಶ್ವ ಅಥ್ಲೆಟಿಕ್ಸ್ ನಿರ್ಬಂಧ ಹೇರಿದೆ. ‘ಇದು ತನ್ನ ಸ್ವಭಾವಕ್ಕೆ ವಿರುದ್ಧವಾದರೂ ಸಮರ್ಥನೀಯ’ ಎಂದು ಮಂಡಳಿ ಹೇಳಿದೆ.

‘ರಷ್ಯಾ ಮತ್ತು ಬೆಲಾರಸ್‌ನ ಎಲ್ಲಾ ಅಥ್ಲೀಟ್‌ಗಳು, ನೆರವು ಸಿಬ್ಬಂದಿ ಮತ್ತು ಅಧಿಕಾರಿಗಳನ್ನು ಎಲ್ಲಾ ವಿಶ್ವ ಅಥ್ಲೆಟಿಕ್ಸ್ ಕೂಟಗಳಿಂದ ಹೊರಗಿಡಲಾಗುವುದು, ತಕ್ಷಣದಿಂದಲೇ ಈ ಕ್ರಮ ಜಾರಿಗೆ ಬರಲಿದೆ’ ಎಂದು ವಿಶ್ವ ಅಥ್ಲೆಟಿಕ್ಸ್ ತಿಳಿಸಿದೆ.

ಅಧ್ಯಕ್ಷ ವ್ಲಾಡಿಮಿರ್ ಪುಟಿನ್ ನೇತೃತ್ವದಲ್ಲಿ ಜಾಗತಿಕವಾಗಿ ಮತ್ತು ಆಂತರಿಕವಾಗಿ ತನ್ನ ಪ್ರಭಾವ ಹೆಚ್ಚಿಸಿಕೊಳ್ಳಲು ಕ್ರೀಡೆಯನ್ನು ಪ್ರಬಲ ಶಕ್ತಿಯಾಗಿ ಬಳಸಿಕೊಂಡಿದ್ದ ರಷ್ಯಾಕ್ಕೆ ಇದು ಗಮನಾರ್ಹ ಹಿನ್ನಡೆಯಾಗಿದೆ.

ಪುಟಿನ್ ಅಧ್ಯಕ್ಷತೆಯಲ್ಲಿ ಸೋಚಿಯಲ್ಲಿ 2014ರಲ್ಲಿ ಚಳಿಗಾಲದ ಒಲಿಂಪಿಕ್ಸ್‌ಅನ್ನು ಆಯೋಜಿಸಲಾಗಿತ್ತು. ಆದರೂ ಆ ಕ್ರೀಡಾಕೂಟಕ್ಕೆ ಸರ್ಕಾರ ಪ್ರಾಯೋಜಿತ ಡೋಪಿಂಗ್ ಹಗರಣ ಕಪ್ಪುಚುಕ್ಕೆಯಾಗಿ ಪರಿಣಮಿಸಿತ್ತು. 2018 ಫುಟ್‌ಬಾಲ್ ವಿಶ್ವಕಪ್ ಕೂಡ ರಷ್ಯಾದಲ್ಲಿ ನಡೆದಿತ್ತು.

ಪುಟಿನ್‌ರ ‘ಬ್ಲ್ಯಾಕ್ ಬೆಲ್ಟ್’ ಕಸಿದ ವಿಶ್ವ ಟೇಕ್ವಾಂಡೊ ಸಂಸ್ಥೆ: ರಷ್ಯಾದ ಅಧ್ಯಕ್ಷ ವ್ಲಾಡಿಮಿರ್ ಪುಟಿನ್ ಅವರಿಗೆ ಪ್ರದಾನ ಮಾಡಲಾಗಿದ್ದ ಗೌರವ ‘ಬ್ಲ್ಯಾಕ್ ಬೆಲ್ಟ್’ ಅನ್ನು ವಿಶ್ವ ಟೇಕ್ವಾಂಡೊ ಹಿಂಪಡೆದುಕೊಂಡಿದೆ.

‘ಮಾಸ್ಕೋದ ಕ್ರಮಗಳು ಕ್ರೀಡೆಯ ದೃಷ್ಟಿಕೋನಕ್ಕೆ ವಿರುದ್ಧವಾಗಿವೆ. ದಿಗ್ವಿಜಯಕ್ಕಿಂತಲೂ ಶಾಂತಿ ಹೆಚ್ಚು ಅಮೂಲ್ಯ’ ಎಂದು ಅದು ಅಭಿಪ್ರಾಯಪಟ್ಟಿದೆ.

ಫಿಫಾದಿಂದ ಹೊರಕ್ಕೆ: ಸೋಮವಾರ ವಿಶ್ವ ಫುಟ್‌ಬಾಲ್‌ನ ಆಡಳಿತ ಮಂಡಳಿ ಫಿಫಾ 2022ರ ವಿಶ್ವಕಪ್‌ನಿಂದ ರಷ್ಯಾವನ್ನು ಹೊರಗಿಟ್ಟಿತ್ತು. ಯೂರೋಪಿಯನ್ ಫುಟ್‌ಬಾಲ್ ಸಂಸ್ಥೆಗಳ ಒಕ್ಕೂಟವೂ (ಯುಇಎಫ್‌ಎ) ಎಲ್ಲಾ ಅಂತರರಾಷ್ಟ್ರೀಯ ಪಂದ್ಯಗಳಿಂದ ರಷ್ಯಾದ ರಾಷ್ಟ್ರೀಯ ತಂಡಗಳು ಮತ್ತು ಕ್ಲಬ್‌ಗಳನ್ನು ಹೊರಹಾಕಿದೆ.

ವಾಲಿಬಾಲ್ ವಿಶ್ವ ಚಾಂಪಿಯನ್‌ಷಿಪ್ ಆತಿಥ್ಯದ ಹಕ್ಕು ಇಲ್ಲ: ಈ ವರ್ಷದ ಆಗಸ್ಟ್ ಹಾಗೂ ಸೆಪ್ಟೆಂಬರ್‌ನಲ್ಲಿ ನಿಗದಿಯಾಗಿದ್ದ ಪುರುಷರ ವಾಲಿಬಾಲ್ ವಿಶ್ವ ಚಾಂಪಿಯನ್‌ಷಿಪ್ ಆತಿಥ್ಯದ ಹಕ್ಕನ್ನು ರಷ್ಯಾ ಕಳೆದುಕೊಂಡಿದೆ.

‘ಉಕ್ರೇನ್ ಮೇಲಿನ ಯುದ್ಧದಿಂದಾಗಿ ರಷ್ಯಾದಲ್ಲಿ ವಿಶ್ವ ಚಾಂಪಿಯನ್‌ಷಿಪ್‌ಗೆ ಸಿದ್ಧತೆ ಮತ್ತು ಆಯೋಜಿಸುವುದು ಅಸಾಧ್ಯವೆಂದು ಅಂತರರಾಷ್ಟ್ರೀಯ ವಾಲಿಬಾಲ್ ಫೆಡರೇಷನ್‌ನ (ಎಫ್‌ಐವಿಬಿ) ಆಡಳಿತ ಮಂಡಳಿಯು ತೀರ್ಮಾನಕ್ಕೆ ಬಂದಿದೆ’ ಎಂದು ಫೆಡರೇಷನ್ ಹೇಳಿಕೆಯಲ್ಲಿ ತಿಳಿಸಿದೆ.

ವಿಶ್ವ ಬ್ಯಾಡ್ಮಿಂಟನ್ ಫೆಡರೇಷನ್ (ಬಿಡಬ್ಲ್ಯುಎಫ್) ಮಂಗಳವಾರ ರಷ್ಯಾ ಹಾಗೂ ಬೆಲಾರೂಸ್ ಅಥ್ಲೀಟ್‌ಗಳ ಮೇಲೆ ನಿಷೇಧ ಹೇರಿದೆ. ಈ ಎರಡೂ ದೇಶಗಳಲ್ಲಿ ನಿಗದಿಯಾಗಿದ್ದ, ಫೆಡರೇಷನ್ ಅನುಮೋದಿತ ಟೂರ್ನಿಗಳನ್ನು ರದ್ದುಗೊಳಿಸಿದೆ.

ತಟಸ್ಥ ತಂಡ ಅಥವಾ ಅಥ್ಲೀಟ್‌ಗಳಾಗಿ ಭಾಗವಹಿಸಲು ಫಿನಾ ಅನುಮತಿ: ರಷ್ಯಾ ಅಥವಾ ಬೆಲಾರೂಸ್‌ನ ವ್ಯಕ್ತಿಗಳು ಅಥವಾ ತಂಡಗಳಾಗಿರಲಿ, ತಟಸ್ಥವಾಗಿ ಮಾತ್ರ ಭಾಗವಹಿಸಬಹುದು ಎಂದು ಎಂದು ವಿಶ್ವ ಈಜು ಸಂಸ್ಥೆ (ಫಿನಾ) ಹೇಳಿದೆ.

ಕೀವ್ ತೊರೆದ ಅನ್ವೇಷ್

ಉಕ್ರೇನ್‌ನಲ್ಲಿ ಸಿಲುಕಿರುವ ಭಾರತದ ಮಾಜಿ ರ್‍ಯಾಪಿಡ್ ಚೆಸ್ ಚಾಂಪಿಯನ್ ಅನ್ವೇಷ್ ಉಪಾಧ್ಯಾಯ್ ಅವರು ರಾಜಧಾನಿ ಕೀವ್ ತೊರೆಯುವಲ್ಲಿ ಯಶಸ್ವಿಯಾಗಿದ್ದಾರೆ. ಸದ್ಯ ಅವರು ಪೋಲೆಂಡ್‌ನ ಗಡಿಗೆ ಸಮೀಪವಿರುವ ಲೀವ್‌ನಲ್ಲಿದ್ದಾರೆ.

ರಷ್ಯಾದ ಆಕ್ರಮಣದ ಮಧ್ಯೆ ತನ್ನ ಹಲವು ದೇಶವಾಸಿಗಳಂತೆ ಉಕ್ರೇನ್‌ನಲ್ಲಿ ಸಿಲುಕಿಕೊಂಡಿರುವ 30 ವರ್ಷದ ಅನ್ವೇಷ್, ಸುಮಾರು 10 ಗಂಟೆಗಳ ಸುದೀರ್ಘ ರೈಲು ಪ್ರಯಾಣದ ನಂತರ ಪಶ್ಚಿಮ ಉಕ್ರೇನ್‌ನ ನಗರ ಲೀವ್ ಅನ್ನು ತಲುಪಿದ್ದಾರೆ. ಒಂದು ದಿನದ ವಿಶ್ರಾಂತಿಯ ನಂತರ ಭಾರತಕ್ಕೆ ತೆರಳಲು ಎದುರು ನೋಡುತ್ತಿರುವುದಾಗಿ ಅನ್ವೇಷ್ ಹೇಳಿದ್ದಾರೆ.

ಟೆನಿಸ್ ಆಟಗಾರರ ಆತಂಕ

ವಿಶ್ವ ಟೆನಿಸ್ ಕ್ರಮಾಂಕದಲ್ಲಿ ನೂತನವಾಗಿ ಅಗ್ರಸ್ಥಾನ ಅಲಂಕರಿಸಿರುವ ರಷ್ಯಾದ ಡೇನಿಯಲ್ ಮೆಡ್ವೆಡೆವ್ ಮತ್ತಿತರ ರಷ್ಯಾದ ತಾರೆಗಳು ಎಟಿಪಿ ಹಾಗೂ ಡಬ್ಲ್ಯುಟಿಎ ಯಾವ ನಿರ್ಧಾರಗಳನ್ನು ತೆಗೆದುಕೊಳ್ಳಲಿದೆ ಎಂದು ಆತಂಕದಿಂದ ನಿರೀಕ್ಷಿಸುತ್ತಿದ್ದಾರೆ.

ಡೇನಿಯಲ್ ಮೆಡ್ವೆಡೆವ್

ಡೇವಿಸ್‌ಕಪ್ ಟೂರ್ನಿಯಲ್ಲಿ ಹಿಡಿತ ಹೊಂದಿರುವ ರಷ್ಯಾ, ಈ ವಾರಾಂತ್ಯದ ಪ್ಲೇ-ಆಫ್‌ಗಳಲ್ಲಿ ಭಾಗವಹಿಸದಿದ್ದರೂ ಟೂರ್ನಿಯನ್ನು ನಡೆಸುವ ಕುರಿತು ಅಂತರರಾಷ್ಟ್ರೀಯ ಟೆನಿಸ್ ಫೆಡರೇಶನ್ (ಐಟಿಎಫ್) ಇನ್ನೂ ಯಾವುದೇ ರೀತಿಯ ಪ್ರತಿಕ್ರಿಯೆ ನೀಡಿಲ್ಲ.

ಸಭೆಯ ಬಳಿಕ ಐಬಿಎ ನಿರ್ಧಾರ: ರಷ್ಯಾ ಹಾಗೂ ಬೆಲಾರೂಸ್‌ನ ಅಥ್ಲೀಟ್‌ಗಳನ್ನು ನಿಷೇಧಿಸುವ ಕುರಿತು ಈ ವಾರದಲ್ಲಿ ಸಭೆ ಕುರಿತು ನಿರ್ಧಾರ ತೆಗೆದುಕೊಳ್ಳುವುದಾಗಿ ಅಂತರರಾಷ್ಟ್ರೀಯ ಬಾಕ್ಸಿಂಗ್ ಸಂಸ್ಥೆ (ಐಬಿಎ) ಮಂಗಳವಾರ ತಿಳಿಸಿದೆ.

ಲಾಂಗ್ ಜಂಪ್‌ನಲ್ಲಿ ಶ್ರೀಶಂಕರ್‌ಗೆ ಚಿನ್ನ

ತಿರುವನಂತಪುರ (ಪಿಟಿಐ): ಅಥ್ಲೀಟ್ ಎಂ. ಶ್ರೀಶಂಕರ್ ಮಂಗಳವಾರ ಇಲ್ಲಿ ನಡೆದ ರಾಷ್ಟ್ರೀಯ ಮುಕ್ತ ಜಂಪ್ಸ್ ಸ್ಪರ್ಧೆಯ ಲಾಂಗ್ ಜಂಪ್‌ನಲ್ಲಿ ಚಿನ್ನದ ಪದಕ ಗೆದ್ದರು.

8.17 ಮೀಟರ್ ದೂರ ಜಿಗಿದ ಅವರು ಪ್ರಥಮ ಸ್ಥಾನ ಗಳಿಸಿದರು. ಸ್ಪರ್ಧೆಯ ಮೊದಲ ಜಂಪ್‌ನಲ್ಲಿ ಶ್ರೀಶಂಕರ್ 8.14 ಮೀಟರ್ ಜಿಗಿದಿದ್ದರು. ಮೊಹಮ್ಮದ್ ಅನೀಸ್ ಯಾಹ್ಯಾ 8.15 ಮೀಟರ್ ಜಿಗಿದರು. 22 ವರ್ಷದ ಶ್ರೀಶಂಕರ್ ತಮ್ಮ ಇನ್ನೊಂದು ಜಂಪ್‌ನಲ್ಲಿ ಮೊಹಮ್ಮದ್ ಅನೀಸ್ ಅವರನ್ನು ಹಿಂದಿಕ್ಕಿದರು. ಪ್ರಥಮ ಸ್ಥಾನಕ್ಕೆ ಲಗ್ಗೆಯಿಟ್ಟರು.

ರಾಷ್ಟ್ರೀಯ ಚೆಸ್: ಅಗ್ರಸ್ಥಾನದಲ್ಲಿ ಅರ್ಜುನ್

ಕಾನ್ಪುರ (ಪಿಟಿಐ): ಹಾಲಿ ಚಾಂಪಿಯನ್ ಅರವಿಂದ ಚಿದಂಬರಂ ಸೇರಿ ಐವರು ಆಟಗಾರರು ರಾಷ್ಟ್ರೀಯ ಚೆಸ್ ಚಾಂಪಿಯನ್‌ಷಿಪ್‌ನ ಎಂಟನೇ ಸುತ್ತಿನ ಬಳಿಕ ಅಗ್ರಸ್ಥಾನವನ್ನು ಹಂಚಿಕೊಂಡಿದ್ದಾರೆ.

ಇಲ್ಲಿ ನಡೆಯುತ್ತಿರುವ ಚಾಂಪಿಯನ್‌ಷಿಪ್‌ನಲ್ಲಿ ಮಂಗಳವಾರ ಐವರು ಆಟಗಾರರು ತಲಾ 6.5 ಪಾಯಿಂಟ್ಸ್ ಗಳಿಸಿದ್ದರು. ಅರ್ಜುನ್ ಎರಿಗೈಸಿ, ಡಿ.ಗುಕೇಶ್, ಪಿ. ಇನಿಯನ್ ಹಾಗೂ ವಿ.ಪ್ರಣವ್ ಅವರು ಮೊದಲ ಸ್ಥಾನದಲ್ಲಿದ್ದ ಇನ್ನುಳಿದ ಆಟಗಾರರು. 8ನೇ ಸುತ್ತಿನಲ್ಲಿ ಪಿ.ಇನಿಯನ್ ಅವರು ಬಿ.ಅಧಿಬನ್ ಅವರನ್ನು ಮಣಿಸಿದರು.

‘ಕೊಹ್ಲಿ ಕೀರ್ತಿಕಿರೀಟಕ್ಕೆ 100ನೇ ಟೆಸ್ಟ್ ಗರಿ’

ಮೊಹಾಲಿ (ಪಿಟಿಐ): ನೂರನೇ ಟೆಸ್ಟ್ ಆಡುತ್ತಿರುವುದು ವಿರಾಟ್ ಕೊಹ್ಲಿಯವರ ಕೀರ್ತಿ ಕಿರೀಟಕ್ಕೆ ಮತ್ತೊಂದು ಹಿರಿಮೆಯ ಗರಿ ಸೇರಿದಂತಾಗಿದೆ. ಅವರು ಕ್ರಿಕೆಟ್ ಆಟದ ಕುರಿತು ಹೊಂದಿರುವ ಬದ್ಧತೆ ಮತ್ತು ಪ್ರೀತಿಯ ಪ್ರತೀಕ ಇದಾಗಿದೆ ಎಂದು ಭಾರತ ಕ್ರಿಕೆಟ್ ತಂಡದ ವೇಗದ ಬೌಲರ್ ಜಸ್‌ಪ್ರೀತ್ ಬೂಮ್ರಾ ಹೇಳಿದ್ದಾರೆ.

ಮಾರ್ಚ್ 4ರಿಂದ ಪಂಜಾಬ್ ಕ್ರಿಕೆಟ್ ಸಂಸ್ಥೆ ಕ್ರೀಡಾಂಗಣದಲ್ಲಿ ನಡೆಯಲಿರುವ ಶ್ರೀಲಂಕಾ ಎದುರಿನ ಟೆಸ್ಟ್ ವಿರಾಟ್ ಅವರಿಗೆ ನೂರನೇಯದ್ದಾಗಲಿದೆ. 2018ರಲ್ಲಿ ವಿರಾಟ್ ನಾಯಕತ್ವದ ತಂಡದಲ್ಲಿ ಬೂಮ್ರಾ ಟೆಸ್ಟ್ ಕ್ರಿಕೆಟ್‌ಗೆ ಪದಾರ್ಪಣೆ ಮಾಡಿದ್ದರು.

ಮಂಗಳವಾರ ಸುದ್ದಿಗಾರರೊಂದಿಗೆ ಮಾತನಾಡಿದ ಬೂಮ್ರಾ, ‘ಯಾವುದೇ ಒಬ್ಬ ಆಟಗಾರನಿಗೆ ಈ ರೀತಿಯ ಮೈಲುಗಲ್ಲು ವಿಶೇಷ ಸಾಧನೆಯೇ ಸರಿ. ವಿರಾಟ್ ಕಠಿಣ ಪರಿಶ್ರಮ, ಬದ್ಧತೆಗಳಿಂದಾಗಿ ಇಂತಹ ಸಾಧನೆ ಮಾಡಲು ಸಾಧ್ಯವಾಗಿದೆ. ದೇಶದ ತಂಡವನ್ನು 100 ಟೆಸ್ಟ್‌ಗಳಲ್ಲಿ ಪ್ರತಿನಿಧಿಸುವುದು ಬಹುದೊಡ್ಡ ಗೌರವ. ಭಾರತದ ಕ್ರಿಕೆಟ್ ತಂಡದ ಯಶಸ್ಸಿಗೆ ವಿರಾಟ್ ನೀಡಿರುವ ಕಾಣಿಕೆ ಅಮೂಲ್ಯವಾದದ್ದು’ ಎಂದರು.

‘ಪಂದ್ಯ ನೋಡಲು ಪ್ರೇಕ್ಷಕರು ಬಂದರೆ ಆ ವಾತಾವರಣವೇ ವಿಶೇಷವಾಗಿರುತ್ತದೆ. ಆದರೆ, ಸದ್ಯದ ಪರಿಸ್ಥಿತಿಯಲ್ಲಿ ಅನಿವಾರ್ಯವೆನಿಸಿದ ಕ್ರಮ ಕೈಗೊಳ್ಳುವುದೇ ಸೂಕ್ತ. ನಾವು ನಿಯಮಗಳನ್ನು ರೂಪಿಸುವುದಿಲ್ಲ. ಆದರೆ, ಆಡಳಿತಗಳು ರೂಪಿಸುವ ಸುರಕ್ಷತಾ ನಿಯಮಗಳಿಗೆ ಬದ್ಧರಾಗಿರುವುದು ಕರ್ತವ್ಯ’ ಎಂದರು.

2011ರಲ್ಲಿ ಟೆಸ್ಟ್ ಕ್ರಿಕೆಟ್‌ಗೆ ಪದಾರ್ಪಣೆ ಮಾಡಿದ್ದ ವಿರಾಟ್ 99 ಪಂದ್ಯಗಳಿಂದ 7962 ರನ್‌ಗಳನ್ನು ಗಳಿಸಿದ್ದಾರೆ.

ಕೋವಿಡ್ ತಡೆ ನಿಯಮಾವಳಿಯನ್ನು ಪಾಲಿಸಲು ಮೊಹಾಲಿ ಪಂದ್ಯಕ್ಕೆ ಪ್ರೇಕ್ಷಕರನ್ನು ನಿರ್ಬಂಧಿಸಲಾಗಿದೆ ಎಂದು ಸ್ಥಳೀಯ ಸಂಸ್ಥೆ ಹೇಳಿದೆ. ಆದರೆ, ವಿರಾಟ್ ಅವರ ನೂರನೇ ಪಂದ್ಯಕ್ಕೆ ಪ್ರೇಕ್ಷಕರಿಗೆ ಅವಕಾಶ ನೀಡಬೇಕಿತ್ತು ಎಂದು ಸಾಮಾಜಿಕ ಜಾಲತಾಣಗಳಲ್ಲಿ ಅಭಿಮಾನಿಗಳು ಅಭಿಪ್ರಾಯ ವ್ಯಕ್ತಪಡಿಸುತ್ತಿದ್ದಾರೆ.

100ನೇ ಟೆಸ್ಟ್‌ಗೆ ಪ್ರೇಕ್ಷಕರ ಉಪಸ್ಥಿತಿ: ವಿರಾಟ್ ಕೊಹ್ಲಿ ಆಡಲಿರುವ 100ನೇ ಟೆಸ್ಟ್ ಪಂದ್ಯಕ್ಕೆ ಪ್ರೇಕ್ಷಕರಿಗೆ ಅನುಮತಿ ನೀಡಲಾಗುವುದು ಎಂದು ಬಿಸಿಸಿಐ ಕಾರ್ಯದರ್ಶಿ ಜಯ್ ಶಾ ಹೇಳಿದ್ದಾರೆ. ಈ ಹಿಂದೆ ಪ್ರೇಕ್ಷಕರ ಅನುಪಸ್ಥಿಯಲ್ಲಿ ಪಂದ್ಯವನ್ನು ನಡೆಸಲು ಮಂಡಳಿ ನಿರ್ಧರಿಸಿತ್ತು.

ಕ್ರೀಡಾಂಗಣ ಸಾಮರ್ಥ್ಯದ ಶೇಕಡಾ 50ರಷ್ಟು ಪ್ರೇಕ್ಷಕರಿಗೆ ಅವಕಾಶ ನೀಡಲಾಗುವುದು ಎಂದು ಜಯ್ ಶಾ ಹೇಳಿದ್ದಾರೆ.

ಅಂಧ ಮಹಿಳೆಯರ ರಾಷ್ಟ್ರೀಯ ಟ್ವೆಂಟಿ–20 ಟೂರ್ನಿ

ಕರ್ನಾಟಕದ ಭರ್ಜರಿ ಆರಂಭ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಆರಂಭಿಕ ಬ್ಯಾಟರ್ ಗಂಗಾ ಅವರ ಬ್ಯಾಟಿಂಗ್ (40 ರನ್) ಹಾಗೂ ಸಂಘಟಿತ ಬೌಲಿಂಗ್ ದಾಳಿಯ ನೆರವಿನಿಂದ ಕರ್ನಾಟಕ ತಂಡವು, ಇಂಡಸ್‌ಇಂಡ್ ಬ್ಯಾಂಕ್ ಅಂಧ ಮಹಿಳೆಯರ ರಾಷ್ಟ್ರೀಯ ಟಿ20 ಟೂರ್ನಿಯಲ್ಲಿ ಭರ್ಜರಿ ಆರಂಭ ಮಾಡಿತು.

ಆಲ್ವಾಯರ್ ಕ್ರೀಡಾಂಗಣದಲ್ಲಿ ಮಂಗಳವಾರ ನಡೆದ ಪಂದ್ಯದಲ್ಲಿ ಕರ್ನಾಟಕ 89 ರನ್‌ಗಳಿಂದ ರಾಜಸ್ಥಾನ ತಂಡವನ್ನು ಸೋಲಿಸಿತು. ಟಾಸ್ ಜಯಿಸಿದ ರಾಜಸ್ಥಾನ ತಂಡ ಫೀಲ್ಡಿಂಗ್ ಆಯ್ಕೆ ಮಾಡಿಕೊಂಡಿತು. ಕರ್ನಾಟಕದ ಮಹಿಳೆಯರು 15 ಓವರ್‌ಗಳಲ್ಲಿ 6 ವಿಕೆಟ್ ನಷ್ಟಕ್ಕೆ 144 ರನ್ ಗಳಿಸಿದರು. ಸ್ಪರ್ಧಾತ್ಮಕ ಗುರಿ ಬೆನ್ನಟ್ಟಿದ ಪ್ರವಾಸಿ ತಂಡ 13.5 ಓವರ್‌ಗಳಲ್ಲಿ ಎಲ್ಲ ವಿಕೆಟ್ ಕಳೆದುಕೊಂಡು 55 ರನ್ ಮಾತ್ರ ಗಳಿಸಲು ಶಕ್ತವಾಯಿತು.

ಕರ್ನಾಟಕದ ಇನಿಂಗ್ಸ್‌ನಲ್ಲಿ ದೀಪಿಕಾ (8) ಬೇಗನೇ ವಿಕೆಟ್ ಕೈಚೆಲ್ಲಿದರು. ಆದರೆ, ಗಂಗಾ ಅಮೋಘ ಬ್ಯಾಟಿಂಗ್ ಮಾಡಿದರು. 29 ಎಸೆತಗಳಲ್ಲಿ ನಾಲ್ಕು ಬೌಂಡರಿ ಸಿಡಿಸಿದರು. ಅವರಿಗೆ ವರ್ಷಾ ಯು.(24) ಉತ್ತಮ ಬೆಂಬಲ ನೀಡಿದರು. ಜಯಲಕ್ಷ್ಮೀ (20) ಹಾಗೂ ರೇಣುಕಾ ರಜಪೂತ್ (20) ತಂಡದ ಉತ್ತಮ ಮೊತ್ತಕ್ಕೆ ನೆರವಾದರು.

ಕರ್ನಾಟಕದ ದೀಪಿಕಾ ಬ್ಯಾಟಿಂಗ್ ವೈಖರಿ

ರಾಜಸ್ಥಾನ ತಂಡದ ಆರಂಭ ಕಳಪೆಯಾಗಿತ್ತು. ಮೊದಲ ಮೂರು ಮಂದಿ ಬ್ಯಾಟರ್‌ಗಳು ಸೊನ್ನೆ ಸುತ್ತಿದರು. ಮುಸ್ಕಾನ್ ಗೋಚರ್ (20) ಅವರಿಂದ ಮಾತ್ರ ಕರ್ನಾಟಕದ ಬೌಲರ್‌ಗಳಿಗೆ ಸ್ವಲ್ಪ ಪ್ರತಿರೋಧ ವ್ಯಕ್ತವಾಯಿತು.

ಸಂಕ್ಷಿಪ್ತ ಸ್ಕೋರುಗಳು: ಕರ್ನಾಟಕ ಮಹಿಳೆಯರು: 15 ಓವರ್‌ಗಳಲ್ಲಿ 6 ವಿಕೆಟ್‌ಗೆ 144 (ಗಂಗಾ 40, ವರ್ಷಾ ಯು. 24; ಪೂಜಾ 28ಕ್ಕೆ1). ರಾಜಸ್ಥಾನ್ ಮಹಿಳೆಯರು: 13.5 ಓವರ್‌ಗಳಲ್ಲಿ 55 (ಮುಸ್ಕಾನ್ ಗೋಚರ್ 20; ಸುನಿತಾ 13ಕ್ಕೆ2). ಫಲಿತಾಂಶ: ಕರ್ನಾಟಕ ಮಹಿಳೆಯರಿಗೆ 89 ರನ್‌ಗಳ ಜಯ

ಜಾರ್ಖಂಡ್ ಮಹಿಳೆಯರು: 15 ಓವರ್‌ಗಳಲ್ಲಿ 2 ವಿಕೆಟ್‌ಗೆ 110 (ಮಾರ್ಸ ಹಸ್ಸಾ 43, ಸುನಿತಾ ಕುಮಾರಿ 32; ಬೆಲ್ಲಾನ ಸನ್ಯಾಸಮ್ಮ 9ಕ್ಕೆ1).

ಆಂಧ್ರ ಮಹಿಳೆಯರು: 12.1 ಓವರ್‌ಗಳಲ್ಲಿ 2 ವಿಕೆಟ್‌ಗೆ 111 (ಚೋಡಿಪಲ್ಲಿ ರಮ್ಯಾ ಔಟಾಗದೆ 42; ರೋಶಿನಿ ಕುಮಾರಿ 9ಕ್ಕೆ1). ಫಲಿತಾಂಶ: ಆಂಧ್ರ ಮಹಿಳೆಯರಿಗೆ ಎಂಟು ವಿಕೆಟ್ ಜಯ

ಹರಿಯಾಣ ಮಹಿಳೆಯರು: 15 ಓವರ್‌ಗಳಲ್ಲಿ 3 ವಿಕೆಟ್‌ಗೆ 39 (ಮೀನು 4; ಪದ್ಮಿನಿ ಟುಡು 4ಕ್ಕೆ1).

ಒಡಿಶಾ ಮಹಿಳೆಯರು: 2.5 ಓವರ್‌ಗಳಲ್ಲಿ ವಿಕೆಟ್ ನಷ್ಟವಿಲ್ಲದೆ 40 (ಫುಲಾ ಸೊರೆನ್ ಔಟಾಗದೆ 34). ಫಲಿತಾಂಶ: ಒಡಿಶಾಗೆ 10 ವಿಕೆಟ್‌ಗಳ ಜಯ.

ಕ್ರಿಕೆಟ್: ದಕ್ಷಿಣ ಆಫ್ರಿಕಾ ಜಯಭೇರಿ

ಕ್ರೈಸ್ಟ್‌ಚರ್ಚ್: ದಕ್ಷಿಣ ಆಫ್ರಿಕಾ ಬೌಲರ್‌ಗಳ ಶಿಸ್ತಿನ ದಾಳಿಯ ಮುಂದೆ ನ್ಯೂಜಿಲೆಂಡ್ ತಂಡದ ಬ್ಯಾಟಿಂಗ್ ಪಡೆ ಕುಸಿಯಿತು. ಇಲ್ಲಿ ಮಂಗಳವಾರ ಮುಕ್ತಾಯವಾದ ಎರಡನೇ ಟೆಸ್ಟ್‌ನಲ್ಲಿ ದಕ್ಷಿಣ ಅಫ್ರಿಕಾ ತಂಡವು 198 ರನ್‌ಗಳಿಂದ ಜಯಿಸಿತು.

425 ರನ್‌ಗಳ ಗೆಲುವಿನ ಗುರಿ ಬೆನ್ನಟ್ಟಿದ್ದ ನ್ಯೂಜಿಲೆಂಡ್, 93.5 ಓವರ್‌ಗಳಲ್ಲಿ 227 ರನ್‌ಗಳಿಗೆ ಎಲ್ಲ ವಿಕೆಟ್ ಕಳೆದುಕೊಂಡಿತು. ಕಗಿಸೊ ರಬಾಡ, ಮಾರ್ಕೊ ಜೆನ್ಸನ್ ಮತ್ತು ಸ್ಪಿನ್ನರ್ ಕೇಶವ್ ಮಹಾರಾಜ್ ತಲಾ ಮೂರು ವಿಕೆಟ್ ಗಳಿಸಿದರು.

ಸಂಕ್ಷಿಪ್ತ ಸ್ಕೋರು: ಮೊದಲ ಇನಿಂಗ್ಸ್: ದಕ್ಷಿಣ ಆಫ್ರಿಕಾ: 364, ನ್ಯೂಜಿ ಲೆಂಡ್; 293, ಎರಡನೇ ಇನಿಂಗ್ಸ್: ದಕ್ಷಿಣ ಆಫ್ರಿಕಾ:354, ನ್ಯೂಜಿಲೆಂಡ್; 93.5 ಓವರ್‌ಗಳಲ್ಲಿ 227 (ಡೇವೊನ್ ಕಾನ್ವೆ 92, ಟಾಮ್ ಬ್ಲಂಡೆಲ್ 44, ಕಗಿಸೊ ರಬಾಡ 46ಕ್ಕೆ3, ಮಾರ್ಕೊ ಜೆನ್ಸನ್ 63ಕ್ಕೆ3, ಕೇಶವ್ ಮಹಾರಾಜ್ 75ಕ್ಕೆ3) ಫಲಿತಾಂಶ: ದಕ್ಷಿಣ ಆಫ್ರಿಕಾಕ್ಕೆ 198 ರನ್‌ಗಳ ಜಯ.

ಕಗಿಸೊ ರಬಾಡ

ಸಂಕ್ಷಿಪ್ತ ಸುದ್ದಿ

ಐಪಿಎಲ್‌ನಲ್ಲಿ ಆಡದಿರಲು ಜೇಸನ್ ನಿರ್ಧಾರ

ನವದೆಹಲಿ (ಪಿಟಿಐ): ಇಂಗ್ಲೆಂಡ್ ತಂಡದ ಬ್ಯಾಟರ್ ಜೇಸನ್ ರಾಯ್ ಅವರು ಮುಂಬರುವ ಇಂಡಿಯನ್ ಪ್ರೀಮಿಯರ್ ಲೀಗ್ (ಐಪಿಎಲ್) ಟೂರ್ನಿಯಲ್ಲಿ ಆಡದಿರಲು ನಿರ್ಧರಿಸಿದ್ದಾರೆ.

ಜೇಸನ್ ರಾಯ್

ಅವರು ಈ ಬಾರಿ ಗುಜರಾತ್ ಟೈಟನ್ಸ್ ತಂಡದಲ್ಲಿದ್ದಾರೆ.

‘ಬಹಳ ಕಠಿಣ ನಿರ್ಧಾರವಿದು. ಆದರೆ ಬಯೋಬಬಲ್ ಒತ್ತಡದಿಂದ ಪಾರಾಗಲು ಇದು ಅನಿವಾರ್ಯವಾಗಿದೆ. ತಂಡದ ಮ್ಯಾನೇಜ್‌ಮೆಂಟ್ ಮತ್ತು ನಾಯಕ ಹಾರ್ದಿಕ್ ಪಾಂಡ್ಯ ಅವರ ಸಹಕಾರಕ್ಕೆ ಕೃತಜ್ಞತೆಗಳು. ನನ್ನ ಮೇಲೆ ವಿಶ್ವಾಸವಿಟ್ಟು ಹರಾಜಿನಲ್ಲಿ ಖರೀದಿಸಿದ್ದಕ್ಕೆ ಆಭಾರಿಯಾಗಿರುವೆ’ ಎಂದು ರಾಯ್ ಹೇಳಿದ್ದಾರೆ.

ಐಎಸ್‌ಎಲ್ ಟೂರ್ನಿ: ಸೆಮಿಫೈನಲ್‌ಗೆ ಜಮ್ಷೆಡ್‌ಪುರ ಎಫ್‌ಸಿ

ಬ್ಯಾಂಬಲಿಮ್: ಸಂಘಟಿತ ಆಟವಾಡಿದ ಜಮ್ಷೆಡ್‌ಪುರ ತಂಡದವರು ಇಂಡಿಯನ್ ಸೂಪರ್ ಲೀಗ್ (ಐಎಸ್‌ಎಲ್) ಫುಟ್‌ಬಾಲ್ ಟೂರ್ನಿಯಲ್ಲಿ ಮಂಗಳವಾರ ಹೈದರಾಬಾದ್ ಎದುರು ಭರ್ಜರಿ ಜಯ ಸಾಧಿಸಿದರು. ಇದರೊಂದಿಗೆ ಸೆಮಿಫೈನಲ್‌ಗೆ ಲಗ್ಗೆಯಿಟ್ಟರು.

ತಂಡದ ಪರ ಚಿಂಗ್ಲೆನ್ಸನಾ ಸಿಂಗ್ (5ನೇ ನಿಮಿಷ), ಪೀಟರ್ ಹಾರ್ಟ್ಲಿ (28ನೇ ನಿಮಿಷ) ಮತ್ತು ಡೇನಿಯಲ್ ಚಿಮಾಚಿಕು (65ನೇ ನಿಮಿಷ) ಕಾಲ್ಚಳಕಗಳ ಬಲದಿಂದ ಜಮ್ಷೆಡ್‌ಪುರ ಗೆದ್ದಿತು. ಅಗ್ರಸ್ಥಾನದೊಂದಿಗೆ ನಾಲ್ಕರ ಘಟ್ಟ ತಲುಪಿತು.

ವಾಸ್ಕೊದಲ್ಲಿ ಬುಧವಾರ ನಡೆಯುವ ಪಂದ್ಯದಲ್ಲಿ ಕೇರಳ ಬ್ಲಾಸ್ಟರ್ಸ್ ಎಫ್‌ಸಿ ಮತ್ತು ಮುಂಬೈ ಸಿಟಿ ಎಫ್‌ಸಿ ತಂಡಗಳು ಮುಖಾಮುಖಿಯಾಗಲಿವೆ.

ಮಂದಾನ ಮಿಂಚು: ಭಾರತಕ್ಕೆ ಜಯ

ರಂಗಿಯೊರಾ (ಪಿಟಿಐ): ಆರಂಭಿಕ ಬ್ಯಾಟರ್ ಸ್ಮೃತಿ ಮಂದಾನ ಭರ್ಜರಿ ಅರ್ಧಶತಕದ ಬಲದಿಂದ ಭಾರತ ಮಹಿಳಾ ಕ್ರಿಕೆಟ್ ತಂಡವು ಏಕದಿನ ವಿಶ್ವಕಪ್ ಟೂರ್ನಿಯ ಅಭ್ಯಾಸ ಪಂದ್ಯದಲ್ಲಿ ವೆಸ್ಟ್ ಇಂಡೀಸ್ ಎದುರು 81 ರನ್‌ಗಳಿಂದ ಗೆದ್ದಿತು.

ಸ್ಮೃತಿ ಮಂದಾನ

ಮಂಗಳವಾರ ನಡೆದ ಪಂದ್ಯದಲ್ಲಿ ಮೊದಲು ಬ್ಯಾಟಿಂಗ್ ಮಾಡಿದ ಭಾರತ ತಂಡವು 50 ಓವರ್‌ಗಳಲ್ಲಿ 258 ರನ್ ಗಳಿಸಿತು. ಸ್ಮೃತಿ 67 ಎಸೆತಗಳಲ್ಲಿ 66 ರನ್ ಗಳಿಸಿದರು. ಗುರಿ ಬೆನ್ನಟ್ಟಿದ ವೆಸ್ಟ್ ಇಂಡೀಸ್ ತಂಡವು ಪೂಜಾ ವಸ್ತ್ರಕರ್ (21ಕ್ಕೆ3) ಮತ್ತು ರಾಜೇಶ್ವರಿ ಗಾಯಕವಾಡ್ (39ಕ್ಕೆ2) ಅವರ ಬೌಲಿಂಗ್ ಮುಂದೆ ಕುಸಿಯಿತು. 50 ಓವರ್‌ಗಳಲ್ಲಿ 9 ವಿಕೆಟ್‌ಗಳಿಗೆ 177 ರನ್ ಗಳಿಸಲು ಮಾತ್ರ ಶಕ್ತವಾಯಿತು.

ಸಂಕ್ಷಿಪ್ತ ಸ್ಕೋರು: ಭಾರತ: 50 ಓವರ್‌ಗಳಲ್ಲಿ 258 (ಸ್ಮೃತಿ ಮಂದಾನ 66, ದೀಪ್ತಿ ಶರ್ಮಾ 51, ಮಿಥಾಲಿ ರಾಜ್ 30, ಯಷ್ಟಿಕಾ ಭಾಟಿಯಾ 42, ಹೈಲಿ ಮ್ಯಾಥ್ಯೂಸ್ 47ಕ್ಕೆ2), ವೆಸ್ಟ್ ಇಂಡೀಸ್: 50 ಓವರ್‌ಗಳಲ್ಲಿ 9ಕ್ಕೆ177 (ಶೇಮೈನ್ ಕ್ಯಾಂಪ್‌ಬೆಲ್ 63, ಹೈಲಿ ಮ್ಯಾಥ್ಯೂಸ್ 44, ಪೂಜಾ ವಸ್ತ್ರಕರ್ 21ಕ್ಕೆ3, ಮೇಘನಾ ಸಿಂಗ್ 30ಕ್ಕೆ2, ರಾಜೇಶ್ವರಿ ಗಾಯಕವಾಡ್ 39ಕ್ಕೆ2, ದೀಪ್ತಿ ಶರ್ಮಾ 31ಕ್ಕೆ2) ಫಲಿತಾಂಶ: ಭಾರತಕ್ಕೆ 81 ರನ್‌ಗಳ ಜಯ.

ಆಸ್ಪತ್ರೆಯಿಂದ ಮನೆಗೆ ಪೆಲೆ

ಸಾವೊಪೌಲೊ (ರಾಯಿಟರ್ಸ್): ಬ್ರೆಜಿಲ್‌ನ ಫುಟ್‌ಬಾಲ್ ದಂತಕಥೆ ಪೆಲೆ ಆಸ್ಪತ್ರೆಯಿಂದ ಮನೆಗೆ ಮರಳಿದ್ದಾರೆ.

ಮೂತ್ರನಾಳದ ಸೋಂಕಿನಿಂದಾಗಿ ಅವರು ಈಚೆಗೆ ಇಲ್ಲಿಯ ಅಲ್ಬರ್ಟ್ ಐನ್‌ಸ್ಟೈನ್ ಆಸ್ಪತ್ರೆಗೆ ದಾಖಲಾಗಿದ್ದು.

‘ಪೆಲೆ ಅವರ ಆರೋಗ್ಯ ಸ್ಥಿರವಾಗಿದೆ. ಸೋಂಕಿನಿಂದ ಸಂಪೂರ್ಣವಾಗಿ ಗುಣಮುಖರಾಗಿದ್ದಾರೆ. ಆದರೆ ಅವರ ದೊಡ್ಡಕರುಳಿನ ಕ್ಯಾನ್ಸರ್ ಚಿಕಿತ್ಸೆಯು ಮುಂದುವರೆಯಲಿದೆ. ಮನೆಯಲ್ಲಿಯೇ ವಿಶ್ರಾಂತಿ ಪಡೆಯುವರು’ ಎಂದು ಆಸ್ಪತ್ರೆಯ ಮೂಲಗಳು ತಿಳಿಸಿವೆ.

ಕೋಲ್ಕತ್ತ ರೇಸ್

ಈಸ್ಟ್‌ವುಡ್ ಗೆಲ್ಲುವ ನಿರೀಕ್ಷೆ

ಕೋಲ್ಕತ್ತ ಸೇಂಟ್ ಲೆಗರ್ ಬುಧವಾರದ ಕೋಲ್ಕತ್ತ ರೇಸ್‌ಗಳ ಪ್ರಧಾನ ಆಕರ್ಷಣೆಯಾಗಿದ್ದು, ಈಸ್ಟ್‌ವುಡ್ ಈ ರೇಸ್‌ನಲ್ಲಿ ಗೆಲ್ಲುವ ನಿರೀಕ್ಷೆಯಿದೆ. ಮಧ್ಯಾಹ್ನ 1.45ಕ್ಕೆ ಪ್ರಾರಂಭವಾಗಲಿರುವ ದಿನದ ಏಳು ರೇಸ್‌ಗಳಿಗೆ ನಮ್ಮ ಆಯ್ಕೆ ಈ ಕೆಳಕಂಡಂತಿದೆ:

1ನೇ ರೇಸ್: ಲೇಡಿ ಲಾರೇನ್ 1, ಮಿಸ್ಟಿಕ್ ಪ್ರಿನ್ಸ್ 2
2ನೇ ರೇಸ್: ರಷ್ ಫಾರ್ ಗೋಲ್ಡ್ 2, ಟಾಹೋ 7, ಲಯನ್ ಕ್ವೀನ್ 5
3ನೇ ರೇಸ್: ಲೆಜೆಂಡರಿ ಸ್ಟ್ರೈಕರ್ 2, ಬರಾಕ್ 1, ಹಾರ್ಬರ್ ಸನ್‌ರೈಸ್ 5
4ನೇ ರೇಸ್: ರೈಸಿನಾ ಸ್ಟಾರ್ 1, ಐಲ್ಯಾಂಡ್ ಲಾಸ್ 5, ಬೋಲ್ಡ್ ಸ್ಟೈಲ್ 3
5ನೇ ರೇಸ್: ಡಾರ್ನಿಶ್ 1, ಮ್ಯಾಗ್ನೆಟ್ 2
6ನೇ ರೇಸ್: ಈಸ್ಟ್‌ವುಡ್ 1, ಕಾಮಿಲಾ 6, ದಿ ಪ್ರೊಟೆಕ್ಟರ್ 4
7ನೇ ರೇಸ್: ಬಹುಲೆಯಾನ್ 1, ಕೇಪ್ ಟಾನರೋಸ್ 2, ಟ್ರೆಸ್ ಬೀನ್ 3

ಉತ್ತಮ ಬೆಟ್: ಡಾರ್ನಿಶ್

ಜಾಕ್‌ಪಾಟ್	1ನೇ ಟ್ರಿಬಲ್	2ನೇ ಟ್ರಿಬಲ್‌ಗೆ
3,4,5,6,7	2,3,4	5,6,7

ಹೊರಗೆ ಹೋಗುವಾಗ ಮುಖಗವಸು ಧರಿಸಿ